ಬುಧವಾರ, ಅಕ್ಟೋಬರ್ 1, 2025| ₹ 7.00

prajavani.net prajavani

www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸಂಗೀತದ ಮೋಡಿ

ಗುವಾಹಟಿಯ ಕ್ರೀಡಾಂಗಣದಲ್ಲಿ ಮಹಿಳಾ ಏಕದಿನ ವಿಶ್ವಕಪ್ ಟೂರ್ನಿ ಉದ್ಘಾಟನೆ ವೇಳೆ, ಹಿನ್ನೆಲೆ ಗಾಯಕ ಅಂಗರಾಗ್ ಮಹಾಂತ 'ಪಾಪೋನ್' ಅವರು ಮಂಗಳವಾರ ಸಂಗೀತ ಕಾರ್ಯಕ್ರಮ ಪ್ರಸ್ತುತಪಡಿಸಿದರು.

ಬಾಲ ಅಯ್ಯಪ್ಪ

ಮಡಿಕೇರಿಯಲ್ಲಿ ಮಂಗಳವಾರ ನಡೆದ ಮಕ್ಕಳ ದಸರೆಯಲ್ಲಿ ಬಾಲಕನೊಬ್ಬ ಅಯ್ಯಪ್ಪ ವೇಷಧಾರಿಯಾಗಿ ಗಮನಸೆಳೆದ

ಮೈಸೂರು ದಸರಾ
ಕ್ರಿ.ಶ. 1610 ರಿಂದ ಆಚರಣೆ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಗಾಂಧಿ ಭಾರತ



ಲಾಲ್ ಬಹದ್ದೂರ್ ಶಾಸ್ತ್ರಿಯವರ
121ನೇ ಜನ್ಮ ದಿನಾಚರಣೆ

ದಸರಾ
ಅಂದರೆ
ಅಸತ್ಯದ ಮೇಲೆ
ಸತ್ಯದ
ಜಯ



ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ
156ನೇ ಜನ್ಮದಿನದ ಅಂಗವಾಗಿ
ಅವರ ಪ್ರತಿಮೆಗೆ ಗೌರವ ಸಮರ್ಪಣೆ
ದಿನಾಂಕ: 02-10-2025, ಗುರುವಾರ
ಬೆಳಿಗ್ಗೆ 8:30 ಕ್ಕೆ | ಗಾಂಧಿ ಚೌಕ, ಮೈಸೂರು

ನಂದಿಧ್ವಜ ಪೂಜೆ
(ಬಲರಾಮ ದ್ವಾರ, ಅರಮನೆ ಆವರಣ)
ದಿನಾಂಕ: 02-10-2025, ಗುರುವಾರ
ಮಧ್ಯಾಹ್ನ 1:00 ರಿಂದ 1:18 ರವರೆಗೆ
ಸಲ್ಲುವ ಶುಭ ಧನುರ್ ಲಗ್ನದಲ್ಲಿ

ವಿಜಯದಶಮಿ ಮೆರವಣಿಗೆ
(ಅರಮನೆ ಒಳಾಂಗಣ)
ದಿನಾಂಕ: 02-10-2025, ಗುರುವಾರ
ಸಂಜೆ: 4:42 ರಿಂದ 5:06 ರವರೆಗೆ
ಸಲ್ಲುವ ಶುಭ ಕುಂಭ ಲಗ್ನದಲ್ಲಿ

ಪಂಜಿನ ಕವಾಯತು
(ಟಾರ್ಚ್ ಲೈಟ್ ಪೆರೇಡ್)
ದಿನಾಂಕ: 02-10-2025, ಗುರುವಾರ | ಸಮಯ: ಸಂಜೆ 7:00 ಗಂಟೆಗೆ
ಸ್ಥಳ: ಬನ್ನಿ ಮಂಟಪ ಮೈದಾನ

ನಾಡಹಬ್ಬ ದಸರಾದ
ಶುಭಾಶಯಗಳು

ಕರ್ನಾಟಕದ ನವ ನಿರ್ಮಾಣಕ್ಕೆ
ಗ್ಯಾರಂಟಿ ಸರ್ಕಾರ

ಶಕ್ತಿ — ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ
ಅನ್ನಭಾಗ್ಯ — ಬಡವರಿಗೆ ಪ್ರತಿ ತಿಂಗಳು 10 kg ಅಕ್ಕಿ
ಗೃಹಜ್ಯೋತಿ — ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ
ಗೃಹಲಕ್ಷ್ಮಿ — ಪ್ರತಿ ಮನೆಯೊಡತಿಗೆ ಪ್ರತಿ ತಿಂಗಳು ₹2000
ಯುವನಿಧಿ — ಪ್ರತಿ ತಿಂಗಳು ನಿರುದ್ಯೋಗ ಭತ್ಯೆ ₹3000 ಪದವೀಧರರಿಗೆ | ₹1500 ಡಿಪ್ಲೊಮಾ ಪದವೀಧರರಿಗೆ

ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು
– ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

CMofKarnataka https://dipr.karnataka.gov.in/

ಕರ್ನಾಟಕ ವಾರ್ತೆ

ಪ್ರಜಾವಾಣಿ
ಪ್ರಜಾಪ್ಲಸ್
ಮನರಂಜನೆ | ಜಾಹೀರಾತು | ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ
ಬುಧವಾರ • ಅಕ್ಟೋಬರ್ 1, 2025

ನಾಳೆಯಿಂದ 'ಕಾಂತಾರ' ಹಬ್ಬ

ನಟ ರಿಷಬ್ ಶೆಟ್ಟಿ ನಟಿಸಿ, ನಿರ್ದೇಶಿಸಿರುವ 'ಕಾಂತಾರ: ಒಂದು ದಂತಕಥೆ, ಚಾಪ್ಟರ್-1' ಸಿನಿಮಾ ನಾಳೆ (ಅ.2) ದೇಶದಾದ್ಯಂತ ಏಳು ಸಾವಿರಕ್ಕೂ ಅಧಿಕ ತೆರೆಗಳಲ್ಲಿ ಬಿಡುಗಡೆಯಾಗಲಿದೆ.

ಭಾರತವಷ್ಟೇ ಅಲ್ಲದೆ ಏಕಕಾಲದಲ್ಲಿ ಸುಮಾರು 30 ದೇಶಗಳಲ್ಲಿ ಈ ಸಿನಿಮಾ ತೆರೆಕಾಣಲಿದೆ. ಹಲವು ಏಕಪರದೆ ಚಿತ್ರಮಂದಿರಗಳು ಹಾಗೂ ಮಲ್ಟಿಪ್ಲೆಕ್ಸ್‌ಗಳಲ್ಲಿ ಈಗಾಗಲೇ ಮೊದಲ ದಿನದ ಶೋಗಳು ಹೌಸ್‌ಫುಲ್ ಆಗಿವೆ. ಕೆಲವು ಮಲ್ಟಿಪ್ಲೆಕ್ಸ್‌ಗಳು ಮೊದಲ ದಿನ 26–27 ಪ್ರದರ್ಶನಗಳನ್ನು 'ಕಾಂತಾರ' ಸಿನಿಮಾಗಾಗಿಯೇ ನೀಡಿವೆ. ಏಕಪರದೆ ಚಿತ್ರಮಂದಿರಗಳಲ್ಲಿ ಬೆಳಗ್ಗೆ 6.30ರಿಂದಲೇ ಪ್ರದರ್ಶನಗಳು ಆರಂಭಗೊಳ್ಳಲಿವೆ. ಬೆಂಗಳೂರಿನಲ್ಲೇ 100ಕ್ಕೂ ಅಧಿಕ ಏಕಪರದೆ ಹಾಗೂ ಮಲ್ಟಿಪ್ಲೆಕ್ಸ್‌ಗಳಲ್ಲಿ 'ಕಾಂತಾರ' ತೆರೆಕಾಣುತ್ತಿದೆ. ಸಿನಿಮಾ ಟಿಕೆಟ್ ದರವನ್ನು ಗರಿಷ್ಠ ₹200ಕ್ಕೆ ನಿಗದಿಪಡಿಸಿ ಗೃಹ ಇಲಾಖೆ ಹೊರಡಿಸಿರುವ ಅಧಿಸೂಚನೆಗೆ ವಾರದ ಹಿಂದಷ್ಟೇ ಹೈಕೋರ್ಟ್ ಮಧ್ಯಂತರ ತಡೆ ನೀಡಿತ್ತು. ಹೀಗಾಗಿ ಮಲ್ಟಿಪ್ಲೆಕ್ಸ್‌ಗಳಲ್ಲಿ 'ಕಾಂತಾರ' ಸಿನಿಮಾದ ಟಿಕೆಟ್ ದರ ಗರಿಷ್ಠ ₹1000 ತಲುಪಿದೆ. ಕನಿಷ್ಠ ದರವೇ ₹250–300 ಇದೆ.

ಚಿತ್ರತಂಡ ಈಗಾಗಲೇ ಹೈದರಾಬಾದ್, ಮುಂಬೈನಲ್ಲಿ ಪ್ರಚಾರ ನಡೆಸಿದೆ. ಚೆನ್ನೈನಲ್ಲಿ ಮಂಗಳವಾರ (ಸೆ.30) ಪ್ರಚಾರ ಕಾರ್ಯಕ್ರಮ ನಡೆಯಬೇಕಿತ್ತು. ಕರೂರಿನಲ್ಲಿ ನಡೆದ ದುರಂತದ ಕಾರಣ ಈ ಕಾರ್ಯ-ಕ್ರಮವನ್ನು ಚಿತ್ರತಂಡ ರದ್ದುಗೊಳಿಸಿತು. ಸಿನಿಮಾದಲ್ಲಿ ರಿಷಬ್ ಶೆಟ್ಟಿ, ರುಕ್ಮಿಣಿ ವಸಂತ್ ಮುಖ್ಯಭೂಮಿಕೆಯಲ್ಲಿದ್ದು, ಮಲಯಾಳ ನಟ ಜಯರಾಮ್, ಕನ್ನಡಿಗರೇ ಆದ ಬಾಲಿವುಡ್ ನಟ ಗುಲ್ಶನ್ ದೇವಯ್ಯ ತಾರಾಬಳಗದಲ್ಲಿದ್ದಾರೆ. ಕೇರಳದಲ್ಲಿ ಪೃಥ್ವಿರಾಜ್ ಪ್ರೊಡಕ್ಷನ್ಸ್ ಈ ಸಿನಿಮಾವನ್ನು ಬಿಡುಗಡೆ ಮಾಡಲಿದ್ದು, ನೇಪಾಳ ಸೇರಿದಂತೆ ಉತ್ತರ ಭಾರತದಲ್ಲಿ ಈ ಸಿನಿಮಾವನ್ನು ಎಎ ಫಿಲ್ಮ್ಸ್ ಬಿಡುಗಡೆ ಮಾಡಲಿದೆ. ಪ್ರೀಕ್ವೆಲ್ ಅನ್ನು ಈಗಾಗಲೇ ಪ್ರೈಮ್ ವಿಡಿಯೊ ದೊಡ್ಡ ಮೊತ್ತಕ್ಕೆ ಖರೀದಿಸಿದೆ. ಕದಂಬರ ಆಳ್ವಿಕೆಯ ಕಾಲದಲ್ಲಿ ಹುಟ್ಟಿದ ದಂತಕಥೆಯ ಕಥಾಹಂದರ ಇದಾಗಿದ್ದು, ಕನ್ನಡ, ಇಂಗ್ಲಿಷ್ ಸೇರಿದಂತೆ ಏಳು ಭಾಷೆಗಳಲ್ಲಿ ಸಿನಿಮಾ ಬಿಡುಗಡೆಯಾಗಲಿದೆ. ಅಜನೀಶ್ ಲೋಕನಾಥ್ ಸಂಗೀತ ನಿರ್ದೇಶನ, ಅರವಿಂದ್ ಎಸ್. ಕಶ್ಯಪ್ ಅವರ ಛಾಯಾಚಿತ್ರಗ್ರಹಣ ಈ ಸಿನಿಮಾಗಿದೆ. ❖

ರಿಷಬ್ ಶೆಟ್ಟಿ


ರುಕ್ಮಿಣಿ ವಸಂತ್

ಸೆಟ್ಟೇರಿದ ಶ್ರೀಮುರಳಿ ಪರಾಕ್

'ಬಘೀರ' ಚಿತ್ರದ ಬೆನ್ನಲ್ಲೇ ನಟ ಶ್ರೀಮುರಳಿ ಅವರ ಹೊಸ ಪ್ರಾಜೆಕ್ಟ್ ಸೆಟ್ಟೇರಿದೆ. ಹಾಲೇಶ್ ಕೋಗುಂಡಿ ಆ್ಯಕ್ಷನ್ ಕಟ್ ಹೇಳಲಿರುವ 'ಪರಾಕ್' ಸಿನಿಮಾದ ಮುಹೂರ್ತ ಇತ್ತೀಚೆಗೆ ನಡೆಯಿತು.

ಚನ್ನಗಿರಿ ಶಾಸಕ ಶಿವಗಂಗಾ ಬಸವರಾಜ್ ಕ್ಲ್ಯಾಪ್ ಮಾಡಿ ಚಿತ್ರೀಕರಣಕ್ಕೆ ಚಾಲನೆ ನೀಡಿದರು. ಈ ವೇಳೆ ಮಾತನಾಡಿದ ಶ್ರೀಮುರಳಿ, 'ಪರಾಕ್' ಒಂದು ವಿಂಟೇಜ್ ಸ್ಟೈಲ್‌ನಲ್ಲಿ ನಡೆಯುವ ಸಿನಿಮಾ. ಮೊದಲು ಈ ಸಿನಿಮಾವನ್ನು ಅಚ್ಚುಕಟ್ಟಾಗಿ ಕನ್ನಡದಲ್ಲೇ ಮಾಡಲಿದ್ದೇವೆ. ನಂತರ ಬೇರೆಕಡೆ ತೆಗೆದುಕೊಂಡು ಹೋಗಬಹುದು ಎನ್ನಿಸಿದರೆ ಮಾತ್ರ ಬೇರೆ ಭಾಷೆಗಳಿಗೆ ಡಬ್ ಮಾಡಲಿದ್ದೇವೆ. 'ಉಗ್ರಂ' ಬಳಿಕ ಒಳ್ಳೊಳ್ಳೆಯ ಸಿನಿಮಾಗಳನ್ನೇ ಮಾಡುತ್ತಾ ಬಂದೆ. 'ಬಘೀರ' ನಂತರ ಬಹಳ ಗೊಂದಲವಿತ್ತು. ಯಾವ ರೀತಿಯ ಕಥೆ, ಸಿನಿಮಾಗಳನ್ನು ಮಾಡಬೇಕು ಎನ್ನುವ ಪ್ರಶ್ನೆ ಎದ್ದಿತ್ತು. ಈ ಅವಧಿಯಲ್ಲಿ ಸುಮಾರು 200 ಕಥೆಗಳನ್ನು ಕೇಳಿದ್ದೇನೆ. ಎರಡು ವರ್ಷಗಳ ಹಿಂದೆಯೇ 'ಪರಾಕ್' ಕಥೆ ಕೇಳಿದ್ದೆ. ಶೀಘ್ರದಲ್ಲೇ ಈ ಸಿನಿಮಾ ಶೂಟಿಂಗ್ ಆರಂಭವಾಗಲಿದೆ. ಮುಂದೆ ಆದಷ್ಟು ವೇಗದಲ್ಲಿ ಸಿನಿಮಾಗಳನ್ನು ಮಾಡಲಿದ್ದೇನೆ. ಚರಣ್ ರಾಜ್ ಸಂಗೀತ ನಿರ್ದೇಶನ ಈ ಸಿನಿಮಾಗಿರಲಿದೆ. ಇದು ನನ್ನ ಅವರ ಕಾಂಬಿನೇಷನ್‌ನ ಮೊದಲ ಸಿನಿಮಾ. 'ಬಘೀರ' ಜೊತೆ ಇದನ್ನು ಹೋಲಿಸಲು ಸಾಧ್ಯವಿಲ್ಲ. ಇದು ಬೇರೆ ಲೋಕಕ್ಕೇ ಪ್ರೇಕ್ಷಕರನ್ನು ಕರೆದೊಯ್ಯಲಿದೆ' ಎಂದರು.

ಹಾಲೇಶ್ ಕೋಗುಂಡಿ ನಿರ್ದೇಶನದ ಚೊಚ್ಚಲ ಸಿನಿಮಾ ಇದಾಗಿದೆ. ಬ್ರ್ಯಾಂಡ್ ಸ್ಟುಡಿಯೋಸ್ ಬ್ಯಾನರ್ ಅಡಿ 'ಪರಾಕ್' ಸಿನಿಮಾ ನಿರ್ಮಾಣವಾಗುತ್ತಿದೆ. ಚರಣ್ ರಾಜ್ ಸಂಗೀತ, ಸಂದೀಪ್ ವಲ್ಲೂರಿ ಛಾಯಾ ಚಿತ್ರಗ್ರಹಣ, ಉಲ್ಲಾಸ್ ಹೈದೂರ್ ಕಲಾ ನಿರ್ದೇಶನ, ಇಂಚರಾ ಸುರೇಶ್ ವಸ್ತ್ರವಿನ್ಯಾಸ ಚಿತ್ರಕ್ಕಿದೆ. ಶೀಘ್ರದಲ್ಲೇ ತಾರಾಬಳಗದ ಮಾಹಿತಿಯನ್ನು ನೀಡಲಾಗುವುದು ಎಂದಿದೆ ಚಿತ್ರತಂಡ. ❖

'ಪರಾಕ್' ಚಿತ್ರದ ಮುಹೂರ್ತ

ಧನಂಜಯ, ಸುದೀಪ್

'ಆಪರೇಷನ್' ಸೆಟ್‌ಗೆ ಸುದೀಪ್

'ಸಪ್ತಸಾಗರದಾಚೆ ಎಲ್ಲೋ' ಸಿನಿಮಾ ನಿರ್ದೇಶಕ ಹೇಮಂತ್ ಎಂ.ರಾವ್ ನಿರ್ದೇಶನದ '666 ಆಪರೇಷನ್ ಡ್ರೀಮ್ ಥಿಯೇಟರ್' ಸಿನಿಮಾದ ಶೂಟಿಂಗ್ ಬೆಂಗಳೂರಿನಲ್ಲಿ ನಡೆಯುತ್ತಿದೆ. ನಟ ಸುದೀಪ್ ಇತ್ತೀಚೆಗೆ ಸೆಟ್‌ಗೆ ಭೇಟಿ ನೀಡಿ ತಂಡವನ್ನು ಉತ್ತೇಜಿಸಿದ್ದಾರೆ.

ಸಿನಿಮಾದ ಮುಖ್ಯಭೂಮಿಕೆಯಲ್ಲಿ ನಟಿಸುತ್ತಿರುವ ನಟರಾದ ಶಿವರಾಜ್‌ಕುಮಾರ್ ಹಾಗೂ ಧನಂಜಯ ಈ ಸಿನಿಮಾದಲ್ಲಿ ರೆಟ್ರೋ ಲುಕ್‌ನಲ್ಲಿ ಕಾಣಿಸಿಕೊಂಡಿದ್ದು, ಎರಡನೇ ಹಂತದ ಚಿತ್ರೀಕರಣ ಕಂಠೀರವ ಸ್ಟುಡಿಯೊದಲ್ಲಿನ ಅದ್ದೂರಿ ಸೆಟ್‌ನಲ್ಲಿ ನಡೆಯುತ್ತಿದೆ. ಈ ಸೆಟ್‌ನಲ್ಲಿ ಬರೋಬ್ಬರಿ 100 ದಿನ ಶೂಟಿಂಗ್ ನಡೆಸಲಿದೆ ಚಿತ್ರತಂಡ. ಡಾ.ವೈಶಾಖ್ ಜೆ. ಗೌಡ ಅವರ 'ವೈಶಾಖ್ ಜೆ. ಫಿಲ್ಮ್ಸ್' ಬ್ಯಾನರ್ ಅಡಿಯಲ್ಲಿ ಈ ಸಿನಿಮಾ ನಿರ್ಮಾಣವಾಗುತ್ತಿದೆ. ಚರಣ್ ರಾಜ್ ಸಂಗೀತ ನಿರ್ದೇಶನ, ಅದ್ವೈತ ಗುರುಮೂರ್ತಿ ಛಾಯಾ ಚಿತ್ರಗ್ರಹಣ ಈ ಸಿನಿಮಾಗಿದೆ. ವಿಶ್ವಾಸ್ ಕಶ್ಯಪ್ ಕಲಾ ನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದಾರೆ. ❖

ಧನಂಜಯ, ಸುದೀಪ್, ವೈಶಾಖ್, ಹೇಮಂತ್

ದೆಹಲಿ ಶಾಲೆಗಳ ಶೈಕ್ಷಣಿಕ ಕಾರ್ಯಕ್ರಮ: 'ರಾಷ್ಟ್ರನೀತಿ' ಅನ್ವಯ ಪಠ್ಯ ರಚನೆ

ಮಕ್ಕಳಿಗೆ ಶೀಘ್ರವೇ 'ಆರ್‌ಎಸ್‌ಎಸ್' ಪಾಠ

ನವದೆಹಲಿ (ಪಿಟಿಐ): ದೆಹಲಿಯ ಸರ್ಕಾರಿ ಶಾಲೆಯ ಮಕ್ಕಳಿಗೆ ನೂತನ ಶೈಕ್ಷಣಿಕ ಕಾರ್ಯಕ್ರಮ 'ರಾಷ್ಟ್ರ ನೀತಿ' ಅನ್ವಯ ಶೀಘ್ರವೇ ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ಹಾಗೂ ವೀರ ಸಾವರ್ಕರ್ ಸೇರಿದಂತೆ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಬೋಧನೆ ಮಾಡಲಾಗುವುದು ಎಂದು ಶಿಕ್ಷಣ ಸಚಿವ ಆಶಿಶ್ ಸೂದ್ ಮಂಗಳವಾರ ತಿಳಿಸಿದ್ದಾರೆ.

1ರಿಂದ 12ನೇ ತರಗತಿವರೆಗಿನ ಮಕ್ಕಳಲ್ಲಿ ನಾಗರಿಕ ಪ್ರಜ್ಞೆ, ರಾಷ್ಟ್ರ ಗೌರವ, ನೈತಿಕ ಆಡಳಿತ, ಮೂಲಭೂತ ಕರ್ತವ್ಯಗಳ ಬಗ್ಗೆ ಗಮನ ಹರಿಸುವಂತೆ ಮಾಡುವುದಕ್ಕೆ 'ರಾಷ್ಟ್ರ ನೀತಿ' ಎಂಬ ಶೈಕ್ಷಣಿಕ ಕಾರ್ಯಕ್ರಮ ರೂಪಿಸಲಾಗುತ್ತಿದೆ ಎಂದು ಸೂದ್ ಹೇಳಿದ್ದಾರೆ.

'ರಾಷ್ಟ್ರ ನೀತಿ' ಅನ್ವಯ ಪಠ್ಯಕ್ರಮದಲ್ಲಿ ಆರ್‌ಎಸ್‌ಎಸ್ ಕುರಿತ ಅಧ್ಯಾಯ ಸೇರಿಸಲಾಗುವುದು. ಆರ್‌ಎಸ್‌ಎಸ್‌ನ ಮೂಲ, ಇತಿಹಾಸ, ಸಿದ್ಧಾಂತ, ಸ್ವಾತಂತ್ರ್ಯ ಹೋರಾಟದಲ್ಲಿ ಸ್ವಯಂ ಸೇವಕರ ಪಾಲ್ಗೊಳ್ಳುವಿಕೆ, ನೈಸರ್ಗಿಕ ವಿಪತ್ತಿನ ಸಂದರ್ಭ ಸ್ವಯಂ ಸೇವಕರ ನೆರವಿನ ಕಾರ್ಯದ ಕುರಿತಂತೆ ಮಾಹಿತಿ ನೀಡಲಾಗುತ್ತದೆ.

ಶಿಸ್ತು, ಸೇವೆಗೆ ಆರ್‌ಎಸ್‌ಎಸ್ ಕೊಡುಗೆ ಕುರಿತಾದ ಅಧ್ಯಾಯದಲ್ಲಿ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ, ಪ್ರಧಾನಿ ನರೇಂದ್ರ ಮೋದಿ ಬಗೆಗಿನ ಉಲ್ಲೇಖ ಇರಲಿದೆ. ಆರ್‌ಎಸ್‌ಎಸ್ ಬಗೆಗಿನ ತಪ್ಪು ಕಲ್ಪನೆ ದೂರಗೊಳಿಸುವ ಉದ್ದೇಶವನ್ನೂ ಈ ಅಧ್ಯಾಯಗಳು ಒಳಗೊಂಡಿರಲಿವೆ ಎಂದು ಮೂಲಗಳು ತಿಳಿಸಿವೆ.

ನಮೋ ವಿದ್ಯಾ ಉತ್ಸವದ ಅಂಗವಾಗಿ ಸೆ.18ರಂದು ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತ ಅವರು 3 ಶೈಕ್ಷಣಿಕ ಪಠ್ಯಕ್ರಮಗಳನ್ನು ಘೋಷಿಸಿದ್ದರು. ಆ ಪೈಕಿ 'ರಾಷ್ಟ್ರನೀತಿ' ಕಾರ್ಯಕ್ರಮವೂ ಒಂದಾಗಿದೆ.

'ತೆರೆಮರೆಯ ನಾಯಕರು'

'ತೆರೆಮರೆಯ ನಾಯಕರು' ಎಂಬ ಪ್ರತ್ಯೇಕ ವಿಭಾಗವೇ ಪಠ್ಯದಲ್ಲಿ ಇರಲಿದೆ. ಇದರ ಅನ್ವಯ ವೀರ ಸಾವರ್ಕರ್, ಸುಭಾಷ್ ಚಂದ್ರ ಬೋಸ್ ಹಾಗೂ ಶ್ಯಾಮ್ ಪ್ರಸಾದ್ ಮುಖರ್ಜಿ ಸೇರಿದಂತೆ ಹಲವು ನಾಯಕರ ಬಗ್ಗೆ ವಿದ್ಯಾರ್ಥಿಗಳಿಗೆ ಪಾಠಗಳು ಇರಲಿವೆ ಎಂದು ಮೂಲಗಳು ತಿಳಿಸಿವೆ. ಈಗಾಗಲೇ ಪುಸ್ತಕಗಳು ತಯಾರಾಗಿದ್ದು, ಬೋಧನೆಗೆ ಸಂಬಂಧಿಸಿದಂತೆ ಶಿಕ್ಷಕರಿಗೆ ತರಬೇತಿಯೂ ನೀಡಲಾಗುತ್ತಿದೆ ಎಂದು ತಿಳಿದುಬಂದಿದೆ.

'ಮುಖಂಡರಿಗೆ ಏನೂ ಮಾಡಬೇಡಿ'

ದ್ವೇಷ ತೀರಿಸಿಕೊಳ್ಳುವುದಿದ್ದರೆ ನನಗೆ ಏನು ಬೇಕಾದರೂ ಮಾಡಿ: ನಟ ವಿಜಯ್

ವಿಜಯ್

ಚೆನ್ನೈ (ಪಿಟಿಐ): 'ಸಿ.ಎಂ ಸರ್, ನಿಮಗೆ ಸೇಡು ತೀರಿಸಿಕೊಳ್ಳುವ ಇಂಗಿತ ಇದ್ದರೆ, ನನಗೆ ಏನು ಬೇಕಾದರೂ ಮಾಡಿ. ನನ್ನ ಪಕ್ಷದ ಮುಖಂಡರನ್ನು ಬಿಟ್ಟುಬಿಡಿ. ನಾನು ಕಚೇರಿ ಅಥವಾ ನಿವಾಸದಲ್ಲಿ ಇರುತ್ತೇನೆ' ಎಂದು ಟಿವಿಕೆ ಸಂಸ್ಥಾಪಕ, ನಟ ವಿಜಯ್ ಸವಾಲು ಹಾಕಿದ್ದಾರೆ.

'ಕರೂರು ಕಾಲ್ತುಳಿತ ದುರಂತದ ಸಂತ್ರಸ್ತ ಕುಟುಂಬಗಳನ್ನು ಭೇಟಿ ಮಾಡಲು ಸಾಧ್ಯವಾಗಿಲ್ಲ. ನನ್ನ ಭೇಟಿಯು ಅಹಿತಕರ ಘಟನೆಗಳಿಗೆ ಕಾರಣವಾಗಬಹುದು. ಹೀಗಾಗಿ, ಭೇಟಿ ಮಾಡಿಲ್ಲ' ಎಂದು ಅವರು ವಿಡಿಯೊ ಸಂದೇಶದ ಮೂಲಕ ಮಂಗಳವಾರ ಸ್ಪಷ್ಟನೆ ನೀಡಿದ್ದಾರೆ.

'ನನ್ನ ಜೀವನದಲ್ಲಿ ಈವರೆಗೆ ಇಂಥ ದ್ದೊಂದು ನೋವು ಅನುಭವಿಸಿರಲಿಲ್ಲ. ಶೀಘ್ರವೇ ನಿಮ್ಮನ್ನು (ಸಂತ್ರಸ್ತರು) ಭೇಟಿ ಮಾಡುವೆ' ಎಂದು ಅವರು ವಿಡಿಯೊದಲ್ಲಿ ಹೇಳಿದ್ದಾರೆ. ಇದೇ ಸಂದರ್ಭದಲ್ಲಿ, ದುರಂತದ ಕುರಿತ ಸತ್ಯಾಂಶ ಶೀಘ್ರವೇ ಹೊರಬರಲಿದೆ ಎಂದಿದ್ದಾರೆ.

'ನಾವು ತಪ್ಪು ಮಾಡಿಲ್ಲ': 'ಗೊತ್ತುಪಡಿಸಲಾದ ಸ್ಥಳದಲ್ಲಿ ಮಾತನಾಡಿದ್ದು ಬಿಟ್ಟರೆ ಬೇರೇನೂ ತಪ್ಪು ಮಾಡಿಲ್ಲ. ಪೊಲೀಸರು ನಮ್ಮ ನಾಯಕರು, ಸ್ನೇಹಿತರು, ಸಾಮಾಜಿಕ ಜಾಲತಾಣ ಪಾಲುದಾರರ ವಿರುದ್ಧ ಪ್ರಕರಣ ದಾಖಲಿಸುತ್ತಿದ್ದಾರೆ' ಎಂದಿದ್ದಾರೆ.

'ಜನರ ಸುರಕ್ಷತೆ ವಿಚಾರದಲ್ಲಿ ರಾಜಿಯಾಗಲು ನಾವು ಸಿದ್ಧರಿರಲಿಲ್ಲ. ಹೀಗಾಗಿಯೇ ರಾಜಕೀಯ ವಿಚಾರಗಳನ್ನೆಲ್ಲ ಬದಿಗೊತ್ತಿ ಸುರಕ್ಷಿತ ಪ್ರದೇಶದಲ್ಲಿ ರ್‍ಯಾಲಿ ನಡೆಸಲು ಪೊಲೀಸರ ಬಳಿ ಅನುಮತಿ ಕೋರಿದೆವು. ಆದರೆ, ಏನಾಗಬಾರದಿತ್ತೋ ಅಂಥ ದುರಂತ ಘಟಿಸಿತು. ನನ್ನ ಹೃದಯ ಭಾರವಾಗಿದೆ' ಎಂದಿದ್ದಾರೆ.

'ನನ್ನ ರಾಜಕೀಯ ಪಯಣವು ಹೊಸ ಚೈತನ್ಯದೊಂದಿಗೆ ಮುಂದುವರಿಯಲಿದೆ' ಎಂದೂ ಹೇಳಿದ್ದಾರೆ.

ಇಬ್ಬರಿಗೆ 14 ದಿನ ನ್ಯಾಯಾಂಗ ಬಂಧನ

ಕರೂರು (ಪಿಟಿಐ): ಕರೂರಿನಲ್ಲಿ ಸಂಭವಿಸಿದ ಕಾಲ್ತುಳಿತಕ್ಕೆ ಸಂಬಂಧಿಸಿದಂತೆ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ಇಬ್ಬರನ್ನು ಬಂಧಿಸಿ 14 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

ಟಿವಿಕೆ ಪಕ್ಷದ ಪಶ್ಚಿಮ ಜಿಲ್ಲಾ ಕಾರ್ಯದರ್ಶಿ ವಿ.ಪಿ. ಮಥಿಯಳಗನ್, ಕರೂರು ಕೇಂದ್ರ ಜಿಲ್ಲಾ ಕಾರ್ಯದರ್ಶಿ ಕಾಶಿ ಪೌನ್‌ರಾಜ್ ಅವರ ಹೆಸರನ್ನು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದ್ದು, ಸದ್ಯ ಅವರನ್ನು ನ್ಯಾಯಾಂಗ ಬಂಧನದಲ್ಲಿ ಇರಿಸಲಾಗಿದೆ ಎಂದು ಹೇಳಿದರು.

ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ಬುಸ್ಸಿ ಆನಂದ್ ಮತ್ತು ಉಪ ಪ್ರಧಾನ ಕಾರ್ಯದರ್ಶಿ ನಿರ್ಮಲ ಕುಮಾರ್ ಅವರ ಹೆಸರನ್ನೂ ಎಫ್‌ಐಆರ್‌ನಲ್ಲಿ ದಾಖಲಿಸಲಾಗಿದ್ದು, ಇನ್ನಷ್ಟೇ ಅವರನ್ನು ಬಂಧಿಸಬೇಕಿದೆ ಎಂದರು.

ಅಧವ್ ಅರ್ಜುನ ಪೋಸ್ಟ್: ಕಿಡಿ

ಟಿವಿಕೆಯ ಹಿರಿಯ ನಾಯಕ ಅಧವ್ ಅರ್ಜುನ ಅವರು 'ಝೆನ್ ಜಿ ಕ್ರಾಂತಿ'ಗೆ ಸಂಬಂಧಿಸಿದಂತೆ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಹಾಕಿದ್ದು ವಿವಾದಕ್ಕೆ ಕಾರಣವಾಗಿದೆ. ಈ ಪೋಸ್ಟ್‌ಗೆ ಡಿಎಂಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿ, ಪಕ್ಷದಿಂದ ಅವರನ್ನು ಉಚ್ಚಾಟನೆ ಮಾಡಬೇಕು ಎಂದು ಆಗ್ರಹಿಸಿದೆ.

ಡಿಎಂಕೆ ಉಪ ಪ್ರಧಾನ ಕಾರ್ಯದರ್ಶಿ ಎ.ರಾಜಾ ಅವರು, 'ಅರ್ಜುನ ಅವರು ತಮ್ಮ 'ಎಕ್ಸ್' ಖಾತೆಯಲ್ಲಿ ನೇಪಾಳದಂತೆ ತಮಿಳುನಾಡಿನಲ್ಲಿಯೂ ಕ್ರಾಂತಿಗೆ ಕರೆ ನೀಡಿದ್ದಾರೆ. ಅವರ ಪೋಸ್ಟ್ ಅನ್ನು ಅಳಿಸುವಂತೆ ಮಾಡಿದ ಜನರಿಗೆ ಧನ್ಯವಾದ. ಪೋಸ್ಟ್ ಭಾರತದ ಸಮಗ್ರತೆ ಮತ್ತು ಸಾರ್ವಭೌಮತ್ವಕ್ಕೆ ವಿರುದ್ಧವಾಗಿತ್ತು' ಎಂದು ಹೇಳಿದ್ದಾರೆ.

'ನನ್ನ ಕುಟುಂಬಗಳು ಅತಿ ದೊಡ್ಡ ನಷ್ಟ ಮತ್ತು ನೋವು ಅನುಭವಿಸುತ್ತಿವೆ. ನಾನೀಗ ಮಾತನಾಡುವ ಸ್ಥಿತಿಯಲ್ಲಿಲ್ಲ. ಶೀಘ್ರವೇ ದುರಂತದ ಸಂತ್ರಸ್ತರನ್ನು ಭೇಟಿ ಮಾಡುತ್ತೇನೆ' ಎಂದು ಅಧವ್ ಅರ್ಜುನ ಹೇಳಿದ್ದಾರೆ.

ನಿಯಮ ಉಲ್ಲಂಘನೆ ವಿಡಿಯೊ ಬಿಡುಗಡೆ

ಚಿತ್ರನಟ, ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ಅಧ್ಯಕ್ಷ ವಿಜಯ್ ಅವರು ಕರೂರಿನಲ್ಲಿ ನಡೆಸಿದ ರ್‍ಯಾಲಿಯಲ್ಲಿ ನಿಯಮಗಳನ್ನು ಉಲ್ಲಂಘಿಸಲಾಗಿದೆ ಎಂದು ತಮಿಳುನಾಡು ಸರ್ಕಾರ ಆರೋಪಿಸಿದೆ.

ಟಿವಿಕೆ ಪಕ್ಷ ಆಯೋಜಿಸಿದ್ದ ಬೃಹತ್ ರ್‍ಯಾಲಿಯಲ್ಲಿ ನಿಯಮಗಳನ್ನು ಉಲ್ಲಂಘಿಸಿರುವ ವಿಡಿಯೊ ಕ್ಲಿಪ್‌ಗಳನ್ನು ಸರ್ಕಾರ ಮಂಗಳವಾರ ಬಿಡುಗಡೆ ಮಾಡಿದೆ.

ನಿರೀಕ್ಷಿಸಿದ್ದ ಜನರಿಗಿಂತ ದುಪ್ಪಟ್ಟು ಮಂದಿ ಜಮಾಯಿಸಿದ್ದರಿಂದ, ಸಾಕಷ್ಟು ಸಮಸ್ಯೆಗಳು ಎದುರಾದವು. ಪ್ರಾಣಹಾನಿಯೂ ಆಗಿದೆ ಎಂದಿದೆ.

ಕಾಲ್ತುಳಿತ ಘಟನೆಗೆ ಸಂಬಂಧಿಸಿದ ಕೆಲವು ಸಂಗತಿಗಳ ವಿಡಿಯೊ ಕ್ಲಿಪ್‌ಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಬಿತ್ತರಿಸಿದ್ದು, ಮಾಧ್ಯಮಗಳಿಗೂ ಬಿಡುಗಡೆ ಮಾಡಿದೆ. ಹಲವು ವಿಷಯಗಳ ಕುರಿತಂತೆ ತನ್ನ ಅಭಿಪ್ರಾಯವನ್ನು ವಿವರಿಸಿದೆ.

ನಟ ವಿಜಯ್ ಅವರು ಕಾಲ್ತುಳಿತ ದುರಂತದ ಬಗ್ಗೆ ತಮ್ಮ ನಿಲುವನ್ನು ವಿವರಿಸುವ ವಿಡಿಯೊ ಬಿಡುಗಡೆ ಮಾಡಿದ ಸ್ವಲ್ಪ ಹೊತ್ತಿನಲ್ಲೇ ಸರ್ಕಾರವು ಕೆಲವು ವಿಡಿಯೊ ಕ್ಲಿಪ್ಪಿಂಗ್‌ಗಳನ್ನು ಬಿಡುಗಡೆ ಮಾಡಿದೆ.

ಹೇಮಾ ಮಾಲಿನಿ ನೇತೃತ್ವದ ನಿಯೋಗ ಭೇಟಿ

ಬಿಜೆಪಿ ಸಂಸದೆ ಹೇಮಾ ಮಾಲಿನಿ ನೇತೃತ್ವದ 8 ಮಂದಿ ಸದಸ್ಯರ ನಿಯೋಗ ಮಂಗಳವಾರ ಕರೂರಿಗೆ ಭೇಟಿ ನೀಡಿ, ಪರಿಸ್ಥಿತಿಯನ್ನು ಅವಲೋಕಿಸಿತು.

ನಿಯೋಗವು ದುರಂತದಲ್ಲಿ ಮೃತಪಟ್ಟವರ ಕುಟುಂಬಸ್ಥರೊಂದಿಗೆ ಮಾತುಕತೆ ನಡೆಸಿದೆ.

'ನಟ ವಿಜಯ್ ಅವರ ರ್‍ಯಾಲಿ ವೇಳೆ ವಿದ್ಯುತ್ ಕಡಿತಗೊಂಡಿದ್ದು, ಕಿರಿದಾದ ಸ್ಥಳದಲ್ಲಿ ಅಪಾರ ಸಂಖ್ಯೆಯ ಜನರು ಸೇರಿದ್ದು ಶಂಕೆ ಮೂಡಿಸುವಂತಿದೆ. ಇದು ಸ್ವಾಭಾವಿಕ ದುರಂತ ಅಲ್ಲ' ಎಂದು ಬಿಜೆಪಿ ಸಂಸದೆ ಹೇಳಿದರು.

ಚೆಕ್ ಬೌನ್ಸ್ ಪ್ರಕರಣಗಳಿಗೆ ಸಂಬಂಧಿಸಿದ ನೋಟಿಸ್

'ಮೊತ್ತ ತಪ್ಪಾಗಿ ನಮೂದಿಸುವಂತಿಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: ಚೆಕ್ ಬೌನ್ಸ್ ಪ್ರಕರಣಗಳಿಗೆ ಸಂಬಂಧಿಸಿದ ನೋಟಿಸ್‌ನಲ್ಲಿ ನಮೂದಿಸಿರುವ ಮೊತ್ತ ಮತ್ತು ಚೆಕ್‌ನಲ್ಲಿರುವ ಮೊತ್ತದಲ್ಲಿ ವ್ಯತ್ಯಾಸವಾಗಿದ್ದರೆ ಅಂತಹ ನೋಟಿಸ್‌ಗೆ ಕಾನೂನಿನ ಮಾನ್ಯತೆ ಇರುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಮುಖ್ಯ ನ್ಯಾಯಮೂರ್ತಿ ಬಿ. ಆರ್. ಗವಾಯಿ ಮತ್ತು ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ಅವರ ಪೀಠವು ನೋಟಿಸ್‌ನಲ್ಲಿ ತಿಳಿಸಿರುವ ಮೊತ್ತ ಮತ್ತು ಚೆಕ್‌ನಲ್ಲಿ ನಮೂದಿಸಿರುವ ಮೊತ್ತ ಒಂದೇ ಆಗಿರುವುದು ಕಡ್ಡಾಯವಾಗಿದೆ ಎಂದು ತಿಳಿಸಿದೆ.

'ನೋಟಿಸ್‌ನಲ್ಲಿ ಚೆಕ್ ವಿವರಗಳನ್ನು ಉಲ್ಲೇಖಿಸಿದ್ದರೂ, ಚೆಕ್ ಮೊತ್ತ ಸರಿಯಾಗಿ ಉಲ್ಲೇಖಿಸದಿದ್ದರೆ ಅಂತಹ ನೋಟಿಸ್‌ಗೆ ಕಾನೂನಿನಡಿ ಸಿಂಧುತ್ವ ಇರುವುದಿಲ್ಲ' ಎಂದು ಹೇಳಿದ ಪೀಠ, ಚೆಕ್ ಬೌನ್ಸ್ ಪ್ರಕರಣವೊಂದನ್ನು ರದ್ದುಗೊಳಿಸಿದ್ದನ್ನು ಎತ್ತಿಹಿಡಿಯಿತು.

ಮೇಲ್ಮನವಿದಾರ ಕಾವೇರಿ ಪ್ಲಾಸ್ಟಿಕ್ಸ್, 'ನೆಗೋಷಿಯೆಬಲ್ ಇನ್‌ಸ್ಟ್ರುಮೆಂಟ್ಸ್ ಕಾಯ್ದೆಯ ಸೆಕ್ಷನ್ 138ರ ಅಡಿ ಕಳುಹಿಸಲಾದ ನೋಟಿಸ್‌ನಲ್ಲಿ, ತಪ್ಪು ಮೊತ್ತವನ್ನು ನಮೂದಿಸಿರುವುದು ಮುದ್ರಣ ದೋಷ ಅಥವಾ ಕಣ್ತಪ್ಪಿನಿಂದ ಆಗಿರುವ ಸಾಧ್ಯತೆಯಿದೆ' ಎಂದು ವಾದಿಸಿತು.

ಅದನ್ನು ಒಪ್ಪದ ಪೀಠ, 'ಚೆಕ್ ಮೊತ್ತವನ್ನು ನೋಟಿಸ್‌ನಲ್ಲಿ ಉಲ್ಲೇಖಿಸದಿದ್ದರೆ ಅಥವಾ ನಿಜವಾದ ಚೆಕ್ ಮೊತ್ತಕ್ಕಿಂತ ಭಿನ್ನವಾದದ್ದನ್ನು ಉಲ್ಲೇಖಿಸಿದ್ದರೆ, ಅಂತಹ ನೋಟಿಸ್ ಕಾನೂನಿನ ದೃಷ್ಟಿಯಲ್ಲಿ ಅಮಾನ್ಯವಾಗಿರುತ್ತದೆ' ಎಂದು ಅಭಿಪ್ರಾಯಪಟ್ಟಿತು.

ಆರೋಪಿ ನಂ.1 ಮೆಸರ್ಸ್ ನಾಪ್ತೋ ಗಾಜ್ ಇಂಡಿಯಾ ಪ್ರೈವೆಟ್ ಲಿಮಿಟೆಡ್, ಅದರ ನಿರ್ದೇಶಕರು ನೀಡಿದ್ದ ಚೆಕ್‌ನ ಮೊತ್ತ ₹1 ಕೋಟಿ ಆಗಿದ್ದರೆ, ನೋಟಿಸ್‌ನಲ್ಲಿ ಮೇಲ್ಮನವಿದಾರರು ₹2 ಕೋಟಿ ನಮೂದಿಸಿದ್ದರು.

ಇಬ್ಬರು ನ್ಯಾಯಾಧೀಶರನ್ನು ತರಬೇತಿಗೆ ಕಳುಹಿಸಿದ 'ಸುಪ್ರೀಂ'

ನವದೆಹಲಿ (ಪಿಟಿಐ): ₹1.9 ಕೋಟಿ ವಂಚನೆ ಪ್ರಕರಣದ ಜಾಮೀನು ಆದೇಶಗಳಲ್ಲಿ 'ಗಂಭೀರ ಲೋಪ' ಎಸಗಿದ್ದಕ್ಕಾಗಿ ಇಬ್ಬರು ನ್ಯಾಯಾಧೀಶರಿಗೆ ಏಳು ದಿನಗಳ ಕಡ್ಡಾಯ ತರಬೇತಿ ಪಡೆಯಬೇಕು ಎಂದು ಸುಪ್ರೀಂ ಕೋರ್ಟ್ ನಿರ್ದೇಶಿಸಿರುವ ಅಪರೂಪದ ಘಟನೆ ನಡೆದಿದೆ.

ಹೆಚ್ಚುವರಿ ಮುಖ್ಯ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಮತ್ತು ಸೆಷನ್ಸ್ ನ್ಯಾಯಾಧೀಶರು ದೆಹಲಿ ನ್ಯಾಯಾಂಗ ಅಕಾಡೆಮಿಯಲ್ಲಿ ತರಬೇತಿ ಪಡೆಯಬೇಕು ಎಂದು ಸುಪ್ರೀಂ ಕೋರ್ಟ್ ಆದೇಶ ಹೊರಡಿಸಿದೆ.

ಆರೋಪಿ ದಂಪತಿಯಾದ ಶಿಕ್ಷಾ ರಾಥೋಡ್ ಮತ್ತು ಅವರ ಪತಿ ಪರವಾಗಿ ಬಂದಿರುವ ಸರಣಿ ಜಾಮೀನು ಆದೇಶಗಳ ವಿರುದ್ಧ ಮೆಸರ್ಸ್ ನೆಟ್‌ಸಿಟಿ ಸಿಸ್ಟಮ್ಸ್ ಪ್ರೈವೆಟ್ ಲಿಮಿಟೆಡ್‌ನ ಮೇಲ್ಮನವಿಯನ್ನು ಅಂಗೀಕರಿಸಿದ ಸುಪ್ರೀಂ ಕೋರ್ಟ್ ಆದೇಶ ಹೊರಡಿಸಿದೆ.

'2023ರ ನ.10 ಮತ್ತು 2024ರ ಆಗಸ್ಟ್ 16ರಂದು ಈ ಆದೇಶಗಳನ್ನು ಹೊರಡಿಸಿದ್ದ ನ್ಯಾಯಾಧೀಶರು ಕನಿಷ್ಠ 7 ದಿನಗಳ ಅವಧಿಗೆ ವಿಶೇಷ ನ್ಯಾಯಾಂಗ ತರಬೇತಿಗೆ ಒಳಗಾಗಬೇಕು' ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಅವರಿಗೆ ನ್ಯಾಯಾಂಗ ಪ್ರಕ್ರಿಯೆಗಳನ್ನು ಹೇಗೆ ನಡೆಸುವುದು ಎಂಬುವುದರ ಕುರಿತು ತರಬೇತಿ ನೀಡಲು ವ್ಯವಸ್ಥೆಗಳನ್ನು ಮಾಡುವಂತೆ ದೆಹಲಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯನ್ನು ಅದು ವಿನಂತಿಸಿದೆ.

'ಎಎಐ ಸೇವೆಗಳು ತೆರಿಗೆಗೆ ಒಳಪಡುತ್ತವೆ'

ನವದೆಹಲಿ (ಪಿಟಿಐ): ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರವು (ಎಎಐ) ಯಾವುದೇ ವಿಮಾನ ನಿಲ್ದಾಣದಲ್ಲಿ ನೀಡುವ ಎಲ್ಲಾ ಸೇವೆಗಳು ತೆರಿಗೆಗೆ ಒಳಪಡುತ್ತವೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಕಸ್ಟಮ್ಸ್, ಅಬಕಾರಿ ಮತ್ತು ಸೇವಾ ತೆರಿಗೆ ಮೇಲ್ಮನವಿ ನ್ಯಾಯಮಂಡಳಿಯು (ಸಿಇಎಸ್‌ಟಿಎಟಿ) 2017ರ ಮಾರ್ಚ್ 1ರಂದು ನೀಡಿದ್ದ ಆದೇಶವನ್ನು ನ್ಯಾಯಮೂರ್ತಿಗಳಾದ ಪಂಕಜ್ ಮಿತ್ತಲ್ ಮತ್ತು ಪಿ.ಬಿ. ವರಾಳೆ ಅವರ ಪೀಠವು ಎತ್ತಿಹಿಡಿಯಿತು.

'ಯಾವುದೇ ವಿಮಾನ ನಿಲ್ದಾಣದಲ್ಲಿ ಎಎಐ ಒದಗಿಸುವ ಎಲ್ಲಾ ರೀತಿಯ ಸೇವೆಗಳು ತೆರಿಗೆಗೆ ಒಳಪಡುವಂತಹವು. 1994ರ ಹಣಕಾಸು ಕಾಯ್ದೆಯ ಸೆಕ್ಷನ್ 66ರ ಅಡಿ ಸೇವಾ ತೆರಿಗೆಗೆ ಒಳಪಡುತ್ತವೆ' ಎಂದು ಪೀಠವು ಈಚೆಗಿನ ತೀರ್ಪಿನಲ್ಲಿ ತಿಳಿಸಿದೆ.

ಬುಧವಾರ, ಅಕ್ಟೋಬರ್ 1, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 272 | ಪುಟ 26

prajavani.net prajavani www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಬಿಡುವು

ಪ್ರಿಯ ಓದುಗರು, ಜಾಹೀರಾತುದಾರರು, ಪತ್ರಿಕಾ ವಿತರಕರಿಗೆ ಆಯುಧ ಪೂಜೆ ಹಾಗೂ ವಿಜಯದಶಮಿ ಶುಭಾಶಯಗಳು

ಆಯುಧಪೂಜೆ ನಿಮಿತ್ತ ಬುಧವಾರ ನಮ್ಮ ಕಚೇರಿಗೆ ಬಿಡುವು. ಹೀಗಾಗಿ ಗುರುವಾರದ ಸಂಚಿಕೆ ಪ್ರಕಟವಾಗುವುದಿಲ್ಲ.

ದಿನದ ಬೆಳವಣಿಗೆಗಾಗಿ www.prajavani.net ನೋಡಿ.

ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ.

ಹೆಕ್ಟೇರ್‌ಗೆ ₹8,500 ಹೆಚ್ಚುವರಿ ಪರಿಹಾರ

ಬೆಳೆಹಾನಿ: 'ಕಲ್ಯಾಣ'ದ ನಾಲ್ಕು ಜಿಲ್ಲೆಗಳಲ್ಲಿ ಪ್ರವಾಹ ಪರಿಸ್ಥಿತಿ ವೀಕ್ಷಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಕಲ್ಯಾಣ ಕರ್ನಾಟಕ, ಉತ್ತರ ಕರ್ನಾಟಕ ಭಾಗದಲ್ಲಿ ಸುರಿದ ಭಾರಿ ಮಳೆಯಿಂದ ಹಾಳಾದ ಬೆಳೆಗಳಿಗೆ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯ ಮಾರ್ಗಸೂಚಿ ಅನ್ವಯ ನೀಡುವ ಪರಿಹಾರದ ಜೊತೆಗೆ ಪ್ರತಿ ಹೆಕ್ಟೇರ್‌ಗೆ ರಾಜ್ಯ ಸರ್ಕಾರದಿಂದ ಹೆಚ್ಚುವರಿ ₹8,500 ಪರಿಹಾರ ನೀಡಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದರು.

ಮಹಾರಾಷ್ಟ್ರದ ಜಲಾಶಯಗಳಿಂದ ಭೀಮಾ ನದಿಗೆ ಅಪಾರ ಪ್ರಮಾಣದ ನೀರು ಹರಿದು ಬಂದಿದೆ. ಇದರಿಂದ ಬಾಧಿತವಾದ ಪ್ರದೇಶಗಳಲ್ಲಿ ಮಂಗಳವಾರ ವೈಮಾನಿಕ ಸಮೀಕ್ಷೆ ನಡೆಸಿ ಅಧಿಕಾರಿಗಳೊಂದಿಗೆ ಸಭೆ ಮಾಡಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಈ ನಿರ್ಧಾರ ಪ್ರಕಟಿಸಿದರು.

'ಬೆಳೆ ನಷ್ಟವನ್ನು ತುಂಬಿ ಕೊಡುವುದಕ್ಕಾಗಿ ಸರ್ಕಾರ ₹2 ಸಾವಿರ ಕೋಟಿಗೂ ಅಧಿಕ ಹಣವನ್ನು ವ್ಯಯಿಸಲಿದೆ' ಎಂದರು.

ಕಲ್ಯಾಣ ಕರ್ನಾಟಕದ ಕಲಬುರಗಿ, ಬೀದರ್, ಯಾದಗಿರಿ; ಉತ್ತರ ಕರ್ನಾಟಕದ ವಿಜಯಪುರ, ಬೆಳಗಾವಿ, ಬಾಗಲಕೋಟೆ, ಧಾರವಾಡ, ಗದಗ ಜಿಲ್ಲೆಗಳಲ್ಲಿ ವಾಡಿಕೆಗಿಂತ ಅಧಿಕ ಮಳೆ ಆಗಿದೆ. ಮಹಾರಾಷ್ಟ್ರದಿಂದ ಈ ಬಾರಿ ಹೆಚ್ಚುವರಿ ನೀರನ್ನು ಹರಿಬಿಟ್ಟಿದ್ದರಿಂದ ಕಲಬುರಗಿ, ವಿಜಯಪುರ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಪ್ರವಾಹ ಉಂಟಾಗಿದೆ ಎಂದು ತಿಳಿಸಿದರು.

9.60 ಲಕ್ಷ ಹೆಕ್ಟೇರ್ ಹಾನಿ: 'ರಾಜ್ಯದಲ್ಲಿ ಮಳೆಯಿಂದಾಗಿ 9,60,578 ಹೆಕ್ಟೇರ್‌ನಲ್ಲಿ ಬೆಳೆ ಹಾನಿಯಾಗಿದ್ದು, ಆ ಪೈಕಿ ಶೇ 95ರಷ್ಟು ಬೆಳೆ ಹಾನಿ ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕದ ಎಂಟು ಜಿಲ್ಲೆಗಳಲ್ಲಿ ಸಂಭವಿಸಿದೆ.

ಕಲಬುರಗಿ, ವಿಜಯಪುರ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಒಟ್ಟು 117 ಗ್ರಾಮಗಳು ತೊಂದರೆಗೊಳಗಾಗಿವೆ. ಈ ಜಿಲ್ಲೆಗಳ ವ್ಯಾಪ್ತಿಯಲ್ಲಿ 80 ಕಾಳಜಿ ಕೇಂದ್ರ ತೆರೆಯಲಾಗಿದೆ. ಜೂನ್ 1ರಿಂದ ಇಲ್ಲಿಯವರೆಗೆ ಮಳೆ ಸಂಬಂಧಿ ಅವಘಡಗಳಿಂದಾಗಿ 52 ಮಂದಿ ಮೃತಪಟ್ಟಿದ್ದಾರೆ. 422 ಜಾನುವಾರು ಮೃತಪಟ್ಟಿವೆ. ಜೀವಹಾನಿಗೆ ಪರಿಹಾರ ನೀಡಲಾಗಿದೆ' ಎಂದರು.

ನೆರೆ ಪೀಡಿತ ಜಿಲ್ಲೆಗಳಲ್ಲಿ ರಸ್ತೆ, ಸೇತುವೆ, ಶಾಲೆ, ಅಂಗನವಾಡಿ, ವಿದ್ಯುತ್ ಟ್ರಾನ್ಸ್‌ಫಾರ್ಮರ್ ಹಾಳಾಗಿರುವುದು ಸೇರಿದಂತೆ ಇತರ ಹಾನಿಗಳ ಬಗ್ಗೆ ಸಮೀಕ್ಷೆ ಕಾರ್ಯ ನಡೆಯುತ್ತಿದೆ' ಎಂದು ಹೇಳಿದರು.

4

'ಮಹಾ' ಮಾದರಿ ಪರಿಹಾರಕ್ಕೆ ಒತ್ತಾಯ

ಪ್ರವಾಹ ನಿರ್ವಹಣೆಗಾಗಿ ₹2,200 ಕೋಟಿ ಪರಿಹಾರ ನೀಡುವಂತೆ ಮಹಾರಾಷ್ಟ್ರ ಸರ್ಕಾರ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದೆ. ಮಹಾರಾಷ್ಟ್ರಕ್ಕೆ ಕೊಡುವ ಮಾದರಿಯಲ್ಲೇ ರಾಜ್ಯಕ್ಕೂ ಪರಿಹಾರ ಹಣವನ್ನು ಬಿಡುಗಡೆಗೊಳಿಸಬೇಕು ಎಂದು ಕೇಂದ್ರವನ್ನು ಒತ್ತಾಯಿಸಲು ಸಿ.ಎಂ ನೇತೃತ್ವದ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಯಿತು.

ಬೆಳೆ ಹಾನಿ ಪರಿಹಾರ: ಯಾವುದಕ್ಕೆ ಎಷ್ಟು?' (ಪ್ರತಿ ಹೆಕ್ಟೇರ್‌ಗೆ)

ಬೆಳೆ	ಎನ್‌ಡಿಆರ್‌ಎಫ್ ಮಾರ್ಗಸೂಚಿ ಮೊತ್ತ	ಸರ್ಕಾರದ ಹೆಚ್ಚುವರಿ ಮೊತ್ತ	ಒಟ್ಟು
ಖುಷ್ಕಿ ಭೂಮಿ	₹8,500	₹8,500	₹17,000
ನೀರಾವರಿ ಭೂಮಿ	₹17,000	₹8,500	₹25,500
ಬಹುವಾರ್ಷಿಕ ಬೆಳೆ	₹22,500	₹8,500	₹31,000

> ರಾಜ್ಯದಲ್ಲಿ ಪ್ರವಾಹ ನಿರ್ವಹಣೆಗಾಗಿ ವಿಶೇಷ ಪ್ಯಾಕೇಜ್ ನೀಡುವಂತೆ ಪ್ರಧಾನಿ, ಗೃಹಸಚಿವರು, ಹಣಕಾಸು ಸಚಿವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಗುವುದು
> **ಸಿದ್ದರಾಮಯ್ಯ**, ಮುಖ್ಯಮಂತ್ರಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಲಬುರಗಿ, ಬೀದರ್, ಯಾದಗಿರಿ ಹಾಗೂ ವಿಜಯಪುರ ಜಿಲ್ಲೆಗಳ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ವೈಮಾನಿಕ ಸಮೀಕ್ಷೆ ನಡೆಸಿದರು

> ವಿಪಕ್ಷದವರನ್ನು ಮುಖ್ಯಮಂತ್ರಿ ಬೈದರೆ ಸಂತ್ರಸ್ತರ ಸಮಸ್ಯೆ ನೀಗುತ್ತದೆಯೇ? ಅವರ ಸಂಪುಟದ ಮಂತ್ರಿಗಳು ಎಲ್ಲಿ ಹೋಗಿದ್ದಾರೆ? ಎ.ಸಿ ರೂಮ್‌ನಲ್ಲಿ ಕಾಲಹರಣ ಮಾಡಿದ್ದು ಸಾಕು
> **ಎಚ್‌.ಡಿ.ಕುಮಾರಸ್ವಾಮಿ**, ಕೇಂದ್ರ ಸಚಿವ

> ಪ್ರವಾಹಪೀಡಿತ ಪ್ರದೇಶದಲ್ಲಿ ವೈಮಾನಿಕ ಸಮೀಕ್ಷೆ ನಡೆಸಿದ್ದಾರೆ. ಜನ ರಸ್ತೆ ತಡೆದು ಪ್ರತಿಭಟನೆ ನಡೆಸಬಹುದು ಎಂಬ ಭಯಕ್ಕೆ ಇವರು ಹೆಲಿಕಾಪ್ಟರ್ ಮೂಲಕ ವೀಕ್ಷಣೆ ಮಾಡುತ್ತಿದ್ದಾರೆ
> **ಆರ್.ಅಶೋಕ**, ವಿರೋಧ ಪಕ್ಷದ ನಾಯಕ

ವೈಮಾನಿಕ ಸಮೀಕ್ಷೆ ನಡೆಸಿದ ಸಿ.ಎಂ

ಕಲಬುರಗಿ: ಭೀಮಾ ಹಾಗೂ ಮಾಂಜ್ರಾ ನದಿಗಳಲ್ಲಿ ಪ್ರವಾಹದಿಂದ ಉಂಟಾಗಿರುವ ಸಮಸ್ಯೆಗಳನ್ನು ಅರಿಯಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಗಳವಾರ ಕಲಬುರಗಿ, ಬೀದರ್, ಯಾದಗಿರಿ ಹಾಗೂ ವಿಜಯಪುರ ಜಿಲ್ಲೆಗಳಲ್ಲಿ ವೈಮಾನಿಕ ಸಮೀಕ್ಷೆ ನಡೆಸಿದರು.

ಕಂದಾಯ ಸಚಿವ ಕೃಷ್ಣ ಬೈರೇಗೌಡ, ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ, ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ, ಬೀದರ್ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ, ಸಚಿವ ರಹೀಂ ಖಾನ್ ಜೊತೆಗೆ ಪ್ರವಾಹದ ಅವಾಂತರ ವೀಕ್ಷಿಸಿದರು.

ನಂತರ ಕಲಬುರಗಿಯಲ್ಲಿ ನಾಲ್ಕೂ ಜಿಲ್ಲೆಗಳ ಜಿಲ್ಲಾಧಿಕಾರಿಗಳೊಂದಿಗೆ ಸಭೆ ನಡೆಸಿದ ಮುಖ್ಯಮಂತ್ರಿ, ಅಗತ್ಯ ಇರುವ ಕಡೆ ತಾತ್ಕಾಲಿಕ, ಶಾಶ್ವತ ತಡೆಗೋಡೆ ಕಟ್ಟಿಸಿ ಅನಾಹುತದ ಪ್ರಮಾಣ ತಪ್ಪಿಸಲು ಸೂಚಿಸಿದರು.

ಬಾಧಿತ ಗ್ರಾಮಗಳಲ್ಲಿ ಶಾಲೆಗಳ ಧಾರಣ ಸಾಮರ್ಥ್ಯ ಪರೀಕ್ಷಿಸುವುದನ್ನು ಕಡ್ಡಾಯವಾಗಿ ಜಿಲ್ಲಾಧಿಕಾರಿಗಳು ಗಮನಿಸಬೇಕು. ಕಟ್ಟಡಗಳು ಶಿಥಿಲಗೊಂಡಿದ್ದರೆ ಅಂತಹ ಶಾಲೆಗಳನ್ನು ಸುರಕ್ಷಿತ ಸ್ಥಳಕ್ಕೆ ವರ್ಗಾಯಿಸಿ ಪರ್ಯಾಯ ವ್ಯವಸ್ಥೆ ಕಲ್ಪಿಸುವುದನ್ನು ಕಡ್ಡಾಯವಾಗಿ ಮಾಡಬೇಕು. ಇದರಲ್ಲಿ ನಿರ್ಲಕ್ಷ್ಯ ತೋರಿದರೆ ಸಹಿಸುವುದಿಲ್ಲ ಎಂದು ಎಚ್ಚರಿಸಿದರು.

'ನೀರುಹಂಚಿಕೆ: ರಾಜ್ಯದ ಹಿತಾಸಕ್ತಿ ರಕ್ಷಣೆ'

ಮಹಾರಾಷ್ಟ್ರವು ಭೀಮಾ ನದಿಯಲ್ಲಿ ರಾಜ್ಯದ ಪಾಲನ್ನು ತಪ್ಪಿಸಲು ಹೆಚ್ಚುವರಿ ಜಲಾಶಯಗಳನ್ನು ನಿರ್ಮಿಸಿಕೊಂಡಿರುವ ವಿಚಾರದ ಕುರಿತು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, 'ಎರಡೂ ರಾಜ್ಯಗಳ ಮಧ್ಯದ ಜಲವಿವಾದವು ಕೇಂದ್ರ ಜಲ ಆಯೋಗದ ಮುಂದೆ ಇದೆ. ರಾಜ್ಯದ ಹಿತಾಸಕ್ತಿಯನ್ನು ಕಾಯಲು ಬದ್ಧರಾಗಿದ್ದೇವೆ' ಎಂದು ಹೇಳಿದರು.

ಕಸಾಪಕ್ಕೆ ಆಡಳಿತಾಧಿಕಾರಿ ನೇಮಕ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷರ ವಿರುದ್ಧ ಅಧಿಕಾರ ದುರ್ಬಳಕೆ ಸೇರಿ ವಿವಿಧ ಆರೋಪಗಳಿದ್ದು, ಈ ಕಾರಣದಿಂದಾಗಿ ಶೀಘ್ರದಲ್ಲಿಯೇ ಕಸಾಪಕ್ಕೆ ಆಡಳಿತಾಧಿಕಾರಿ ನೇಮಕಗೊಳ್ಳುವ ಸಾಧ್ಯತೆ ಇದೆ.

ಕಸಾಪದಲ್ಲಿ ಹಣಕಾಸಿನ ಅವ್ಯವಹಾರ ಹಾಗೂ ಅಧಿಕಾರ ದುರ್ಬಳಕೆಯ ಆರೋಪಗಳ ವಿಚಾರಣೆಗೆ ಸಂಬಂಧಿಸಿದಂತೆ ಜುಲೈನಲ್ಲಿ ಆದೇಶ ಹೊರಡಿಸಿದ್ದ ಸಹಕಾರ ಇಲಾಖೆಯು ವಿಚಾರಣಾಧಿಕಾರಿಯನ್ನು ನೇಮಕ ಮಾಡಿತ್ತು. ವಿಚಾರಣೆಗೆ ಸಂಬಂಧಿಸಿದಂತೆ ನಿಗದಿತ ಕಾಲಾವಧಿಯಲ್ಲಿ ಹಾಜರಾಗದಿರುವುದು, ಅಗತ್ಯ ದಾಖಲಾತಿಗಳನ್ನು ಒದಗಿಸದಿರುವ ಕಾರಣ ಆಡಳಿತಾಧಿಕಾರಿ ನೇಮಿಸುವಂತೆ ಇಲಾಖೆಯು ಸರ್ಕಾರಕ್ಕೆ ಶಿಫಾರಸು ಮಾಡಿತ್ತು. ಸದ್ಯವೇ ಆಡಳಿತಾಧಿಕಾರಿ ನೇಮಕ ಮಾಡಲಾಗುವುದು ಎಂದು ಸಹಕಾರ ಇಲಾಖೆ ಮೂಲಗಳು ಹೇಳಿವೆ.

ಇದಕ್ಕೆ ಪೂರಕವಾಗಿ ಸಹಕಾರ ಇಲಾಖೆಯು ಮುಖ್ಯಮಂತ್ರಿಯವರಿಗೆ ಕಡತ ಕಳುಹಿಸಿದೆ. ಆಡಳಿತಾಧಿಕಾರಿಯನ್ನಾಗಿ ಯಾರನ್ನು ನೇಮಿಸಬೇಕು ಎಂಬುದರ ಪರಿಶೀಲನೆ ನಡೆದಿದೆ. ಮುಂದಿನ ವಾರ ನೇಮಕದ ಆದೇಶ ಹೊರಬೀಳುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಸೆ. 22ರಂದು ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಿದ್ದ ಇಲಾಖೆ ಕಾರ್ಯದರ್ಶಿ, 'ಮೇಲ್ನೋಟಕ್ಕೆ ಆರೋಪಗಳು ಸಾಬೀತಾಗಿರುವುದರಿಂದ ಏಕೆ ಆಡಳಿತಾಧಿಕಾರಿ ನೇಮಿಸಬಾರದು' ಎಂದು ನೋಟಿಸ್‌ನಲ್ಲಿ ಪ್ರಶ್ನಿಸಿದ್ದರು. ಈ ನೋಟಿಸ್‌ಗೆ ಸಂಬಂಧಿಸಿದಂತೆ ಪತ್ರ ಬರೆದಿದ್ದ ಮಹೇಶ ಜೋಶಿ, 'ಸಹೋದರಿ ಪತಿ ಲಿಂಗರಾಜ ಕುರ್ತಕೋಟಿ ಅವರು ಮೃತಪಟ್ಟ ಕಾರಣ, ಲಿಖಿತ ಹೇಳಿಕೆ ನೀಡಲು ಹಾಗೂ ವಿಚಾರಣೆಗೆ ಹಾಜರಾಗಲು 15 ದಿನಗಳ ಕಾಲಾವಕಾಶ ನೀಡಬೇಕು' ಎಂದು ಮನವಿ ಮಾಡಿದ್ದರು.

'ದರ್ಶನ್ ಮಲಗಲು ಪಲ್ಲಂಗ ಕೊಡಲು ಸಾಧ್ಯವೇ?'

ಪ್ರಜಾವಾಣಿ ವಾರ್ತೆ

ದರ್ಶನ್

ಬೆಂಗಳೂರು: 'ಕೊಲೆ ಪ್ರಕರಣದ ಆರೋಪಿ ದರ್ಶನ್‌ಗೆ ಕಾರಾಗೃಹದ ಕೈಪಿಡಿಯಂತೆಯೇ ಸೌಲಭ್ಯ ಕಲ್ಪಿಸಲಾಗುತ್ತಿದೆ. ಜೈಲಿನಲ್ಲಿ ಮಲಗಲು ಪಲ್ಲಂಗ ಬೇಕು ಎಂದರೆ ಹೇಗೆ ಕೊಡಲು ಸಾಧ್ಯ...'

ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ವಿಚಾರಣೆ ಇಲ್ಲಿನ 57ನೇ ಸಿಸಿಎಚ್ ನ್ಯಾಯಾಲಯದಲ್ಲಿ ಮಂಗಳವಾರ ನಡೆಯಿತು. ಈ ವೇಳೆ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಪ್ರಸನ್ನ ಕುಮಾರ್ ಅವರು ಮೇಲಿನಂತೆ ವಾದ ಮುಂದಿಟ್ಟರು.

'ನ್ಯಾಯಾಲಯದ ಸೂಚನೆ ಇದ್ದರೂ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಹಾಸಿಗೆ, ದಿಂಬಿನಂತಹ ಕನಿಷ್ಠ ಸೌಲಭ್ಯವನ್ನೂ ನೀಡುತ್ತಿಲ್ಲ' ಎಂದು ಆರೋಪಿಸಿ ದರ್ಶನ್ ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು ಪೂರ್ಣಗೊಳಿಸಿರುವ ನ್ಯಾಯಾಲಯವು ಅಕ್ಟೋಬರ್ 9ಕ್ಕೆ ಆದೇಶ ಕಾಯ್ದಿರಿಸಿತು.

ಇದಕ್ಕೂ ಮೊದಲು ಎಸ್‌ಪಿಪಿ ಪ್ರಸನ್ನಕುಮಾರ್ ಹಾಗೂ ದರ್ಶನ್ ಪರ ವಕೀಲ ಸುನಿಲ್ ಅವರು ನ್ಯಾಯಾಧೀಶರ ಎದುರು ವಾದ–ಪ್ರತಿವಾದ ಮಂಡಿಸಿದರು. 'ಆರೋಪಿಗೆ ಬೆಳಿಗ್ಗೆ ಹಾಗೂ ಸಂಜೆ ತಲಾ ಒಂದು ತಾಸು ಬ್ಯಾರಕ್ ಎದುರು ವಾಕ್ ಮಾಡಲು ಅವಕಾಶ ಕಲ್ಪಿಸಲಾಗಿದೆ. ಆದರೆ, ಆರೋಪಿ ಹೊರಗಡೆ ಹೋಗಬೇಕು, ಇದೇ ಬ್ಯಾರಕ್‌ನಲ್ಲಿಯೇ ಇರಬೇಕು ಎಂದರೆ ಆಗುವುದಿಲ್ಲ' ಎಂದು ಪ್ರಸನ್ನ ಕುಮಾರ್ ವಾದ ಮಂಡಿಸಿದರು.

8

5 ಪಾಲಿಕೆಗಳಲ್ಲಿ 368 ವಾರ್ಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ಐದು ನಗರ ಪಾಲಿಕೆಗಳ ವಾರ್ಡ್‌ಗಳನ್ನು ಮರು ವಿಂಗಡಣೆ ಮಾಡಿ, ಗಡಿ ನಿಗದಿಪಡಿಸಿ ನಗರಾಭಿವೃದ್ಧಿ ಇಲಾಖೆ ಮಂಗಳವಾರ ಕರಡು ಅಧಿಸೂಚನೆ ಹೊರಡಿಸಿದೆ. ಐದು ಪಾಲಿಕೆಗಳ ವ್ಯಾಪ್ತಿಯಲ್ಲಿ ಒಟ್ಟು 368 ವಾರ್ಡ್‌ಗಳಿವೆ.

ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ–2024 (ಜಿಬಿಜಿಎ) ಅಡಿಯಲ್ಲಿ ಸೆ.2ರಂದು ಜಿಬಿಎ ರಚಿಸಲಾಗಿತ್ತು. ಜಿಬಿಎ ವ್ಯಾಪ್ತಿಯಲ್ಲಿ ಹಿಂದಿನ ಬಿಬಿಎಂಪಿ ವ್ಯಾಪ್ತಿಯಲ್ಲಿದ್ದ 198 ವಾರ್ಡ್‌ಗಳನ್ನು ಹಂಚಿಕೆ ಮಾಡಿ 5 ನಗರ ಪಾಲಿಕೆಗಳನ್ನು ರಚಿಸಿ, ಗಡಿ ನಿಗದಿ ಮಾಡಿ ಅಂದೇ ಅಧಿಸೂಚನೆ ಹೊರಡಿಸಲಾಗಿತ್ತು.

ಐದು ನಗರ ಪಾಲಿಕೆಗಳ ವಾರ್ಡ್‌ಗಳನ್ನು ಮರು ವಿಂಗಡಿಸಲು, ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ನೇತೃತ್ವದಲ್ಲಿ 'ವಾರ್ಡ್‌ಗಳ ಪುನರ್ ವಿಂಗಡಣಾ ಆಯೋಗ'ವನ್ನು ರಚಿಸಿ, ಸೆಪ್ಟೆಂಬರ್ 23ರಂದು ಸರ್ಕಾರಕ್ಕೆ ವರದಿ ಸಲ್ಲಿಸಲು ಸೂಚಿಸಲಾಗಿತ್ತು. ಆಯೋಗ ಒಂದು ವಾರ ತಡವಾಗಿ, ಸೆ. 30ರಂದು ವರದಿ ಸಲ್ಲಿಸಿದೆ.

ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ–2024ರ ಪ್ರಕರಣ 29ರ ಉಪ ಪ್ರಕರಣ (1) ಮತ್ತು (3)ರ ಅನ್ವಯ ವಾರ್ಡ್‌ಗಳ ಪುನರ್ ವಿಂಗಡಣೆ ಮಾಡಿ, ಸಲ್ಲಿಸಲಾಗಿದ್ದ ವಾರ್ಡ್ ಮರು ವಿಂಗಡಣೆಯ ವರದಿಯನ್ನು ಸರ್ಕಾರ ಒಪ್ಪಿದೆ. ಜಿಬಿಜಿಎ ಕಾಯ್ದೆಯ 29ರಲ್ಲಿ ಪ್ರದತ್ತವಾದ ಅಧಿಕಾರದನ್ವಯ 2011ರ ಜನಗಣತಿಯ ಆಧಾರದಲ್ಲಿ, ಗ್ರೇಟರ್ ಬೆಂಗಳೂರು ಪ್ರದೇಶದ ಐದು ನಗರ ಪಾಲಿಕೆಗಳಲ್ಲಿ ವಾರ್ಡ್‌ವಾರು ಕ್ಷೇತ್ರ ಪುನರ್ ವಿಂಗಡಣೆ ಮಾಡಿ ಕರಡು ಅಧಿಸೂಚನೆ ಹೊರಡಿಸಿದೆ.

ಯಾವುದೇ ಆಕ್ಷೇಪ/ ಸಲಹೆಗಳಿದ್ದರೆ ಸಾರ್ವಜನಿಕರು ತಮ್ಮ ಪೂರ್ಣ ವಿಳಾಸ, ಸಹಿಯೊಂದಿಗೆ ಸೂಕ್ತ ಕಾರಣ–ವಿವರಣೆಗಳೊಂದಿಗೆ ಲಿಖಿತ ರೂಪದಲ್ಲಿ 'ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ಕೊಠಡಿ ಸಂಖ್ಯೆ 436, 4ನೇ ಮಹಡಿ, ವಿಕಾಸಸೌಧ, ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು–560001' ಇವರಿಗೆ ಅಕ್ಟೋಬರ್ 15ರ ಸಂಜೆ 5ರೊಳಗೆ ಸಲ್ಲಿಸಬೇಕು ಎಂದು ನಗರಾಭಿವೃದ್ಧಿ ಇಲಾಖೆ ತಿಳಿಸಿದೆ.

ನಿಗದಿತ ಅವಧಿಯಲ್ಲಿ ಸ್ವೀಕೃತವಾದ ಆಕ್ಷೇಪಣೆ/ ಸಲಹೆಗಳನ್ನು ಪರಿಶೀಲಿಸಿ, ನಗರ ಪಾಲಿಕೆಗಳ ವಾರ್ಡ್‌ವಾರು ಕ್ಷೇತ್ರ ಪುನರ್ ವಿಂಗಡಣೆಯನ್ನು ಅಂತಿಮಗೊಳಿಸಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಿಳಿಸಲಾಗಿದೆ.

ವಿವರ ಪುಟ 7A

ಎಲ್ಲಿ ಎಷ್ಟು ವಾರ್ಡ್?

ಬೆಂಗಳೂರು ಕೇಂದ್ರ ನಗರ ಪಾಲಿಕೆ	63 ವಾರ್ಡ್
ಬೆಂಗಳೂರು ಉತ್ತರ ನಗರ ಪಾಲಿಕೆ	72 ವಾರ್ಡ್
ಬೆಂಗಳೂರು ದಕ್ಷಿಣ ನಗರ ಪಾಲಿಕೆ	72 ವಾರ್ಡ್
ಬೆಂಗಳೂರು ಪೂರ್ವ ನಗರ ಪಾಲಿಕೆ	50 ವಾರ್ಡ್
ಬೆಂಗಳೂರು ಪಶ್ಚಿಮ ನಗರ ಪಾಲಿಕೆ	111 ವಾರ್ಡ್

ಘಟಕಗಳಿಗೆ ಸಾಲ: ನಿಯಮ ಸಡಿಲ

ಮುಂಬೈ (ಪಿಟಿಐ): ಚಿನ್ನವನ್ನು ಕಚ್ಚಾ ವಸ್ತುವನ್ನಾಗಿ ಬಳಕೆ ಮಾಡುವ ತಯಾರಿಕಾ ಘಟಕಗಳಿಗೆ ಅಗತ್ಯವನ್ನು ಆಧರಿಸಿದ ಕಾರ್ಯಾಚರಣೆ ಬಂಡವಾಳ ಸಾಲ ನೀಡಲು ಆರ್‌ಬಿಐ ವಾಣಿಜ್ಯ ಬ್ಯಾಂಕ್‌ಗಳಿಗೆ ಅವಕಾಶ ನೀಡಿದೆ.

7

ಆನೆ ಕಳವು– ರಕ್ಷಣೆ

ಮೇದಿನಿನಗರ (ಪಿಟಿಐ): ಜಾರ್ಖಂಡ್‌ನ ಪಲಾಮು ಜಿಲ್ಲೆಯಲ್ಲಿ ಕದ್ದು ₹27 ಲಕ್ಷಕ್ಕೆ ಮಾರಾಟ ಮಾಡಿದ್ದ ಹೆಣ್ಣು ಆನೆಯನ್ನು ಬಿಹಾರದ ಛಪ್ರಾ ಜಿಲ್ಲೆಯಲ್ಲಿ ರಕ್ಷಿಸಲಾಗಿದೆ. ಜಾರ್ಖಂಡ್‌ನ ಚುಕುರ್ ಪ್ರದೇಶದಲ್ಲಿ 'ಜಯಮತಿ' ಎಂಬ ಹೆಣ್ಣಾನೆಯನ್ನು ಸೆ.12ರಂದು ಕಳವು ಮಾಡಲಾಗಿತ್ತು.

8

'ಸೇನಾ ಪಡೆಗಳ ಸಮನ್ವಯ ಮಾದರಿ'

ರಾಜನಾಥ್ ಸಿಂಗ್

ನವದೆಹಲಿ (ಪಿಟಿಐ): 'ಆಪರೇಷನ್ ಸಿಂಧೂರ'ದ ವೇಳೆ ಮೂರೂ ಸೇನಾ ಪಡೆಗಳು ಸಮನ್ವಯದಲ್ಲಿ ನಡೆಸಿದ ಕಾರ್ಯಾಚರಣೆಯು ನಿರ್ಣಾಯಕ ಫಲಿತಾಂಶ ನೀಡಿದ ಜೀವಂತ ಉದಾಹರಣೆಯಾಗಿದೆ. ಭವಿಷ್ಯದಲ್ಲಿ ಎದುರಾಗುವ ಎಲ್ಲ ಸೇನಾ ಕಾರ್ಯಾಚರಣೆಗಳಿಗೂ ಇದು ಮಾದರಿ ಎನ್ನುವಂತಾಗಿದೆ' ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ.

ಭಾರತೀಯ ವಾಯುಪಡೆಯಿಂದ ಇಲ್ಲಿ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಭಾಗವಹಿಸಿ ಮಾತನಾಡಿದ ಅವರು, 'ಭಾರತ ಹಾಗೂ ಪಾಕಿಸ್ತಾನದ ನಡುವೆ ಮೇ 7ರಿಂದ 10ರವರೆಗೆ ನಡೆದ ಕಾರ್ಯಾಚರಣೆಯಲ್ಲಿ ಭಾರತೀಯ ವಾಯುಪಡೆಯ ಏರ್ ಕಮಾಂಡ್ ಮತ್ತು ಆಕಾಶ್‌ತೀರ್ ಸಮಗ್ರ ವ್ಯವಸ್ಥೆ ಹಾಗೂ ಭಾರತೀಯ ನೌಕಾಪಡೆಯ 'ತ್ರಿಗುಣ್' ವ್ಯವಸ್ಥೆಯು ಜಂಟಿಯಾಗಿ ಹೇಗೆ ಕೆಲಸ ಮಾಡಿತು ಎಂಬುದನ್ನು ಅವರು ಉಲ್ಲೇಖಿಸಿದರು. 'ಮೂರೂ ಪಡೆಗಳ ನಡುವೆ ಹೊಸ ವ್ಯವಸ್ಥೆಯನ್ನು ರೂಪಿಸಬೇಕಿದೆ' ಎಂದರು.

ಚಿನಕುರುಳಿ ಪ್ರಕಾಶ್ ಶೆಟ್ಟಿ

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ. 16-CWS-MYSS-2025-26 ದಿನಾಂಕ: 25.09.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಕೆಲಸದ ವ್ಯಾಪ್ತಿಗೆ ಅನುಸಾರವಾಗಿ ಬಿಜಿ ಐಸಿಎಫ್ ಕೋಚ್‌ಗಳನ್ನು ಎಆರ್‌ಟಿ/ಎಆರ್‌ಎಂಇ ಕೋಚ್‌ಗಳನ್ನಾಗಿ ಪರಿವರ್ತನೆ ಮಾಡುವುದು (9 ಕೋಚ್‌ಗಳು)	ರೂ. 25,28,178.76

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 17.10.2025, 15:30 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಕಾರ್ಯಾಗಾರ ವ್ಯವಸ್ಥಾಪಕರು/ಕೇಂದ್ರ ಕಾರ್ಯಾಗಾರ/ಮೈಸೂರು

PUB/518/AAF/PRB/SWR/2025-26

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ. CAO/CN/BNC/144/2025 ದಿನಾಂಕ: 25.09.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ನೈಋತ್ಯ ರೈಲ್ವೆಯ ನಿರ್ಮಾಣ ಕಚೇರಿ, ಬೆಂಗಳೂರಿನಲ್ಲಿ ಐಪಿಎಂಎಸ್ ಸಾಫ್ಟ್‌ವೇರ್‌ನ ವಾರ್ಷಿಕ ನಿರ್ವಹಣೆ. (ಟೆಂಡರು ಉಲ್ಲೇಖ ಸಂ. BNC-IPMS-AMC-2025)	ರೂ. 57,46,599/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 17.19.2025, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್/ನಿರ್ಮಾಣ/ಕಾರ್ಯ ಬೆಂಗಳೂರು ಕಂಟೋನ್ಮೆಂಟ್

PUB/519/AAF/PRB/SWR/2025-26

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

ತಿದ್ದುಪಡಿ

ದಿನಾಂಕ 23 ಆಗಸ್ಟ್ 2025 ರಂದು ಎಂಪ್ಲಾಯ್‌ಮೆಂಟ್ ನ್ಯೂಸ್ ಪತ್ರಿಕೆಯಲ್ಲಿ ಪ್ರಕಟಗೊಂಡಿದ್ದ, ಸೆಕ್ಷನ್ ಆಫೀಸರ್ ಹುದ್ದೆಯನ್ನು ಡೆಪ್ಯುಟೇಶನ್ ಆಧಾರದಲ್ಲಿ ಭರ್ತಿ ಮಾಡಿಕೊಳ್ಳಲು ಆಹ್ವಾನಿಸಲಾಗಿದ್ದ, ಜಾಹೀರಾತಿನಲ್ಲಿ ಉಲ್ಲೇಖಿಸಲಾಗಿದ್ದ ಅರ್ಜಿ ಸಲ್ಲಿಕೆಯ ಕೊನೆಯ ದಿನಾಂಕವನ್ನು **ಶುಕ್ರವಾರ, 31 ಅಕ್ಟೋಬರ್ 2025ಕ್ಕೆ ವಿಸ್ತರಿಸಲಾಗಿದೆ.**

ಇನ್ನಿತರೆ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ವಿವರವಾದ ಜಾಹೀರಾತು ಮತ್ತು ಅರ್ಜಿ ನಮೂನೆಗಾಗಿ, ದಯವಿಟ್ಟು ಬಿಐಎಸ್ ಸಂಸ್ಥೆಯ www.bis.gov.in ವೆಬ್‌ಸೈಟ್‌ಗೆ ಭೇಟಿ ಕೊಡಿ.

ಶೊಯೇಬ್ ಅಖ್ತರ್
ನಿರ್ದೇಶಕರು (ಎಸ್ಟಾಬ್ಲಿಷ್‌ಮೆಂಟ್)
ಬ್ಯೂರೋ ಆಫ್ ಇಂಡಿಯನ್ ಸ್ಟ್ಯಾಂಡರ್ಡ್ಸ್, ನವದೆಹಲಿ

CBC 08103/12/0011/2526

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ–562 101
ದೂರವಾಣಿ ಸಂಖ್ಯೆ: ಕಛೇರಿ: 08156–295427
ಫ್ಯಾಕ್ಸ್: 08156 – 295427 ಇಮೇಲ್ – eemidcbpura@gmail.com

ಅಲ್ಪಾವಧಿ ಟೆಂಡರ್ ಅಧಿಸೂಚನೆ

ಸಂಖ್ಯೆ : ಕಾಸಬ/ತಾಂಶಾ/ತಾಂಸ/ ಟೆಂಡರ್ ಪ್ರಕಟಣೆ ಸಂಖ್ಯೆ: 12/2025–26
ದಿನಾಂಕ : 30/09/2025

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ ರವರಿಂದ, ಚಿಕ್ಕಬಳ್ಳಾಪುರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 4702 ವಿಶೇಷ ಘಟಕ ಯೋಜನೆ ಅಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗೆ ಕೆ.ಡಬ್ಲ್ಯೂ 2 ರ ನಿಭಂದನೆಗೊಳಪಟ್ಟಂತೆ ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಮೂಲಕ ದ್ವಿ ಲಕೋಟೆ ಪದ್ದತಿಯಲ್ಲಿ ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಇ.ಎಂ.ಡಿ ಮೊತ್ತ ಕೆ.ಪಿ.ಪಿ ನಲ್ಲಿ ಇದ್ದಂತೆ. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ 09/10/2025 ಸಾಯಂಕಾಲ 4.30 ಗಂಟೆಯವರೆಗೆ ಟೆಂಡರ್ ತೆರೆಯುವ ದಿನಾಂಕ 10/10/2025 ರಂದು (ಸಾಧ್ಯವಾದ್ದಲ್ಲಿ) ಸದರಿ ಕಾಮಗಾರಿಯ ಟೆಂಡರ್‌ಗಳ ಮೊತ್ತ ಅಥವಾ ಇ.ಎಂ.ಡಿ ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ–ಪ್ರಕ್ಯೂರ್‌ಮೆಂಟ್‌ನ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿರುವ ಮೊತ್ತಗಳು ಅಂತಿಮವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ – 08156–295427 ಮತ್ತು ಕೆ.ಪಿ.ಪಿ ಪೋರ್ಟಲ್ ಸಹಾಯವಾಣಿ ದೂರವಾಣಿ ಸಂಖ್ಯೆ: 91–8068948777 ಮತ್ತು 91–8046010000 ರಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

ನಗರಸಭೆ ಕಾರ್ಯಾಲಯ ನೆಲಮಂಗಲ

ಬೆಂಗಳೂರು ಗ್ರಾಮಾಂತರ ಜಿಲ್ಲೆ–562123, ದೂರವಾಣಿ: 080–27722135,
Email : itstaff_ulb_nelamangala@yahoo.com

ಸಂಖ್ಯೆ: ನಸನೆ/ತಾಂ.ಶಾ(ವಿ)/ಟೆಂಡರ್/27/2025–26 ದಿನಾಂಕ: 30.09.2025

ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಮೂಲಕ ಮಾತ್ರ)
(ಸ್ಟಾಂಡರ್ಡ್ ಡಾಕ್ಯೂಮೆಂಟ್ KW 1/2 ರ ನಿಬಂಧನೆಗಳಂತೆ ಅರ್ಜಿ ಆಹ್ವಾನಿಸಲಾಗಿದೆ)

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನೆಲಮಂಗಲ ನಗರಸಭೆ ವ್ಯಾಪ್ತಿಯಲ್ಲಿ **2025–26ನೇ** ಸಾಲಿನ ನಗರಸಭಾ ನಿಧಿ ಅನುದಾನದಡಿ ರೂ:45.00 ಲಕ್ಷಗಳ ಕಾಮಗಾರಿಗಳಿಗೆ ಐಟಾಂವಾರು ಇ–ತಂತ್ರಾಂಶದಲ್ಲಿ ದ್ವೀ–ಲಕೋಟೆ ಪದ್ಧತಿಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ಗಳಿಗೆ ವೆಬ್ ವಿಳಾಸ **https://kppp.karnataka.gov.in** ಮೂಲಕ ಟೆಂಡರ್ ಸಲ್ಲಿಸುವುದು. ಸದದರಿ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಟೆಂಡರ್ ತೆರೆಯುವ ದಿನಾಂಕ ಹಾಗೂ ಸಂಬಂಧಿಸಿ ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್ **https://kppp.karnataka.gov.in** / ಹಾಗೂ ನಗರಸಭೆಯ ಇಂಜಿನಿಯರಿಂಗ್ ಶಾಖೆಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/–	ಸಹಿ/–	ಸಹಿ/–	ಸಹಿ/–
ಶ್ರೀ.ಎನ್.ಗಣೇಶ್	ಶ್ರೀ ಆನಂದ್.ಜಿ	ಶ್ರೀ ಬಿ. ಪದ್ಮನಾಭ	ಶ್ರೀ ಗಂಗಾಧರ ಹೆಚ್
ಮಾನ್ಯ ಅಧ್ಯಕ್ಷರು	ಮಾನ್ಯ ಉಪಾಧ್ಯಕ್ಷರು	ಮಾನ್ಯ ಸ್ಥಾಯಿ ಸಮಿತಿ ಅಧ್ಯಕ್ಷರು	ಪೌರಾಯುಕ್ತರು
ನಗರಸಭೆ, ನೆಲಮಂಗಲ	ನಗರಸಭೆ, ನೆಲಮಂಗಲ	ನಗರಸಭೆ, ನೆಲಮಂಗಲ	ನಗರಸಭೆ, ನೆಲಮಂಗಲ

ವಾ.ಸಾ.ಸಂ.ಇ/ವಾಪ್ರ/3042/ಎಸ್‌ಎಸ್‌ಪಿ/2025–26

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ದೊಡ್ಡಬಳ್ಳಾಪುರ

ಟಿ.ಬಿ. ಸರ್ಕಲ್ ಹತ್ತಿರ, ತುಮಕೂರು ರಸ್ತೆ, ದೊಡ್ಡಬಳ್ಳಾಪುರ – 561203,
ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ: 0829799416
ಇ–ಮೇಲ್: apmc.dbpur@gmail.com

ಸಂಖ್ಯೆ:ಕೃಉಮಾಸ/ದೊ/ಭದ್ರತಾಸಿಬ್ಬಂದಿ/218/2025–26 ದಿನಾಂಕ: 26–09–2025

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2025–26 ನೇ ಸಾಲಿಗೆ ದೊಡ್ಡಬಳ್ಳಾಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಪ್ರಾಂಗಣದಲ್ಲಿರುವ ಚರಾಸ್ಥಿ ಮತ್ತು ಸ್ಥಿರಾಸ್ಥಿಗಳ ಸಂರಕ್ಷಣೆ, ಸಂಚಾರ, ನಿಯಂತ್ರಣ ಹಾಗೂ ಇನ್ನಿತರೆ ಸಮಿತಿಯ ಕಾರ್ಯಗಳಿಗೆ 08 ಜನ ಅರ್ಹ ಹಾಗೂ ಅನುಭವ ಹೊಂದಿದ ಮತ್ತು ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಏಜೆನ್ಸಿಯಿಂದ ಕನಿಷ್ಠ ವೇತನ ಕಾಯ್ದೆ ಅನ್ವಯ ಈ ಕೆಳಕಂಡಂತೆ ನಮೂದಿಸಿದ ಸೇವೆಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಹ ಸಂಸ್ಥೆ / ಏಜೆನ್ಸಿಯವರು ವೆಬ್‌ಸೈಟ್: **https://kppp.karnataka.gov.in** ನಲ್ಲಿ ಪ್ರಕಟಿಸುವಂತೆ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಭಾಗವಹಿಸಬಹುದಾಗಿದೆ.

ಕ್ರ.ಸಂ.	ಭದ್ರತಾ ಸಿಬ್ಬಂದಿಗಳ ವಿವರ	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)
1	1) ಕಂಪ್ಯೂಟರ್ ಆಪರೇಟರ್ಸ್ – 01 2) ವಾಹನ ಚಾಲಕರು – 01 3) ಭದ್ರತಾ ಗಾರ್ಡ್‌ಗಳು – 06	50,000.00

1) ಇ–ಟೆಂಡರ್ ಫಾರಂನ್ನು ವೆಬ್‌ಸೈಟ್‌ನಲ್ಲಿಯೇ ತುಂಬಿ ಸಲ್ಲಿಸಲು ಕೊನೆಯ ದಿನಾಂಕ: **21–10–2025 ರಂದು ಸಾಯಂಕಾಲ 5.00 ಗಂಟೆಯವರೆಗೆ.** 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **23–10–2025 ರಂದು ಬೆಳಿಗ್ಗೆ 11.00 ಗಂಟೆಗೆ.** 3) ಆರ್ಥಿಕ ಬಿಡ್ ತೆರೆಯುವ ದಿನಾಂಕ: **29–10–2025 ರಂದು ಬೆಳಿಗ್ಗೆ 11.00 ಗಂಟೆಗೆ.** 4) ಷರತ್ತು ಮತ್ತು ನಿಬಂಧನೆಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು ಹಾಗೂ ವೆಬ್‌ಸೈಟ್: **https://kppp.karnataka.gov.in** ನಲ್ಲಿ ಪಡೆಯಬಹುದು.

ಸಹಿ/– ಕಾರ್ಯದರ್ಶಿ	ಸಹಿ/– ಆಡಳಿತಾಧಿಕಾರಿಗಳು
ಕೃಉಮಾಸ, ದೊಡ್ಡಬಳ್ಳಾಪುರ	ಕೃಉಮಾಸ, ದೊಡ್ಡಬಳ್ಳಾಪುರ

ವಾಸಾಸಂಇ/ವಾ.ಪ್ರ/3041/ಅಡ್ವರ್ಟೋರ್/2025–26

ನಗರಸಭಾ ಕಾರ್ಯಾಲಯ, ಚನ್ನಪಟ್ಟಣ

ಬೆಂಗಳೂರು ದಕ್ಷಿಣ ಜಿಲ್ಲೆ, ದೂ.ಸಂ.: 080–27251235
e-mail: itstaff_ulb_Chanapatana@yahoo.co.in website: http://www.channapatanacity.mrc.gov.in

ಸಂ: ನಸಚ/ಕಾವಿ/ಟೆಂಡರ್/ಸಿಆರ್/12/2025–26 ದಿನಾಂಕ: 26.09.2025

ಟೆಂಡರ್ ಪ್ರಕಟಣೆ

2018–19ನೇ ಸಾಲಿನ ಎಸ್‌ಎಫ್‌ಸಿ ಮುಕ್ತನಿಧಿ ಉಳಿಕೆ ಅನುದಾನ ಮತ್ತು 2024–25ನೇ ಸಾಲಿನ ಎಸ್‌ಎಫ್‌ಸಿ ಬಂಡವಾಳ ಆಸ್ತಿಗಳ ಸೃಜನೆ ಅನುದಾನದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999 ಮತ್ತು ನಿಯಮಗಳು 2000 ದಂತೆ, ಕರ್ನಾಟಕ ಲೋಕೋಪಯೋಗಿ ಇಲಾಖೆ ಮತ್ತು ಕೆಪಿಪಿಪಿ, ಬೆಂಗಳೂರು ರವರಲ್ಲಿ ನೋಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ (1 Cover) **www.kppp.karnataka.gov.in** ಮೂಲಕ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಗುತ್ತಿಗೆದಾರರು ತಮ್ಮ ಐಟಂವಾರು ಟೆಂಡರ್‌ಗಳನ್ನು KW-2ರ ಪ್ರಮಾಣಿತ ಟೆಂಡರ್ ದಸ್ತಾವೇಜಿನ ನಿಯಮಗಳಂತೆ **ದಿನಾಂಕ: 21.10.2025 ಸಂಜೆ 5.30 ಗಂಟೆಯೊಳಗೆ** ಪೋರ್ಟಲ್‌ನಲ್ಲಿ ಸಲ್ಲಿಸತಕ್ಕದ್ದು. ಇಎಂಡಿ ಮೊತ್ತ ಕೆ.ಪಿ.ಪಿ ಪೋರ್ಟಲ್ ರೀತ್ಯಾ ಇರುತ್ತದೆ. ಪೋರ್ಟಲ್‌ನಲ್ಲಿ ಸ್ವೀಕೃತಿಯಾಗಿರುವ ಟೆಂಡರ್‌ಗಳನ್ನು **ದಿನಾಂಕ: 23.10.2025ರ ಬೆಳಿಗ್ಗೆ 10.30** ಗಂಟೆಗೆ ತೆರೆಯಲಾಗುವುದು. ಇಂಡೆಂಟ್ ನಂ. **DMA/2025-26/OW/WORK_INDENT49978.** ಹೆಚ್ಚಿನ ವಿವರಗಳಿಗೆ ಚನ್ನಪಟ್ಟಣ ನಗರಸಭೆಯ ತಾಂತ್ರಿಕ ಶಾಖೆಯಲ್ಲಿ ಹಾಗೂ ನಗರಸಭೆಯ ವೆಬ್‌ಸೈಟ್ **www.channapatnacity.mrc.gov.in**ರ ಟೆಂಡರ್ ವಿಭಾಗದಲ್ಲಿ ವಿವರವಾದ ಟೆಂಡರ್ ಪ್ರಕಟಣೆಯನ್ನು ವೀಕ್ಷಿಸಬಹುದಾಗಿದೆ.

ಸಹಿ/– ಪೌರಾಯುಕ್ತರು
ನಗರಸಭೆ, ಚನ್ನಪಟ್ಟಣ

DIPR/BSD/367/SA/2025-26

ಕುಂದು ಕೊರತೆ: ಬಿಡಿಎ ಅಧ್ಯಕ್ಷರ ಭೇಟಿಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಹಕರ ಕುಂದುಕೊರತೆಗಳನ್ನು ಕಾಲಮಿತಿಯಲ್ಲಿ ಬಗೆಹರಿಸುವ ಸಲುವಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಮುಕ್ತ ಸಭೆ ನಡೆಸಲು ಮುಂದಾಗಿದೆ. ಪ್ರಾಧಿಕಾರದ ವಾಟ್ಸ್‌ಆ್ಯಪ್ ಸಂಖ್ಯೆ (94831–66622) ಮೂಲಕ ಸಮಸ್ಯೆ ತಿಳಿಸಿದರೆ, 30 ದಿನದೊಳಗೆ ಅಧ್ಯಕ್ಷರನ್ನು ನೇರವಾಗಿ ಭೇಟಿ ಮಾಡುವ ಅವಕಾಶ ಕಲ್ಪಿಸಲಾಗುತ್ತದೆ.

ದೀರ್ಘಕಾಲದಿಂದ ಪರಿಹಾರವಾಗದ ಸಮಸ್ಯೆಯಾಗಿರಬೇಕು ಮತ್ತು ಕಾನೂನಿನ ಚೌಕಟ್ಟಿನಲ್ಲಿ ಪರಿಹಾರ ಮಾಡುವಂತೆ ಇದ್ದರೆ ಮಾತ್ರ ಅಧ್ಯಕ್ಷರ ಭೇಟಿಗೆ ಅವಕಾಶ ಇದೆ. ಗ್ರಾಹಕರು ಕಚೇರಿಗೆ ಅಲೆದಾಡುವುದನ್ನು ತಪ್ಪಿಸಿ, ಪರಿಹಾರ ಕಂಡುಕೊಳ್ಳುವಂತೆ ಮಾಡಲಾಗಿದೆ ಎಂದು ಬಿಡಿಎ ತಿಳಿಸಿದೆ.

‘ನೀವು ಬಿಡಿಎ ಆಸ್ತಿ ಹೊಂದಿರುವವರಾಗಿದ್ದರೆ, ದಾಖಲೆಗಳು ಕಾನೂನಿನ ಪ್ರಕಾರ ಸರಿಯಾಗಿದ್ದರೆ ವಾಟ್ಸ್ ಆ್ಯಪ್ ಸಂಖ್ಯೆಗೆ ಅರ್ಜಿಯ ಪ್ರತಿಯನ್ನು ಕಳುಹಿಸಬಹುದು. ಬಿಡಿಎ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆಯುವ ಮುಕ್ತ ಸಭೆಗೆ 30 ದಿನಗಳಲ್ಲಿ ನಿಮ್ಮನ್ನು ಆಹ್ವಾನಿಸಲಾಗುತ್ತದೆ ಮತ್ತು ಕಾನೂನು ತೊಡಕುಗಳು ಇಲ್ಲದಿದ್ದರೆ ಸಮಸ್ಯೆ ಬಗ್ಗೆ ಚರ್ಚಿಸಿ, ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ’ ಎಂದು ಬಿಡಿಎ ಆಯುಕ್ತ ಪಿ. ಮಣಿವಣ್ಣನ್ ಅವರು ‘ಎಕ್ಸ್’ನಲ್ಲಿ ತಿಳಿಸಿದ್ದಾರೆ.

‘ಬಿಡಿಎ ವಾಟ್ಸ್ ಆ್ಯಪ್ ನಂಬರ್‌ನಲ್ಲಿ ನಮ್ಮ ತೊಂದರೆ ಹೇಳಿಕೊಳ್ಳುವುದು. ಅದಕ್ಕೆ ಸಂಬಂಧಿಸಿದಂತೆ 30 ದಿನದೊಳಗೆ ಅಧ್ಯಕ್ಷರ ಭೇಟಿ ಮಾಡುವುದು ಅಸಾಧ್ಯ. ಯಾವುದೂ ಫಲಪ್ರದವಾಗುವುದಿಲ್ಲ’ ಎಂದು ಕೆಲವರು ಪ್ರತಿಕ್ರಿಯಿಸಿದ್ದಾರೆ.

ಇನ್ನೂ ಕೆಲವರು, 30 ದಿನಗಳೊಳಗೆ ಅಧ್ಯಕ್ಷರನ್ನು ಭೇಟಿ ಮಾಡಲು ಅವಕಾಶ ಸಿಗಬಹುದು. ಆದರೆ, ಅಲ್ಲಿಂದ ಮುಂದೇನು? ಅಲ್ಲಿಂದ ಅರ್ಜಿಗಳ ವಿಲೇವಾರಿ ಮತ್ತೆ ವಿಳಂಬವಾಗುವ ಸಾಧ್ಯತೆಗಳಿವೆ. ಸರಳವಾಗಿರುವ ವಿಚಾರಗಳನ್ನು ಬೇಗನೇ ಬಗೆಹರಿಸಬಹುದು. ಆದರೆ, ಕಠಿಣ ಅಥವಾ ಕ್ಲಿಷ್ಟಕರವಾಗಿರುವಂಥ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಮೀನಮೇಷ ಎಣಿಸಬಹುದು ಎಂದು ಅವರು ಹೇಳಿದ್ದಾರೆ.

ಜಿಬಿಎ ವ್ಯಾಪ್ತಿಯ ಗ್ರಾಹಕರಿಗೆ ಸರಾಸರಿ ವಿದ್ಯುತ್ ಬಿಲ್: ಬೆಸ್ಕಾಂ

ಬೆಂಗಳೂರು: ಸಾಫ್ಟ್‌ವೇರ್ ಉನ್ನತೀಕರಣ ಕಾರ್ಯ ಕೈಗೊಂಡಿರುವ ಕಾರಣದಿಂದ ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯ ಗ್ರಾಹಕರಿಗೆ ಕಳೆದ 3 ತಿಂಗಳ ಸರಾಸರಿ ಪರಿಗಣಿಸಿ ಅಕ್ಟೋಬರ್ ತಿಂಗಳ ವಿದ್ಯುತ್ ಬಿಲ್ ವಿತರಿಸಲಾಗುವುದು ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ಬಿಲ್ಲಿಂಗ್ ತಂತ್ರಜ್ಞಾನದ ಸುಧಾರಣೆಗೆ ಬೆಸ್ಕಾಂನ ಮಾಹಿತಿ ತಂತ್ರಜ್ಞಾನ ವಿಭಾಗವು ಕೈಗೊಂಡಿರುವ ಸಾಫ್ಟ್‌ವೇರ್ ಉನ್ನತೀಕರಣ ಕಾರ್ಯ ಪ್ರಗತಿಯಲ್ಲಿದೆ. ಹೀಗಾಗಿ ಅಕ್ಟೋಬರ್ 1ರಿಂದ 15ರವರೆಗೆ ಮೀಟರ್ ರೀಡರ್‌ಗಳು ಜಿಬಿಎ ವ್ಯಾಪ್ತಿಯಲ್ಲಿ ಮಾಪನಕ್ಕೆ ಬರುವುದಿಲ್ಲ. ಕಳೆದ ಮೂರು ತಿಂಗಳ ಸರಾಸರಿ ಲೆಕ್ಕ ಹಾಕಿ, ಗ್ರಾಹಕರಿಗೆ ವಿದ್ಯುತ್ ಬಿಲ್ ನೀಡಲಾಗುತ್ತದೆ. ಬೆಸ್ಕಾಂ ಮಿತ್ರ ಆ್ಯಪ್, ಉಪ ವಿಭಾಗ ಕೇಂದ್ರ, ಯುಪಿಐ ಆ್ಯಪ್‌ಗಳ ಮೂಲಕ ಬಿಲ್ ಪಾವತಿಸಬಹುದಾಗಿದೆ ಎಂದು ಬೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಈ ಪ್ರಕ್ರಿಯೆಯಿಂದ ಗೃಹಜ್ಯೋತಿ ಫಲಾನುಭವಿಗಳಿಗೆ, ಯೋಜನೆಯ ಲಾಭ ಪಡೆಯುವಲ್ಲಿ ಯಾವುದೇ ವ್ಯತ್ಯಯವಾಗುವುದಿಲ್ಲ ಎಂದು ಬೆಸ್ಕಾಂ ಸ್ಪಷ್ಟಪಡಿಸಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

JOB OPPORTUNITIES

Wanted

SURIE POLEX
URGENT REQUIREMENT
OFFICE ASSISTANCE (Female)
Good Communication Skill & Basic Computer Knowledge.
M/s. SURIE POLEX INDUSTRIES LLP
No. 17, 4th Main, RD Nagar BG Road, B'lore-560030
Mob: 93419 69809

WANTED OFFICE_BOY Contact: G.Subramaniam BIMS_Consulting Group, Near Shivananda Circle. (9448575683) bimsconsult@yahoo.com

Security & Detectives

URGENTLY REQUIRED 21 Gunmen with Arms (Ex-Servicemen) at DRDO, Marathahalli, Bangalore-37, Age Upto 64 Years payment As per DGR Area-'A' Contact: No.:- 8660223798, 9110919547, 9035818103

REAL ESTATE SELLING

Flat

Jigani

LIMITED 1 BHK flats sale. Operational senior living project. Jigani, Bangalore. All amenities. 45L (negotiable). 9742258578/ 7892256362

Vidyaranyapura

3BHK FLAT, 1300sqft G-Floor, near vidyaranyapura for sale. Ph-9902100500 Brokers Excuse.

Kothnur Dinne

FLAT FOR Sale, Kotnur Dinne, JPN, 39 Lakhs Including Registration, 9663676464

RENTAL PROPERTIES

Accommodation Available

Industrial And Factory

AVAILABLE OF Industrial Shed of 75000`sqft at Soukya Road, Whitefield. Available Built-to-Suit Warehouse 160000 sqft`Vijipura Hoskote Contact: 9341234288/ 9663224353/ 9845417487.

PERSONAL

Change of Name

I, RAJESHA C residing No.17, 2nd Main,PNB Layout, Doddakallasandra, Bangalore-560062 have changed my name to RAJESH C vide affidavit dated 29/09/2025 sworn before notary Ambreshappa,Bangalore.

I, DEEPA ANANTHAKRISHNA W/o ANANTHA KRISHNA have changed my name to DEEPA ANANTH vide affidavit dated: 29/9/2025 Before Notary Shreeshail B.Gobbani Bangalore.

TOURS & TRAVEL

Holiday Package Tours

GROUP TOURS, Any Destination, Get Quote in 10 Minutes. Sarakki Tours, 9663676464

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಜೈಲಿಗೆ ಕಳುಹಿಸಲು ಷಡ್ಯಂತ್ರ: ಡಿಕೆಶಿ

ಮಾಧ್ಯಮಗಳೇ ಬಹಿರಂಗ ಚರ್ಚೆಗೆ ವೇದಿಕೆ ಸಿದ್ಧಪಡಿಸಲಿ ಎಂದ ಉಪ ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ನನ್ನನ್ನು ಜೈಲಿಗೆ ಹಾಕಿಸಲು ನಿರಂತರ ಷಡ್ಯಂತ್ರ ನಡೆಸುತ್ತಿದ್ದಾರೆ. ಅದನ್ನೇ ಪುನರುಚ್ಚರಿಸುತ್ತಿದ್ದಾರೆ. ಅವರನ್ನು ಬಹಿರಂಗ ಚರ್ಚೆಗೆ ಆಹ್ವಾನಿಸುವೆ. ಮಾಧ್ಯಮಗಳೇ ವೇದಿಕೆ ಸಿದ್ಧಪಡಿಸಲಿ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, 'ಜೈಲಿಗೆ ಹಾಕಿಸುವ ಸಂಕಲ್ಪವನ್ನು ಮೊದಲೇ ಮಾಡಿದ್ದರು. ನನ್ನ ವಿರುದ್ಧ ಮಾಡಿರುವ ಆರೋಪದ ದಾಖಲೆ ಬಿಡುಗಡೆ ಮಾಡಲಿ, ಅವರ ಕುಟುಂಬದ ಬಗ್ಗೆ ನನ್ನ ಬಳಿ ಇರುವ ಭಂಡಾರದಿಂದ ದಾಖಲೆಗಳನ್ನು ತೆಗೆದು ಜನರ ಮುಂದೆ ಇಡುತ್ತೇನೆ. ಇದಕ್ಕೆ ಕೊನೆ ಹಾಡಲೇಬೇಕು' ಎಂದರು.

'ಹಿಂದೆ ಸಾತನೂರಿನಲ್ಲಿ 20-20 ಪಂದ್ಯ ನಡೆದಂತೆ ನಡೆಯಲಿ ಎಂದು ಆಹ್ವಾನಿಸಿದ್ದೆ. ವಿಧಾನಸಭೆಯಲ್ಲಿ ಚರ್ಚೆಗೆ ಬರುವಂತೆ ಸವಾಲು ಹಾಕಿದ್ದೆ. ಅವರು ಸಂಸತ್ತಿಗೆ ಹೊರಟು ಹೋದರು. ಅವರ ಬದಲು ಬೇರೆ ನಾಯಕರ ಜತೆ ಚರ್ಚೆ ಮಾಡಲು ಆ ಪಕ್ಷದಲ್ಲಿ ನಮಗೆ ಸರಿಸಮನಾದ ನಾಯಕರಿಲ್ಲ. ಸುಮ್ಮನೇ ಹಿಟ್ ಆ್ಯಂಡ್ ರನ್ ರೀತಿ ನಡೆದುಕೊಳ್ಳುವುದು ತರವಲ್ಲ' ಎಂದು ಹೇಳಿದರು.

'ಜೈಲಿಗೆ ಹಾಕುವ ಅಧಿಕಾರ ಇರುವುದು ನ್ಯಾಯಾಧೀಶರಿಗೆ ಮಾತ್ರ. ನನ್ನ ವಿಚಾರದಲ್ಲಿ ಕೇಂದ್ರ ಸಚಿವ ಕುಮಾರಸ್ವಾಮಿ ಅವರು ನ್ಯಾಯಾಧೀಶರಂತೆ ಮಾತನಾಡುತ್ತಿದ್ದಾರೆ. ಅವರೂ ಕೂಡ ನ್ಯಾಯಾಲಯಕ್ಕೆ ಅಲೆಯುತ್ತಿದ್ದಾರೆ. ಅವರ ಕುಟುಂಬ ನಡೆಸುವ ಷಡ್ಯಂತ್ರ ಹೊಸತಲ್ಲ. ಈ ಹಿಂದೆ ನನ್ನ ತಂಗಿ, ತಮ್ಮ ಸೇರಿದಂತೆ ಎಲ್ಲರ ಮೇಲೂ ಪ್ರಯತ್ನ ಮಾಡಿದ್ದರು. ಈಗಲೂ ಅದನ್ನೇ ಮುಂದುವರಿಸುತ್ತಿದ್ದಾರೆ. ಅವರಿಗೆ ತಕ್ಕ ಉತ್ತರ ನೀಡುತ್ತೇನೆ. ಅವರಿಗೆ ಒಳ್ಳೆಯದಾಗಲಿ' ಎಂದರು.

'ದಾರಿದ್ರ್ಯ ಬಂದಿಲ್ಲ'

'ಬ್ರಾಹ್ಮಣರ ಜಮೀನು ಲೂಟಿ ಮಾಡಲಾಗಿದೆ ಎಂಬ ಆರೋಪ ಕುರಿತು ಅಧಿಕೃತವಾಗಿ ದೂರು ಕೊಡಿಸಲಿ, ತನಿಖೆ ಮಾಡಿಸಲಿ. ನನಗೆ ಅಂತಹ ದಾರಿದ್ರ್ಯ ಬಂದಿಲ್ಲ' ಎಂದು ಶಿವಕುಮಾರ್ ಹೇಳಿದರು.

'ಬಿಡದಿ ಟೌನ್‌ಶಿಪ್ ಮಾಡುತ್ತಿರುವುದು ರಿಯಲ್ ಎಸ್ಟೇಟ್‌ಗಾಗಿ ಅಲ್ಲ, ಈ ಬಗ್ಗೆ ಕುಮಾರಸ್ವಾಮಿ ಅವರಿಂದ ಹೇಳಿಸಿಕೊಳ್ಳುವ ಅಗತ್ಯವಿಲ್ಲ. ನಾನು ಬೆಂಗಳೂರಿನವನು. ನನ್ನ ಆಸ್ತಿ ಬೆಂಗಳೂರು ಜಿಲ್ಲೆಯಲ್ಲೇ ಇದೆ. ಹೊರಗಿನಿಂದ ಬಂದು ಜಮೀನು ಖರೀದಿಸಿಲ್ಲ' ಎಂದು ಅವರು ಪ್ರತಿಕ್ರಿಯಿಸಿದರು.

ಜಮೀನು ಕಬಳಿಸುವ ಹುನ್ನಾರ: ಎಚ್‌ಡಿಕೆ

ಡಿ.ಕೆ.ಶಿವಕುಮಾರ್ ಅವರು ಬಿಡದಿ ಟೌನ್‌ಶಿಪ್ ಹೆಸರಲ್ಲಿ ತಮಗೆ ಬೇಕಾದವರಿಗಾಗಿ ಜಮೀನು ಹಂಚಿಕೆ ಮಾಡುತ್ತಿದ್ದಾರೆ. ಈಗಾಗಲೇ 2,000ದಿಂದ 3,000 ಎಕರೆ ಹಂಚಿಕೆ ಮಾಡಿ, ಕಬಳಿಸಲು ಮುಂದಾಗಿದ್ದಾರೆ ಎಂದು ಕೇಂದ್ರ ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿ ದೂರಿದರು.

ದೆಹಲಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, 'ಬಿಡದಿ ಟೌನ್‌ಶಿಪ್ ಮಾಡಿದ್ದು ನಾನೇ. ₹60,000 ಕೋಟಿ ವೆಚ್ಚದಲ್ಲಿ ಯೋಜನೆಯನ್ನು ಜಾರಿ ಮಾಡಲು ಹೊರಟಿದ್ದೆ. ಕೇಂದ್ರದ ಆರ್ಥಿಕ ವ್ಯವಹಾರಗಳ ಸಮಿತಿಯಿಂದಲೂ ಅನುಮೋದನೆ ಪಡೆದಿದ್ದೆ. ನನ್ನ ಸರ್ಕಾರ ಬಿದ್ದ ಮೇಲೆ ಅದು ಅಲ್ಲಿಗೇ ನಿಂತಿತು. ನನ್ನ ಕನಸಿನ ಯೋಜನೆಯನ್ನು ಈಗ ಜಾರಿಗೆ ತರುತ್ತಿದ್ದಾರಂತೆ. ಆದರೆ, ಅವರು ಜನರಿಗಾಗಿ ಏನೂ ಮಾಡುತ್ತಿಲ್ಲ' ಎಂದು ಟೀಕಿಸಿದರು.

'ಶಿವಕುಮಾರ್ ಎಷ್ಟು ಜನರ ಮನೆ ಹಾಳುಮಾಡಿದ್ದಾರೆ. ಶಾಂತಿನಗರ ಹೌಸಿಂಗ್ ಸೊಸೈಟಿ ಪ್ರಕರಣದಲ್ಲಿ ದಲಿತರಿಗೆ ನಿವೇಶನ ನೀಡಲಿಲ್ಲ. ನಿಜವಾದ ಸೊಸೈಟಿಗೆ ಗುಂಡಿ ತೋಡಿ, ವಿಜಯಪುರದ ಯಾವುದೊ ಸೊಸೈಟಿಗೆ ಜಮೀನು ನೀಡಿದರು. ನಕಲಿ ಸೊಸೈಟಿ ಹೆಸರಿನಲ್ಲಿ ತಾವೂ ಜಮೀನು ಕಬಳಿಸಿದರು. ಈಗಲೂ ಅದನ್ನೇ ಮಾಡಲು ಹೊರಟಿದ್ದಾರೆ. ತಮ್ಮ ಷಡ್ಡಕನಿಗೆ ಅನುಕೂಲ ಮಾಡಿಕೊಡಲು ಕುಣಿಗಲ್ ಅನ್ನು ಬೆಂಗಳೂರು ದಕ್ಷಿಣ ಜಿಲ್ಲೆಗೆ ಸೇರಿಸಲು ಹೊರಟಿದ್ದಾರೆ. ಬಿಟ್ಟರೆ, ಮಂಗಳೂರನ್ನೂ ಬೆಂಗಳೂರಿಗೆ ಸೇರಿಸಿಬಿಡುತ್ತಾರೆ' ಎಂದರು.

'ಜನರು ನನಗೆ ಐದು ವರ್ಷ ಅಧಿಕಾರ ನೀಡಲಿ, ನನ್ನ ಶಕ್ತಿ ಏನೆಂದು ತೋರಿಸುತ್ತೇನೆ. ಇವರ ಎಲ್ಲ ಕರ್ಮಗಳನ್ನು ಹೊರಗೆಡಹುತ್ತೇನೆ' ಎಂದು ಹೇಳಿದರು.

ಸವಿನೆನಪು



ಶ್ರೀ ಕೆ. ಎನ್. ಗುರುಸ್ವಾಮಿ

ಸಂಸ್ಥಾಪಕರು: ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

1901- 1990

ಜನನ: 01-10-1901

ಕೆ ಎನ್ ತಿಲಕ್ ಕುಮಾರ್

ಚಿಟಿಕೆ ಸುದ್ದಿ

ರಿಯಾಯಿತಿ ದರದಲ್ಲಿ ಮಾರಾಟ

ಬೆಂಗಳೂರು: ರಾಜಾಜಿನಗರದ ಲಿಡ್ಕರ್ ಮಾರಾಟ ಮಳಿಗೆಯಲ್ಲಿ 'ದಸರಾ - ದೀಪಾವಳಿ ಹಬ್ಬ'ದ ಪ್ರಯುಕ್ತ ಅಕ್ಟೋಬರ್ 18ರವರೆಗೆ ಶೇಕಡ 20ರಷ್ಟು ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುವುದು.

ರಾಜಾಜಿನಗರದ ಹಳೆ ಪೊಲೀಸ್ ನಿಲ್ದಾಣದ ಬಸ್ ನಿಲ್ದಾಣ, ನ್ಯೂ ವಿಶಾಲ್ ಮಾರ್ಟ್ ಎದುರು, 3ನೇ ಬ್ಲಾಕ್, ಇಎಸ್‌ಐ ಹತ್ತಿರ ಇರುವ ಮಾರಾಟ ಮಳಿಗೆಯಲ್ಲಿ ಚರ್ಮದ ಶೂಗಳು, ಚಪ್ಪಲಿಗಳು, ಮಹಿಳೆಯರ ವ್ಯಾನಿಟಿ ಬ್ಯಾಗ್‌ಗಳು, ಇನ್ನೂ ಇತರೆ ಅಪ್ಪಟ ಚರ್ಮದ ವಸ್ತುಗಳ ಮೇಲೆ ಶೇಕಡ 20ರಷ್ಟು ರಿಯಾಯಿತಿಯಂತೆ ಮಾರಾಟ ಮಾಡಲಾಗುತ್ತದೆ ಎಂದು ಮಳಿಗೆಯ ವ್ಯವಸ್ಥಾಪಕ ಟಿ. ಲೋಕೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾಹಿತಿಗೆ ಮೊಬೈಲ್ ಸಂಖ್ಯೆ: 8660412905 ಸಂಪರ್ಕಿಸಬಹುದು.

ಘಟಿಕೋತ್ಸವ ಅ.8ಕ್ಕೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ 60ನೇ ಘಟಿಕೋತ್ಸವವು ಅಕ್ಟೋಬರ್ 8ರಂದು ಬೆಳಿಗ್ಗೆ 11.30ಕ್ಕೆ ಸೆಂಟ್ರಲ್ ಕಾಲೇಜಿನ ಆವರಣದಲ್ಲಿರುವ ಜ್ಞಾನಜ್ಯೋತಿ ಸಭಾಂಗಣದಲ್ಲಿ ನಡೆಯಲಿದೆ.

ಹೈದರಾಬಾದ್‌ನ ರಕ್ಷಣಾ ಸಂಶೋಧನೆ ಹಾಗೂ ಅಭಿವೃದ್ಧಿ ಪ್ರಯೋಗಾಲಯದ ನಿವೃತ್ತ ನಿರ್ದೇಶಕ ಪ್ರಹ್ಲಾದ್ ರಾಮರಾವ್ ಘಟಿಕೋತ್ಸವದ ಭಾಷಣ ಮಾಡಲಿದ್ದು, ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ವೂಡೇ ಪಿ ಕೃಷ್ಣಗೆ ಫೆಲೋಶಿಪ್

ಬೆಂಗಳೂರು: ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು (ಕೆಎಸ್‌ಟಿಎ) 2023ನೇ ಸಾಲಿನ ಫೆಲೋಶಿಪ್‌ಗಾಗಿ ಶೇಷಾದ್ರಿಪುರಂ ಶಿಕ್ಷಣ ಟ್ರಸ್ಟ್‌ನ ಗೌರವ ಪ್ರಧಾನ ಕಾರ್ಯದರ್ಶಿ ವೂಡೇ ಪಿ. ಕೃಷ್ಣ ಅವರನ್ನು ಆಯ್ಕೆ ಮಾಡಿದೆ.

ವೂಡೇ ಪಿ. ಕೃಷ್ಣ

ಕರ್ನಾಟಕ ಮೂಲದ ವಿಜ್ಞಾನಿಗಳು, ತಂತ್ರಜ್ಞರು ಮತ್ತು ವಿಜ್ಞಾನ ಸಂವಾಹಕರನ್ನು ಅಕಾಡೆಮಿಯ ಪ್ರಶಸ್ತಿಗಳು ಹಾಗೂ ಫೆಲೋಶಿಪ್‌ಗಳಿಗೆ (ಪ್ರತಿ ವಿಭಾಗದಲ್ಲಿ ವರ್ಷಕ್ಕೆ ಇಬ್ಬರು) ಶಿಫಾರಸು ಮಾಡುವ ಅವಕಾಶ ನೀಡಲಾಗುತ್ತದೆ ಎಂದು ಕೆಎಸ್‌ಟಿಎ ಅಧ್ಯಕ್ಷ ಎ.ಎಚ್.ರಾಜಸಾಬ್ ಅವರು ತಿಳಿಸಿದ್ದಾರೆ.

ಪದವಿ: ಸೆಮಿಸ್ಟರ್ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತಿಥಿ ಉಪನ್ಯಾಸಕರ ನೇಮಕ ವಿಳಂಬವಾಗಿರುವ ಕಾರಣ ದಿಂದಾಗಿ ಪದವಿ ಹಾಗೂ ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಸೆಮಿಸ್ಟರ್ ಅವಧಿಯನ್ನು ಒಂದು ತಿಂಗಳು ವಿಸ್ತರಿಸಿ ಉನ್ನತ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ.

ಉನ್ನತ ಶಿಕ್ಷಣ ಇಲಾಖೆ ವ್ಯಾಪ್ತಿಯಲ್ಲಿ ಬರುವ ಎಲ್ಲ ವಿಶ್ವವಿದ್ಯಾಲಯಗಳು, ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪದವಿ ಕಾಲೇಜುಗಳ (ತಾಂತ್ರಿಕ ಶಿಕ್ಷಣ ಹೊರತುಪಡಿಸಿ) ಒಂದು, ಮೂರು ಮತ್ತು ಐದನೇ ಸೆಮಿಸ್ಟರ್‌ಗಳಿಗೆ ಈ ಆದೇಶ ಅನ್ವಯವಾಗಲಿದ್ದು, ವಿವಿಧ ವಿಶ್ವವಿದ್ಯಾಲಯಗಳು ಮೊದಲು ಪ್ರಕಟಿಸಿದ್ದ ಶೈಕ್ಷಣಿಕ ವೇಳಾಪಟ್ಟಿಯ ಅಂತಿಮ ದಿನಕ್ಕೆ ಅನ್ವಯಿಸಿ, ವಿಸ್ತರಣೆಯ ವೇಳಾಪಟ್ಟಿಯನ್ನು ಪ್ರಕಟಿಸಲಾಗಿದೆ.

ಉದಾಹರಣೆಗೆ ಮೈಸೂರು ವಿಶ್ವ-ವಿದ್ಯಾಲಯದ ಸೆಮಿಸ್ಟರ್ ಅವಧಿ ಜೂನ್ 30ರಿಂದ ಅ.23ರವರೆಗೆ, ಬೆಂಗಳೂರು ವಿಶ್ವವಿದ್ಯಾಲಯದ ಅವಧಿ ಜುಲೈ 11ರಿಂದ ಅ.28ರವರೆಗೆ ನಿಗದಿಯಾಗಿತ್ತು. ಅದನ್ನು ಕ್ರಮವಾಗಿ ನ.22 ಹಾಗೂ ನ.29ಕ್ಕೆ ವಿಸ್ತರಿಸಲಾಗಿದೆ. ಕೆಲವು ವಿಶ್ವವಿದ್ಯಾಲಯಗಳಲ್ಲಿ ಅವುಗಳ ಆರಂಭದ ದಿನಾಂಕದ ಆಧಾರದ ಮೇಲೆ 2026ನೇ ಜನವರಿ 10ರವರೆಗೂ ವಿಸ್ತರಿಸಲಾಗಿದೆ. ಈ ವಿಸ್ತರಣೆ ವಿದ್ಯಾರ್ಥಿಗಳ ಪರೀಕ್ಷಾ ವೇಳಾಪಟ್ಟಿ ಬದಲಾವಣೆಗೂ ಅನ್ವಯವಾಗಲಿದೆ. ಬೋಧನೆಗೆ ಹೆಚ್ಚಿನ ಸಮಯ ಸಿಗಲಿದ್ದು, ಒತ್ತಡ ನಿವಾರಣೆಗೂ ಸಹಕಾರಿಯಾಗಲಿದೆ.

ಅತಿಥಿ ಉಪನ್ಯಾಸಕರ ನೇಮಕ ಪ್ರಕ್ರಿಯೆ ವಿಳಂಬದ ಕಾರಣ ವಿದ್ಯಾರ್ಥಿಗಳ ಕಲಿಕೆಗೆ ತೊಡಕಾಗಿದೆ. ಹಾಗಾಗಿ, ಶೈಕ್ಷಣಿಕ ಅವಧಿ ವಿಸ್ತರಿಸಬೇಕು ಎಂದು ಹಲವು ವಿದ್ಯಾರ್ಥಿ ಸಂಘಟನೆಗಳು, ಪೋಷಕರು ಆಗ್ರಹಿಸಿದ್ದರು.

ಅ.4 ರಿಂದಲೇ ಕರ್ತವ್ಯಕ್ಕೆ 'ಅತಿಥಿ'ಗಳು

ಸರ್ಕಾರಿ ಪ್ರಥಮದರ್ಜೆ ಕಾಲೇಜು ಗಳಲ್ಲಿ 2024–25ನೇ ಸಾಲಿನಲ್ಲಿ ಕೆಲಸ ಮಾಡಿದ ಅತಿಥಿ ಉಪನ್ಯಾಸಕರು ಅದೇ ಕಾಲೇಜುಗಳಲ್ಲಿ ಅ.4ರಿಂದಲೇ ಕರ್ತವ್ಯಕ್ಕೆ ಹಾಜರಾಗುವಂತೆ ಕಾಲೇಜು ಶಿಕ್ಷಣ ಇಲಾಖೆ ಸೂಚಿಸಿದೆ.

ಆಯಾ ಕಾಲೇಜುಗಳು ಪ್ರಸಕ್ತ ವರ್ಷದ ಕಾರ್ಯಭಾರದ ಆಧಾರದ ಮೇಲೆ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಬೇಕು. ಒಂದು ವೇಳೆ ಕಾರ್ಯಭಾರ ಕಡಿಮೆಯಾಗಿದ್ದರೆ ಹಿಂದಿನ ವರ್ಷ ಕೆಲಸ ಮಾಡಿದ ವರ ಪಟ್ಟಿಯಲ್ಲಿದ್ದ ಕೊನೆಯ ಅಭ್ಯರ್ಥಿಯನ್ನು ಕೈಬಿಡಬೇಕು. ಅಂದೇ ಇಲಾಖೆಯ ಇಐಎಂಎಸ್ ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡಬೇಕು. ಅ.4ರ ಒಳಗೆ ಹಾಜರಾಗದ ಅತಿಥಿ ಉಪನ್ಯಾಸಕರನ್ನು ಕೈಬಿಡಬೇಕು. ಉಳಿದ ಕಾರ್ಯಭಾರಕ್ಕೆ ಯುಜಿಸಿ ಅರ್ಹತೆ ಇರುವವರಿಗೆ ಆದ್ಯತೆ ನೀಡಬೇಕು ಎಂದು ಆಯುಕ್ತೆ ಎನ್. ಮಂಜುಶ್ರೀ ಸುತ್ತೋಲೆಯಲ್ಲಿ ವಿವರಿಸಿದ್ದಾರೆ.

'ಸಮೀಕ್ಷೆಯಲ್ಲಿ ಗೋರಬೋಲಿ ಭಾಷೆ ಸೇರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಕಾಲಂ 15ರ ಮಾತೃಭಾಷೆ ವಿಭಾಗದಲ್ಲಿ ಬಂಜಾರರ 'ಗೋರಬೋಲಿ' (ಲಂಬಾಣಿ) ಭಾಷೆ ಸೇರ್ಪಡೆ ಮಾಡಬೇಕು' ಎಂದು ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಅಧ್ಯಕ್ಷ ಎ.ಆರ್. ಗೋವಿಂದಸ್ವಾಮಿ ಆಗ್ರಹಿಸಿದ್ದಾರೆ.

'ಈ ಕಾಲಂನ ಮಾತೃಭಾಷೆ ವಿಭಾಗದಲ್ಲಿ ಹಲವು ಭಾಷೆಗಳು ಸೇರಿಸಲ್ಪಟ್ಟಿದ್ದರೂ, ದೇಶದ ಬಹುತೇಕ ರಾಜ್ಯಗಳಲ್ಲಿ ಬಹುಸಂಖ್ಯೆಯ ಜನರು ಮಾತನಾಡುವ ಬಂಜಾರರ ಗೋರಬೋಲಿ ಭಾಷೆ ಕೈಬಿಡಲಾಗಿದೆ. ಬಂಜಾರರ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರವೇ ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಸ್ಥಾಪಿಸಿರುವುದರಿಂದ, ಗೋರಬೋಲಿ ಭಾಷೆಯನ್ನು ಕಡ್ಡಾಯವಾಗಿ ಈ ಕಾಲಂನಲ್ಲಿ ಸೇರಿಸಲು ಕ್ರಮವಹಿಸಬೇಕು' ಎಂದು ಅವರು ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

'ಬಂಜಾರ ಅಕಾಡೆಮಿ ಸರ್ವಸದಸ್ಯರ ನಿರ್ಣಯದಂತೆ ಬಂಜಾರರು ಇನ್ನು ಮುಂದೆ ಯಾರನ್ನಾದರು ಭೇಟಿಯಾದ ಸಂದರ್ಭದಲ್ಲಿ, ಸಭೆ, ಸಮಾರಂಭಗಳಲ್ಲಿ ನಮಸ್ಕಾರದ ಬದಲಿಗೆ 'ಅರಾಮ್ ಭರಾಮ್' ಎಂದು ಬಂಜಾರರು ವಿನಿಮಯ ಮಾಡಿಕೊಳ್ಳಬೇಕೆಂದು ಸಭೆಯಲ್ಲಿ ನಿರ್ಣಯಿಸಲಾಗಿದೆ' ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಕೆಂಗುಂಟೆ ಸರ್ಕಾರಿ ಆಸ್ಪತ್ರೆ ಆವರಣದಲ್ಲಿ ಹಮ್ಮಿಕೊಂಡಿದ್ದ ಆರೋಗ್ಯ ಉಚಿತ ತಪಾಸಣೆ ಶಿಬಿರದಲ್ಲಿ ಉಚಿತ ಕನ್ನಡಕಗಳನ್ನು ಶಾಸಕ ಮುನಿರತ್ನ ವಿತರಿಸಿದರು

'ಆರೋಗ್ಯವೇ ನಿಜವಾದ ಸಂಪತ್ತು'

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿ ನಗರ: 'ಆರೋಗ್ಯವೇ ನಿಜವಾದ ಸಂಪತ್ತು. ಪ್ರತಿಯೊಬ್ಬರೂ ಆರೋಗ್ಯದ ಕಡೆ ಹೆಚ್ಚಿನ ಗಮನ ಹರಿಸಬೇಕು' ಎಂದು ಶಾಸಕ ಮುನಿರತ್ನ ಹೇಳಿದರು.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಹುಟ್ಟು ಹಬ್ಬದ ಅಂಗವಾಗಿ ಕೆಂಗುಂಟೆ ಸರ್ಕಾರಿ ಆಸ್ಪತ್ರೆ ಆವರಣದಲ್ಲಿ ಹಮ್ಮಿಕೊಂಡಿದ್ದ ಆರೋಗ್ಯ ಉಚಿತ ತಪಾಸಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಶಿಬಿರದಲ್ಲಿ ತಪಾಸಣೆಗೆ ಒಳಪಟ್ಟವರಿಗೆ ಉಚಿತವಾಗಿ ಕನ್ನಡಕಗಳನ್ನು ವಿತರಿಸಿ ಮಾತನಾಡಿದರು.

ಬೆಂಗಳೂರು ಕೇಂದ್ರ ಜಿಲ್ಲಾ ಜಿಜೆಪಿ ಎಸ್‌ಸಿ ಮೋರ್ಚಾ ಉಪಾಧ್ಯಕ್ಷ ಮಲ್ಲತ್ತಹಳ್ಳಿ ಎಂ.ಮಂಜುನಾಥ್, ನರೇಂದ್ರ ಮೋದಿ ನಾಯಕತ್ವದಲ್ಲಿ ರಾಷ್ಟ್ರ ಮತ್ತಷ್ಟು ಅಭಿವೃದ್ಧಿಯಾಗಲಿದೆ ಎಂದರು.

ಬಿಜೆಪಿ ಮಂಡಲ ಅಧ್ಯಕ್ಷ ಗೋವಿಂದರಾಜು, ಮುಖಂಡರಾದ ಜಿ.ಶ್ರೀನಿವಾಸ್, ಮಹಿಳಾ ಒಕ್ಕೂಟದ ಅಧ್ಯಕ್ಷೆ ರಾಜಕುಮಾರಿ, ಸುಮಾ,ಮಂಜುಶ್ರೀ, ಕೆಂಗುಂಟೆ ಚಿಕ್ಕಣ್ಣ ಇದ್ದರು.

'ಹೃದಯ'ದ ದೀಪ...
ವಿಶ್ವ ಹೃದಯ ದಿನದ ಪ್ರಯುಕ್ತ ಮಣಿಪಾಲ್ ಆಸ್ಪತ್ರೆಗಳ ಸಮೂಹವು ಸಂಚಾರ ಪೊಲೀಸರ ಸಹಯೋಗದಲ್ಲಿ 'ಗಾರ್ಡಿಯನ್ ಆಫ್ ದಿ ಹಾರ್ಟ್ 3.0' ಅಭಿಯಾನವನ್ನು ಹಮ್ಮಿಕೊಂಡಿದ್ದು, ಈ ಅಭಿಯಾನದಡಿ ನಗರದ ಪ್ರಮುಖ 40 ಜಂಕ್ಷನ್‌ಗಳ ಟ್ರಾಫಿಕ್ ಸಿಗ್ನಲ್‌ಗಳ ದೀಪಗಳು ಹೃದಯದ ಆಕಾರದಲ್ಲಿ ಬೆಳಗಿದವು

ನಗರದಲ್ಲಿ ಇಂದು

ದಸರಾ ಮಹೋತ್ಸವ: ಮಹಾಲಕ್ಷ್ಮಿ ಪೂಜೆ, ಮಹಾಲಕ್ಷ್ಮಿ ಹೋಮ, ಆಯುಧ ಪೂಜೆ, ಸಿದ್ಧಿಧಾತ್ರಿ ದುರ್ಗಾ ಹೋಮ, ಮಂಗಳಾರತಿ, ಪ್ರಸಾದ ವಿನಿಯೋಗ, ಆಯೋಜನೆ: ರಜಪೂತ ಸಭಾ, ಸ್ಥಳ: ರಜಪೂತ ಭವನ, ವಸಂತನಗರ, ಬೆಳಿಗ್ಗೆ 9 ಹಾಗೂ ಸಂಜೆ 7

ನವರಾತ್ರಿ ಮಹೋತ್ಸವದ ಅಂಗವಾಗಿ 'ಧಾತು' ಗೊಂಬೆಗಳ ಪ್ರದರ್ಶನ: ಆಯೋಜನೆ: ಧಾತು ಕ್ರಿಯೇಟಿವ್, ಸ್ಥಳ: ಮಂಡಲ ಕಲ್ಚರಲ್ ಸೆಂಟರ್, ಕನಕಪುರ ರಸ್ತೆ, ಬೆಳಿಗ್ಗೆ 10.30

ನವರಾತ್ರಿ ಉತ್ಸವ: ದಸರಾ ಗೊಂಬೆಗಳ ಪ್ರದರ್ಶನ, ಆಯೋಜನೆ ಮತ್ತು ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 11ರಿಂದ

ವಚನ ದಸರಾ: ವಚನ ಗಾಯನ: ಗೀತಾ ಬಣಕಾರ್ ಮತ್ತು ತಂಡ, ಅತಿಥಿಗಳು: ವಿ. ಬಸವರಾಜ, ಗಂಗಾಧರ್ ಸಿದ್ಧಲಿಂಗಯ್ಯ, ಅಧ್ಯಕ್ಷತೆ: ಎಸ್. ಪಿನಾಕಪಾಣಿ, ಆಯೋಜನೆ: ವಚನಜ್ಯೋತಿ ಬಳಗ, ಸ್ಥಳ: ಬಸವ ಬೆಳಕು, ನಂ. 533, 7ನೇ ಮುಖ್ಯರಸ್ತೆ, ದೊಡ್ಡಬಸ್ತಿ ಮುಖ್ಯರಸ್ತೆ, ಕಲ್ಯಾಣ ಗೃಹನಿರ್ಮಾಣ ಸಹಕಾರ ಸಂಘ ಬಡಾವಣೆ, ಸಂಜೆ 5

ಯುವ ದಸರಾ: ಸ್ಯಾಕ್ಸೋ–ಸ್ವರ: ದಿವ್ಯಶ್ರೀ ರಂಗನಾಥ ಮತ್ತು ತಂಡ, ಆಯೋಜನೆ: ಯುವಕ ಸಂಘ, ಸ್ಥಳ: ಯುವಪಥ, ನಾಲ್ಕನೇ ಬ್ಲಾಕ್, ಜಯನಗರ, ಸಂಜೆ 5.45

ತ್ರಿಮೂರ್ತಿ ದೇವಸ್ಥಾನದಲ್ಲಿ ಮಹಿಷಾಸುರ ಮರ್ದಿನಿ ಅಲಂಕಾರ: ಆಯೋಜನೆ ಹಾಗೂ ಸ್ಥಳ: ಶಿವಬಾಲಯೋಗಿ ಮಹಾರಾಜ್ ಟ್ರಸ್ಟ್, ಜೆ.ಪಿ.ನಗರ 3ನೇ ಹಂತ, ಸಂಜೆ 6

ದೇವಿಗೆ ಚಾಕೊಲೇಟ್ ಅಲಂಕಾರ: ಆಯೋಜನೆ ಮತ್ತು ಸ್ಥಳ: ಯಲ್ಲಮ್ಮ ದೇವಿ ದೇವಾಲಯ, ದೇಶದಪೇಟೆ ರಸ್ತೆ, ಯಲಹಂಕ, ಸಂಜೆ 6

ದೇವಿಗೆ ಗೋಡಂಬಿ ಅಲಂಕಾರ: ಸಂಗೀತ ಕಛೇರಿ: ಭಜನೆ: ರಶ್ಮಿ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ದುರ್ಗಾ ಮಹೇಶ್ವರಮ್ಮ ದೇವಾಲಯ, ಕೆ.ಆರ್. ಪುರ, ಸಂಜೆ 6

ನವರಾತ್ರಿ ಉತ್ಸವ: 'ಶ್ರೀನಿವಾಸ ಕಲ್ಯಾಣದಲ್ಲಿ ತೀರ್ಥ ಮಹಿಮೆ' ಉಪನ್ಯಾಸ: ಅಖಿಲಾಚಾರ್ಯ ಅತ್ರೆ, ಆಯೋಜನೆ ಹಾಗೂ ಸ್ಥಳ: ರಾಘವೇಂದ್ರ ಸ್ವಾಮಿ ಮಠ, ರಾಜರಾಜೇಶ್ವರಿ ನಗರ, ಸಂಜೆ 6

ದುರ್ಗಾ ಪರಮೇಶ್ವರಿ ದೇವಿಗೆ ತ್ರಿವರ್ಣ ಅಲಂಕಾರ, ಆಯುಧ ಪೂಜೆ: ಆಯೋಜನೆ ಮತ್ತು ಸ್ಥಳ: ವರಸಿದ್ಧಿ ವಿನಾಯಕ ದೇವಾಲಯ, ಕೆನರಾ ಬ್ಯಾಂಕ್ ಕಾಲೊನಿ, ನಾಗರಬಾವಿ ರಸ್ತೆ, ಸಂಜೆ 6.30

ದೇವಿಯರಿಗೆ ವಿಶೇಷ ಅಲಂಕಾರ, ಆಯೋಜನೆ ಮತ್ತು ಸ್ಥಳ: ದೇವಿ ಸಲ್ಲಾಪುರದಮ್ಮ, ದೇವಿ ರೇಣುಕಾಯಲ್ಲಮ್ಮ ದೇವಸ್ಥಾನ, ಮಾರೇನಹಳ್ಳಿ ಗ್ರಾಮ, ಜೆ.ಪಿ. ನಗರ, ಸಂಜೆ 6.30

ದೇವಿಗೆ ಆಯುಧಗಳ ಅಲಂಕಾರ: ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ, ಆಯೋಜನೆ ಮತ್ತು ಸ್ಥಳ: ಸರ್ಕಲ್ ಮಾರಮ್ಮ ದೇವಸ್ಥಾನ, ಮಲ್ಲೇಶ್ವರ, ಸಂಜೆ 6.30

ನವರಾತ್ರಿ ದಸರಾ ಉತ್ಸವ: ಆಯುಧ ಪೂಜೆ, ಸ್ಥಳ: ಶಾಂತಲ ಆರ್ಟ್ಸ್ ಟ್ರಸ್ಟ್, ಯಶವಂತಪುರ, ಸಂಜೆ 6.30

ದೇವಿಗೆ ದುರ್ಗಾದೇವಿ ಅಲಂಕಾರ: ಆಯೋಜನೆ ಮತ್ತು ಸ್ಥಳ: ದೊಡ್ಡಮ್ಮ ದೇವಿ ಅಭಿವೃದ್ಧಿ ಸಮಿತಿ, ಚಿಕ್ಕದೇವಸಂದ್ರ, ಕೆ.ಆರ್.ಪುರ, ಸಂಜೆ 7.30

ಇತರೆ ಕಾರ್ಯಕ್ರಮ

'ವಿಷಜ್ವಾಲೆ' ನಾಟಕ ಪ್ರದರ್ಶನ: ನಿರ್ದೇಶನ: ವಸಂತ್ ಕುಮಾರ್ ಎನ್.ಬಿ., ಆಯೋಜನೆ: ಧನಸ್ಸು ಸಾಂಸ್ಕೃತಿಕ ಕಲಾ ಸಂಘ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಮಧ್ಯಾಹ್ನ 3

ನಗರದಲ್ಲಿ ನಾಳೆ

ದಸರಾ ಮಹೋತ್ಸವ: ಮಹಾ ವಿಜಯದಶಮಿ ಪೂಜೆ, ಮಧ್ಯಾಹ್ನ 12ಕ್ಕೆ ದೇವರ ಪ್ರತಿಮೆಗಳನ್ನು ರಾಜ ಬೀದಿಗಳಲ್ಲಿ ಮೆರವಣಿಗೆ, ಹಲಸೂರು ಕೆರೆಯಲ್ಲಿ ವಿಸರ್ಜನೆ, ಪ್ರಸಾದ ವಿನಿಯೋಗ, ಆಯೋಜನೆ: ರಜಪೂತ ಸಭಾ, ಸ್ಥಳ: ರಜಪೂತ ಭವನ, ವಸಂತನಗರ, ಬೆಳಿಗ್ಗೆ 9 ಹಾಗೂ ಸಂಜೆ 7

ನವರಾತ್ರಿ ಮಹೋತ್ಸವದ ಅಂಗವಾಗಿ 'ಧಾತು' ಗೊಂಬೆಗಳ ಪ್ರದರ್ಶನ: ಆಯೋಜನೆ: ಧಾತು ಕ್ರಿಯೇಟಿವ್, ಸ್ಥಳ: ಮಂಡಲ ಕಲ್ಚರಲ್ ಸೆಂಟರ್, ಕನಕಪುರ ರಸ್ತೆ, ಬೆಳಿಗ್ಗೆ 10.30

ನವರಾತ್ರಿ ಉತ್ಸವ: ದಸರಾ ಗೊಂಬೆಗಳ ಪ್ರದರ್ಶನ, ಆಯೋಜನೆ ಮತ್ತು ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 11ರಿಂದ

ವಚನ ದಸರಾ: ವಚನ ವಿಜಯದಶಮಿ ಸಮಾರೋಪ ನುಡಿ: ಶಿವರುದ್ರ ಸ್ವಾಮೀಜಿ, ಅತಿಥಿ: ಎಸ್.ಟಿ. ಸೋಮಶೇಖರ್, ಆಶಯ ನುಡಿ: ಎಸ್. ಪಿನಾಕಪಾಣಿ, ಆಯೋಜನೆ: ವಚನಜ್ಯೋತಿ ಬಳಗ, ಸ್ಥಳ: ಬಸವ ಮಂಟಪ, ಕಲ್ಯಾಣ ಗೃಹ ನಿರ್ಮಾಣ ಸಹಕಾರ ಸಂಘ ಬಡಾವಣೆ, ಮಧ್ಯಾಹ್ನ 3.30

ದೇವಿಗೆ ಬೆಳ್ಳಿ ಕವಚ ಅಲಂಕಾರ: ಆಯೋಜನೆ ಮತ್ತು ಸ್ಥಳ: ಯಲ್ಲಮ್ಮ ದೇವಿ ದೇವಾಲಯ, ದೇಶದಪೇಟೆ ರಸ್ತೆ, ಯಲಹಂಕ, ಸಂಜೆ 6

ದೇವಿಗೆ ಪುಷ್ಪ ಅಲಂಕಾರ: ಭರತನಾಟ್ಯ ಪ್ರದರ್ಶನ: ಜಾಹ್ನವಿ ಯಾದವ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ದುರ್ಗಾ ಮಹೇಶ್ವರಮ್ಮ ದೇವಾಲಯ, ಕೆ.ಆರ್. ಪುರ, ಸಂಜೆ 6

ನವರಾತ್ರಿ ಉತ್ಸವ: 'ಶ್ರೀನಿವಾಸ ಕಲ್ಯಾಣದಲ್ಲಿ ಅನುಸಂಧಾನ' ಉಪನ್ಯಾಸ: ವಿದ್ಯಾಧೀಶಚಾರ್ಯ ಗುತ್ತಲ್, ಆಯೋಜನೆ ಹಾಗೂ ಸ್ಥಳ: ರಾಘವೇಂದ್ರ ಸ್ವಾಮಿ ಮಠ, ರಾಜರಾಜೇಶ್ವರಿ ನಗರ, ಸಂಜೆ 6

ದುರ್ಗಾ ಪರಮೇಶ್ವರಿ ದೇವಿಗೆ ಬೆಳ್ಳಿ ಅಲಂಕಾರ, ವಿಜಯ ದಶಮಿ: ಆಯೋಜನೆ ಮತ್ತು ಸ್ಥಳ: ವರಸಿದ್ಧಿ ವಿನಾಯಕ ದೇವಾಲಯ, ಕೆನರಾ ಬ್ಯಾಂಕ್ ಕಾಲೊನಿ, ನಾಗರಬಾವಿ ರಸ್ತೆ, ಸಂಜೆ 6.30**ದೇವಿಗೆ ಆಭರಣ ಅಲಂಕಾರ:** ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ, ಆಯೋಜನೆ ಮತ್ತು ಸ್ಥಳ: ಸರ್ಕಲ್ ಮಾರಮ್ಮ ದೇವಸ್ಥಾನ, ಮಲ್ಲೇಶ್ವರ, ಸಂಜೆ 6.30

ನವರಾತ್ರಿ ದಸರಾ ಉತ್ಸವ: ವಿಜಯ ದಶಮಿ ಪೂಜೆ, ಆಯೋಜನೆ ಮತ್ತು ಸ್ಥಳ: ಶಾಂತಲ ಆರ್ಟ್ಸ್ ಟ್ರಸ್ಟ್, ಯಶವಂತಪುರ, ಸಂಜೆ 6.30

ಇತರೆ ಕಾರ್ಯಕ್ರಮ

71ನೇ ವನ್ಯಜೀವಿ ಸಪ್ತಾಹ–2025 ಪ್ರಯುಕ್ತ ಜಾಥಾ: ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಬಸವರಾಜ ಹೊರಟ್ಟಿ, ಡಿ.ಕೆ. ಶಿವಕುಮಾರ್, ಯು.ಟಿ. ಖಾದರ್, ಈಶ್ವರ ಬಿ. ಖಂಡ್ರೆ, ಅನಿಲ್ ಕುಂಬ್ಳೆ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಕರ್ನಾಟಕ ಅರಣ್ಯ ಇಲಾಖೆ, ಸ್ಥಳ: ವಿಧಾನಸೌಧದ ಬೃಹತ್ ಮೆಟ್ಟಿಲುಗಳಿಂದ ಲಾಲ್‌ಬಾಗ್‌ವರೆಗೆ, ಬೆಳಿಗ್ಗೆ 7

ಗಾಂಧಿ ಜಯಂತಿ, ವಿಶ್ವ ಅಹಿಂಸಾ ದಿನಾಚರಣೆ ಉದ್ಘಾಟನೆ: ಎಚ್.ಕೆ. ಪಾಟೀಲ, ರಾಷ್ಟ್ರೀಯ ಸೇವಾ ಯೋಜನೆ ರಾಜ್ಯ ಪ್ರಶಸ್ತಿ ಪ್ರದಾನ: ಜಿ.ಎನ್. ದಯಾನಂದ, ಜಯಲಕ್ಷ್ಮಿ, ಅತಿಥಿಗಳು: ಪ್ರತಾಪ್ ಲಿಂಗಯ್ಯ, ಅಭಯ್ ಕುಮಾರ್, ಅಧ್ಯಕ್ಷತೆ: ವೂಡೇ ಪಿ.ಕೃಷ್ಣ, ಬೆಳಿಗ್ಗೆ 9ಕ್ಕೆ ಆನಂದರಾವ್ ವೃತ್ತದಿಂದ ಗಾಂಧಿ ಭವನದವರೆಗೆ ಸದ್ಭಾವನಾ ಪಾದಯಾತ್ರೆ, ವೇದಿಕೆ ಕಾರ್ಯಕ್ರಮ ನಡೆಯುವ ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ಗಾಂಧಿ ಜಯಂತಿ: ಅಧ್ಯಕ್ಷತೆ: ಬಿ. ರಮೇಶ್, ಉಪಸ್ಥಿತಿ: ನವೀನ್ ಜೋಸೆಫ್ ಎ., ಕೆ.ಆರ್. ಜಲಜಾ, ವಿಜಯಲಕ್ಷ್ಮಿ ಎಂ.ಬಿ., ಜ್ಯೋತಿ ವೆಂಕಟೇಶ್, ಆಯೋಜನೆ: ಬೆಂಗಳೂರು ನಗರ ವಿಶ್ವವಿದ್ಯಾಲಯದ ಮಹಾತ್ಮ ಗಾಂಧಿ ಅಧ್ಯಯನ ಕೇಂದ್ರ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜಿನ ಆವರಣ, ಬೆಳಿಗ್ಗೆ 9

ನವರಾತ್ರಿ ಹಬ್ಬದ ವಿಶೇಷ: ಮಧ್ಯಾಹ್ನ 2.30ಕ್ಕೆ ಬೆಳ್ಳಿ ರಥದಲ್ಲಿ ಶನೇಶ್ವರಸ್ವಾಮಿ, ಚಾಮುಂಡೇಶ್ವರಿ ಅಮ್ಮನವರ ಮೆರವಣಿಗೆ, ಅತಿಥಿಗಳು: ಎಂ. ಕೃಷ್ಣಪ್ಪ, ಪ್ರಿಯಕೃಷ್ಣ, ಪ್ರದೀಪ್ ಕೃಷ್ಣ, ಆಯೋಜನೆ ಮತ್ತು ಸ್ಥಳ: ಶನಿಮಹಾತ್ಮ ದೇವಾಲಯ, ಸುಬ್ಬಣ್ಣ ಗಾರ್ಡನ್, ವಿಜಯನಗರ



FARNAZ

ಪಿ ಎಂ ಶ್ರೀ ಕೇಂದ್ರೀಯ ವಿದ್ಯಾಲಯ ನಂ1 ಜಾಲಹಳ್ಳಿ ಪಶ್ಚಿಮ ಬೆಂಗಳೂರು –560015
पीएम श्री केन्द्रीय विद्यालय नंबर 1 जालहल्ली पश्चिम, बैंगलोर -560015
PM SHRI KENDRIYA VIDYALAYA NO 1 JALAHALLI WEST, BENGALURU – 560015
(An Autonomous body under the Ministry of Education, Govt of India)
KV CODE: 1051 CBSE AFFILIATION NO: 800004 CBSE SCHOOL CODE: 49003 UDISE: 29280229803
EMAIL: kv1jalahalli@gmail.com Contact No: 080-28388422 web: https://no1jalahalli.kvs.ac.in

ಅರೆಕಾಲಿಕ ಗುತ್ತಿಗೆ ಶಿಕ್ಷಕರಿಗಾಗಿ ದಿನಾಂಕ 04/10/2025 ರಂದು ವಾಕ್–ಇನ್–ಇಂಟರ್ವ್ಯೂ –2025–26 ಅರ್ಹ ಅಭ್ಯರ್ಥಿಗಳು ದಿನಾಂಕ 04/10/2025 ರಂದು ವಿದ್ಯಾಲಯದಲ್ಲಿ ಸಂದರ್ಶನಕ್ಕೆ ಹಾಜರಾಗಬೇಕು.

ಪೋಸ್ಟ್	ವಿಷಯ
Contact / 080 - 61564202

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	24,634
ಇಂದಿನ ಅಂತ್ಯ:	24,611
ದಿನದ ಕನಿಷ್ಠ:	24,587
	23

ಮೊಟ್ಟೆ ಧಾರಣೆ (ಎನ್‌ಇಸಿಸಿ)		
ಬೆಂಗಳೂರು	100 ಕ್ಕೆ	₹560
	12 ಕ್ಕೆ	₹75
ಮೈಸೂರು:	100 ಕ್ಕೆ	₹570

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)	
ಅರಸೀಕೆರೆ	₹27000-27000
ಹುಣಸೂರು	₹15,500-15500
ತುರುವೇಕೆರೆ	₹26000-26000

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಹಿಂದಿನ ವಹಿವಾಟಿನ ದರ) (10 ಕೆ.ಜಿ.)	
ಶೇಂಗಾ (ರಿಫೈನ್ಡ್)	₹1315 (1315)
ಸೋಯಾ (ರಿಫೈನ್ಡ್)	₹1265 (1270)
ಸೂರ್ಯಕಾಂತಿ (ರಿಫೈನ್ಡ್)	₹1420 (1415)
ಪಾಮೊಲಿನ್	₹1265 (1270)

ಎಸ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹185
ಆರ್‌ಎಸ್‌ಎಸ್-5	₹180
ಗುಡ್ ಲಾಟ್	₹165

ಮುಂಬೈ ಧಾರಣೆ (ಶೇಂಗಾ) 30-09-2025	
ಜಾವಾ 70/80(ಹೊಸ)	10300-10400
ಜಾವಾ 80/90(ಹೊಸ)	9600-9700
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	8400-8500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1325 (1325)
ಒಂದು ವಾರದ ಡೆಲಿವರಿ	1320 (1320)
ಪಾಮ್ ವಾರದ ಡೆಲಿವರಿ	1263 (1268)
ಸೂರ್ಯಕಾಂತಿ ಎಣ್ಣೆ ಕಚ್ಚಾ	1350 (1335)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,15,100 (1,15,000)
ಬೆಳ್ಳಿ ಕೆ.ಜಿಗೆ	1,42,250 (1,43,600)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಘಟಕಕ್ಕೆ ಸಾಲ: ನಿಯಮ ಸಡಿಲ

ಚಿನ್ನವನ್ನು ಕಚ್ಚಾ ವಸ್ತುವಾಗಿ ಬಳಸುವ ಕೈಗಾರಿಕೆಗಳಿಗೆ ಸಾಲ ನೀಡಲು ಅಸ್ತು

ಮುಂಬೈ (ಪಿಟಿಐ): ಚಿನ್ನವನ್ನು ಕಚ್ಚಾ ವಸ್ತುವನ್ನಾಗಿ ಬಳಕೆ ಮಾಡುವ ತಯಾರಿಕಾ ಘಟಕಗಳಿಗೆ ಅಗತ್ಯವಾದ ಕಾರ್ಯಾಚರಣೆ ಬಂಡವಾಳ ಸಾಲ ನೀಡಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ವಾಣಿಜ್ಯ ಬ್ಯಾಂಕ್‌ಗಳಿಗೆ ಅವಕಾಶ ನೀಡಿದೆ. ಈ ಸೌಲಭ್ಯವು ಇದುವರೆಗೆ ಜುವೆಲರ್‌ಗಳಿಗೆ ಮಾತ್ರ ಲಭ್ಯವಿತ್ತು.

ಚಿನ್ನ ಅಥವಾ ಬೆಳ್ಳಿಯನ್ನು ಯಾವುದೇ ಸ್ವರೂಪದಲ್ಲಿ ಖರೀದಿಸುವ ಉದ್ದೇಶಕ್ಕೆ ಸಾಲ ಕೊಡಲು ಬ್ಯಾಂಕ್‌ಗಳಿಗೆ ಸಾಮಾನ್ಯ ಸಂದರ್ಭಗಳಲ್ಲಿ ಅಧಿಕಾರ ಇರುವುದಿಲ್ಲ. ಕಚ್ಚಾ ಚಿನ್ನ, ಬೆಳ್ಳಿಯನ್ನು ಅಡಮಾನವಾಗಿ ಇರಿಸಿಕೊಂಡು ಸಾಲ ಕೊಡಲು ಬ್ಯಾಂಕ್‌ಗಳಿಗೆ ಅವಕಾಶ ಇಲ್ಲ. ಆದರೆ ಕಾರ್ಯಾಚರಣೆ

ಬಂಡವಾಳ ಸಾಲವನ್ನು ಜುವೆಲರ್‌ಗಳಿಗೆ ನೀಡಲು ಬ್ಯಾಂಕ್‌ಗಳಿಗೆ ಅನುಮತಿ ಇತ್ತು.

ಸೋಮವಾರ ಕೆಲವು ನಿರ್ದೇಶನಗಳನ್ನು ಹೊರಡಿಸಿರುವ ಆರ್‌ಬಿಐ, ಜುವೆಲರ್‌ಗಳಿಗೆ ಕಾರ್ಯಾಚರಣೆ ಬಂಡವಾಳದ ರೂಪದಲ್ಲಿ ಸಾಲ ನೀಡಲು ಬ್ಯಾಂಕ್‌ಗಳಿಗೆ ಇರುವ ಅವಕಾಶವನ್ನು ಇತರ ತಯಾರಿಕಾ ಘಟಕಗಳಿಗೂ ಅನ್ವಯಿಸಿ ವಿಸ್ತರಣೆ ಮಾಡಿದೆ.

ತಯಾರಿಕಾ ಚಟುವಟಿಕೆ ಅಥವಾ ಕೈಗಾರಿಕಾ ಸಂಸ್ಕರಣಾ ಚಟುವಟಿಕೆಗಳಲ್ಲಿ ಚಿನ್ನವನ್ನು ಕಚ್ಚಾ ವಸ್ತುವನ್ನಾಗಿ ಬಳಕೆ ಮಾಡುವ ಇತರರಿಗೂ ಕಾರ್ಯಾಚರಣೆ ಬಂಡವಾಳ ಸಾಲವನ್ನು ನೀಡಲು ಬ್ಯಾಂಕ್‌ಗಳಿಗೆ ಅನುಮತಿ ನೀಡಿದೆ.

ಚಿನ್ನ ಅಥವಾ ಬೆಳ್ಳಿಯನ್ನು ಕಚ್ಚಾ ವಸ್ತುವನ್ನಾಗಿ ಬಳಕೆ ಮಾಡುವ ಅಥವಾ ತಯಾರಿಕಾ ಚಟುವಟಿಕೆಯಲ್ಲಿ ಇವುಗಳನ್ನು ಒಂದು ಅಂಗ ವಸ್ತುವನ್ನಾಗಿ ಬಳಕೆ ಮಾಡುವವರಿಗೆ ವಾಣಿಜ್ಯ ಬ್ಯಾಂಕ್‌ಗಳು ಹಾಗೂ 3ನೇ ಹಂತದ ಅಥವಾ 4ನೇ ಹಂತದ ನಗರ ಸಹಕಾರ ಬ್ಯಾಂಕ್‌ಗಳು ಕಾರ್ಯಾಚರಣೆ ಬಂಡವಾಳಕ್ಕೆ ಸಾಲ ನೀಡಬಹುದು ಎಂದು ಆರ್‌ಬಿಐ ಸ್ಪಷ್ಟಪಡಿಸಿದೆ.

ಚಿನ್ನ, ಬೆಳ್ಳಿ ಬೆಲೆ ಇನ್ನಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಚಿನ್ನದ ಬೆಲೆಯು ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರದ ವಹಿವಾಟಿನಲ್ಲಿ 10 ಗ್ರಾಂಗೆ ₹500ರಷ್ಟು ಏರಿಕೆ ಕಂಡು, ಸಾರ್ವಕಾಲಿಕ ಗರಿಷ್ಠ ಮಟ್ಟವಾದ ₹1.20 ಲಕ್ಷಕ್ಕೆ ತಲುಪಿದೆ.

ಅಮೆರಿಕದ ಡಾಲರ್ ದುರ್ಬಲ ಆಗಿದ್ದುದು ಹಾಗೂ ಅಮೆರಿಕದ ಕೇಂದ್ರೀಯ ಬ್ಯಾಂಕ್ ಬಡ್ಡಿ ದರವನ್ನು ಇನ್ನಷ್ಟು ತಗ್ಗಿಸಬಹುದು ಎಂಬ ನಿರೀಕ್ಷೆಯು ಈ ಏರಿಕೆಗೆ ಕಾರಣ ಎಂದು ತಜ್ಞರು ಹೇಳಿದ್ದಾರೆ.

ಶೇಕಡ 99.5ರಷ್ಟು ಪರಿಶುದ್ಧತೆಯ ಚಿನ್ನದ ಬೆಲೆಯು 10 ಗ್ರಾಂಗೆ ₹500ರಷ್ಟು ಹೆಚ್ಚಾಗಿ, ₹1,19,400ಕ್ಕೆ ತಲುಪಿದೆ.

ಮಂಗಳವಾರದ ವಹಿವಾಟಿನಲ್ಲಿ ಬೆಳ್ಳಿಯ ಬೆಲೆಯು ಕೆ.ಜಿ.ಗೆ ₹500ರಷ್ಟು ಹೆಚ್ಚಳವಾಗಿ ₹1,50,500ಕ್ಕೆ ತಲುಪಿದೆ. ಸೋಮವಾರದ ವಹಿವಾಟಿನಲ್ಲಿ ಬೆಳ್ಳಿ ಬೆಲೆಯು ₹7,000ದಷ್ಟು ಏರಿಕೆ ಆಗಿತ್ತು.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಸಂದೇಶ್ ದೇಶಾಯಿ, ಊರು ತಿಳಿಸಿಲ್ಲ

- **ಪ್ರಶ್ನೆ: ನನಗೆ 25 ವರ್ಷ ವಯಸ್ಸು. ನನಗೆ ಬರುವ ವೇತನದಲ್ಲಿ ನಾನು ಉಳಿತಾಯಕ್ಕಾಗಿ ಬಹುರಾಜ್ಯ ಸಹಕಾರ ಸಂಘದಲ್ಲಿ ₹20,000 ತಿಂಗಳ ಉಳಿತಾಯ ಮಾಡುತ್ತಿದ್ದೇನೆ. ಈ ಸಂಸ್ಥೆಯು ಬಹುರಾಜ್ಯ ಸಹಕಾರ ಕಾಯ್ದೆ 2002ರ ಅಡಿ ನೋಂದಣಿ ಆಗಿದೆ. ಇದು ಸೂಕ್ತ ನಿರ್ಧಾರವೇ?**

ಉತ್ತರ: ನೀವು ಪ್ರತಿ ತಿಂಗಳು ₹20,000ವನ್ನು ಬಹುರಾಜ್ಯ ಸಹಕಾರ ಸಂಘವೊಂದರಲ್ಲಿ ಉಳಿತಾಯ ಮಾಡುತ್ತಿರುವುದು ಗಮನಾರ್ಹ. ಇಂತಹ ಸಹಕಾರ ಸಂಘಗಳು ಸಂಬಂಧಿತ ಕಾಯ್ದೆಯ ಅಡಿ ನೋಂದಾಯಿತ ಆಗಿದ್ದರೂ, ಇವು 'ಬ್ಯಾಂಕಿಂಗ್ ಸಂಸ್ಥೆ'ಯ ವ್ಯಾಖ್ಯೆಯಡಿ ಬರುವ ವಾಣಿಜ್ಯ ಬ್ಯಾಂಕುಗಳು ಅಥವಾ ರಾಷ್ಟ್ರೀಕೃತ ಬ್ಯಾಂಕುಗಳಲ್ಲ. ಆದ್ದರಿಂದ, ಆರ್ಥಿಕ ಅಪಾಯ ಅಥವಾ ಅದರ ಭದ್ರತೆಯ ವಿಚಾರವಾಗಿ ಎಚ್ಚರಿಕೆಯಿಂದ ನಿರ್ಧಾರ ಕೈಗೊಳ್ಳುವುದು ಮುಖ್ಯ.

ಮೊದಲನೆಯದಾಗಿ, ಭದ್ರತೆ ವಿಷಯದಲ್ಲಿ ಈ ಸೊಸೈಟಿಗಳಲ್ಲಿ ಠೇವಣಿ ಮಾಡಿದ ಹಣಕ್ಕೆ, ಠೇವಣಿ ವಿಮಾ ಮತ್ತು ಖಣ ಭದ್ರತಾ ನಿಗಮ, ಆರ್‌ಬಿಐ ಅಥವಾ ಕೇಂದ್ರ ಸರ್ಕಾರದಿಂದ ಯಾವುದೇ ನೇರ ಖಾತರಿ ಇರುವುದಿಲ್ಲ. ಆದರೆ ಇತರ ಬ್ಯಾಂಕ್‌ಗಳು ತಮ್ಮ ಗ್ರಾಹಕರು ಹೊಂದಿರುವ ಠೇವಣಿಗೆ ಪ್ರತಿ ವರ್ಷ ವಿಮಾ ಪ್ರಿಮಿಯಂ ಪಾವತಿಸಿ ₹5 ಲಕ್ಷದವರೆಗಿನ ಠೇವಣಿಗೆ ವಿಮೆ ನೀಡುತ್ತವೆ. ಆದರೆ, ಇಂತಹ ಸಂಘಗಳಲ್ಲಿ ಠೇವಣಿದಾರರು ಅವರ ಠೇವಣಿ ಕಳೆದುಕೊಂಡ ಸಂದರ್ಭದಲ್ಲಿ, ಹಣವನ್ನು ಮರಳಿ ಪಡೆಯಲು ವಿಮಾ ರಕ್ಷಣೆ ಇರುವುದಿಲ್ಲ.

ನಿಮ್ಮ ಇಪ್ಪತ್ತೈದನೆಯ ವಯಸ್ಸಿನಲ್ಲಿ ದೀರ್ಘಾವಧಿ ಉಳಿತಾಯ ಹಾಗೂ ಹೂಡಿಕೆಗೆ ನಿಗದಿತ ಬಡ್ಡಿ ನೀಡುವ ಠೇವಣಿಗಳನ್ನು ಮಾತ್ರವೇ ಆಶ್ರಯಿಸುವುದು ಬೇಡ. ನಿಮ್ಮ ಹೂಡಿಕೆ ಸಣ್ಣ ಪ್ರಮಾಣದ್ದಾದರೂ ವಿವಿಧ ವರ್ಗಗಳಿಗೆ ಸೇರಿದ ಹೂಡಿಕೆಗಳಲ್ಲಿ ಹಣ ತೊಡಗಿಸುವುದು ಮುಖ್ಯ. ಇದರಿಂದ ವಿವಿಧ ಸನ್ನಿವೇಶಗಳಲ್ಲಿ ಒಂದೊಂದು ರೀತಿಯ ಹೂಡಿಕೆಗಳು ಆಯಾ ಪರಿಸ್ಥಿತಿಗೆ ಅನುಗುಣವಾಗಿ ಲಾಭ ನೀಡುತ್ತವೆ. ನಿಮ್ಮ ಮುಂದಿನ ಹಂತದ ಹೂಡಿಕೆಯ ವೇಳೆ ಈ ವಿಚಾರ ಗಮನದಲ್ಲಿರಲಿ. ನೀವು ಹಣ ತೊಡಗಿಸಿರುವ ಸಂಸ್ಥೆಯು ಬಹುರಾಜ್ಯ ಸಹಕಾರ ಸಂಘದ ಕಾಯ್ದೆಯ ಅಡಿ ನೋಂದಣಿಯಾಗಿದ್ದರೆ ಮಾತ್ರ ಸಾಲದು, ಬದಲಾಗಿ ಠೇವಣಿಗೆ ಭದ್ರತೆಯೂ ಬೇಕು. ನಿಮ್ಮ ಹಣವನ್ನು 'ಬ್ಯಾಂಕ್' ವ್ಯಾಖ್ಯೆಯಡಿ ಬರುವ ಯಾವುದೆ ಬ್ಯಾಂಕ್‌ಗಳಲ್ಲಿ ತೊಡಗಿಸುವುದರಿಂದ ಆರ್ಥಿಕ ಭದ್ರತೆ ಹೆಚ್ಚಾಗುತ್ತದೆ.

ಮಹೇಶಗೌಡ ಪಾಟೀಲ, ಬೆಂಗಳೂರು

- **ಪ್ರಶ್ನೆ: ನಾನು ಕಳೆದ ಎರಡು ವರ್ಷಗಳಿಂದ ಕೇಂದ್ರ ಸರ್ಕಾರದ ನೌಕರ, ₹35,000 ತಿಂಗಳ ಸಂಬಳ. ನನ್ನ ವಯಸ್ಸು 25 ವರ್ಷ. ಕೇಂದ್ರ ಸರ್ಕಾರವು ಜಾರಿಗೆ ತಂದಿರುವ ಏಕೀಕೃತ ಪಿಂಚಣಿ ವ್ಯವಸ್ಥೆ (ಯುಪಿಎಸ್) ಆಯ್ಕೆ ಮಾಡಿಕೊಳ್ಳಬೇಕೆ ಅಥವಾ ರಾಷ್ಟ್ರೀಯ ಪಿಂಚಣಿ ಯೋಜನೆಯ (ಎನ್‌ಪಿಎಸ್) ಪದ್ಧತಿಯಲ್ಲೇ ಮುಂದುವರಿಯಬೇಕೆ ಎಂಬ ಬಗೆಗಿನ ಗೊಂದಲ ಪರಿಹಾರಕ್ಕೆ ಸೂಕ್ತ ಮಾಹಿತಿ ಬೇಕಾಗಿದೆ. ಇವೆರಡರಲ್ಲಿ ಯಾವುದು ನನ್ನ ಭವಿಷ್ಯಕ್ಕೆ ಉತ್ತಮ?**

ಉತ್ತರ: ಕೇಂದ್ರ ಸರ್ಕಾರವು 2025ರ ಏಪ್ರಿಲ್ 1ರಿಂದ ಹೊಸದಾಗಿ ಜಾರಿಗೆ ತಂದಿರುವ ಯುಪಿಎಸ್, ಕೇಂದ್ರ ಸರ್ಕಾರದ ನೌಕರರಿಗೆ ಎನ್‌ಪಿಎಸ್‌ಗಿಂತ ತುಸು ಭಿನ್ನವಾದ ಪಿಂಚಣಿ ಯೋಜನೆ. ಈ ಹೊಸ ಯೋಜನೆಗೆ ವರ್ಗಾವಣೆಗೊಳ್ಳುವುದಕ್ಕೆ ಒಂದು ಅವಕಾಶ ನೀಡಲಾಗಿದೆ. ಇದು ಖಚಿತ ಹಾಗೂ ಮಾರುಕಟ್ಟೆ ಸೂಚ್ಯಂಕಕ್ಕೆ ಅನುಗುಣವಾಗಿ ದೊರೆಯುವ ಲಾಭಗಳನ್ನು ನೌಕರರಿಗೆ ನಿವೃತ್ತಿಯ ನಂತರ ನೀಡುತ್ತದೆ.

ಇದನ್ನು ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ಪಿಎಫ್‌ಆರ್‌ಡಿಎ) ನಿರ್ವಹಿಸುವ ಎನ್‌ಪಿಎಸ್ ಪರಿಧಿಯೊಳಗೆ ಕಾರ್ಯಗತಗೊಳಿಸಲಾಗಿದೆ. ನಿರ್ದಿಷ್ಟ ಷರತ್ತುಗಳ ಅಡಿಯಲ್ಲಿ ಸೇವೆಯಲ್ಲಿರುವ ಮತ್ತು ನಿವೃತ್ತ ನೌಕರರಿಗೆ ಯುಪಿಎಸ್ ಆಯ್ಕೆಗೆ ಅವಕಾಶವಿದೆ. ಎನ್‌ಪಿಎಸ್ ವ್ಯವಸ್ಥೆಯಲ್ಲಿ ಇರುವವರು ಯುಪಿಎಸ್ ಆಯ್ಕೆ ಮಾಡಿಕೊಳ್ಳಲು ಸೆಪ್ಟೆಂಬರ್ 30ರ ಗಡುವು ನಿಗದಿ ಮಾಡಲಾಗಿದೆ (ಇದನ್ನು ವಿಸ್ತರಿಸುವ ಸಾಧ್ಯತೆ ಇದೆ ಎಂದು ಕೆಲವು ವರದಿಗಳು ಹೇಳಿವೆ).

ಒಂದು ವೇಳೆ ನೀವು ಯುಪಿಎಸ್ ಆಯ್ಕೆ ಮಾಡದಿದ್ದಲ್ಲಿ, ನಿಮ್ಮ ಎನ್‌ಪಿಎಸ್ ಆಯ್ಕೆ ಮುಂದುವರಿಯುತ್ತದೆ. ನಿವೃತ್ತಿಯ ಕೊನೆಯ ವರ್ಷದಲ್ಲಿ ಅಥವಾ ರಾಜಿನಾಮೆ ನೀಡುವ ಸಂದರ್ಭದಲ್ಲಿ ಮತ್ತೆ ಎನ್‌ಪಿಎಸ್ ಯೋಜನೆಗೆ ವರ್ಗಾವಣೆಗೊಳ್ಳುವುದಕ್ಕೆ ಸೇವಾವಧಿಯಲ್ಲಿ ಒಂದು ಬಾರಿ ಅವಕಾಶವಿದೆ. ಆದರೆ, ಎನ್‌ಪಿಎಸ್ ಅಡಿ, ನೌಕರ ಹಾಗೂ ಸರ್ಕಾರದ ದೇಣಿಗೆ ಮೊತ್ತವು ಮಾರುಕಟ್ಟೆ ಆಧಾರಿತ ಹೂಡಿಕೆಗಳಾದ ಷೇರು, ಸಾಲಪತ್ರ ಹಾಗೂ ಸರ್ಕಾರದ ಭದ್ರತೆಯ ಠೇವಣಿಗಳಲ್ಲಿ ವಿನಿಯೋಗ ಆಗಿರುತ್ತದೆ. ಇದರ ಪರಿಣಾಮ, ಮಾರುಕಟ್ಟೆ ಬೆಳವಣಿಗೆ ಹೆಚ್ಚು ಇದ್ದರೆ ಲಾಭದ ಪ್ರಮಾಣ ಹೆಚ್ಚು ದೊರೆಯಬಹುದು. ಆದರೆ, ಮಾರುಕಟ್ಟೆ ಕುಸಿದರೆ ಲಾಭ ಕಡಿಮೆಯಾಗುವ ಅಪಾಯ ಇದೆ. ಇಲ್ಲಿ 'ಕನಿಷ್ಠ ಪಿಂಚಣಿ' ಎಂಬ ವಿಚಾರ ಇಲ್ಲ. ಎಲ್ಲವೂ ಮಾರುಕಟ್ಟೆ ಆಧಾರಿತ ಹೂಡಿಕೆಯ ಮೇಲಿನ ಲಾಭ-ನಷ್ಟವನ್ನು ಅವಲಂಬಿಸಿದೆ.

ನೀವು ಇನ್ನೂ ದೀರ್ಘವಾದ ಸೇವಾವಧಿ ಹೊಂದಿರುವ ಉದ್ಯೋಗಿ ಹಾಗೂ ಹೂಡಿಕೆಗೆ ಸಾಕಷ್ಟು ಅವಕಾಶ - ಸಮಯ ಎರಡೂ ಇದೆ. ಎನ್‌ಪಿಎಸ್ ಬಹಳ ಹೆಚ್ಚು ಬೆಳವಣಿಗೆಯ ಅವಕಾಶ ಕೊಡಬಹುದು, ಆದರೆ ಅದರಲ್ಲೂ ಮಾರುಕಟ್ಟೆ ಅಪಾಯವಿದೆ. ಇತ್ತೀಚೆಗೆ ಪರಿಚಯಿಸಲ್ಪಟ್ಟ ಯುಪಿಎಸ್ ಭದ್ರತೆ ಮತ್ತು ಮಾರುಕಟ್ಟೆ ಆಧಾರಿತ ಹೂಡಿಕೆಯ ಬೆಳವಣಿಗೆಯನ್ನೂ ಸರಿದೂಗಿಸುವ ಆಯ್ಕೆಯಾಗಿದೆ. ದೀರ್ಘಾವಧಿಯಲ್ಲಿ ಯುಪಿಎಸ್ ಹೆಚ್ಚು ಸಮತೋಲನದ ಆಯ್ಕೆಯಾಗಿ ಕಾಣುತ್ತದೆ, ಏಕೆಂದರೆ ಇದು ಕನಿಷ್ಠ ಪಿಂಚಣಿ ಭರವಸೆಯೊಡನೆ ಭವಿಷ್ಯದಲ್ಲಿ ಹೆಚ್ಚುವರಿ ಲಾಭಕ್ಕೂ ಅವಕಾಶ ಕಲ್ಪಿಸುತ್ತದೆ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ನಾಲ್ವರು ದಾಳಿಕೋರರ ಹತ್ಯೆಗೈದ ಸೇನಾಪಡೆ • 32 ಮಂದಿಗೆ ಗಾಯ

ಪಾಕ್‌ನಲ್ಲಿ ಆತ್ಮಾಹುತಿ ದಾಳಿ: 10 ಸಾವು

ಕರಾಚಿ (ಪಿಟಿಐ) / (ರಾಯಿಟರ್ಸ್): ಪಾಕಿಸ್ತಾನದ ಬಲೂಚಿಸ್ತಾನ ಪ್ರಾಂತ್ಯದಲ್ಲಿ ಅರೆ ಸೇನಾಪಡೆ ಕಚೇರಿ ಬಳಿ ಮಂಗಳವಾರ ಸಂಭವಿಸಿದ ಆತ್ಮಾಹುತಿ ಬಾಂಬ್ ದಾಳಿಯಲ್ಲಿ ಕನಿಷ್ಠ 10 ಜನರು ಮೃತಪಟ್ಟಿದ್ದು, 30ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ.

ಬಲೂಚಿಸ್ತಾನ ರಾಜಧಾನಿ ಕ್ವೆಟ್ಟಾದಲ್ಲಿರುವ ಅರೆ ಸೇನಾಪಡೆಗಳ ಕೇಂದ್ರ ಕಚೇರಿಯ ಸಮೀಪದ ಜನನಿಬಿಡ ಪ್ರದೇಶದಲ್ಲಿ ಈ ದಾಳಿ ನಡೆದಿದೆ. ಬಳಿಕ ಕೆಲವು ಶಸ್ತ್ರಧಾರಿಗಳು ಸೇನಾ ಕೇಂದ್ರ ಕಚೇರಿಗೂ ನುಗ್ಗಿ, ಅರೆ ಸೇನಾಪಡೆ ಸಿಬ್ಬಂದಿಯನ್ನು ಗುರಿಯಾಗಿಸಿ ಗುಂಡಿನ ದಾಳಿ ನಡೆಸಿದ್ದಾರೆ ಎಂದು ಬಲೂಚಿಸ್ತಾನ ಮುಖ್ಯಮಂತ್ರಿ ಮಿರ್ ಸರ್ಫರಾಜ್ ಬುಗ್ತಿ ಹೇಳಿದ್ದಾರೆ.

ಆತ್ಮಾಹುತಿ ದಾಳಿಕೋರ ಪಿಕಪ್ ಟ್ರಕ್ ಚಲಾಯಿಸುತ್ತಿದ್ದ. ನಂತರ ನಡೆದ ಗುಂಡಿನ ಚಕಮಕಿಯ ಆತನ ಜತೆಗಿದ್ದ ಉಳಿದ ನಾಲ್ವರು ದಾಳಿಕೋರರನ್ನು ಭದ್ರತಾಪಡೆಗಳು ಹೊಡೆದುರುಳಿಸಿವೆ ಎಂದೂ ಬುಗ್ತಿ ತಿಳಿಸಿದ್ದಾರೆ.

ಆತ್ಮಾಹುತಿ ಬಾಂಬ್ ದಾಳಿಯಲ್ಲಿ ಮೃತಪಟ್ಟವರಲ್ಲಿ ನಾಗರಿಕರು, ಭದ್ರತಾ ಸಿಬ್ಬಂದಿ ಸೇರಿದ್ದಾರೆ ಎಂದೂ ಬುಗ್ತಿ

ಪಾಕಿಸ್ತಾನದ ಬಲೂಚಿಸ್ತಾನ ಪ್ರಾಂತ್ಯದ ಕ್ವೆಟ್ಟಾದಲ್ಲಿ ಮಂಗಳವಾರ ಸಂಭವಿಸಿದ ಆತ್ಮಾಹುತಿ ದಾಳಿಯಲ್ಲಿ ಹಾನಿಯಾಗಿರುವ ವಾಹನಗಳನ್ನು ಭದ್ರತಾ ಸಿಬ್ಬಂದಿ ಪರಿಶೀಲಿಸುತ್ತಿರುವುದು —ಪಿಟಿಐ ಚಿತ್ರ

ಹೇಳಿದ್ದಾರೆ.

ಸರ್ಕಾರದ ಯೋಜನೆಗಳು, ಚೀನಾ-ಪಾಕಿಸ್ತಾನ ಆರ್ಥಿಕ ಕಾರಿಡಾರ್ (ಸಿಪಿಇಸಿ) ಕಾಮಗಾರಿಯನ್ನು ಬಲೂಚ್‌ನಲ್ಲಿರುವ ಬಂಡುಕೋರರ ಗುಂಪುಗಳು ವಿರೋಧಿಸುತ್ತಲೇ ಇದ್ದು, ಆಗಾಗ ಭದ್ರತಾ ಸಿಬ್ಬಂದಿಯನ್ನು ಗುರಿಯಾಗಿಸಿ ದಾಳಿ ನಡೆಸುತ್ತಲೇ ಇರುತ್ತವೆ. ಆದರೆ, ಈ ಬಾರಿಯ ಆತ್ಮಾಹುತಿ ದಾಳಿಯ ಹೊಣೆಯನ್ನು ಯಾವುದೇ ಗುಂಪು ಹೊತ್ತಿಕೊಂಡಿಲ್ಲ.

'ಹೇಡಿ ಕೃತ್ಯ': ಬಾಂಬ್ ದಾಳಿಯನ್ನು ಬುಗ್ತಿ ಖಂಡಿಸಿದ್ದು, ಕೃತ್ಯವನ್ನು 'ಭಯೋತ್ಪಾದಕ ದಾಳಿ' ಎಂದು ಕರೆದಿದ್ದಾರೆ.

'ಈ ರೀತಿಯ ಹೇಡಿ ಕೃತ್ಯಗಳನ್ನು ಎಸಗುವ ಮೂಲಕ ದೇಶದ ದೃಢಸಂಕಲ್ಪವನ್ನು ದುರ್ಬಲಗೊಳಿಸಲು ಸಾಧ್ಯವಿಲ್ಲ. ಈ ದೇಶದ ನಾಗರಿಕರ ಮತ್ತು ಸೇನಾ ಸಿಬ್ಬಂದಿಯ ತ್ಯಾಗವನ್ನು ವ್ಯರ್ಥವಾಗಲು ಬಿಡುವುದಿಲ್ಲ. ಬಲೂಚಿಸ್ತಾನದಲ್ಲಿ ಶಾಂತಿ ಮತ್ತು ರಕ್ಷಣೆ ಖಾತರಿಪಡಿಸಲು ನಾವು ಬದ್ಧರಾಗಿದ್ದೇವೆ' ಎಂದಿದ್ದಾರೆ.

ವಿವಿಧ ಆಸ್ಪತ್ರೆಗಳಿಗೆ ದಾಖಲು

'ಬಾಂಬ್ ದಾಳಿಯಲ್ಲಿ 10 ಮಂದಿ ಮೃತಪಟ್ಟಿದ್ದು, 32 ಮಂದಿ ಗಾಯಗೊಂಡಿದ್ದಾರೆ. ಗಾಯಗೊಂಡವರನ್ನು ನಗರದ ವಿವಿಧ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ' ಎಂದು ಪ್ರಾಂತ್ಯದ ಆರೋಗ್ಯ ಸಚಿವ ಬಖ್ತ್ ಮುಹಮ್ಮದ್ ಕಾಕರ್ ತಿಳಿಸಿದ್ದಾರೆ.

ಕ್ವೆಟ್ಟಾ ಸಿವಿಲ್ ಆಸ್ಪತ್ರೆ, ಬಲೂಚಿಸ್ತಾನ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಸೇರಿದಂತೆ ಗಾಯಾಳುಗಳು ಚಿಕಿತ್ಸೆ ಪಡೆಯುತ್ತಿರುವ ವಿವಿಧ ಆಸ್ಪತ್ರೆಗಳಲ್ಲಿ ತುರ್ತು ಪರಿಸ್ಥಿತಿ ಘೋಷಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ನೇಪಾಳದ ನೂತನ 'ದೇವಿ' ಆಯ್ಕೆ

ಕಠ್ಮಂಡು (ಎಪಿ): 2 ವರ್ಷ 8 ತಿಂಗಳ ಬಾಲಕಿ ಆರ್ಯತಾರಾ ಶಕ್ಯಾ ಅವರನ್ನು ನೇಪಾಳದ ನೂತನ 'ದೇವಿ'ಯಾಗಿ ಆಯ್ಕೆ ಮಾಡಲಾಗಿದೆ.

ಈಗಿರುವ ದೇವಿಯು ಪ್ರೌಢಾವಸ್ಥೆಗೆ ಬರುತ್ತಿರುವುದರಿಂದ ನೂತನ ದೇವಿ ಆಯ್ಕೆ ನಡೆದಿದೆ.

ಹಿಂದೂಗಳು ಮತ್ತು ಬೌದ್ಧರು ದೇವಿಯನ್ನು ಆರಾಧಿಸುತ್ತಾರೆ. 2ರಿಂದ 4 ವರ್ಷದೊಳಗಿನ ಹೆಣ್ಣುಮಕ್ಕಳನ್ನು ಆಯ್ಕೆ ಮಾಡಲಾಗುತ್ತದೆ. ಈ ಮೊದಲು ಆಯ್ಕೆಯಾಗಿದ್ದ ಹೆಣ್ಣುಮಗು ಪ್ರೌಢಾವಸ್ಥೆ ತಲುಪಿದಾಗ, ಆಕೆ ಬದಲು 'ಕನ್ಯೆ'ಯನ್ನು ಆರಾಧಿಸಲಾಗುತ್ತದೆ.

ಅಡಿಕೆ ಧಾರಣೆ

ಬೆಳ್ತಂಗಡಿ					
ಹೊಸತು	27000-49000	ಹೊಸತು	26000-49000	ಚಾಲಿ	41699-45500
ಹಳತು	47800-53000	**ಶಿವಮೊಗ್ಗ**		ಕೆಂಪುಗೋಟು	24199-33099
ಚಿತ್ರದುರ್ಗ		ಬೆಟ್ಟೆ	56732-69101	ರಾಶಿ	47561-54899
ಆಪಿ	58119-58529	ಗೊರಬಲು	20009-42191	**ಯಲ್ಲಾಪುರ**	
ಬೆಟ್ಟೆ	37649-38099	ಹೊಸತು	60669-61799	ಬಿಳಿಗೋಟು	31289-35069
ಕೆಂಪುಗೋಟು	33600-34000	ರಾಶಿ	46869-64699	ಚಾಲಿ	38369-45300
ರಾಶಿ	57639-58069	ಸರಕು	59100-89896	ಕೋಕ	15409-20802
ಪುತ್ತೂರು		**ಶಿರಸಿ**		ಕೆಂಪುಗೋಟು	34415-34415
ಕೋಕಾ	20000-28000	ಬೆಟ್ಟೆ	36699-47602	ರಾಶಿ	51469-58390
		ಬಿಳಿಗೋಟು	26899-37899	ತಟ್ಟಿಬೆಟ್ಟೆ	36610-40000

ಜಿಎಸ್‌ಟಿ: ಇ-ವಾಣಿಜ್ಯ ವೇದಿಕೆಗಳ ಮೇಲೆ ಕಣ್ಣು

ನವದೆಹಲಿ (ಪಿಟಿಐ): ನಿತ್ಯ ಬಳಕೆಯ ಶಾಂಪೂ, ಧಾನ್ಯಗಳು ಹಾಗೂ ಇತರ ಎಫ್‌ಎಂಸಿಜಿ ಉತ್ಪನ್ನಗಳ ಬೆಲೆಯ ಮೇಲೆ ನಿಗಾ ಇರಿಸಿರುವ ಕೇಂದ್ರ ಸರ್ಕಾರವು ಇ-ವಾಣಿಜ್ಯ ವೇದಿಕೆಗಳನ್ನು ಪರಿಶೀಲನೆಗೆ ಒಳಪಡಿಸಿದೆ ಎಂದು ಮೂಲವೊಂದು ತಿಳಿಸಿದೆ.

ಜಿಎಸ್‌ಟಿ ದರ ಇಳಿಕೆಯ ಪ್ರಯೋಜನವು ಗ್ರಾಹಕರಿಗೆ ಸರಿಯಾಗಿ ವರ್ಗಾವಣೆ ಆಗಬೇಕು ಎಂಬ ಉದ್ದೇಶದಿಂದ ಕೇಂದ್ರ ಸರ್ಕಾರವು ಈ ಕ್ರಮ ಕೈಗೊಂಡಿದೆ.

ಇ-ವಾಣಿಜ್ಯ ವೇದಿಕೆಗಳು ನಿಯಮಗಳಿಗೆ ಅನುಗುಣವಾಗಿ ಬೆಲೆಯನ್ನು ನಿಗದಿ ಮಾಡುತ್ತಿವೆಯೋ ಇಲ್ಲವೋ ಎಂಬುದನ್ನು ಅಧಿಕಾರಿಗಳು ಗಮನಿಸುತ್ತಿದ್ದಾರೆ ಎಂದು ತಿಳಿದುಬಂದಿದೆ.

ಜಿಎಸ್‌ಟಿ ದರ ಇಳಿಕೆಗೆ ಅನುಗುಣವಾಗಿ ಕೆಲವು ಉತ್ಪನ್ನಗಳ ಬೆಲೆಯಲ್ಲಿ ಇಳಿಕೆ ಆಗಿಲ್ಲ ಎಂಬ ದೂರುಗಳು ಬಂದಿವೆ. ಇದರಿಂದಾಗಿ ಕುಪಿತಗೊಂಡಿರುವ ಕೇಂದ್ರವು, ನಿರ್ದಿಷ್ಟ ಉತ್ಪನ್ನಗಳಿಗೆ ನಿಗದಿ

ಮಾಡಿರುವ ಬೆಲೆಯ ವಿಚಾರವಾಗಿ ಕೆಲವು ಇ-ವಾಣಿಜ್ಯ ವೇದಿಕೆಗಳನ್ನು ತರಾಟೆಗೆ ತೆಗೆದುಕೊಂಡಿದೆ ಎಂದು ಮೂಲಗಳು ಮಾಹಿತಿ ನೀಡಿವೆ.

'ಜಿಎಸ್‌ಟಿ ದರ ಪರಿಷ್ಕರಣೆಯ ಲಾಭವು ಗ್ರಾಹಕರಿಗೆ ಸಮರ್ಪಕವಾಗಿ ವರ್ಗಾವಣೆ ಆಗಬೇಕು ಎಂಬ ಉದ್ದೇಶದಿಂದ ರೆವಿನ್ಯು ಇಲಾಖೆಯು ಬೆಲೆಗಳ ಮೇಲೆ ಗಮನ ಇರಿಸಿದೆ' ಎಂದು ಗೊತ್ತಾಗಿದೆ. ಜಿಎಸ್‌ಟಿ ಪರಿಷ್ಕರಣೆಗೆ ಮೊದಲಿನ ಹಾಗೂ ನಂತರದ ಬೆಲೆಯಲ್ಲಿನ ವ್ಯತ್ಯಾಸಗಳು ತೆರಿಗೆ ಇಳಿಕೆ ಪ್ರಮಾಣಕ್ಕೆ ಅನುಗುಣವಾಗಿ ಇಲ್ಲ ಎಂಬುದನ್ನು ತಿಳಿಸಿದಾಗ ಕೆಲವು ಇ-ವಾಣಿಜ್ಯ ವೇದಿಕೆಗಳು ತಾಂತ್ರಿಕ ತೊಡಕುಗಳನ್ನು ಉಲ್ಲೇಖಿಸಿದ್ದವು ಎಂದು ಗೊತ್ತಾಗಿದೆ.

ಪಟ್ನಾದಲ್ಲಿ ದುರ್ಗಾ ಪೂಜೆ ಅಂಗವಾಗಿ ಮಂಗಳವಾರ ನಡೆದ 'ಮಹಾ ಅಷ್ಟಮಿ' ಉತ್ಸವದಲ್ಲಿ 'ಕುಮಾರಿ ಪೂಜೆ' ನೆರವೇರಿಸಿದ ಜನರು ಹೆಣ್ಣು ಮಗುವೊಂದರ ಆಶೀರ್ವಾದ ಪಡೆದರು —ಪಿಟಿಐ ಚಿತ್ರ

ಚಿಟಿಕೆ ಸುದ್ದಿ

ಭಾರತ, ಕೆನಡಾದಿಂದ ಹೈಕಮಿಷನರ್‌ಗಳ ನೇಮಕ

ನ್ಯೂಯಾರ್ಕ್ (ಪಿಟಿಐ): 'ಎರಡು ದೇಶಗಳ ನಡುವೆ ಸಂಬಂಧ ಪುನರ್ ನಿರ್ಮಾಣದ ನಿಟ್ಟಿನಲ್ಲಿ ದೆಹಲಿ ಹಾಗೂ ಒಟ್ಟಾವದಲ್ಲಿ ಉಭಯ ರಾಷ್ಟ್ರಗಳು ಹೈ ಕಮಿಷನರ್‌ಗಳ ನೇಮಿಸಲು ಒಪ್ಪಿಗೆ ಸೂಚಿಸಿರುವುದು ಸ್ವಾಗತಾರ್ಹ ಹೆಜ್ಜೆಯಾಗಿದೆ' ಎಂದು ಭಾರತದ ವಿದೇಶಾಂಗ ಸಚಿವ ಎಸ್.ಜೈಶಂಕರ್ ತಿಳಿಸಿದರು.

'ನ್ಯೂಯಾರ್ಕ್‌ನಲ್ಲಿ ಸೋಮವಾರ ಬೆಳಿಗ್ಗೆ ಕೆನಡಾ ವಿದೇಶಾಂಗ ಸಚಿವೆ ಅನಿತಾ ಆನಂದ್ ಅವರ ಜೊತೆಗಿನ ಸಭೆಯು ಯಶಸ್ವಿಯಾಗಿತ್ತು. ರಾಜತಾಂತ್ರಿಕರ ನೇಮಕಾತಿಯ ಬಳಿಕ ಮುಂದಿನ ಕ್ರಮಗಳ ಕುರಿತು ಚರ್ಚಿಸಲಾಯಿತು. ಅನಿತಾ ಅವರನ್ನು ಭಾರತಕ್ಕೆ ಭೇಟಿ ನೀಡುವುದನ್ನು ಸ್ವಾಗತಿಸುತ್ತೇನೆ' ಎಂದು ಜೈಶಂಕರ್ 'ಎಕ್ಸ್'ನಲ್ಲಿ ಬರೆದಿದ್ದಾರೆ.

ಕೆನಡಾದಲ್ಲಿ ಭಾರತದ ಮುಂದಿನ ಹೈಕಮಿಷನರ್ ಆಗಿ ದಿನೇಶ್ ಪಟ್ನಾಯಕ್ ಅವರನ್ನು ನೇಮಿಸಿ ಕಳೆದ ಆಗಸ್ಟ್‌ನಲ್ಲಿ ಆದೇಶ ಹೊರಡಿಸಲಾಗಿತ್ತು. ದಿನೇಶ್ 1990ನೇ ಬ್ಯಾಚಿನ ಐಎಫ್‌ಎಸ್ ಅಧಿಕಾರಿಯಾಗಿದ್ದಾರೆ.

ಕೆನಡಾ ಕೂಡ, ಕಳೆದ ತಿಂಗಳು ಭಾರತದಲ್ಲಿನ ತನ್ನ ಹೈಕಮಿಷನರ್ ಅವರನ್ನು ನೇಮಕ ಮಾಡಲಾಗಿದೆ.

ವಿದೇಶಿ ಸಾಲದ ಮೊತ್ತ ಏರಿಕೆ

ಮುಂಬೈ (ಪಿಟಿಐ): ಜೂನ್ ಅಂತ್ಯದ ವೇಳೆಗೆ ಭಾರತವು ವಿದೇಶಗಳಿಂದ ಪಡೆದ ಸಾಲಗಳ ಮೊತ್ತವು 747.2 ಬಿಲಿಯನ್ ಅಮೆರಿಕನ್ ಡಾಲರ್‌ಗೆ (ಅಂದಾಜು ₹66.36 ಲಕ್ಷ ಕೋಟಿ) ಏರಿಕೆ ಆಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಬಿಡುಗಡೆ ಮಾಡಿರುವ ಅಂಕಿ-ಅಂಶಗಳು ಹೇಳಿವೆ.

2025ರ ಮಾರ್ಚ್ ಅಂತ್ಯಕ್ಕೆ ಭಾರತವು ವಿವಿಧ ದೇಶಗಳಿಂದ ಪಡೆದಿದ್ದ ಸಾಲದ ಮೊತ್ತಕ್ಕೆ ಹೋಲಿಸಿದರೆ ಇದು 11.2 ಬಿಲಿಯನ್ ಡಾಲರ್‌ನಷ್ಟು (ಅಂದಾಜು ₹99 ಸಾವಿರ ಕೋಟಿ) ಹೆಚ್ಚು.

ಆದರೆ ದೇಶದ ಸಾಲವನ್ನು ದೇಶದ ಒಟ್ಟು ಜಿಡಿಪಿಯ ಗಾತ್ರದ ಜೊತೆ ಹೋಲಿಸಿದರೆ ಸಾಲದ ಪ್ರಮಾಣವು ಕಡಿಮೆ ಆಗಿರುವುದು ಕಾಣುತ್ತದೆ. ಜೂನ್ ಅಂತ್ಯಕ್ಕೆ ವಿದೇಶಿ ಸಾಲ ಮತ್ತು ಜಿಡಿಪಿ ಅನುಪಾತವು ಶೇ 18.9ಕ್ಕೆ ಇಳಿಕೆ ಆಗಿದೆ. ಇದು ಮಾರ್ಚ್‌ನಲ್ಲಿ ಶೇ 19.1ರಷ್ಟು ಇತ್ತು.

ಎಸ್‌.ಟಿ ಮೇಲಿನ ದೌರ್ಜನ್ಯ: ಮಣಿಪುರ ಅಗ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಜನಾಂಗೀಯ ಹಿಂಸಾಚಾರದಿಂದ ಬಳಲಿರುವ ಮಣಿಪುರ ರಾಜ್ಯದಲ್ಲಿ 2023ನೇ ಸಾಲಿನಲ್ಲಿ ಪರಿಶಿಷ್ಟ ಪಂಗಡದ (ಎಸ್‌.ಟಿ) ಜನರ ಮೇಲಿನ ದೌರ್ಜನ್ಯ ಪ್ರಕರಣ ಶೇ 29ರಷ್ಟು ಏರಿಕೆಯಾಗಿದ್ದು, ದೇಶದಲ್ಲಿಯೇ ಅಗ್ರಸ್ಥಾನದಲ್ಲಿದೆ. ಮಧ್ಯಪ್ರದೇಶ, ರಾಜಸ್ಥಾನ ರಾಜ್ಯಗಳು ನಂತರದ ಸ್ಥಾನ ಗಳಲ್ಲಿವೆ. 15 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಇಳಿಕೆ ದಾಖಲಾಗಿದ್ದರೆ, 10 ರಾಜ್ಯಗಳಲ್ಲಿ ಯಾವುದೇ ಪ್ರಕರಣಗಳ ವರದಿಯಾಗಿಲ್ಲ ಎಂದು ಸೋಮವಾರ ಬಿಡುಗಡೆ ಆಗಿರುವ ರಾಷ್ಟ್ರೀಯ ಅಪರಾಧ ದಾಖಲೆಗಳ ವಿಭಾಗದ (ಎನ್‌ಸಿಆರ್‌ಬಿ) 2023ರ ವರದಿ ಮಾಹಿತಿ ನೀಡಿದೆ.

ದೇಶದಲ್ಲಿ ದಾಖಲಾದ ಎಸ್‌.ಟಿಗಳ ಮೇಲಿನ ದೌರ್ಜನ್ಯ ಪ್ರಕರಣಗಳ ಅಂಕಿ ಅಂಶ

12,960 — 2023ರಲ್ಲಿ ದಾಖಲಾದ ಒಟ್ಟಾರೆ ಪ್ರಕರಣಗಳು
10,064 — 2022ರಲ್ಲಿ ದಾಖಲಾದ ಪ್ರಕರಣಗಳು
8,802 — 2021ರಲ್ಲಿ ದಾಖಲಾದ ಪ್ರಕರಣಗಳು

ನ್ಯಾಯಾಲಯಗಳಲ್ಲಿ ವಿಚಾರಣೆ ಹಂತದಲ್ಲಿರುವ ಎಸ್‌.ಟಿ ದೌರ್ಜನ್ಯ ಪ್ರಕರಣಗಳು
49,189 — 2023ರ ಅಂತ್ಯದ ವೇಳೆಗೆ ಬಾಕಿ ಇದ್ದ ಪ್ರಕರಣಗಳು
3,665 — ವಿಚಾರಣೆ ಪೂರ್ಣಗೊಂಡಿರುವ ಪ್ರಕರಣಗಳು
901 — ಶಿಕ್ಷೆ ವಿಧಿಸಲಾಗಿರುವ ಪ್ರಕರಣಗಳು

ಮಣಿಪುರದ ಅಂಕಿಅಂಶ
3,339 — 2023ರಲ್ಲಿ ದಾಖಲಾದ ಪ್ರಕರಣಗಳು (2022ರಲ್ಲಿ 1 ಪ್ರಕರಣ ದಾಖಲಾಗಿತ್ತು, 2021ರಲ್ಲಿ ಯಾವುದೇ ಪ್ರಕರಣ ದಾಖಲಾಗಿರಲಿಲ್ಲ)



27,721 — ದೇಶದಲ್ಲಿ 2023ರಲ್ಲಿ ದಾಖಲಾದ ಕೊಲೆ ಪ್ರಕರಣಗಳು (2022ನೇ ಸಾಲಿಗಿಂತ ಶೇ 2.8ರಷ್ಟು ಇಳಿಕೆ)

86,420 — ದೇಶದಲ್ಲಿ 2023ರಲ್ಲಿ ದಾಖಲಾದ ಸೈಬರ್ ಅಪರಾಧ ಪ್ರಕರಣಗಳು (2022ನೇ ಸಾಲಿಗಿಂತ ಶೇ 31.2ರಷ್ಟು ಹೆಚ್ಚು)

ಗಾಜಾಪಟ್ಟಿ: 27 ಮಂದಿ ಸಾವು

ಶಾಂತಿ ಯೋಜನೆಗೆ ಸಮ್ಮತಿ ಬಳಿಕವೂ ಇಸ್ರೇಲ್ ದಾಳಿ

ಕೈರೊ (ಎಪಿ): ಗಾಜಾಪಟ್ಟಿಯಲ್ಲಿ ಮಂಗಳವಾರ ಕನಿಷ್ಠ 27 ಮಂದಿ ಮೃತಪಟ್ಟಿದ್ದಾರೆ ಎಂದು ಸ್ಥಳೀಯ ಆಸ್ಪತ್ರೆಯ ವರದಿಗಳು ಹೇಳಿವೆ.

ಉತ್ತರ ಮತ್ತು ದಕ್ಷಿಣ ಗಾಜಾವನ್ನು ವಿಭಜಿಸುವ ಇಸ್ರೇಲ್ ನಿಯಂತ್ರಿತ ಕಾರಿಡಾರ್ ನೆಟ್‌ಜಾರಿಮ್‌ನಲ್ಲಿ ಮಾನವೀಯ ನೆರವು ಪಡೆಯಲು ಪ್ರಯತ್ನಿಸುತ್ತಿದ್ದಾಗ 17 ಪ್ಯಾಲೆಸ್ಟೀನಿಯನ್ನರು ಮೃತಪಟ್ಟರು. 33 ಮಂದಿ ಗಾಯಗೊಂಡರು ಎಂದು ಅಲ್-ಅವ್ದಾ ಆಸ್ಪತ್ರೆ ತಿಳಿಸಿದೆ.

ಇಸ್ರೇಲ್ ಸೇನೆಯು ಮುವಾಸಿ ಡೇರೆಗಳ ಮೇಲೆ ಕನಿಷ್ಠ ಎರಡು ದಾಳಿಗಳನ್ನು ನಡೆಸಿದ್ದು, ಈ ವೇಳೆ 10 ಮಂದಿ ಮೃತಪಟ್ಟಿದ್ದಾರೆ.

ಗಾಜಾದಲ್ಲಿ ಸುಮಾರು ಎರಡು ವರ್ಷಗಳಿಂದ ನಡೆಯುತ್ತಿರುವ ಸಂಘರ್ಷ ಅಂತ್ಯಗೊಳಿಸಲು

ಗಾಜಾಪಟ್ಟಿಯಲ್ಲಿ ಮಂಗಳವಾರ ಮೃತಪಟ್ಟ ವ್ಯಕ್ತಿಯ ಶವವನ್ನು ಜನರು ತಳ್ಳುಗಾಡಿಯೊಂದರಲ್ಲಿ ಕೊಂಡೊಯ್ದರು —ಎಎಫ್‌ಪಿ ಚಿತ್ರ

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಶಾಂತಿ ಯೋಜನೆ ಪ್ರಸ್ತಾಪಿಸಿರುವ ಸಂದರ್ಭದಲ್ಲಿಯೇ ಈ ಸಾವುಗಳು ಸಂಭವಿಸಿವೆ.

ಗುಂಡಿನ ದಾಳಿ ಬಗ್ಗೆ ಇಸ್ರೇಲ್ ಸೇನೆ ತಕ್ಷಣಕ್ಕೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಬಂಡವಾಳ ಮಾರುಕಟ್ಟೆ: ಶೇ 10 ಜನರಿಂದ ಹೂಡಿಕೆ

ನವದೆಹಲಿ (ಪಿಟಿಐ): ದೇಶದ ಕುಟುಂಬಗಳ ಪೈಕಿ ಶೇಕಡ 10ರಷ್ಟು ಕುಟುಂಬಗಳು ಷೇರು, ಸಾಲಪತ್ರಗಳಲ್ಲಿ ಹೂಡಿಕೆ ಮಾಡುತ್ತಿವೆ. ಆದರೆ ಶೇಕಡ 63ರಷ್ಟು ಕುಟುಂಬಗಳಿಗೆ ಷೇರು, ಸಾಲಪತ್ರಗಳ ಬಗ್ಗೆ ಮಾಹಿತಿ ಇದೆ. ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ನಡೆಸಿದ ಸಮೀಕ್ಷೆಯೊಂದು ಈ ಸಂಗತಿಯನ್ನು ಕಂಡುಕೊಂಡಿದೆ.

ಷೇರುಗಳಲ್ಲಿ, ಸಾಲಪತ್ರಗಳಲ್ಲಿ ಹಣ ತೊಡಗಿಸುವ ಕುಟುಂಬಗಳ ಪ್ರಮಾಣವು ನಗರ ಪ್ರದೇಶಗಳಲ್ಲಿ ಶೇ 15ರಷ್ಟು, ಗ್ರಾಮೀಣ ಪ್ರದೇಶಗಳಲ್ಲಿ ಶೇ 6ರಷ್ಟು ಇದೆ.

ಆದರೆ, ಹೂಡಿಕೆದಾರರ ಪೈಕಿ ಶೇ 36ರಷ್ಟು ಮಂದಿಗೆ ಮಾತ್ರ ಷೇರುಪೇಟೆ, ಸಾಲಪತ್ರ ಮಾರುಕಟ್ಟೆಯ ಬಗ್ಗೆ ಮಧ್ಯಮ ಪ್ರಮಾಣದಲ್ಲಿ ಅರಿವು ಇದೆ. ಅಂದರೆ, ಹಣಕಾಸು ಶಿಕ್ಷಣ ನೀಡುವ ಅಗತ್ಯ ಇದೆ ಎಂದು ಸಮೀಕ್ಷಾ ವರದಿಯು ಹೇಳಿದೆ.

ದೇಶದ ಕುಟುಂಬಗಳ ಪೈಕಿ ಶೇ 80ರಷ್ಟು ಕುಟುಂಬಗಳು ಹೆಚ್ಚಿನ ಪ್ರಮಾಣದ ಲಾಭ ಪಡೆಯುವುದಕ್ಕಿಂತ ಬಂಡವಾಳವನ್ನು ಉಳಿಸಿಕೊಳ್ಳಲು ಹೆಚ್ಚು ಆದ್ಯತೆ ನೀಡುತ್ತವೆ. ಕುತೂಹಲಕರ ಸಂಗತಿಯೆಂದರೆ, ಜೆನ್-ಜೀ (1997ರ ನಂತರದಲ್ಲಿ 2012ಕ್ಕೆ ಮೊದಲು ಜನಿಸಿದವರು) ವರ್ಗದವರು ಕೂಡ ಹೂಡಿಕೆಗಳಲ್ಲಿ ಹೆಚ್ಚಿನ ರಿಸ್ಕ್ ತೆಗೆದುಕೊಳ್ಳಲು ಹಿಂದೇಟು ಹಾಕುವುದು ಸಮೀಕ್ಷೆಯಿಂದ ಗೊತ್ತಾಗಿದೆ.

ಹಣಕಾಸಿನ ಉತ್ಪನ್ನಗಳು ಸಂಕೀರ್ಣವಾಗಿರುವುದು, ಸರಿಯಾದ ಮಾಹಿತಿ ಇಲ್ಲದಿರುವುದು, ವಿಶ್ವಾಸದ ಕೊರತೆ, ನಷ್ಟದ ಭೀತಿಯು ಜನ ಬಂಡವಾಳ

ಮಾರುಕಟ್ಟೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಭಾಗಿಯಾಗದೆ ಇರುವುದಕ್ಕೆ ಮುಖ್ಯ ಕಾರಣಗಳು ಎಂದು ಗುರುತಿಸಲಾಗಿದೆ.

ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ), ರಾಷ್ಟ್ರೀಯ ಷೇರುಪೇಟೆ (ಎನ್‌ಎಸ್‌ಇ), ಮುಂಬೈ ಷೇರುಪೇಟೆ (ಬಿಎಸ್‌ಇ), ಎನ್‌ಎಸ್‌ಡಿಎಲ್ ಹಾಗೂ ಸಿಡಿಎಸ್‌ಎಲ್ ಜೊತೆ ಸೇರಿ ಸೆಬಿ ಈ ಸಮೀಕ್ಷೆಯನ್ನು ದೇಶದಾದ್ಯಂತ ನಡೆಸಿದೆ.

ಸಮೀಕ್ಷೆಯ ಭಾಗವಾಗಿ 400 ನಗರಗಳಲ್ಲಿ, 1000 ಹಳ್ಳಿಗಳಲ್ಲಿ ಒಟ್ಟು 90 ಸಾವಿರಕ್ಕೂ ಹೆಚ್ಚಿನ ಕುಟುಂಬಗಳನ್ನು ಸಂಪರ್ಕಿಸಲಾಗಿತ್ತು.

ಜೆನ್-ಜೀ ವರ್ಗಕ್ಕೆ ಸೇರಿದವರು ಹೂಡಿಕೆಗಳ ಬಗ್ಗೆ, ಹಣಕಾಸು ಸಾಕ್ಷರತೆಯ ಬಗ್ಗೆ ಮಾಹಿತಿ ಪಡೆಯಲು ರೀಲ್ಸ್ ಹಾಗೂ ಕಿರು ವಿಡಿಯೊಗಳನ್ನು ಇಷ್ಟಪಡುತ್ತಿದ್ದಾರೆ. ಆದರೆ ತುಸು ಹಳಬರು ಹೆಚ್ಚು ಆಳವಾದ ಮಾಹಿತಿ ಒದಗಿಸುವ ಲೇಖನ, ಪಾಡ್‌ಕಾಸ್ಟ್ ಅಥವಾ ಕಾರ್ಯಾಗಾರಗಳನ್ನು ಹೆಚ್ಚು ಇಷ್ಟಪಡುತ್ತಾರೆ.

ಜನರು ಹೂಡಿಕೆಯ ಬಗ್ಗೆ ಮಾಹಿತಿಯನ್ನು ಪ್ರಾದೇಶಿಕ ಭಾಷೆಗಳಲ್ಲಿ ಪಡೆಯಲು ಬಯಸುತ್ತಿದ್ದಾರೆ ಎಂದು ಕೂಡ ಸಮೀಕ್ಷೆಯು ಹೇಳಿದೆ.

ಪೀಠೋಪಕರಣ, ಅಡುಗೆಮನೆ ಉಪಕರಣಗಳ ಮೇಲೆ ಶೇ 25 ಸುಂಕ: ಟ್ರಂಪ್ ಆದೇಶ

ದಿಮ್ಮಿಗಳ ಮೇಲೆ ಶೇ 10ರಷ್ಟು ಸುಂಕ

ವಾಷಿಂಗ್ಟನ್ (ರಾಯಿಟರ್ಸ್): ಅಮೆರಿಕ ಆಮದು ಮಾಡಿಕೊಳ್ಳುವ ಮರ ಮತ್ತು ಮರದ ದಿಮ್ಮಿಗಳ ಮೇಲೆ ಶೇ 10ರಷ್ಟು, ಅಡುಗೆ ಮನೆ ಹಾಗೂ ಸ್ನಾನಗೃಹದ ಉಪಕರಣಗಳು, ಸೋಫಾಸೆಟ್ ಸೇರಿದಂತೆ ಪೀಠೋಪಕರಣಗಳ ಮೇಲೆ ಶೇ 25ರಷ್ಟು ಸುಂಕ ವಿಧಿಸುವ ಆದೇಶಕ್ಕೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೋಮವಾರ ಸಹಿಹಾಕಿದ್ದಾರೆ.

ಈ ನೂತನ ಸುಂಕಗಳು ಅಕ್ಟೋಬರ್ 14ರಿಂದ ಜಾರಿಗೆ ಬರಲಿವೆ. ಪೇಟೆಂಟ್ ಪಡೆದ ಔಷಧ ಮತ್ತು ಭಾರಿ ಟ್ರಕ್‌ಗಳ ಆಮದು ಮೇಲೆ ಹೊಸ ಸುಂಕಗಳನ್ನು ವಿಧಿಸಿ ಕಳೆದ ವಾರ ಆದೇಶಿಸಲಾಗಿತ್ತು. ಈ ಸುಂಕಗಳು ಅಕ್ಟೋಬರ್ 1ರಿಂದಲೇ ಜಾರಿಗೆ ಬರಲಿವೆ.

ಮುಖ್ಯಾಂಶಗಳು
- ಔಷಧಗಳ ಮೇಲಿನ ಸುಂಕ ಅ.1ರಿಂದ ಜಾರಿ
- ಪೀಠೋಪಕರಣ ಗಳ ಮೇಲಿನ ಹೊಸ ಸುಂಕ ಅ.14ರಿಂದ ಅನ್ವಯ
- ಮರದ ಉತ್ಪನ್ನಗಳ ಆಮದಿನಿಂದ ಆರ್ಥಿಕತೆ ದುರ್ಬಲ: ಟ್ರಂಪ್

ಡೊನಾಲ್ಡ್ ಟ್ರಂಪ್

ಅಮೆರಿಕವು ವಿವಿಧ ದೇಶಗಳಿಂದ ಆಮದು ಮಾಡಿಕೊಳ್ಳುವ ಸರಕುಗಳಿಗೆ ಸಂಬಂಧಿಸಿ ಜನವರಿ 1ರ ಒಳಗಾಗಿ ಒಪ್ಪಂದ ಮಾಡಿಕೊಳ್ಳಬೇಕು. ತಪ್ಪಿದಲ್ಲಿ, ಸೋಫಾ ಸೇರಿ ವಿವಿಧ ಪೀಠೋಪಕರಣಗಳ ಮೇಲಿನ ಸುಂಕವು ಶೇ 30ಕ್ಕೆ ಹೆಚ್ಚಿಸಲಾಗುವುದು ಹಾಗೂ ಅಡುಗೆ ಮನೆ ಉಪಕರಣಗಳ ಮೇಲಿನ ಸುಂಕವನ್ನು ಶೇ 50ಕ್ಕೆ ಹೆಚ್ಚಿಸಲಾಗುವುದು ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಮರದ ಉತ್ಪನ್ನಗಳ ಆಮದು ಅಮೆರಿಕದ ಆರ್ಥಿಕತೆಯನ್ನು ದುರ್ಬಲಗೊಳಿಸುತ್ತಿದೆ. ಅಲ್ಲದೇ, ಈ ಉತ್ಪನ್ನಗಳ ಆಮದು ರಾಷ್ಟ್ರೀಯ ಭದ್ರತೆಗೆ ಅಪಾಯ ಒಡ್ಡಲಿದೆ ಎಂದು ಹೇಳುವ ಮೂಲಕ ಸುಂಕ ಹೆಚ್ಚಳವನ್ನು ಟ್ರಂಪ್ ಸಮರ್ಥಿಸಿಕೊಂಡಿದ್ದಾರೆ.

ಸೂರ್ಯೋದಯ: 6:09 ಸೂರ್ಯಾಸ್ತ : 6:11 | ಚಂದ್ರೋದಯ: ಮ. 1:00 | ಚಂದ್ರಾಸ್ತ: ರಾ. 12:00 | ಮಂಗಳವಾರದ ಉಷ್ಣಾಂಶ : ಗರಿಷ್ಠ 29° ಕನಿಷ್ಠ 19°

ಬುಧವಾರದ ಉಷ್ಣಾಂಶ 29° ಗರಿಷ್ಠ 20° ಕನಿಷ್ಠ | ಗುರುವಾರ 28° : 20° | ಶುಕ್ರವಾರ 28° : 20° | ಶನಿವಾರ 28° : 20°

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆಯಾಗುವ ಸಾಧ್ಯತೆಯಿದೆ.

ಕಲಾಸಿಪಾಳ್ಯಕ್ಕೆ ಡಿವಿಜಿ, ಜಯನಗರಕ್ಕೆ ಅಬ್ದುಲ್ ಕಲಾಂ

ವಾರ್ಡ್ ಹೆಸರಿನಲ್ಲಿ ಸುಭಾಷ್ ಚಂದ್ರ ಬೋಸ್, ಮಂಗಲ್ ಪಾಂಡೆ, ಕುವೆಂಪು, ಪುನೀತ್, ಅಬ್ದುಲ್ ಕಲಾಂ ಆಜಾದ್, ಕೃಷ್ಣದೇವರಾಯ, ವಿವೇಕಾನಂದ, ಅನಿಬೆಸೆಂಟ್

● ಆರ್. ಮಂಜುನಾಥ್

ಬೆಂಗಳೂರು: ಇತಿಹಾಸ ಪ್ರಸಿದ್ಧ ಮಹಾರಾಜರು, ಸ್ವಾತಂತ್ರ್ಯ ಹೋರಾಟಗಾರರು, ಸಾಹಿತಿಗಳು, ವಿಜ್ಞಾನಿಗಳು, ಸಾಮಾಜಿಕ ಹೋರಾಟಗಾರರು, ಚಿತ್ರನಟರ ಹೆಸರನ್ನು ಐದು ನಗರ ಪಾಲಿಕೆಗಳ ವಿವಿಧ ವಾರ್ಡ್‌ಗಳಿಗೆ ಇಡಲಾಗಿದೆ.

ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಕಲಾಸಿಪಾಳ್ಯದ ಪ್ರದೇಶಗಳನ್ನು ಒಳಗೊಂಡಿರುವ ವಾರ್ಡ್‌ಗೆ ಸಾಹಿತಿ ಡಿ.ವಿ. ಗುಂಡಪ್ಪ ಅವರ ಹೆಸರಿಡಲಾಗಿದೆ. ದಕ್ಷಿಣ ನಗರ ಪಾಲಿಕೆಯ ಜಯನಗರ ಟಿ ಬ್ಲಾಕ್ ಪ್ರದೇಶಗಳ ವಾರ್ಡ್‌ಗೆ ಮಾಜಿ ರಾಷ್ಟ್ರಪತಿ ಎ.ಪಿ.ಜೆ. ಅಬ್ದುಲ್ ಕಲಾಂ, ಶಿಕ್ಷಣ ಸಚಿವರಾಗಿದ್ದ ಅಬ್ದುಲ್ ಕಲಾಂ ಆಜಾದ್ ಅವರ ಹೆಸರನ್ನು ಕುಮಾರಸ್ವಾಮಿ ಲೇಔಟ್ 2ನೇ ಹಂತದ ಪ್ರದೇಶಗಳನ್ನು ಒಳಗೊಂಡಿರುವ ವಾರ್ಡ್‌ಗೆ ಇಡಲಾಗಿದೆ.

ವಿಶೇಷ ವ್ಯಕ್ತಿಗಳು ಹಾಗೂ ಸಾಧಕರ ಹೆಸರು ಪಶ್ಚಿಮ ನಗರ ಪಾಲಿಕೆಯ ವಾರ್ಡ್‌ಗಳಲ್ಲಿ ಹೆಚ್ಚಾಗಿದೆ. ದಕ್ಷಿಣ ನಗರ ಪಾಲಿಕೆ ಈ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದ್ದರೆ, ಕೇಂದ್ರ, ಉತ್ತರ, ಪೂರ್ವ ನಗರ ಪಾಲಿಕೆಗಳು ನಂತರದ ಸ್ಥಾನದಲ್ಲಿವೆ.

ಪಶ್ಚಿಮ ನಗರ ಪಾಲಿಕೆಯಲ್ಲಿ ಕಾಮಾಕ್ಷಿ ಪಾಳ್ಯ ಪ್ರದೇಶ, ಕೆಂಪಾಪುರ ಅಗ್ರಹಾರ, ಮಾಗಡಿ ರಸ್ತೆ ಕೆಎಚ್‌ಬಿ ಕಾಲೊನಿ ಪ್ರದೇಶಗಳನ್ನು ಒಳಗೊಂಡಿರುವ ವಾರ್ಡ್‌ಗಳಿಗೆ ಕ್ರಮವಾಗಿ ಸ್ವಾತಂತ್ರ್ಯ ಹೋರಾಟಗಾರರಾದ 'ಮಂಗಲ್ ಪಾಂಡೆ', 'ಸಂಗೊಳ್ಳಿ ರಾಯಣ್ಣ', 'ಝಾನ್ಸಿ ರಾಣಿ' ಎಂದು ಹೆಸರಿಡಲಾಗಿದೆ.

ಶಂಕರನಗರ ವ್ಯಾಪ್ತಿಯ ವಾರ್ಡ್‌ಗೆ ಮೈಸೂರಿನ ಮಹಾರಾಜರಾದ 'ನಾಲ್ವಡಿ ಕೃಷ್ಣರಾಜ ಒಡೆಯರ್', ಬಾಪೂಜಿನಗರ ಪ್ರದೇಶದ ವಾರ್ಡ್‌ಗೆ ವಿಜಯನಗರದ ಅರಸ 'ಕೃಷ್ಣದೇವರಾಯ', ಕಂಠೀರವ ಸ್ಟುಡಿಯೊ ವ್ಯಾಪ್ತಿಯ ವಾರ್ಡ್‌ಗೆ ನಟ 'ಡಾ. ಪುನೀತ್ ರಾಜ್‌ಕುಮಾರ್':, ದಾಸರಹಳ್ಳಿ–ರಾಜಗೋಪಾಲ ನಗರ ವ್ಯಾಪ್ತಿಯ ವಾರ್ಡ್‌ಗೆ ರಾಜಕಾರಣಿ ಶಾಂತವೇರಿ ಗೋಪಾಲಗೌಡ, ಪೀಣ್ಯ ಅಂದ್ರಹಳ್ಳಿ ವ್ಯಾಪ್ತಿಯ ವಾರ್ಡ್‌ಗೆ 'ನಾಡಪ್ರಭು ಕೆಂಪೇಗೌಡ ನಗರ', ನಂದಿನಿ ಲೇಔಟ್ ಪ್ರದೇಶದ ವ್ಯಾಪ್ತಿಯ ವಾರ್ಡ್‌ಗೆ 'ಕಿತ್ತೂರು ರಾಣಿ ಚನ್ನಮ್ಮ' ಎಂದು ಹೆಸರಿಸಲಾಗಿದೆ.

ಲಗ್ಗೆರೆ ಪ್ರದೇಶದ ವಾರ್ಡ್‌ಗೆ 'ಫ್ರೀಡಂ ಫೈಟರ್ ವಾರ್ಡ್' ಎಂದು ಹೆಸರಿಡಲಾಗಿದ್ದರೆ, ರಾಜಾಜಿನಗರ 4ನೇ ಎಂ. ಬ್ಲಾಕ್ ಪ್ರದೇಶದ ವಾರ್ಡ್‌ಗೆ ಜ್ಞಾನಪೀಠ ಪುರಸ್ಕೃತ ದ.ರಾ. ಬೇಂದ್ರೆ, ರಾಜಾಜಿನಗರ 6ನೇ ಬ್ಲಾಕ್‌ಗೆ 'ಡಾ. ರಾಜ್‌ಕುಮಾರ್' ಹಾಗೂ ಹೊಸಕೆರೆಹಳ್ಳಿ ಬಡಾವಣೆ, ಬನಶಂಕರಿ 3ನೇ ಹಂತದ ಪ್ರದೇಶಗಳ ವಾರ್ಡ್‌ಗೆ 'ಸ್ವಾಮಿ ವಿವೇಕಾನಂದ' ಎಂದು ಹೆಸರಿಡಲಾಗಿದೆ.

ವಾರ್ಡ್‌ಗಳಿಗೆ ಪ್ರಮುಖರ ಹೆಸರು

ದಕ್ಷಿಣ ನಗರ ಪಾಲಿಕೆಯಲ್ಲಿ ವಾರ್ಡ್‌ಗಳಲ್ಲಿ ಚಿಕ್ಕಲಸಂದ್ರ ಪ್ರದೇಶಕ್ಕೆ 'ಸಾರ್ವ-ಭೌಮನಗರ', ಕೋರಮಂಗಲ 6ನೇ ಬ್ಲಾಕ್ ಸಾಮಾಜಿಕ ಹೋರಾಟಗಾರರಾದ 'ಅನಿಬೆಸೆಂಟ್', ಬಿಟಿಎಂ ಲೇಔಟ್ 1ನೇ ಹಂತಕ್ಕೆ 'ವಿಶ್ವಮಾನವ ಕುವೆಂಪು' ಬೊಮ್ಮನಹಳ್ಳಿಯ ಕೆ.ಆರ್. ಲೇಔಟ್‌ಗೆ 'ಕೆಂಗಲ್ ಹನುಮಂತಯ್ಯ' ಎಂದು ಹೆಸರಿಡಲಾಗಿದೆ.

ಕೇಂದ್ರ ನಗರ ಪಾಲಿಕೆಯ ವ್ಯಾಪ್ತಿಯ ವಾರ್ಡ್‌ಗಳಿಗೆ ಇಟ್ಟಗೆ ಆಂಜನಪ್ಪ ಲೇನ್, ಚೌಡಪ್ಪ ರಸ್ತೆಗೆ 'ಐಡಿಪಿ ಸಾಲಪ್ಪ', ಮಂಜುನಾಥ ನಗರ ಬಿ. ಬ್ಲಾಕ್, ಗಾಂಧಿನಗರ ಪ್ರದೇಶಕ್ಕೆ 'ಸುಭಾಶ್ಚಂದ್ರ ಬೋಸ್' ಎಂದು ನಾಮಕರಣ ಮಾಡಲಾಗಿದೆ.

ಉತ್ತರ ನಗರ ಪಾಲಿಕೆಯಲ್ಲಿ ಹಿದಾಯತ್ ನಗರಕ್ಕೆ 'ಸಮಾಧಾನ ನಗರ', ಎಚ್‌ಬಿಆರ್ ಲೇಔಟ್ 5ನೇ ಬ್ಲಾಕ್‌ಗೆ ಶಿಕ್ಷಣ ತಜ್ಞೆ 'ಅರುಣಾ ಆಸಿಫ್ ಅಲಿ', ದೇವರಜೀವನಹಳ್ಳಿಗೆ 'ದೊಡ್ಡಣ್ಣನಗರ' ಎಂದು ಹೆಸರಿಸಲಾಗಿದೆ.

ಪೂರ್ವ ನಗರ ಪಾಲಿಕೆಯಲ್ಲಿ ಕೊಟ್ಟೂರು–ದರ್ಗಾ ಮೊಹಲ್ಲಾಗೆ ಕವಿ 'ಕೆ.ಎಸ್. ನಿಸಾರ್ ಅಹಮದ್', ಕಗ್ಗದಾಸಪುರ ಮುಖ್ಯರಸ್ತೆಯಲ್ಲಿರುವ ವಿಜ್ಞಾನ ನಗರಕ್ಕೆ 'ತಲಕಾವೇರಿ' ಎಂದು ನಾಮಕರಣ ಮಾಡಲಾಗಿದೆ.

63 ವಾರ್ಡ್‌ಗಳು

ವಾರ್ಡ್: ಪ್ರಮುಖ ಪ್ರದೇಶಗಳು

1. **ರಾಮಸ್ವಾಮಿ ಪಾಳ್ಯ:** ಮಾರಪ್ಪ ಗಾರ್ಡನ್, ಆಂಜನಪ್ಪ ಗಾರ್ಡನ್, ಅಂಚಪ್ಪ ಗಾರ್ಡನ್, ಮುನಿರೆಡ್ಡಿಪಾಳ್ಯ, ಜೆ.ಸಿ. ನಗರ
2. **ಜಯಮಹಲ್:** ಚಿನ್ನಪ್ಪ ಗಾರ್ಡನ್, ವಿಲಿಯಮ್ಸ್ ಟೌನ್, ಜಯಮಹಲ್–ಎಕ್ಸ್‌ಟೆನ್ಷನ್, ಬೆನ್ಸನ್‌ಟೌನ್
3. **ಶಿವಾಜಿನಗರ:** ಕಮರ್ಷಿಯಲ್ ಸ್ಟ್ರೀಟ್ ಮಾರ್ಕೆಟ್, ಶಿವಾಜಿನಗರ, ಟಾಸ್ಕರ್ ಟೌನ್.
4. **ಭಾರತಿನಗರ:** ನೆಹರೂಪುರಂ
5. **ಕೆ.ಕಾಮರಾಜ್:** ಹನುಮಂತಪ್ಪ ಬಡಾವಣೆ, ಕೋದಂಡರಾಂ ಲೇಔಟ್, ಶಿವನ್‌ಚೆಟ್ಟಿ ಉದ್ಯಾನ, ಯಲ್ಲಪ್ಪ ಚೆಟ್ಟಿ ಲೇಔಟ್
6. **ಕಾಕ್ಸ್‌ಟೌನ್:** ದೊಡ್ಡಿಗುಂಟ, ಕಾಕ್ಸ್‌ಟೌನ್
7. ಹಳೆ ಬೈಯಪ್ಪನಹಳ್ಳಿ: ಕಥಲೀಪಾಳ್ಯ, ರಾಮಸ್ವಾಮಿ ಲೇಔಟ್, ಹಳೆ ಬೈಯಪ್ಪನಹಳ್ಳಿ
8. **ಕೃಷ್ಣಯ್ಯನ ಪಾಳ್ಯ:** ಹೊಸ ಬೈಯಪ್ಪನಹಳ್ಳಿ, ಕೃಷ್ಣಯ್ಯನ ಪಾಳ್ಯ, ಆದಾಯ ತೆರಿಗೆ ಬಡಾವಣೆ, ಸದಾನಂದನಗರ, ಬೈಯಪ್ಪನಹಳ್ಳಿ, ಬೆನ್ನಿಗಾನಹಳ್ಳಿ
9. **ಕಸ್ತೂರಿನಗರ:** ಕಸ್ತೂರಿನಗರ, ಬಿ. ಚನ್ನಸಂದ್ರ, ಚಿಕ್ಕ ಬಾಣಸವಾಡಿ, ಕಸ್ತೂರಿನಗರ 2ನೇ ಹಂತ, ಡಾಕ್ಟರ್ಸ್ ಲೇಔಟ್
10. **ನಾಗವಾರಪಾಳ್ಯ:** ನಾಗವಾರಪಾಳ್ಯ, ಪುಟ್ಟಣ್ಣ ಗಾರ್ಡನ್, ರಾಹತ್ ಬಾತ್, ಸುದ್ದ-ಗುಂಟೆಪಾಳ್ಯ, ಸಿ.ವಿ. ರಾಮನ್ ನಗರ
11. **ಇಂದಿರಾನಗರ:** ಡಿಫೆನ್ಸ್ ಕಾಲೊನಿ, ಭಿನ್ನಮಂಗಲ, ಎಚ್‌ಎಎಲ್ 3ನೇ ಹಂತ, ಕದಿರೇನಹಳ್ಳಿ, ಹಳೆ ತಿಪ್ಪಸಂದ್ರ, ಬಿ.ಎಂ. ಕಾವಲ್, ಮೈಕೆಲ್ ಪಾಳ್ಯ, ಹಳೆ ಭಿನ್ನಮಂಗಲ, ಗೀತಾಂಜಲಿ ಲೇಔಟ್, ಹಟ್ಟಿಂಗ್ ಕಾಲೊನಿ
12. **ಹೊಯ್ಸಳ ನಗರ:** ಲಕ್ಷ್ಮಿಪುರ, ಜಯರಾಜ್‌ನಗರ, ಹೊಯ್ಸಳನಗರ, ಕಲ್ಲಹಳ್ಳಿ, ಇಂದಿರಾನಗರ 2ನೇ ಹಂತ, ಎಲ್‌ಬಿಎಸ್ ನಗರ, ಇಂದಿರಾನಗರ 1–2ನೇ ಹಂತ, ಕಾರ್ಪೊರೇಷನ್ ಕಾಲೊನಿ, ಸಿಟಿ ನೆಸ್ಟ್
13. **ಹಲಸೂರು:** ಸೋಮೇಶ್ವರಪುರ, ಗುಪ್ತಾ ಲೇಔಟ್, ಹಲಸೂರು, ಎಂ.ವಿ. ಗಾರ್ಡನ್, ದೊಡ್ಡಕಟ್ಟಪ್ಪ
14. **ರಿಚ್ಮಂಡ್ ಟೌನ್:** ಶಾಂತಲಾನಗರ, ಡಿಸೋಜಾ ಲೇಔಟ್, ಕಾರ್ಪೊರೇಷನ್ ಕ್ವಾರ್ಟರ್ಸ್, ಅರಬ್ ಲೈನ್ಸ್, ಕ್ರೇಗ್ ಪಾರ್ಕ್ ಲೇಔಟ್, ಯಲ್ಲಗೊಂಡ-ನಪಾಳ್ಯ, ವಿಕ್ಟೋರಿಯಾ ಲೇಔಟ್, ಜೇವಿಯರ್ ಲೇಔಟ್, ಆಫೀಸರ್ಸ್ ಕಾಲೊನಿ, ಅಶೋಕನಗರ, ಆಂಗ್ಲೋ–ಇಂಡಿಯನ್ ವಸತಿ ಗೃಹಗಳು
15. **ವಸಂತನಗರ:** ವಸಂತನಗರ, ಚಕ್ರವರ್ತಿ ಲೇಔಟ್, ಕಾವೇರಿಯಪ್ಪ ಬಡಾವಣೆ, ಆರ್‌ವಿ ಲೇಔಟ್, ಅಬ್‌ಶಾಟ್ ಲೇಔಟ್
16. **ಸಂಪಂಗಿರಾಮನಗರ:** ಫೇರ್ ಫೀಲ್ಡ್ ಲೇಔಟ್, ಶ್ರೀಕಂಠನ್ ಲೇಔಟ್, ಕುಮಾರ ಪಾರ್ಕ್ ಪೂರ್ವ, ಹೈಗ್ರೌಂಡ್ಸ್, ಕಬ್ಬನ್‌ಪೇಟೆ, ಸಂಪಂಗಿರಾಮನಗರ, ಮಾಧವ ನಗರ
17. **ಶೇಷಾದ್ರಿಪುರ:** ಬಸಪ್ಪ ಗಾರ್ಡನ್, ಶೇಷಾದ್ರಿಪುರ
18. **ದತ್ತಾತ್ರೇಯ:** ವಲ್ಲುವರ್ ಪುರ, ಸಂಗೀತ ಅಪಾರ್ಟ್‌ಮೆಂಟ್
19. **ಸ್ವತಂತ್ರಪಾಳ್ಯ:** ಪ್ಲಾಟ್‌ಫಾರ್ಮ್ ರಸ್ತೆ, ಎನ್.ಕೆ. ರಸ್ತೆ, ಗಾಂಧಿನಗರ 5, 7ನೇ ಮುಖ್ಯರಸ್ತೆ, 2, 6, 8ನೇ ಅಡ್ಡರಸ್ತೆ
20. **ಓಕಳಿಪುರ:** ಓಕಳಿಪುರ, ರಾಮಚಂದ್ರಪುರ, ಬ್ರಹ್ಮಪುರ
21. **ಗೋಪಾಲಪುರ:** ರೈಲ್ವೆ ಕಾಲೊನಿ
22. **ಕಾಟನ್‌ಪೇಟೆ:** ರಾಣಾಸಿಂಗ್ ಪೇಟೆ, ಸುಲ್ತಾನ್ ಪೇಟೆ
23. **ನೆಹರೂನಗರ:** ಕುಮಾರಪಾರ್ಕ್ ವೆಸ್ಟ್, ನೆಹರೂನಗರ, ಗಾಂಧಿನಗರ
24. **ಚಿಕ್ಕಪೇಟೆ:** ಚಿಕ್ಕಪೇಟೆ, ಬಳೇಪೇಟೆ, ಸೌರಾಷ್ಟ್ರ ಪೇಟೆ, ಮಾಮೂಲ್‌ಪೇಟೆ, ಹಳೆ ತರಗುಪೇಟೆ
25. **ಧರ್ಮರಾಯಸ್ವಾಮಿ ದೇವಸ್ಥಾನ:** ಗಾಣಿಗರಪೇಟೆ
26. **ಶಾಂತಿನಗರ:** ಲ್ಯಾಂಗ್‌ಫೋರ್ಡ್ ಗಾರ್ಡನ್ಸ್, ಪುದುಪಡಚೇರಿ, ರಿಚ್ಮಂಡ್ ಟೌನ್, ಬೆತೆಲ್ ಲೇಔಟ್, ಲ್ಯಾಂಗ್‌ಫೋರ್ಡ್ ಟೌನ್, ಅಕ್ಕಿತಿಮ್ಮನಹಳ್ಳಿ
27. **ವಿನಾಯಕನಗರ:** ಆನೆಪಾಳ್ಯ, ಗಜೇಂದ್ರನಗರ, ಜಿ.ಕೆ. ಪುರ
28. **ಆಸ್ಟಿನ್ ಟೌನ್:** ಆಸ್ಟಿನ್ ಟೌನ್– ಬಿಡಿಎ ಲೇಔಟ್
29. **ವನ್ನಾರ್ ಪೇಟೆ:** ವನ್ನಾರ್‌ಪೇಟೆ, ವಿವೇಕನಗರ, ರುದ್ರಪ್ಪ ಗಾರ್ಡನ್
30. **ಅಗರ:** ಜೋಗುಪಾಳ್ಯ, ಕೇಂಬ್ರಿಡ್ಜ್ ಲೇಔಟ್, ಸರಸ್ವತಿಪುರ, ಗೌತಮಪುರ, ಕೇಶವರಾಜ್ ಲೇಔಟ್
31. **ಜೋಗುಪಾಳ್ಯ:** ಮೋಟಮ್ಮನಪಾಳ್ಯ, ಇಸ್ರೊ ನ್ಯೂಲ್ಯಾಂಡ್ ಹೌಸಿಂಗ್ ಕಾಲೊನಿ, ಇಂದಿರಾನಗರ, ಈಶ್ವರ ಲೇಔಟ್, ದೂಪನಹಳ್ಳಿ, ಅಪ್ಪರೆಡ್ಡಿಪಾಳ್ಯ, ಸೋಮೇಶ್ವರಪುರ, ಇಂದಿರಾನಗರ 3ನೇ ಹಂತ, ಇಸ್ರೊ ಕಾಲೊನಿ
32. **ದೊಮ್ಮಲೂರು:** ದೊಮ್ಮಲೂರು 1–2ನೇ ಹಂತ, ಬಿಡಿಎ ಲೇಔಟ್, ಅಮರಜ್ಯೋತಿ ಲೇಔಟ್, ಕೃಷ್ಣಾರೆಡ್ಡಿ ಕಾಲೊನಿ, ಸಿದ್ಧಾರ್ಥನಗರ, ಗೌತಮ ಕಾಲೊನಿ, ದೊಮ್ಮಲೂರು–ಗ್ರಾಮ
33. **ಕೋನೇನ ಅಗ್ರಹಾರ:** ತಿಮ್ಮರೆಡ್ಡಿ ಕಾಲೊನಿ, ಮುರುಗೇಶ್ ಪಾಳ್ಯ, ಕೋನೇನಅಗ್ರಹಾರ, ವಿನಾಯಕನಗರ, ಮಂಜುನಾಥ ನಗರ, ರುಸ್ತುಂ ಬಾಗ್, ಕಾವೇರಿನಗರ, ಕೆ.ಆರ್. ಗಾರ್ಡನ್, ಶ್ರೀರಾಮ್ ನಗರ, ಎನ್‌ಆರ್ ಲೇಔಟ್, ಎಸ್‌ಆರ್ ಲೇಔಟ್, ಏರ್ ವ್ಯೂ ಕಾಲೊನಿ, ಅಣ್ಣನಿಯಪ್ಪ ಲೇಔಟ್, ಮುನಿಯಪ್ಪ ಬಡಾವಣೆ, ಎಂಇಎಸ್ ಕಾಲೊನಿ, ಎಸ್‌ಆರ್ ಲೇಔಟ್
34. **ಕೋಡಿಹಳ್ಳಿ:** ಕಾರ್ಪೊರೇಷನ್ ಕಾಲೊನಿ, ಎಚ್‌ಎಎಲ್ 2ನೇ ಹಂತ, ಕೋಡಿಹಳ್ಳಿ, ಬಾಬಾಸಾಹೇಬ್ ಕಾಲೊನಿ
35. **ಜೀವನಬಿಮಾ ನಗರ:** ಆನಂದಪುರ, ಸುಧಾಮನಗರ, ಶಿವಲಿಂಗಯ್ಯ ಕಾಲೊನಿ, ಹನುಮಾನ್ ನಗರ, ಎಲ್‌ಐಸಿ ಕಾಲೊನಿ, ಜೀವನಬಿಮಾ ನಗರ, ಎನ್‌ಆರ್ ಕಾಲೊನಿ, ಬಿಡಿಎ ಲೇಔಟ್
36. **ನ್ಯೂ ತಿಪ್ಪಸಂದ್ರ:** ಕೃಷ್ಣಪ್ಪ ಗಾರ್ಡನ್, ಭೂಮಿರೆಡ್ಡಿ ಕಾಲೊನಿ, ನ್ಯೂ ತಿಪ್ಪಸಂದ್ರ, ತಿಪ್ಪಸಂದ್ರ, ಪುಟ್ಟಪ್ಪ ಬಡಾವಣೆ
37. **ಕಗ್ಗದಾಸಪುರ:** ಬೈರಸಂದ್ರ
38. **ಜಿ.ಎಂ. ಪಾಳ್ಯ:** ಮಲ್ಲೇಶಪಾಳ್ಯ, ಮಾರುತಿನಗರ, ಜಿ.ಎಂ. ಪಾಳ್ಯ
39. **ಅಂಬೇಡ್ಕರ್ ನಗರ:** ಎಲ್.ಆರ್. ನಗರ 1–2ನೇ ಹಂತ, ಅಂಬೇಡ್ಕರ್ ನಗರ
40. **ನೀಲಸಂದ್ರ:** ನೀಲಸಂದ್ರ
41. **ಹೊಂಬೇಗೌಡ ನಗರ:** ಶಾಂತಿನಗರ, ವಿಲ್ಸನ್ ಗಾರ್ಡನ್, ವಿನಾಯಕ ನಗರ
42. **ಸಿಲ್ವರ್ ಜುಬಿಲಿ ಪಾರ್ಕ್:** ಸುಧಾಮನಗರ, ರಾಜಾರಾಮ್ ಮೋಹನ್‌ರಾಯ್ ಎಕ್ಸ್‌ಟೆನ್ಷನ್
43. **ಡಿ.ವಿ. ಗುಂಡಪ್ಪ:** ಕಲಾಸಿಪಾಳ್ಯ
44. **ಕೆ.ಆರ್. ಮಾರುಕಟ್ಟೆ:** ಜಾಲಿ ಮೊಹಲ್ಲಾ, ಒಟಿ ರಸ್ತೆ, ಬಾಬಾ ಲೈನ್, ಎಸ್‌ಕೆಆರ್ ಮಾರ್ಕೆಟ್, ಸಿಟಿ ಮಾರ್ಕೆಟ್, ಜೈಶ್ರೀ ಮಾರ್ಕೆಟ್
45. **ಚೆಲುವಾದಿ ಪಾಳ್ಯ:** ಕಾಟನ್‌ಪೇಟೆ
46. **ಐಡಿಪಿ ಸಾಲಪ್ಪ:** ಇಟ್ಟಗೆ ಆಂಜನಪ್ಪ ಲೇನ್, ಚೌಡಪ್ಪ ರಸ್ತೆ, ಟ್ಯಾಂಕ್‌ಬಂಡ್ ರಸ್ತೆ
47. **ಬಿನ್ನಿಪೇಟೆ:** ನಾಗಮ್ಮ ನಗರ
48. **ಸುಭಾಶ್ಚಂದ್ರ ಬೋಸ್:** ಮಂಜುನಾಥ ನಗರ ಬಿ ಬ್ಲಾಕ್, ಗಾಂಧಿನಗರ
49. **ರಾಯಪುರ:** ಜಗಜೀವನರಾಂ ನಗರ, ಕೆ.ಎಚ್. ರಂಗನಾಥ್ ಕಾಲೊನಿ
50. **ಪಾದರಾಯನಪುರ:** ಗೋರಿಪಾಳ್ಯ
51. **ಹಳೆ ಗುಡ್ಡದಹಳ್ಳಿ:** ಹಿಂದೂ ಸ್ಮಶಾನದ ಕಾಂಪೌಂಡ್, ಹಳೆ ಗುಡ್ಡದಹಳ್ಳಿ ರಸ್ತೆ, ದೇವರಾಜ್ ಅರಸ್ ಮುಖ್ಯರಸ್ತೆ, ಚಾಮರಾಜಪೇಟೆ ಪೈಪ್‌ಲೈನ್ ರಸ್ತೆ
52. **ಜೆಜೆಆರ್ ನಗರ:** ಹೊಸಹಳ್ಳಿ ಮುಖ್ಯರಸ್ತೆ, ಮುಸ್ಲಿಂ ಸಮಾಧಿ
53. **ಕಸ್ತೂರಬಾ ನಗರ:** ಕಸ್ತೂರಿಬಾಯಿ ನಗರ, ವಾಲ್ಮೀಕಿ ನಗರ, ಭಕ್ತ ಮಾರ್ಕಂಡೇಯ ಲೇಔಟ್
54. **ಆಜಾದ್ ನಗರ:** ಆದರ್ಶನಗರ, ಕಣಿಯರ ಕಾಲೊನಿ, ವಾಲ್ಮೀಕಿ ನಗರ
55. **ಚಾಮರಾಜಪೇಟೆ:** ಚಾಮರಾಜಪೇಟೆ
56. **ದೇವರಾಜ್ ಅರಸು:** ರಾಜಗೋಪಾಲನಗರ, ಆರ್.ಕೆ. ಮಠ ಲೇಔಟ್, ಮಹಂತರ ಲೇಔಟ್
57. **ಸುಂಕೇನಹಳ್ಳಿ:** ಬಸವನಗುಡಿ, ಗಾಂಧಿಬಜಾರ್, ಶಂಕರಪುರ, ಬಸಪ್ಪ ಬಡಾವಣೆ
58. **ವಿವಿ ಪುರ:** ಲಾಲ್‌ಬಾಗ್ ಕೋಟೆ ರಸ್ತೆ, ವಿವಿ ಪುರ
59. **ಅಶೋಕ ಪಿಲ್ಲರ್:** ಮಾವಳ್ಳಿ, ಕನಕನಪಾಳ್ಯ, ಜಯನಗರ 2ನೇ ಬ್ಲಾಕ್
60. **ಕನಕನಪಾಳ್ಯ:** ಜಯನಗರ 1ನೇ ಬ್ಲಾಕ್, ಸೋಮೇಶ್ವರನಗರ
61. **ವೆಂಕಟರೆಡ್ಡಿ ನಗರ:** ಸಿದ್ದಾಪುರ
62. **ಸೋಮೇಶ್ವರನಗರ:** ಚಿನ್ನಯನಪಾಳ್ಯ, ಲಕ್ಕಸಂದ್ರ
63. **ಬಿಎಚ್‌ಇಎಲ್:** ಬಿಎಚ್‌ಇಎಲ್ ಲೇಔಟ್, 3ನೇ ಬ್ಲಾಕ್ ಪೂರ್ವ, ಆಫೀಸರ್ಸ್ ಲೇಔಟ್, ಸಿಎಚ್‌ಸಿಎಸ್ ಲೇಔಟ್, ರಾಜಣ್ಣ ಲೇಔಟ್, ಗುಲ್ಬರ್ಗ ಕಾಲೊನಿ

72 ವಾರ್ಡ್‌ಗಳು

ಪ್ರಮುಖ: ಪ್ರದೇಶಗಳು

1. **ಬಂಗಾರಪ್ಪ ನಗರ:** ಪಂತರಪಾಳ್ಯ, ಡಿಸೋಜಾ ನಗರ, ಪ್ರಮೋದ ಲೇಔಟ್, ಜವರಾಯನದೊಡ್ಡಿ, ಪುಷ್ಪಗಿರಿ ನಗರ, ಬಂಗಾರಪ್ಪ ನಗರ
2. **ಸುಬ್ರಹ್ಮಣ್ಯಪುರ:** ಎಜಿಎಸ್ ಲೇಔಟ್, ಗುಬ್ಬಲಾಳ, ಬಿಎಚ್‌ಸಿಎಸ್ ಲೇಔಟ್
3. **ಸಾರ್ವಭೌಮನಗರ:** ಚಿಕ್ಕಲಸಂದ್ರ, ಸೆವೆನ್ ಹಿಲ್ಸ್ ಲೇಔಟ್
4. **ಪದ್ಮನಾಭನಗರ:** ಪದ್ಮನಾಭನಗರ
5. **ಕದಿರೇನಹಳ್ಳಿ:** ಮಸೀದಿ ರಸ್ತೆ, ಲಕ್ಷ್ಮೀನರ-ಸಿಂಹ ದೇವಸ್ಥಾನ, ಮಹೇಶ್ವರಮ್ಮ ದೇವಸ್ಥಾನ
6. **ಕುಮಾರಸ್ವಾಮಿ ಲೇಔಟ್:** ಟೀಚರ್ಸ್ ಕಾಲೊನಿ, ಕದಿರೇನಹಳ್ಳಿ, ಬೇಂದ್ರೆ ನಗರ
7. **ಬನಶಂಕರಿ ದೇವಸ್ಥಾನ:** ಹರಿಕಾಲೊನಿ, ಚಂದ್ರ ಲೇಔಟ್, ಜೆ.ಪಿ ನಗರ
8. **ಶಾಕಾಂಬರಿನಗರ:** ಜೆ.ಪಿ ನಗರ 1ನೇ ಹಂತ, ಜೆ.ಪಿನಗರ, ಶಾಕಾಂಬರಿನಗರ
9. **ಪಟ್ಟಾಭಿರಾಮ ನಗರ:** ಜಯನಗರ 5, 8, 9ನೇ ಬ್ಲಾಕ್, ಮಾರೇನಹಳ್ಳಿ
10. **ಬೈರಸಂದ್ರ:** ಜಯನಗರ 4ನೇ ಬ್ಲಾಕ್. ಪೂರ್ವ 3ನೇ ಬ್ಲಾಕ್
11. **ತಿಲಕ್‌ನಗರ:** ಬಿಟಿಬಿ ಪ್ರದೇಶ, ಎಲ್‌ಐಸಿ ಕಾಲೊನಿ, ಜಯನಗರ 4–ಟಿ ಬ್ಲಾಕ್, ತಿಲಕ್‌ನಗರ
12. **ಎನ್‌ಎಎಲ್ ಲೇಔಟ್:** ಎನ್‌ಎಎಲ್ ಲೇಔಟ್, ಬಿಸ್ಮಿಲ್ಲಾ ನಗರ
13. **ಎಸ್.ಜಿ. ಪಾಳ್ಯ:** ಬಾಲಾಜಿ ಲೇಔಟ್
14. **ಲಕ್ಕಸಂದ್ರ:** ಆರ್.ಡಿ. ಲೇಔಟ್
15. **ಎ. ಆಡುಗೋಡಿ:** ಕೋರಮಂಗಲ 5, 8ನೇ ಬ್ಲಾಕ್, ಆಡುಗೋಡಿ, ಕೆಎಚ್‌ಬಿ ಕಾಲೊನಿ
16. **ನ್ಯಾಷನಲ್ ಗೇಮ್ಸ್ ವಿಲೇಜ್:** ರಾಜೇಂದ್ರನಗರ, ಕೋರಮಂಗಲ, ರಾಷ್ಟ್ರೀಯ ಕ್ರೀಡಾಕೂಟ ಗ್ರಾಮ
17. **ಈಜಿಪುರ:** ಈಜಿಪುರ, ಮುನ್ನಿಸ್ವಾಮಿ ಗಾರ್ಡನ್, ಇಂದಿರಾಗಾಂಧಿ ಕಾಲೊನಿ
18. **ಅನಿಬೆಸೆಂಟ್:** ಕೋರಮಂಗಲ 6ನೇ ಬ್ಲಾಕ್, ಅಶ್ವಿನಿ ಲೇಔಟ್
19. **ಕೋರಮಂಗಲ:** ಕೋರಮಂಗಲ 7ನೇ ಬ್ಲಾಕ್, ಡಾಲರ್ ಸ್ಕೀಮ್ ಕಾಲೊನಿ
20. **ಚಿಕ್ಕ ಆಡುಗೋಡಿ:** ಮಾರುತಿನಗರ, ಸುದ್ದಗುಂಟೆ ಪಾಳ್ಯ
21. **ಮಡಿವಾಳ:** ಜೈಭೀಮನಗರ, ಮಡಿವಾಳ
22. **ಅಬ್ದುಲ್ ಕಲಾಂ ನಗರ:** ಜಯನಗರ ಟಿ. ಬ್ಲಾಕ್, ಗುರಪ್ಪನಪಾಳ್ಯ
23. **ಜಯನಗರ ಪೂರ್ವ:** ಗುರಪ್ಪನಪಾಳ್ಯ
24. **ಕೆಎಸ್‌ಆರ್‌ಟಿಸಿ ಲೇಔಟ್:** ಡಿ.ಕೆ. ನಾಯಕ್ ನಗರ, ಜೆ.ಪಿ ನಗರ 2ನೇ ಹಂತ, ಕೆಎಸ್‌ಆರ್‌ಟಿಸಿ ಲೇಔಟ್
25. **ಜೆ.ಪಿ ನಗರ:** ಜೆ.ಪಿ ನಗರ 3, 5ನೇ ಹಂತ, ಮಾರುತಿ ಲೇಔಟ್, ಡಾಲರ್ಸ್ ಕಾಲೊನಿ
26. **ವಿಶ್ವಮಾನವ ಕುವೆಂಪು:** ಮೈಕೊ ಲೇಔಟ್, ಬಿಎಚ್‌ಬಿಸಿಎಸ್ ಲೇಔಟ್, ಕುವೆಂಪುನಗರ, ಬಿಟಿಎಂ ಲೇಔಟ್ 1ನೇ ಹಂತ
27. **ಶ್ರೀನಿವಾಗಿಲು:** ಜಕ್ಕಸಂದ್ರ, ಕೋರಮಂಗಲ 1, 2, 3, 4ನೇ ಬ್ಲಾಕ್, ಮೇಸ್ತ್ರಿಪಾಳ್ಯ
28. **ಜಕ್ಕಸಂದ್ರ:** ಸೆಕ್ಟರ್ 5, ವೆಂಕಟಪುರ, ಟೀಚರ್ಸ್ ಕಾಲೊನಿ
29. **ಎಚ್‌ಎಸ್‌ಆರ್ ಲೇಔಟ್:** ಸೆಕ್ಟರ್ 4, 6, 7, ಮಂಗಮ್ಮನಪಾಳ್ಯ, ಎಂಸಿಎಚ್‌ಎಸ್ ಕಾಲೊನಿ
30. **ಅಗರ:** ಅಗರ, ಸೆಕ್ಟರ್ 1, 2, 3 ಪರಂಗಿಪಾಳ್ಯ,
31. **ಇಬ್ಲೂರು:** ಸೆಕ್ಟರ್ 1, 3, ಎಳ್ಳುಕುಂಟೆ, ಇಬ್ಲೂರು
32. **ಕಸವನಹಳ್ಳಿ:** ಕೆಪಿಸಿ ಲೇಔಟ್, ಅಂಬಲಿಪುರ, ಹರಳೂರು, ಕೈಕೊಂಡ್ರಹಳ್ಳಿ, ಜುನ್ನಸಂದ್ರ, ರೈನ್‌ಬೊ ರೆಸಿಡೆನ್ಸಿ
33. **ಹೊಸಪಾಳ್ಯ:** ಸೋಮಸುಂದರಪಾಳ್ಯ
34. **ಮಂಗಮ್ಮನಪಾಳ್ಯ:** ಐಟಿಐ ಲೇಔಟ್
35. **ಬಂಡೇಪಾಳ್ಯ:** ಸಿಂಗಸಂದ್ರ
36. **ಕೋಡಿ ಚಿಕ್ಕನಹಳ್ಳಿ:** ವಕೀಲ ಮರೀನಾ ಲೇಔಟ್, ಬೊಮ್ಮನಹಳ್ಳಿ, ಕೋಡಿ ಚಿಕ್ಕನಹಳ್ಳಿ, ರೂಪೇನ ಅಗ್ರಹಾರ
37. **ಬೊಮ್ಮನಹಳ್ಳಿ:** ಬಸಪ್ಪ ಲೇಔಟ್, ವಿವೇಕಾನಂದ ನಗರ, ವಿರಾಟ್ ನಗರ
38. **ಹೊಂಗಸಂದ್ರ:** ಹೊಂಗಸಂದ್ರ
39. **ಗಾರ್ವೆಬಾವಿ ಪಾಳ್ಯ:** ಗಾರ್ವೆಬಾವಿ ಪಾಳ್ಯ, ನ್ಯೂ ಮೈಕೊ ಲೇಔಟ್
40. **ಸಿಂಗಸಂದ್ರ:** ಶ್ರೀ ಬಾಲಾಜಿ ಕೃಪಾ ಲೇಔಟ್ 2ನೇ ಹಂತ
41. **ಕೂಡ್ಲು:** ಎಇಸಿಎಸ್ ಲೇಔಟ್, ಕೂಡ್ಲು, ಟ್ರಾಪಿಲ್ ಪ್ಯಾರಡೈಸ್
42. **ಸರ್ ಎಂ. ವಿಶ್ವೇಶ್ವರಯ್ಯ ಲೇಔಟ್:** ಮಂಜುನಾಥನಗರ, ವೀರಪ್ಪಾರೆಡ್ಡಿ ಬಡಾವಣೆ
43. **ಚಿಕ್ಕತೋಗೂರು:** ರಾಘವೇಂದ್ರಸ್ವಾಮಿ ಲೇಔಟ್, ನಾಗಮುನೇಶ್ವರ, ಜಿ.ಕೆ. ಲೇಔಟ್, ವಿವೇಕಾನಂದನಗರ
44. **ವಿಶ್ವಪ್ರಿಯನಗರ:** ಚೌಡೇಶ್ವರಿ 3ನೇ ಬ್ಲಾಕ್, ಪ್ರಭಾಕರ ರೆಡ್ಡಿ 1, 2–ಬಿ ಬ್ಲಾಕ್
45. **ದೇವರಚಿಕ್ಕನಹಳ್ಳಿ:** ಜಾಹ್ನವಿ ಎನ್‌ಕ್ಲೇವ್
46. **ಬೇಗೂರು:** ಬೇಗೂರು
47. **ಯಲೇನಹಳ್ಳಿ:** ಕಾಳೇನ ಅಗ್ರಹಾರ, ನೊಬೊ ನಗರ, ಯಲೇನಹಳ್ಳಿ, ಐಡಿಬಿಐ ಲೇಔಟ್
48. **ವಿಜಯ ಬ್ಯಾಂಕ್ ಲೇಔಟ್:** ರಾಯಲ್ ರೆಸಿಡೆನ್ಸಿ, ಅಕ್ಷಯನಗರ, ವಿಜಯ ಬ್ಯಾಂಕ್ ಲೇಔಟ್
49. **ಬಿಳೇಕಹಳ್ಳಿ:** ಬಿಳೇಕಹಳ್ಳಿ
50. **ಎನ್.ಎಸ್. ಪಾಳ್ಯ:** ಮದೀನಾ ನಗರ, ಮಹದೇಶ್ವರನಗರ
51. **ದೊರೆಸಾನಿ ಪಾಳ್ಯ:** ಗೋವಿಂದರೆಡ್ಡಿ ಲೇಔಟ್, ಮೈಕೊ ಅರೆಕೆರೆ 1ನೇ ಹಂತ
52. **ಅರೆಕೆರೆ:** ಕೃಷ್ಣಾರೆಡ್ಡಿ ಲೇಔಟ್, ಮುನೇಶ್ವರ ಬ್ಲಾಕ್, ಶಾಂತಿನಿಕೇತನ ಬಡಾವಣೆ, ವೈಶ್ಯ ಬ್ಯಾಂಕ್ ಕಾಲೊನಿ
53. **ಹುಳಿಮಾವು:** ಎಚ್‌ಎಎಲ್ 3ನೇ ಹಂತ, ಜನತಾ ಕಾಲೊನಿ, ಭಗವತಿ ಬ್ಲಾಕ್, ಹುಳಿಮಾವು
54. **ದೊಡ್ಡಕಮ್ಮನಹಳ್ಳಿ:** ದೊಡ್ಡಕಮ್ಮನಹಳ್ಳಿ, ಚಿಕ್ಕ ಕಮ್ಮನಹಳ್ಳಿ, ಹಿಮಗಿರಿ, ಕೃಷ್ಣ ಗಾರ್ಡನ್ಸ್
55. **ಗೊಟ್ಟಿಗೆರೆ :** ಗೊಟ್ಟಿಗೆರೆ, ಪಿಳ್ಳಗಾನಹಳ್ಳಿ
56. **ಕೊತ್ತನೂರು:** ಕೃಷ್ಣನಗರ, ಕೊತ್ತನೂರು
57. **ಶ್ರೀನಿಧಿ:** ಕೋಣನಕುಂಟೆ, ಬ್ರೂಕ್ಸ್ ಹೆವೆನ್–ಶ್ರೀನಿಧಿ ಲೇಔಟ್
58. **ಆರ್‌ಬಿಐ ಲೇಔಟ್:** ಗುರು ರಾಘವೇಂದ್ರ ನಗರ, ಮುನೇಶ್ವರ ಬ್ಲಾಕ್, ಎಂ.ಎಸ್. ರಾಮಯ್ಯ ನಗರ, ನೃಪತುಂಗ ನಗರ
59. **ಪುಟ್ಟೇನಹಳ್ಳಿ:** ಪುಟ್ಟೇನಹಳ್ಳಿ, ರಾಮಪ್ಪ ಲೇಔಟ್, ಬ್ಯಾಂಕ್ ಆಫ್ ಬರೋಡಾ ಕಾಲೊನಿ, ಜಾಗೃತಿ ಕಾಲೊನಿ
60. **ಕೆಂಗಲ್ ಹನುಮಂತಯ್ಯ:** ಕೆ.ಆರ್. ಲೇಔಟ್, ಬೊಮ್ಮನಹಳ್ಳಿ
61. **ಸಾರಕ್ಕಿ:** ಆದರ್ಶ ಗಾರ್ಡನ್, ಸಾರಕ್ಕಿ
62. **ಜರಗನಹಳ್ಳಿ:** ಎಂ.ಎಸ್. ಲೇಔಟ್, ನಂಜಪ್ಪ ಲೇಔಟ್, ಬಸವರಾಜ್ ಲೇಔಟ್
63. **ಯಲಚೇನಹಳ್ಳಿ:** ಯಲಚೇನಹಳ್ಳಿ, ಜೆ.ಸಿ. ಕೈಗಾರಿಕಾ ಪ್ರದೇಶ
64. **ಚಂದ್ರಾ ನಗರ:** ಚಂದ್ರಾ ನಗರ, ವಿಕ್ರಂನಗರ, ರಾಜ್ಯೋತ್ಸವ ನಗರ, ಇಲ್ಯಾಸ್ ನಗರ
65. **ಇಸ್ರೊ ಲೇಔಟ್:** ಇಸ್ರೊ ಲೇಔಟ್, ಕುಮಾರಸ್ವಾಮಿ ಲೇಔಟ್
66. **ಅಬ್ದುಲ್ ಕಲಾಂ ಆಜಾದ್:** ಕುಮಾರಸ್ವಾಮಿ ಲೇಔಟ್ 2ನೇ ಹಂತ
67. **ಉತ್ತರಹಳ್ಳಿ:** ವಿಟ್ಟಲನಗರ, ಕಲ್ಯಾಣಿನಗರ, ಉತ್ತರಹಳ್ಳಿ, ವಸಂತಪುರ
68. **ವಸಂತಪುರ:** ನಾರಾಯಣ ನಗರ
69. **ಶಾರದಾ ನಗರ:** ಬೀರೇಶ್ವರನಗರ, ಪಟೇಲ್ ನಾರಾಯಣಪ್ಪ ಲೇಔಟ್, ಚುಂಚಘಟ್ಟ ಕಾಲೊನಿ, ರೇಣುಕಾಂಬ ನಗರ
70. **ಕೋಣನಕುಂಟೆ:** ಪಿಎನ್‌ಬಿ ಲೇಔಟ್, ಚುಂಚಘಟ್ಟ, ಮುನಿಕೃಷ್ಣ ಲೇಔಟ್
71. **ಅಂಜನಾಪುರ:** ಸಿಂಗಾಪುರ ಗಾರ್ಡನ್, ಎಂಕೆಎಸ್ ಲೇಔಟ್, ಅಂಜನಾಪುರ, ಜೆ.ಪಿ. ನಗರ 9ನೇ ಹಂತ, ತಿಪ್ಪಸಂದ್ರ
72. **ತಲಘಟ್ಟಪುರ:** ಬನಶಂಕರಿ 6ನೇ ಹಂತ, ವಾಜರಹಳ್ಳಿ, ತಲಘಟ್ಟಪುರ, ನಾಗೇಗೌಡನಪಾಳ್ಯ, ಚಿಕ್ಕೇಗೌಡನಪಾಳ್ಯ, ಗಾಣಿಗರಪಾಳ್ಯ.

ದಸರಾ ಗೊಂಬೆ ನಿನ್ನನ್ನು ನೋಡಲು...

ಕಾವೇರಿ ಭವನದಲ್ಲಿರುವ ಜಲಮಂಡಳಿ ಕಚೇರಿಯಲ್ಲಿ ದಸರಾ ಗೊಂಬೆಗಳನ್ನು ಪ್ರದರ್ಶಕ್ಕೆ ಇಡಲಾಗಿದೆ

ಜೆ.ಪಿ. ನಗರದ ಏಳನೇ ಹಂತದಲ್ಲಿರುವ ಭುವನೇಶ್ವರಿ ರಮೇಶ್ ಅವರ ಮನೆಯಲ್ಲಿ ದಸರಾ ಗೊಂಬೆಗಳನ್ನು ಕೂರಿಸಲಾಗಿದೆ

ದೊಡ್ಡಬೊಮ್ಮಸಂದ್ರದ ಜಯಶ್ರೀ ಸಂಪತ್ ಅವರ ಮನೆಯಲ್ಲಿ ದಸರಾ ಗೊಂಬೆಗಳನ್ನು ಕೂರಿಸಲಾಗಿದೆ

ವಿದ್ಯಾರಣ್ಯಪುರದ ಸವಿತಾ ಸಿ.ಎನ್. ಅವರ ಮನೆಯಲ್ಲಿ ದಸರಾ ಗೊಂಬೆಗಳನ್ನು ಜೋಡಿಸಲಾಗಿದೆ

ಹನುಮಂತನಗರದ ಎನ್. ನಿರ್ಮಲಾ ಅವರ ಮನೆಯಲ್ಲಿ ಜೋಡಿಸಿರುವ ದಸರಾ ಗೊಂಬೆಗಳು

ಹೊಂಗಸಂದ್ರದ ಪ್ರವೀಣ ಮತ್ತು ಪ್ರೇಮಾವತಿ ಅವರ ಮನೆಯಲ್ಲಿನ ದಸರಾ ಗೊಂಬೆಗಳು

ಜಿಬಿಎ: 3ರಿಂದ ಸಮೀಕ್ಷೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ಅಕ್ಟೋಬರ್ 3ರಿಂದ ಪ್ರಾರಂಭಿಸಲಾಗುತ್ತದೆ ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

ಜಿಬಿಎ ವ್ಯಾಪ್ತಿಯಲ್ಲಿ 32 ಲಕ್ಷ ಮನೆಗಳಿದ್ದು, 17 ಸಾವಿರ ಸಮೀಕ್ಷೆದಾರರು ಕಾರ್ಯನಿರ್ವಹಿಸಲಿದ್ದಾರೆ. ಜಿಬಿಎ ವ್ಯಾಪ್ತಿಯಲ್ಲಿ ತಡವಾಗಿ ಸಮೀಕ್ಷೆ ಪ್ರಾರಂಭಿಸುವುದಕ್ಕೆ ಆಯೋಗದಿಂದ ಅನುಮತಿ ತೆಗೆದುಕೊಳ್ಳಲಾಗಿದೆ. ಒಂದು ಬಾರಿ ಸಮೀಕ್ಷೆ ಆರಂಭವಾದ ಮೇಲೆ ಮುಗಿಯುವವರೆಗೂ ನಿಲ್ಲಿಸುವುದಿಲ್ಲ ಎಂದು ಸುದ್ದಿಗಾರರಿಗೆ ಮಂಗಳವಾರ ಮಾಹಿತಿ ನೀಡಿದರು.

ಜಿಬಿಎ, ನಗರ ಪಾಲಿಕೆಯಲ್ಲದೆ ಯಾವುದೇ ಇಲಾಖೆಯಿಂದ ಸಿಬ್ಬಂದಿಯನ್ನು ನಿಯೋಜಿಸಿಕೊಳ್ಳುವ ಅಧಿಕಾರವನ್ನು ಜಿಬಿಎ ಮುಖ್ಯ ಆಯುಕ್ತರಿಗೆ ಸರ್ಕಾರ ನೀಡಿದೆ. ಹೀಗಾಗಿ, ಅಗತ್ಯ ಸಿಬ್ಬಂದಿಯನ್ನು ನಿಯೋಜಿಸಿಕೊಳ್ಳಲಾಗುತ್ತಿದೆ. ಸೋಮವಾರ ಒಂದು ಹಂತದ ತರಬೇತಿ ಮುಗಿದಿದ್ದು, ಅಕ್ಟೋಬರ್ 2ರಂದು ಮತ್ತೆ ತರಬೇತಿ ನೀಡಿ, 3ರಿಂದ ಸಮೀಕ್ಷೆ ಆರಂಭಿಸಲಾಗುತ್ತದೆ ಎಂದು ಹೇಳಿದರು.

'ಕೆಲವರು ವೈಯಕ್ತಿಕ ಹಾಗೂ ಅನಾರೋಗ್ಯದ ಕಾರಣ ತರಬೇತಿಗೆ ಹಾಜರಾಗಿಲ್ಲ. ಸೂಕ್ತ ಕಾರಣಗಳಿದ್ದರೆ ಅವುಗಳನ್ನು ನಾವು ಪರಿಗಣಿಸಬೇಕಾಗುತ್ತದೆ. ಇಲ್ಲದಿದ್ದರೆ, ತರಬೇತಿ, ಸಮೀಕ್ಷೆಗೆ ಹಾಜರಾಗುವುದು ಕಡ್ಡಾಯ' ಎಂದು ತಿಳಿಸಿದರು.

ಮತದಾರರ ಪಟ್ಟಿ ಪರಿಷ್ಕರಣೆ: 'ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯಲ್ಲಿ ನಿರ್ಲಕ್ಷ್ಯ ಸಹನೀಯವಲ್ಲ' ಎಂದು ಬೆಂಗಳೂರು ಜಿಲ್ಲಾ ಚುನಾವಣಾಧಿಕಾರಿ ಮಹೇಶ್ವರ್ ರಾವ್ ಹೇಳಿದರು.

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ-2025ಕ್ಕೆ ಸಂಬಂಧಿಸಿದಂತೆ ಮತದಾರರ ನೋಂದಣಾಧಿಕಾರಿಗಳು ಹಾಗೂ ಸಹಾಯಕ ನೋಂದಣಾಧಿಕಾರಿಗಳ 2ನೇ ಹಂತದ ತರಬೇತಿ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು. ಮತದಾರರ ಪಟ್ಟಿಯ ಪರಿಷ್ಕರಣೆ ಕಾರ್ಯದಲ್ಲಿ ನಿರ್ಲಕ್ಷ್ಯ ತೋರಿದ ಅಧಿಕಾರಿಗಳು ಹಾಗೂ ಗೈರಾಗುವ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಡಿಸಿಎಂ ಡಿ.ಕೆ. ಶಿವಕುಮಾರ್ ಭರವಸೆ

'ವಾರ್ಡ್ ಮಟ್ಟದ ರಸ್ತೆ ಅಭಿವೃದ್ಧಿ: ₹1,100 ಕೋಟಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರ ಪಾಲಿಕೆಗಳ ವಾರ್ಡ್ ಮಟ್ಟದ ರಸ್ತೆಗಳ ಅಭಿವೃದ್ಧಿಗಾಗಿ ₹1,100 ಕೋಟಿ ಬಿಡುಗಡೆ ಮಾಡಲು ತೀರ್ಮಾನಿಸ-ಲಾಗಿದೆ. ಈ ಅನುದಾನವನ್ನು ರಸ್ತೆಗಳ ಸುಧಾರಣೆಗೆ ಬಳಕೆ ಮಾಡುವಂತೆ ಸೂಚನೆ ನೀಡಲಾಗಿದೆ' ಎಂದು ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಬೆಂಗಳೂರು ನಗರದ ರಸ್ತೆ ಗುಂಡಿ ಮುಚ್ಚುವ ಕಾಮಗಾರಿಯನ್ನು ಪರಿಶೀಲಿಸಿದ ನಂತರ ಮಾಧ್ಯಮದವ-ರೊಂದಿಗೆ ಮಾತನಾಡಿದರು.

'ಇದುವರೆಗೂ 13 ಸಾವಿರ ಗುಂಡಿಗಳನ್ನು ಮುಚ್ಚಲಾಗಿದೆ. ಪ್ರತಿ ಗುಂಡಿ ಮುಚ್ಚಿರುವುದಕ್ಕೆ ಫೋಟೊ, ವಿಡಿಯೊ ದಾಖಲೆ ಮಾಡಿಸಲಾಗಿದೆ. ಅಧಿಕಾರಿಗಳು ಸರ್ಕಾರದ ಆದೇಶ ಪಾಲನೆ ಮಾಡಿ ಗುಂಡಿ ಮುಚ್ಚುವ ಕಾರ್ಯ ಮಾಡುತ್ತಿದ್ದಾರೆ. ಇದರ ಜೊತೆಗೆ 550 ಕಿ.ಮೀ ಉದ್ದದ ಮುಖ್ಯ ರಸ್ತೆಗಳ ಅಭಿವೃದ್ಧಿಗೆ ₹1,100 ಕೋಟಿ ವೆಚ್ಚದ ಕಾರ್ಯಯೋಜನೆ ಸಿದ್ಧಪಡಿಸಲು ಸೂಚನೆ ನೀಡಿದ್ದೇನೆ' ಎಂದು ಮಾಹಿತಿ ನೀಡಿದರು.

'ಮುಖ್ಯ ರಸ್ತೆಗಳ ಜಂಕ್ಷನ್‌ನಲ್ಲಿ ಕಾಂಕ್ರೀಟ್ ಹಾಕಲು 26 ದಿನಗಳ ಅಗತ್ಯವಿದ್ದು, ಸಂಚಾರ ನಿಯಂತ್ರಣದ ಬಗ್ಗೆ ಚರ್ಚೆ ಮಾಡಲಾಗುತ್ತಿದೆ. ಬೆಂಗಳೂರು ರಸ್ತೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸಲು ನಾನು ಪ್ರಯತ್ನಿ-ಸುತ್ತಿದ್ದೇನೆ. ರಸ್ತೆಗುಂಡಿ ಮುಚ್ಚುವುದಕ್ಕಾಗಿ ₹750 ಕೋಟಿ ನೀಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದ್ದಾರೆ' ಎಂದರು.

'ದೇಶದಲ್ಲಿ ಯಾವುದೇ ರಾಜ್ಯದ ಮಂತ್ರಿ ರಸ್ತೆಯಲ್ಲಿ ಗುಂಡಿ ಕಂಡರೆ ಮಾಹಿತಿ ನೀಡಿ ಎಂದು ಸಾರ್ವಜನಿಕರಿಗೆ ಕರೆ ನೀಡಿರಲಿಲ್ಲ. ಆದರೆ, ನಾನು ಇದಕ್ಕಾಗಿ ಪ್ರತ್ಯೇಕ ಆ್ಯಪ್ ಸಿದ್ಧಪಡಿಸಿ, ಪೊಲೀಸರ ಸಹಕಾರದಲ್ಲಿ ರಸ್ತೆಗುಂಡಿ ಮುಚ್ಚಲಾಗುತ್ತಿದೆ. ಇಂತಹ ಪ್ರಯತ್ನ ನಡೆದಿರುವುದು ಕರ್ನಾಟಕದಲ್ಲಿ ಮಾತ್ರ. ಬೆಂಗಳೂರು ಜಾಗತಿಕ ನಗರ. ಹೀಗಾಗಿ ಎಲ್ಲರೂ ಬೆಂಗಳೂರಿನ ರಸ್ತೆ ಗುಂಡಿಗಳ ಬಗ್ಗೆ ಮಾತ್ರ ಪ್ರಚಾರ ಮಾಡುತ್ತಿದ್ದಾರೆ' ಎಂದರು.

ಕಸ ಹಾಕಿರುವವನನ್ನು ಪತ್ತೆ ಮಾಡಿ ಪ್ರಕರಣ ದಾಖಲಿಸಿ: 'ಜಯಮಹಲ್ ರಸ್ತೆಯಲ್ಲಿ ಯಾರೋ ಒಂದು ಲೋಡ್ ಕಸ ಸುರಿದಿದ್ದಾರೆ. ಸೋಮವಾರ ಇರಲಿಲ್ಲ. ರಾತ್ರೋರಾತ್ರಿ ಬಂದು ಯಾರೋ ಸುರಿದಿದ್ದಾರೆ. ಕಸ ಸುರಿದವರು ಯಾರು ಎಂದು ಸಿಸಿಟಿವಿಯಲ್ಲಿ ಪತ್ತೆ ಮಾಡಿ ಅವರ ವಿರುದ್ಧ ಪ್ರಕರಣ ದಾಖಲಿಸಿ, ವಾಹನವನ್ನು ಸೀಜ್ ಮಾಡಬೇಕು' ಎಂದು ಅಧಿಕಾರಿಗಳಿಗೆ ಸೂಚಿಸಿದರು.

'ಬಿಜೆಪಿ ನಾಯಕರು ನನ್ನ ಜತೆ ದೆಹಲಿಗೆ ಬರಲಿ'



ಡಿ.ಕೆ. ಶಿವಕುಮಾರ್

'ಬಿಜೆಪಿ ನಾಯಕರು ನನ್ನ ಜೊತೆಗೆ ದೆಹಲಿಗೆ ಬರಲಿ, ಅಲ್ಲಿನ ರಸ್ತೆಗಳಲ್ಲಿ ಇರುವ ಗುಂಡಿಗಳನ್ನು ತೋರಿಸುತ್ತೇನೆ. ನಾನು ಕರ್ನಾಟಕ ಭವನದಿಂದ ತೆರಳುವಾಗ ರಸ್ತೆ ಗುಂಡಿಗಳನ್ನು ನೋಡಿದ್ದೇನೆ. ಎಲ್ಲ ಕಡೆ ಇದೇ ಪರಿಸ್ಥಿತಿ ಇದೆ' ಎಂದು ಡಿ.ಕೆ.ಶಿವಕುಮಾರ್ ಹೇಳಿದರು.



ಚೆನ್ನೈ: 9 ಕಾರ್ಮಿಕರ ಸಾವು

ಪ್ರಜಾವಾಣಿ ವಾರ್ತೆ

ಸಾರುವೆ ಕುಸಿತ

ಚೆನ್ನೈ: ತಮಿಳುನಾಡಿನ ಪೊನ್ನೇರಿ ಸಮೀಪದ ಎಣ್ಣೋರ್ ಉಷ್ಣವಿದ್ಯುತ್ ಸ್ಥಾವರದಲ್ಲಿ ನಿರ್ಮಾಣ ಕಾಮಗಾರಿ ಸಂದರ್ಭ ಕಬ್ಬಿಣದ ಸಾರುವೆ ಕುಸಿದು ಅಸ್ಸಾಂನ 9 ವಲಸೆ ಕಾರ್ಮಿಕರು ಮೃತಪಟ್ಟಿದ್ದಾರೆ.

ಸ್ಥಾವರದಲ್ಲಿ ಭಾರತ್ ಹೆವಿ ಎಲೆಕ್ಟ್ರಿಕಲ್ಸ್ ಲಿಮಿಟೆಡ್ (ಬಿಎಚ್ಇಎಲ್) ಕೈಗೊಂಡಿರುವ ನಿರ್ಮಾಣ ಕಾಮಗಾರಿ ಸಂದರ್ಭ ಮಂಗಳವಾರ ಸಂಜೆ ದುರಂತ ಸಂಭವಿಸಿದೆ.

'ಸಾರುವೆ ಕುಸಿದಾಗ ಕಾರ್ಮಿಕರು ಸುಮಾರು 45 ಮೀ. ಎತ್ತರದಿಂದ ಕೆಳಕ್ಕೆ ಬಿದ್ದಿದ್ದಾರೆ. ಕಾಂಕ್ರೀಟ್ ಕಮಾನು ನಿರ್ಮಾಣದಲ್ಲಿ ತೊಡಗಿದ್ದಾಗ ದುರಂತ ಸಂಭವಿಸಿದೆ' ಎಂದು ತಮಿಳುನಾಡು ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜೆ. ರಾಧಾಕೃಷ್ಣನ್ ಅವರು ತಿಳಿಸಿದ್ದಾರೆ. ಗಾಯಗೊಂಡ ಒಬ್ಬ ಕಾರ್ಮಿಕನನ್ನು ಚೆನ್ನೈನ ಸ್ಟ್ಯಾನ್ಲಿ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ದಾಖಲಿಸಲಾಗಿದೆ.

ಪರಿಹಾರ ಘೋಷಣೆ

ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಮೃತರ ಕುಟುಂಬಗಳಿಗೆ ತಲಾ ₹10 ಲಕ್ಷ ಪರಿಹಾರ ಘೋಷಿಸಿದ್ದು, ಮೃತದೇಹಗಳನ್ನು ತವರು ರಾಜ್ಯಕ್ಕೆ ಕಳುಹಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ತಲಾ ₹2 ಲಕ್ಷ ಹಾಗೂ ಗಾಯಗೊಂಡವರಿಗೆ ₹50 ಸಾವಿರ ಪರಿಹಾರ ಘೋಷಿಸಿದ್ದಾರೆ.

ಅಪಘಾತ: ರಾಜ್ಯದಲ್ಲಿ 14,414 ಸಾವು

ಎನ್‌ಸಿಆರ್‌ಬಿಯ 2023ರ ವರದಿ ಬಿಡುಗಡೆ: ಅತ್ಯಾಚಾರ, ದೌರ್ಜನ್ಯ, ಅಪಘಾತ ಪ್ರಕರಣಗಳ ಉಲ್ಲೇಖ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ವಿವಿಧ ರಾಜ್ಯಗಳಲ್ಲಿ 2023ರಲ್ಲಿ ದಾಖಲಾದ ಅಪರಾಧ ಪ್ರಕರಣಗಳ ವರದಿಯನ್ನು ರಾಷ್ಟ್ರೀಯ ಅಪರಾಧ ದಾಖಲಾತಿ ಬ್ಯೂರೊ (ಎನ್‌ಸಿಆರ್‌ಬಿ) ಬಿಡುಗಡೆ ಮಾಡಿದ್ದು, ಕರ್ನಾಟಕ ರಾಜ್ಯದಲ್ಲಿ 1,436 ಕೊಲೆಗಳು ನಡೆದಿವೆ. ಕೊಲೆ ಪ್ರಕರಣ ಸಂಬಂಧ 1,322 ಪ್ರಕರಣಗಳು ದಾಖಲಾಗಿವೆ. ಇದೇ ಅವಧಿಯಲ್ಲಿ 3,015 ಕೊಲೆ ಯತ್ನ ಪ್ರಕರಣಗಳೂ ನಡೆದಿವೆ.

11,584 ಅಪಘಾತಗಳು ಸಂಭವಿಸಿದ್ದು, 14,414 ಮಂದಿ ಮೃತಪಟ್ಟಿದ್ದಾರೆ ಎಂದು ವರದಿಯಲ್ಲಿ ಉಲ್ಲೇಖವಾಗಿದೆ.

ನಾಲ್ಕು ಆ್ಯಸಿಡ್ ದಾಳಿ ಪ್ರಕರಣಗಳು ವರದಿಯಾಗಿವೆ. ತನಿಖೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಪಟ್ಟಿ ಸಲ್ಲಿಸುವ ಪ್ರಮಾಣ ಕಡಿಮೆ ಇದೆ ಎಂದು ವರದಿ ವಿಶ್ಲೇಷಿಸಿದೆ.

ಮುಖ್ಯಾಂಶಗಳು

- ರಾಜ್ಯದಲ್ಲಿ ಹಿರಿಯರ ಮೇಲಿನ ದೌರ್ಜನ್ಯ ಪ್ರಕರಣ ಹೆಚ್ಚಳ
- ಆ್ಯಸಿಡ್ ದಾಳಿ: ನಾಲ್ಕು ಪ್ರಕರಣಗಳು ವರದಿ

ಹಿರಿಯರ (60 ವರ್ಷ) ಮೇಲೆ ನಡೆಯುತ್ತಿರುವ ದೌರ್ಜನ್ಯ ಪ್ರಕರಣಗಳು ರಾಜ್ಯದಲ್ಲಿ ಹೆಚ್ಚಾಗಿವೆ. 2022ಕ್ಕೆ ಹೋಲಿಸಿದರೆ, 2023ರಲ್ಲಿ ರಾಜ್ಯದಲ್ಲಿ ಶೇ 35 ಹಾಗೂ ಬೆಂಗಳೂರಿನಲ್ಲಿ ಶೇ 41.7ಕ್ಕೆ ಏರಿಕೆ ಆಗಿದೆ.

2023ರಲ್ಲಿ ಕರ್ನಾಟಕದಲ್ಲಿ ಹಿರಿಯರ ಮೇಲೆ ನಡೆದಿದ್ದ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ 1,840 ಪ್ರಕರಣಗಳು ದಾಖಲಾಗಿದ್ದವು. ಬೆಂಗಳೂರಿನಲ್ಲಿಯೇ 649 ಪ್ರಕರಣಗಳು ದಾಖಲಾಗಿದ್ದವು. ಅದೇ 2022ರಲ್ಲಿ 1,583 ಪ್ರಕರಣಗಳು ರಾಜ್ಯದಲ್ಲಿ ದಾಖಲಾಗಿದ್ದವು. ಬೆಂಗಳೂರಿನಲ್ಲಿ 459 ಪ್ರಕರಣಗಳು ದಾಖಲಾಗಿದ್ದವು. ನಕಲಿ ದಾಖಲೆ ಸೃಷ್ಟಿ, ಆನ್‌ಲೈನ್ ವಂಚನೆಯಂತಹ ದೌರ್ಜನ್ಯಗಳೂ ಹಿರಿಯರ ಮೇಲೆ ನಡೆದಿವೆ ಎಂದು ವರದಿ ಹೇಳಿದೆ.

ಹಿರಿಯರ ಮೇಲೆ ನಡೆದಿದ್ದ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಕೆ ಪ್ರಮಾಣವು ಶೇ 64.1ರಷ್ಟು ಇದೆ. ಬೆಂಗಳೂರಿನ ವಿವಿಧ ನ್ಯಾಯಾಲಯಗಳಲ್ಲಿ 1,334 ಪ್ರಕರಣಗಳು ವಿಚಾರಣೆ ಹಂತದಲ್ಲಿವೆ.

ಮಹಿಳಾ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ 4,360 ಪ್ರಕರಣಗಳು ದಾಖಲಾಗಿದ್ದು, 5,446 ಮಹಿಳೆಯರ ಮೇಲೆ ದೌರ್ಜನ್ಯ ನಡೆದಿದೆ. ಈ ಅವಧಿಯಲ್ಲಿ 656 ಅತ್ಯಾಚಾರ ಪ್ರಕರಣಗಳು ವರದಿಯಾಗಿವೆ ಎಂದು ವರದಿ ಹೇಳಿದೆ.

ಭಾರತೀಯ ದಂಡ ಸಂಹಿತೆ (ಐಪಿಸಿ) ಅಡಿ 2023ರಲ್ಲಿ 1.48 ಲಕ್ಷ ಪ್ರಕರಣಗಳು ಕರ್ನಾಟಕದಲ್ಲಿ ದಾಖಲಾಗಿವೆ. ಅದೇ 2022ರಲ್ಲಿ 1.29 ಲಕ್ಷ, 2021ರಲ್ಲಿ 1.15 ಲಕ್ಷ ಪ್ರಕರಣಗಳು ದಾಖಲಾಗಿದ್ದವು. 2023ರಲ್ಲಿ ದೋಷಾರೋಪಣೆ ಸಲ್ಲಿಕೆ ಪ್ರಮಾಣ ಶೇ 76.6ರಷ್ಟಿತ್ತು.



ಸೈಬರ್ ಅಪರಾಧ– ಬೆಂಗಳೂರಿನಲ್ಲೇ ಹೆಚ್ಚು

ದೇಶದ ಬೇರೆ ಬೇರೆ ರಾಜ್ಯಗಳಿಗೆ ಹೋಲಿಸಿದರೆ 2023ರಲ್ಲಿ ಹೆಚ್ಚಿನ ಸೈಬರ್ ಅಪರಾಧ ಪ್ರಕರಣಗಳು ಬೆಂಗಳೂರಿನಲ್ಲಿ ದಾಖಲಾಗಿವೆ. ಒಟ್ಟು 17,631 ಪ್ರಕರಣ ದಾಖಲಾಗಿದ್ದು, ಹೈದರಾಬಾದ್, ಮುಂಬೈ ಹಾಗೂ ಲಖನೌ ನಗರವನ್ನು ಬೆಂಗಳೂರು ಹಿಂದಿಕ್ಕಿದೆ. 2022ಕ್ಕೆ ಹೋಲಿಸಿದರೆ 2023ರಲ್ಲಿ ಬೆಂಗಳೂರು ನಗರದಲ್ಲಿ ಸೈಬರ್ ವಂಚನೆ ಪ್ರಕರಣಗಳು ಶೇ 77.37ಕ್ಕೆ ಏರಿಕೆಯಾಗಿದೆ.

ಈ ಪ್ರಕರಣಗಳಲ್ಲಿ ತನಿಖೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಕೆಯಲ್ಲೂ (ಶೇ 18.1) ಬೆಂಗಳೂರು ಹಿಂದಿದೆ. ಇದೇ ಅವಧಿಯಲ್ಲಿ ರಾಜ್ಯದಲ್ಲಿ 21,889 ಸೈಬರ್ ವಂಚನೆ ಪ್ರಕರಣ ದಾಖಲಾಗಿವೆ. ಇದೇ ಸಂದರ್ಭದಲ್ಲಿ ತೆಲಂಗಾಣದಲ್ಲಿ 18,236, ಉತ್ತರ ಪ್ರದೇಶದಲ್ಲಿ 10,794, ಮಹಾರಾಷ್ಟ್ರದಲ್ಲಿ 8,103 ಸೈಬರ್ ವಂಚನೆ ಪ್ರಕರಣಗಳು ದಾಖಲಾಗಿವೆ.

ನಿರ್ಲಕ್ಷ್ಯದಿಂದ 20 ಮಂದಿ ಸಾವು

ಎನ್‌ಸಿಆರ್‌ಬಿ ವರದಿ ಪ್ರಕಾರ, 2023ರಲ್ಲಿ ಬೆಂಗಳೂರಿನಲ್ಲಿ ಕಳಪೆ ರಸ್ತೆಗಳು ಮತ್ತು ಗುಂಡಿ ಬಿದ್ದ ರಸ್ತೆಗಳಿಂದ ಸಂಭವಿಸಿದ್ದ 19 ಪ್ರತ್ಯೇಕ ಅಪಘಾತ ಪ್ರಕರಣಗಳಲ್ಲಿ 20 ಜನರು ಪ್ರಾಣ ಕಳೆದುಕೊಂಡಿದ್ದಾರೆ. ಇತರೆ 18 ಮಹಾನಗರಗಳಿಗೆ ಹೋಲಿಸಿದರೆ ಸ್ಥಳೀಯ ಸಂಸ್ಥೆಯ ನಿರ್ಲಕ್ಷ್ಯದಿಂದ ಬೆಂಗಳೂರಿನಲ್ಲಿ ಅತಿ ಹೆಚ್ಚು ಸಾವುಗಳು ಸಂಭವಿಸಿವೆ. ಬೆಂಗಳೂರಿನಲ್ಲಿ ಇಂತಹ ಸಾವುಗಳು ಅತಿ ಹೆಚ್ಚು ದಾಖಲಾಗಿರುವುದು ಇದು ಸತತ ನಾಲ್ಕನೇ ವರ್ಷ ಎಂದು ವರದಿಯಲ್ಲಿ ಉಲ್ಲೇಖವಾಗಿದೆ.

ಕೆಆರ್‌ಎಸ್ ಪಕ್ಷದ ಕಾರ್ಯಕರ್ತರ ಪ್ರತಿಭಟನೆ

ಕೆಆರ್‌ಎಸ್ ಪಕ್ಷದ ಕಾರ್ಯಕರ್ತರನ್ನು ವಶಕ್ಕೆ ಪಡೆದ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮ್ಮ ಕಾರ್ಯಕರ್ತರ ಮೇಲೆ ದೌರ್ಜನ್ಯ ಎಸಗಿದ ಮಾದನಾಯಕನಹಳ್ಳಿ ಹಾಗೂ ನೆಲಮಂಗಲ ಠಾಣೆ ಇನ್‌ಸ್ಪೆಕ್ಟರ್ ವಿರುದ್ಧ ತನಿಖೆ ನಡೆಸಿ ಶಿಸ್ತು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ, ಸ್ವಾತಂತ್ರ್ಯ ಉದ್ಯಾನದಲ್ಲಿ ಕರ್ನಾಟಕ ರಾಷ್ಟ್ರ ಸಮಿತಿಯ(ಕೆಆರ್‌ಎಸ್) ಪಕ್ಷದ ಕಾರ್ಯಕರ್ತರು ಮಂಗಳವಾರ ಪ್ರತಿಭಟನೆ ನಡೆಸಿದರು.

ಪ್ರತಿಭಟನಕಾರರನ್ನು ಪೊಲೀಸರು ವಶಕ್ಕೆ ಪಡೆದು ನಂತರ ಬಿಡುಗಡೆ ಮಾಡಿದರು.

'ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆಗೆ ಅವಕಾಶ ನೀಡಲು ನಿರಾಕರಿಸಿರುವುದು ಎಷ್ಟು ಸರಿ' ಎಂದು ಪ್ರತಿಭಟನಕಾರರು ಪ್ರಶ್ನಿಸಿದರು.

'ದಾಸನಪುರ ಎಪಿಎಂಸಿಯಲ್ಲಿ ರೈತರಿಗೆ ಅನ್ಯಾಯ ಮಾಡಲಾಗುತ್ತಿದೆ. ಈ ಸಂಬಂಧ ಪ್ರಶ್ನೆ ಮಾಡಿದ್ದಕ್ಕೆ ಕೆಆರ್‌ಎಸ್ ಪಕ್ಷದ ಕಾರ್ಯಕರ್ತರ ಮೇಲೆ ಸುಳ್ಳು ಎಫ್‌ಐಆರ್ ದಾಖಲು ಮಾಡಲಾಗಿದೆ. ಕಾರ್ಯಕರ್ತರ ಬಂಧನದ ಬಗ್ಗೆ ಮಾದನಾಯಕನಹಳ್ಳಿ ಠಾಣೆಯ ಇನ್‌ಸ್ಪೆಕ್ಟರ್ ಬಳಿ ಕೇಳಿದಾಗ ಪಕ್ಷದ ಕಾರ್ಯಾಧ್ಯಕ್ಷ ರಘು ಜಾಣಗೆರೆ ಸೇರಿ ಐವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಲಾಗಿದೆ. ಸುಳ್ಳು ದೂರು ದಾಖಲಿಸಿದ್ದನ್ನು ಖಂಡಿಸಿ, ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಆಯೋಜಿಸಲಾಗಿತ್ತು. ಆದರೆ, ಪೊಲೀಸ್ ಇಲಾಖೆ ಅನುಮತಿ ನೀಡದೆ ಪ್ರಜಾಪ್ರಭುತ್ವದ ಹಕ್ಕನ್ನು ದಮನಿಸುವ ಯತ್ನ ಮಾಡಿದೆ' ಎಂದು ಕಾರ್ಯಕರ್ತರು ಆಕ್ರೋಶ ಹೊರಹಾಕಿದರು.

ಮಣ್ಣು ಕುಸಿತ: ಕಾರ್ಮಿಕರಿಬ್ಬರು ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸಿದ್ದಾರ್ಥ ಕಾಲೊನಿಯಲ್ಲಿ ಕಟ್ಟಡ ನಿರ್ಮಾಣಕ್ಕೆ ಅಡಿಪಾಯ ತೆಗೆಯುತ್ತಿದ್ದ ವೇಳೆ ಅಪಾರ ಪ್ರಮಾಣದ ಮಣ್ಣು ಕುಸಿದು ಜಾರ್ಖಂಡ್ ರಾಜ್ಯದ ಇಬ್ಬರು ಕಾರ್ಮಿಕರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮತ್ತೊಬ್ಬ ಕಾರ್ಮಿಕನ ಸ್ಥಿತಿ ಗಂಭೀರವಾಗಿದ್ದು, ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿದೆ.

ಲಾಲ್ ಮುದ್ದೀನ್ (33) ಮತ್ತು ರಜಾವುದ್ದೀನ್ (32) ಎಂಬುವರು ಮೃತಪಟ್ಟಿದ್ದಾರೆ. ಕಾರ್ಮಿಕ ಸೈಫುಲ್ಲಾ (28) ಅವರು ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಸಿದ್ದಾರ್ಥ ಕಾಲೊನಿಯಲ್ಲಿ ಕಟ್ಟಡ ನಿರ್ಮಾಣ ಕಾರ್ಯ ನಡೆಯುತ್ತಿತ್ತು. ಅಡಿಪಾಯಕ್ಕಾಗಿ 20 ಅಡಿ ಆಳವಾದ ಗುಂಡಿ ತೆಗೆಯಲಾಗುತ್ತಿತ್ತು. ಏಕಾಏಕಿ ಅಪಾರ ಪ್ರಮಾಣದ ಮಣ್ಣು ಕಾರ್ಮಿಕರ ಮೇಲೆ ಕುಸಿದಿದೆ. ಮಣ್ಣಿನಡಿ ಸಿಲುಕಿದ ಇಬ್ಬರು ಮೃತಪಟ್ಟರು. ಮತ್ತೊಬ್ಬಬ್ಬರನ್ನು ರಕ್ಷಿಸಿ ಆಸ್ಪತ್ರೆಗೆ ಸೇರಿಸಲಾಗಿದೆ.

> **ಕಾಮಗಾರಿ ವೇಳೆ ಸುರಕ್ಷತಾ ಕ್ರಮಗಳನ್ನು ಕೈಗೊಂಡಿಲ್ಲ. ಗುತ್ತಿಗೆದಾರರು ಮತ್ತು ಕಟ್ಟಡ ಮಾಲೀಕರ ನಿರ್ಲಕ್ಷ್ಯವೇ ಈ ದುರಂತಕ್ಕೆ ಕಾರಣ. ಪ್ರಕರಣ ದಾಖಲಿಸಿಕೊಳ್ಳಲಾಗಿದೆ**
> **ಮಡಿವಾಳ ಪೊಲೀಸ್**

ಐವರು ಮೇಲೆ ಬಂದು ಪಾರಾಗಿದ್ದಾರೆ.

'ಒಂದು ಕಡೆ ಪಿಲ್ಲರ್‌ಗೆ ಸಿಮೆಂಟ್ ಪ್ಯಾಕಿಂಗ್ ಹಾಕಲಾಗುತ್ತಿತ್ತು. ಮತ್ತೊಂದೆಡೆ 8 ಮಂದಿ ಕೂಲಿ ಕಾರ್ಮಿಕರು ಅಡಿಪಾಯದ ಕೆಲಸಗಳಲ್ಲಿ ನಿರತರಾಗಿದ್ದರು. ಕೆಳಗೆ ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದಾಗಲೇ ಗುಂಡಿಯ ಮೇಲ್ಭಾಗದಿಂದ ಭಾರಿ ಪ್ರಮಾಣದ ಮಣ್ಣು ಕುಸಿದಿದೆ' ಎಂದು ಮೂಲಗಳು ತಿಳಿಸಿವೆ.

ಸ್ಥಳಕ್ಕೆ ಡಿಸಿಪಿ ಸಾರಾ ಫಾತಿಮಾ ಭೇಟಿ ನೀಡಿ ಪರಿಶೀಲಿಸಿದರು.

ಟಿಪ್ಪರ್ ಡಿಕ್ಕಿ: ಸವಾರ ಸಾವು– ಜನರ ಪ್ರತಿಭಟನೆ

ದಾಬಸ್‌ಪೇಟೆ: ಮಾದೇನಹಳ್ಳಿ-ನಿಜಗಲ್ ಕೆಂಪೋಹಳ್ಳಿ ನಡುವಿನ ಮಧುಗಿರಿ ರಸ್ತೆಯಲ್ಲಿ ಟಿಪ್ಪರ್ ಹರಿದು ವಿವೇಕಾನಂದ ಶಾಲೆಯ ಬಸ್ ಚಾಲಕ ಹನುಮಂತರಾಜು ಮೃತಪಟ್ಟಿದ್ದಾರೆ.

ನರಸೀಪುರದ ಹನುಮಂತರಾಜು ಅವರು ಕೆಲಸಕ್ಕೆ ತೆರಳಿದ್ದ ತಮ್ಮ ಪತ್ನಿಯನ್ನು ಕರೆದುಕೊಂಡು ದ್ವಿಚಕ್ರ ವಾಹನದಲ್ಲಿ ಬರುವಾಗ ಟಿಪ್ಪರ್ ಲಾರಿ ಡಿಕ್ಕಿ ಹೊಡೆದಿದೆ. ಅಪಘಾತದ ರಭಸಕ್ಕೆ ಇಬ್ಬರೂ ಕೆಳಗೆ ಬಿದ್ದಿದ್ದು, ಪತಿ ಮೇಲೆ ಲಾರಿ ಚಕ್ರ ಹರಿದಿದೆ.

ಈ ರಸ್ತೆಯಲ್ಲಿ ಟಿಪ್ಪರ್ ಲಾರಿಗಳು ವೇಗವಾಗಿ ಸಂಚಾರ ಮಾಡುತ್ತವೆ. ಇದರಿಂದಲೇ ಅಪಘತವಾಗಿದೆ ಎಂದು ಗ್ರಾಮಸ್ಥರು ಹಾಗೂ ಸಂಬಂಧಿಕರು ಆಕ್ರೋಶ ವ್ಯಕ್ತಪಡಿಸಿದರು. ಮೃತರ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕು ಎಂದು ಪಂಚಾಯಿತಿ ಮುಂದೆ ಶವದೊಂದಿಗೆ ಮಂಗಳವಾರ ಪ್ರತಿಭಟನೆ ನಡೆಸಿದರು. ದಾಬಸ್‌ಪೇಟೆ ಠಾಣೆ ಇನ್‌ಸ್ಪೆಕ್ಟರ್ ರಾಜು, ಪಂಚಾಯಿತಿ ಅಧ್ಯಕ್ಷ ರಾಮಾಂಜನೇಯ ಅವರು ಪ್ರತಿಭಟನಕಾರರ ಮನವೊಲಿಸಿದರು. ಬಳಿಕ ಅಂತ್ಯ ಸಂಸ್ಕಾರ ನೆರವೇರಿತು. ದಾಬಸ್‌ಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಹಿಳೆಗೆ ಬ್ಲ್ಯಾಕ್‌ಮೇಲ್ ಇಬ್ಬರ ವಿರುದ್ಧ ಎಫ್‌ಐಆರ್

ಹಣ ವಾಪಸ್ ಕೊಡುವಂತೆ ಕೇಳಿದ್ದಕ್ಕೆ ಬೆದರಿಕೆ: ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ವಿಡಿಯೊ ಹಾಗೂ ಫೋಟೊ ಇಟ್ಟುಕೊಂಡು ಮಹಿಳೆಗೆ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ ಇಬ್ಬರ ವಿರುದ್ಧ ಕಾಮಾಕ್ಷಿಪಾಳ್ಯ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

32 ವರ್ಷದ ಮಹಿಳೆ ನೀಡಿದ ದೂರು ಆಧರಿಸಿ ಎನ್.ಡಿ.ಸ್ವರೂಪ್ ಗೌಡ ಹಾಗೂ ಶೂಟ್ ಗಿರಿ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

'ದೂರು ನೀಡಿದ ಮಹಿಳೆ, ತಮ್ಮ ಚಿಕ್ಕಮ್ಮನ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದಾರೆ. 2022ರಲ್ಲಿ ಸ್ವರೂಪ್ ಗೌಡ ಎಂಬಾತ ಫೇಸ್‌ಬುಕ್ ಮೂಲಕ ಮಹಿಳೆಗೆ ಪರಿಚಯವಾಗಿದ್ದ. ಇಬ್ಬರೂ ಪರಸ್ಪರ ಮೊಬೈಲ್ ಸಂಖ್ಯೆ ಬದಲಾವಣೆ ಮಾಡಿಕೊಂಡು ಚಾಟ್ ನಡೆಸುತ್ತಿದ್ದರು. ಇಬ್ಬರೂ ಆಗಾಗ್ಗೆ ಭೇಟಿ ಆಗುತ್ತಿದ್ದರು. ಈ ನಡುವೆ ಮನೆಯಲ್ಲಿ ತೊಂದರೆ ಇದೆ ಎಂದು ಹೇಳಿಕೊಂಡಿದ್ದ ಆರೋಪಿ, ಆರಂಭದಲ್ಲಿ ಮಹಿಳೆಯಿಂದ ₹4.42 ಲಕ್ಷ ಪಡೆದುಕೊಂಡಿದ್ದ. ನಂತರ, ಇನ್ನೂ ಹೆಚ್ಚಿನ ಹಣ ಬೇಕೆಂದು ಕೇಳಿದ್ದ. ಹಣ ಇಲ್ಲ ಎಂದಾಗ ಖಾಸಗಿ ಕ್ಷಣದ ವಿಡಿಯೊಗಳಿದ್ದು, ಅವುಗಳನ್ನು ನಿನ್ನ ಪತಿಗೆ ಕಳುಹಿಸುವುದಾಗಿ ಬೆದರಿಕೆ ಹಾಕುತ್ತಿದ್ದ' ಎಂಬುದಾಗಿ ನೀಡಿದ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಆಭರಣ ಗಿರವಿ ಇಟ್ಟಿದ್ದ ಮಹಿಳೆ

'ಆರೋಪಿಯ ಬೆದರಿಕೆಗೆ ಹೆದರಿದ್ದ ದೂರುದಾರೆ, ತನ್ನ ಬಳಿಯಿದ್ದ ಆಭರಣಗಳನ್ನು ಗಿರವಿ ಇಟ್ಟು ಮತ್ತಷ್ಟು ಹಣ ನೀಡಿದ್ದರು. ಮಹಿಳೆಯಿಂದ ಆರೋಪಿ ಒಟ್ಟು ₹8.62 ಲಕ್ಷವನ್ನು ಪಡೆದುಕೊಂಡಿದ್ದ. ಕೆಲವು ದಿನ ಕಳೆದ ಮೇಲೆ ಹಣ ವಾಪಸ್ ನೀಡುವಂತೆ ಮಹಿಳೆ ಕೇಳಿದ್ದರು. ನನಗೆ ಬೇರೆ ಕಡೆಯಿಂದ ಹಣ ಬರಬೇಕಿದ್ದು, ಸ್ವಲ್ಪ ದಿನ ಕಾಯುವಂತೆ ಆರೋಪಿ ತಿಳಿಸಿದ್ದ. ಹಣ ವಾಪಸ್ ಕೊಡುವಂತೆ ಮಹಿಳೆ ಕೇಳಿದಾಗ ಮತ್ತೆ ಬೆದರಿಕೆ ಹಾಕಿದ್ದ' ಎಂದು ಮೂಲಗಳು ಹೇಳಿವೆ.

'ದೂರು ನೀಡಿದರೆ ಕಥೆ ಮುಗಿಸುತ್ತೇನೆ'

'ಪೊಲೀಸರಿಗೆ ದೂರು ನೀಡಿದರೆ ನಿನ್ನ ಕಥೆ ಮುಗಿಸುತ್ತೇನೆ ಎಂದೂ ಬೆದರಿಸಿದ್ದ. ನಾನು ದೂರು ನೀಡಲು ಮುಂದಾದ ಸಂದರ್ಭದಲ್ಲಿ ಸ್ವರೂಪ್ ತನ್ನ ಸ್ನೇಹಿತ ಶೂಟ್ ಗಿರಿಯನ್ನು ಮಾತುಕತೆಗೆ ಕಳುಹಿಸಿದ್ದ. ₹2 ಲಕ್ಷ ತೆಗೆದುಕೊಂಡು ಸುಮ್ಮನೆ ಇರು ಎಂಬುದಾಗಿ ಶೂಟ್ ಗಿರಿ ಹೇಳಿದ್ದ. ಆತ ಸಹ ನನಗೆ ಬೆದರಿಕೆ ಹಾಕಿದ್ದಾನೆ' ಎಂದು ಮಹಿಳೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ತವರಿನಲ್ಲಿ ಗಿಲ್ ನಾಯಕತ್ವಕ್ಕೆ ಮೊದಲ 'ಟೆಸ್ಟ್'

ಭಾರತ–ವೆಸ್ಟ್ ಇಂಡೀಸ್ ಮೊದಲ ಟೆಸ್ಟ್ ಕ್ರಿಕೆಟ್ ನಾಳೆಯಿಂದ

• ಆತಿಥೇಯರಿಗೆ ಸವಾಲೊಡ್ಡುವ ವಿಶ್ವಾಸದಲ್ಲಿ ರಾಸ್ಟನ್ ಬಳಗ

ಅಹಮದಾಬಾದ್ (ಪಿಟಿಐ): ಭಾರತ ತಂಡವು ಏಷ್ಯಾ ಕಪ್ ವಿಜಯದ ನಂತರ ಟೆಸ್ಟ್ ಕ್ರಿಕೆಟ್‌ನತ್ತ ಹೊರಳಲಿದೆ.

ಅಕ್ಟೋಬರ್ 2ರಿಂದ ವೆಸ್ಟ್ ಇಂಡೀಸ್ ವಿರುದ್ಧದ ಎರಡು ಟೆಸ್ಟ್‌ಗಳ ಸರಣಿ ನಡೆಯಲಿದೆ. ನಾಯಕ ಶುಭಮನ್ ಗಿಲ್ ಮತ್ತು ಮುಖ್ಯ ಕೋಚ್ ಗೌತಮ್ ಗಂಭೀರ್ ಅವರು ಸೋಮವಾರ ತಡರಾತ್ರಿ ಇಲ್ಲಿಗೆ ಬಂದಿಳಿದಿದ್ದಾರೆ. ಸುಮಾರು ಮೂರು ತಾಸುಗಳ ಮಾತುಕತೆಯಲ್ಲಿ ತಂಡ ಸಂಯೋಜನೆಯ ಕುರಿತು ಚರ್ಚಿಸಿದ್ದಾರೆ.

ವಿಂಡೀಸ್ ಎದುರಿನ ಸರಣಿಯು ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಟೂರ್ನಿಯ ಭಾಗವಾಗಿದೆ. ಮಂಗಳವಾರ ತಂಡದ ಆಟಗಾರರು ನೆಟ್ಸ್‌ನಲ್ಲಿ ಅಭ್ಯಾಸ ಮಾಡಿದರು. ಫೀಲ್ಡಿಂಗ್ ತಾಲೀಮಿಗೆ ಹೆಚ್ಚು ಒತ್ತು ಕೊಟ್ಟರು. ವೇಗಿ ಜಸ್‌ಪ್ರೀತ್ ಬೂಮ್ರಾ, ಎಡಗೈ ಸ್ಪಿನ್ನರ್‌ಗಳಾದ ಕುಲದೀಪ್ ಯಾದವ್ ಮತ್ತು ಅಕ್ಷರ್ ಪಟೇಲ್ ಅವರು ಅಭ್ಯಾಸದಿಂದ ವಿಶ್ರಾಂತಿ ಪಡೆದರು.

ವೇಗಿಗಳಾದ ಮೊಹಮ್ಮದ್ ಸಿರಾಜ್, ಕನ್ನಡಿಗ ಪ್ರಸಿದ್ಧ ಕೃಷ್ಣ ಅವರಿಬ್ಬರೂ ಈಚೆಗೆ ಆಸ್ಟ್ರೇಲಿಯಾ ಎ ತಂಡದ ಎದುರಿನ 'ಟೆಸ್ಟ್'ನಲ್ಲಿ ಆಡಿದ್ದರು. ಅವರಿಬ್ಬರೂ ಮಂಗಳವಾರ ಇಲ್ಲಿ ನೆಟ್ಸ್‌ನಲ್ಲಿ 45 ನಿಮಿಷಗಳ ಕಾಲ ಬೌಲಿಂಗ್ ಅಭ್ಯಾಸ ನಡೆಸಿದರು. ಇಬ್ಬರೂ ಬಲಗೈ ವೇಗಿಗಳು ಉತ್ತಮ ಲಯದಲ್ಲಿರುವಂತೆ ಕಂಡರು. ಉತ್ತಮ ವೇಗ, ಚಲನೆ ಮತ್ತು ಬೌನ್ಸರ್‌ಗಳನ್ನು ಹಾಕಿದರು.

ಆರಂಭಿಕ ಬ್ಯಾಟರ್ ಯಶಸ್ವಿ ಜೈಸ್ವಾಲ್ ಮತ್ತು ಕೆ.ಎಲ್. ರಾಹುಲ್ ಅವರೂ ಬ್ಯಾಟಿಂಗ್ ಅಭ್ಯಾಸ ಮಾಡಿದರು. ಇಬ್ಬರೂ ಉತ್ತಮ ಲಯದಲ್ಲಿದ್ದಾರೆ. ವಿಕೆಟ್‌ಕೀಪರ್–ಬ್ಯಾಟರ್ ಧ್ರುವ ಜುರೇಲ್, ಬಿ. ಸಾಯಿ ಸುದರ್ಶನ್ ಮತ್ತು ದೇವದತ್ತ ಪಡಿಕ್ಕಲ್ ಅವರೂ ಅಭ್ಯಾಸ ನಡೆಸಿದರು. ಆದರೆ ನಾಯಕ ಗಿಲ್ ಮಾತ್ರ ಲಯಕ್ಕೆ ಮರಳುವ ಅಗತ್ಯವಿದೆ. ವೇಗಿಗಳು ಮತ್ತು ಥ್ರೋಡೌನ್ ಪರಿಣತರ ಎಸೆತಗಳನ್ನು ಎದುರಿಸಲು ಅವರು ಪರದಾಡಿದರು. ಬೇರೆ ಬೇರೆ ನೆಟ್ಸ್‌ನಲ್ಲಿ ಬ್ಯಾಟಿಂಗ್ ಮಾಡಿದ ಗಿಲ್ ಲಯ ಕಂಡುಕೊಳ್ಳುವ ಪ್ರಯತ್ನ ಮಾಡಿದರು.

ಗಿಲ್ ನಾಯಕತ್ವದಲ್ಲಿ ಭಾರತ ತಂಡ ತವರಿನಲ್ಲಿ ಆಡುತ್ತಿರುವ ಮೊದಲ ಸರಣಿ ಇದಾಗಿದೆ. ಇಂಗ್ಲೆಂಡ್‌ನಲ್ಲಿ ಈಚೆಗೆ ನಡೆದಿದ್ದ ಸರಣಿಯಲ್ಲಿ ಭಾರತವು 2–2ರಿಂದ ಸಮಬಲ ಸಾಧಿಸಿತ್ತು.

ವಿಂಡೀಸ್ ಅಭ್ಯಾಸ: ಆಲ್‌ರೌಂಡರ್ ರಾಸ್ಟನ್ ಚೇಸ್ ನಾಯಕತ್ವದ ವೆಸ್ಟ್ ಇಂಡೀಸ್ ತಂಡವು ಮಧ್ಯಾಹ್ನ ಮಳೆ ಇದ್ದ ಕಾರಣ, ನರೇಂದ್ರ ಮೋದಿ ಕ್ರೀಡಾಂಗಣದ ಒಳಾಂಗಣ ನೆಟ್ಸ್‌ನಲ್ಲಿ ಅಭ್ಯಾಸ ನಡೆಸಿತು.

ಇತ್ತೀಚಿನ ದಿನಗಳಲ್ಲಿ ಉತ್ತಮ ಆಟ ತೋರುವಲ್ಲಿ ವಿಫಲವಾಗಿರುವ ವಿಂಡೀಸ್‌ಗೆ ಭಾರತವು ಕಠಿಣ ಸವಾಲೊಡ್ಡುವ ಎಲ್ಲ ಸಾಧ್ಯತೆಗಳೂ ಇವೆ. ವಿಕೆಟ್‌ಕೀಪರ್ ಶಾಯ್ ಹೋಪ್, ಬ್ಯಾಟರ್ ಬ್ರೆಂಡನ್ ಕಿಂಗ್ ಮತ್ತು ಯುವ ಆಟಗಾರರ ಮೇಲೆ ತಂಡವು ಅವಲಂಬಿತವಾಗಿದೆ.

ಉಭಯ ತಂಡಗಳ ಮೊದಲ ಟೆಸ್ಟ್ ಅಹಮದಾಬಾದಿನಲ್ಲಿ ಇದೇ 2ರಿಂದ 6ರವರೆಗೆ ಹಾಗೂ ಎರಡನೇ ಟೆಸ್ಟ್ ನವದೆಹಲಿಯಲ್ಲಿ ಅ. 10ರಿಂದ 14ರವರೆಗೆ ನಡೆಯಲಿದೆ.

ಪಂದ್ಯ ಆರಂಭ: ಬೆಳಿಗ್ಗೆ 9.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್

ತಂಡಗಳು ಹೀಗಿವೆ

ಭಾರತ: ಶುಭಮನ್ ಗಿಲ್ (ನಾಯಕ), ಕೆ.ಎಲ್. ರಾಹುಲ್, ಯಶಸ್ವಿ ಜೈಸ್ವಾಲ್, ಸಾಯಿ ಸುದರ್ಶನ್, ದೇವದತ್ತ ಪಡಿಕ್ಕಲ್, ಧ್ರುವ ಜುರೇಲ್, ನಿತೀಶ್ ಕುಮಾರ್ ರೆಡ್ಡಿ, ರವೀಂದ್ರ ಜಡೇಜ, ಮೊಹಮ್ಮದ್ ಸಿರಾಜ್, ಕುಲದೀಪ್ ಯಾದವ್, ವಾಷಿಂಗ್ಟನ್ ಸುಂದರ್, ಅಕ್ಷರ್ ಪಟೇಲ್, ಪ್ರಸಿದ್ಧಕೃಷ್ಣ, ಜಸ್‌ಪ್ರೀತ್ ಬೂಮ್ರಾ, ಎನ್. ಜಗದೀಶನ್

ರಾಸ್ಟನ್ ಚೇಸ್

ವೆಸ್ಟ್ ಇಂಡೀಸ್: ರಾಸ್ಟನ್ ಚೇಸ್ (ನಾಯಕ), ಜೊಮೆಲ್ ವಾರಿಕನ್, ಕೆವ್ಲೋನ್ ಆ್ಯಂಡರ್ಸನ್, ಅಲಿಕ್ ಅಥಾಂಜೆ, ಜಾನ್ ಕ್ಯಾಂಪ್‌ಬೆಲ್, ತೇಜ್‌ನಾರಾಯಣ್ ಚಂದ್ರಪಾಲ್, ಜಸ್ಟಿನ್ ಗ್ರೀವ್ಸ್, ಶಾಯ್ ಹೋಪ್, ಟೆವಿನ್ ಇಮ್ಲೇಚ್, ಜೆಡೈ ಬ್ಲೇಡ್ಸ್, ಜೊಹಾನ್ ಲೈನ್, ಬ್ರೆಂಡನ್ ಕಿಂಗ್, ಆ್ಯಂಡರ್ಸನ್, ಫಿಲಿಪ್, ಖಾರಿ ಪಿಯರ್, ಜೇಡನ್ ಸೀಲ್ಸ್.

ಬಲಾಬಲ

ಪಂದ್ಯ	100
ಭಾರತ ಜಯ	23
ವಿಂಡೀಸ್‌ಗೆ ಜಯ	30
ಡ್ರಾ	47

ಅಹಮದಾಬಾದಿನ ನರೇಂದ್ರ ಮೋದಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ಮಂಗಳವಾರ ಅಭ್ಯಾಸ ನಡೆಸಿದ ಭಾರತ ತಂಡದ ನಾಯಕ ಶುಭಮನ್ ಗಿಲ್ ಮತ್ತು ವೇಗಿ ಮೊಹಮ್ಮದ್ ಸಿರಾಜ್ ಎಪಿ/ಪಿಟಿಐ ಚಿತ್ರ

ಫಿಡೆ ರೇಟೆಡ್ ಅಂತರರಾಷ್ಟ್ರೀಯ ಚೆಸ್

ನಿತಿನ್ ಬಾಬುಗೆ ಚಾಂಪಿಯನ್ ಪಟ್ಟ

ಪ್ರಜಾವಾಣಿ ವಾರ್ತೆ

ಮಂಗಳೂರು: ಕುತೂಹಲ ಕೆರಳಿಸಿದ್ದ ಕೊನೆಯ ಸುತ್ತಿನಲ್ಲಿ ಸೋತರೂ ಕೇರಳದ ನಿತಿನ್ ಬಾಬು ಇಲ್ಲಿ ಮಂಗಳವಾರ ಮುಕ್ತಾಯಗೊಂಡ ಗ್ರ್ಯಾಂಡ್ ಆರ್‌ಸಿಸಿ ಫಿಡೆ ರೇಟೆಡ್ ಅಂತರರಾಷ್ಟ್ರೀಯ ಕ್ಲಾಸಿಕಲ್ ಚೆಸ್ ಟೂರ್ನಿಯ ಪ್ರಶಸ್ತಿ ಗೆದ್ದುಕೊಂಡರು.

ನಗರದ ಶಾರದಾ ವಿದ್ಯಾಲಯ ಆವರಣದಲ್ಲಿ ರಾವ್ಸ್ ಚೆಸ್ ಕಾರ್ನರ್ ಆಯೋಜಿಸಿದ್ದ ಟೂರ್ನಿಯ 9 ಸುತ್ತುಗಳಲ್ಲಿ ನಿತಿನ್ ಬಾಬು ಮತ್ತು ಗೋವಾದ ಲಾಡ್ ಮಂದಾರ್ ಪ್ರದೀಪ್ ತಲಾ ಎಂಟು ಪಾಯಿಂಟ್ ಕಲೆ ಹಾಕಿದರು. ಉತ್ತಮ ಟೈ ಬ್ರೇಕ್ ಆಧಾರದಲ್ಲಿ ನಿತಿನ್ ಪ್ರಶಸ್ತಿ ತಮ್ಮದಾಗಿಸಿಕೊಂಡರು. ಆಕರ್ಷಕ ಟ್ರೋಫಿ ಮತ್ತು ₹50 ಸಾವಿರ ಬಹುಮಾನ ಮೊತ್ತ ಅವರ ಪಾಲಾಯಿತು. ಮಂದಾರ್ ಅವರು ಟ್ರೋಫಿ ಮತ್ತು ₹35 ಸಾವಿರ ಮೊತ್ತ ತಮ್ಮದಾಗಿಸಿಕೊಂಡರು.

ತಮಿಳುನಾಡಿನ ದಿನೇಶ್ ಕುಮಾರ್ ಜಗನ್ನಾಥನ್, ಕರ್ನಾಟಕದ ಪ್ರಣವ್ ಎ.ಜೆ, ಮಣಿಪುರದ ವಿಕ್ರಂ ಜೀತ್ ಸಿಂಗ್, ಕೇರಳದ ಸಾವಂತ್ ಕೃಷ್ಣ, ತಮಿಳುನಾಡಿನ ಆದಿತ್ಯ ಎಸ್, ಕೇರಳದ ರಜತ್ ರಂಜಿತ್ ಮತ್ತು ತಮಿಳುನಾಡಿನ ಮೈತ್ರೇಯನ್ ತಲಾ 7.5 ಪಾಯಿಂಟ್ ಗಳಿಸಿದರು. ಇವರು ಕ್ರಮವಾಗಿ 3ರಿಂದ 9ರ ವರೆಗಿನ ಸ್ಥಾನ ಪಡೆದರು. ದಿನೇಶ್ ಕುಮಾರ್ ಜಗನ್ನಾಥನ್ ಟ್ರೋಫಿ ಮತ್ತು ₹ 25 ಸಾವಿರ ಗಳಿಸಿದರು. ವಿವಿಧ ವಿಭಾಗಗಳಲ್ಲಿ ಒಟ್ಟು ₹ 8 ಲಕ್ಷ ಬಹುಮಾನ ಮೊತ್ತ ಹಂಚಲಾಯಿತು.

ಮೊದಲ ಶ್ರೇಯಾಂಕದ ಆಟಗಾರ ಇಂಟರ್‌ನ್ಯಾಷನಲ್ ಮಾಸ್ಟರ್ (ಐಎಂ) ಆಂಧ್ರಪ್ರದೇಶದ ಎಂ.ಡಿ ಇಮ್ರಾನ್ ನಾಲ್ಕನೇ ಸುತ್ತು ನಂತರ ವಾಪಸ್ ತೆರಳಿದ್ದರು. ಕಣದಲ್ಲಿ ಉಳಿದಿದ್ದ ಇಬ್ಬರು ಐಎಂಗಳಾದ ಸರವಣ ಕೃಷ್ಣನ್ ಮತ್ತು ಮುರಳಿ ಕೃಷ್ಣನ್ ಕ್ರಮವಾಗಿ 21 ಮತ್ತು 22ನೇ ಸ್ಥಾನಕ್ಕೆ ಕುಸಿದರು.

ದಕ್ಷಿಣ ಕನ್ನಡ ಪಂಕಜ್ ಭಟ್, ಧನುಷ್ ರಾಮ್ ಮತ್ತು ಲಕ್ಷಿತ್ ಸಾಲಿಯಾನ್ 11 ಮಂದಿಯ ಜೊತೆ 7 ಪಾಯಿಂಟ್‌ಗಳನ್ನು ಹಂಚಿಕೊಂಡರು. ಇವರಿಗೆ ಕ್ರಮವಾಗಿ 14, 16 ಮತ್ತು 18ನೇ ಸ್ಥಾನ ಲಭಿಸಿತು.

ಕೊನೆಯ ಸುತ್ತಿನಲ್ಲಿ ಟಾಪ್ ಬೋರ್ಡ್‌ನಲ್ಲಿ ಲಾಡ್ ಮಂದಾರ್ ಪ್ರದೀಪ್ (ರೇಟಿಂಗ್: 2392) ನಿತಿನ್ (2297) ವಿರುದ್ಧ ಜಯ ಗಳಿಸಿದರು. ಎರಡನೇ ಬೋರ್ಡ್‌ನಲ್ಲಿ ವಿಕ್ರಂ ಜೀತ್ ಸಿಂಗ್ ಮತ್ತು ದಿನೇಶ್ ಜಗನ್ನಾಥನ್ ಡ್ರಾ ಮಾಡಿಕೊಂಡರು. ಸಾವಂತ್ ಕೃಷ್ಣ ಮತ್ತು ಪ್ರಣವ್ ನಡುವಿನ ಪಂದ್ಯವೂ ಡ್ರಾ ಆಯಿತು. ಆದಿತ್ಯ ಸಾವಳ್ಕರ್ ವಿರುದ್ಧ ಆದಿತ್ಯ ಎಸ್, ಸರವಣ ಕೃಷ್ಣನ್ ವಿರುದ್ಧ ರಜತ್ ರಂಜಿತ್ ಜಯ ಗಳಿಸಿದರು.

ಪ್ರಶಸ್ತಿ ಗೆದ್ದ ನಿತಿನ್ ಬಾಬು (ಮಧ್ಯ), ರನ್ನರ್ ಅಪ್ ಲಾಡ್ ಮಂದಾರ್ ಪ್ರದೀಪ್ (ಬಲ) ಮತ್ತು ಮೂರನೇ ಸ್ಥಾನ ಗಳಿಸಿದ ದಿನೇಶ್ ಕುಮಾರ್ ಜಗನ್ನಾಥನ್

ಥ್ರೋಬಾಲ್: ಮೈಸೂರು ತಂಡಗಳು ಚಾಂಪಿಯನ್

ಬೆಂಗಳೂರು: ಮೈಸೂರಿನ ಬಾಲಕರ ಮತ್ತು ಬಾಲಕಿಯರ ತಂಡಗಳು ಈಚೆಗೆ ನಡೆದ ರಾಜ್ಯಮಟ್ಟದ ಜೂನಿಯರ್ ಥ್ರೋಬಾಲ್ ಚಾಂಪಿಯನ್ ಷಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡವು.

ಕರ್ನಾಟಕ ಅಮೆಚೂರ್ ಥ್ರೋಬಾಲ್ ಸಂಸ್ಥೆಯ ಆಶ್ರಯದಲ್ಲಿ ಬೆಂಗಳೂರಿನ ಕ್ಯಾಥೆಡ್ರಲ್ ಕಾಲೇಜ್ ಮೈದಾನದಲ್ಲಿ ನಡೆದ ಬಾಲಕರ ಫೈನಲ್‌ನಲ್ಲಿ ಮೈಸೂರು ತಂಡವು 25-15, 25-09 (2-0) ರಿಂದ ಬೆಂಗಳೂರು ಅನ್‌ಪ್ರಿಡಿಕ್ಟೆಬಲ್ ತಂಡವನ್ನು ಮಣಿಸಿತು. ಬಾಲಕಿಯರ ಫೈನಲ್‌ನಲ್ಲಿ ಮೈಸೂರು ತಂಡವು 25-19, 25-16 (2-0)ರಿಂದ ಬಿಎಂಎಸ್ ಕಾಲೇಜು ತಂಡವನ್ನು ಸೋಲಿಸಿತು.

ರಾಜ್ಯಮಟ್ಟದ ಜೂನಿಯರ್ ಥ್ರೋಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದ ಮೈಸೂರಿನ ಬಾಲಕರ ತಂಡ

ಬಾಲ್ ಬ್ಯಾಡ್ಮಿಂಟನ್: ರಾಜ್ಯ ಮಹಿಳಾ ತಂಡ ರನ್ನರ್ಸ್ ಅಪ್

ಬೆಂಗಳೂರು: ಕರ್ನಾಟಕ ಮಹಿಳೆಯರ ತಂಡವು ತಮಿಳುನಾಡಿನ ದಿಂಡಿಗಲ್‌ನಲ್ಲಿ ಭಾನುವಾರ ಮುಕ್ತಾಯಗೊಂಡ 71ನೇ ರಾಷ್ಟ್ರೀಯ ಸೀನಿಯರ್ ಬಾಲ್ ಬ್ಯಾಡ್ಮಿಂಟನ್ ಚಾಂಪಿಯನ್ ಷಿಪ್‌ನಲ್ಲಿ ರನ್ನರ್ಸ್ ಅಪ್ ಆಯಿತು.

ಫೈನಲ್ ಹಣಾಹಣಿಯಲ್ಲಿ ಲಕ್ಷ್ಮೀದೇವಿ ನಾಯಕತ್ವದ ಕರ್ನಾಟಕ ತಂಡ 27-35, 31-35ರಿಂದ ಆತಿಥೇಯ ತಮಿಳುನಾಡು ತಂಡಕ್ಕೆ ಮಣಿಯಿತು. ಇದಕ್ಕೂ ಮೊದಲು ರಾಜ್ಯ ತಂಡವು ಸೆಮಿಫೈನಲ್‌ನಲ್ಲಿ ಆಂಧ್ರಪ್ರದೇಶ ವಿರುದ್ಧ, ಕ್ವಾರ್ಟರ್ ಫೈನಲ್‌ನಲ್ಲಿ ಛತ್ತೀಸಗಢ ವಿರುದ್ಧ ಗೆಲುವು ಸಾಧಿಸಿತ್ತು. ಟೂರ್ನಿಯುದ್ದಕ್ಕೂ ಮಿಂಚಿದ್ದ ಕರ್ನಾಟಕ ತಂಡದ ತನುಶ್ರೀ ಅವರು 'ಸ್ಟಾರ್ ಆಫ್ ಇಂಡಿಯಾ' ಪ್ರಶಸ್ತಿ ಪಡೆದರು.

ರಾಷ್ಟ್ರೀಯ ಸೀನಿಯರ್ ಬಾಲ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ರನ್ನರ್ಸ್ ಅಪ್ ಆದ ಕರ್ನಾಟಕ ಮಹಿಳೆಯರ ತಂಡ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ನಾಲ್ಕನೇ ವರ್ಷದ ಪುಣ್ಯಸ್ಮರಣೆ

ಶ್ರೀ ಬಿ. ಗಂಗಾಧರ್
(ರಿಟೈರ್ಡ್ ಮ್ಯಾನೇಜರ್, ಬಿ.ಇ.ಎಂ.ಎಲ್)
ದುಃಖತಪ್ತ: ಪತ್ನಿ–ಡಿ. ಗಿರಿಜಾ ಗಂಗಾಧರ್
ಮೊ: 96114 62601

ಬಂಗ್ಲೆಗುಡ್ಡೆ ಕಾಡಿನಲ್ಲಿ ಮತ್ತೆ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಧರ್ಮಸ್ಥಳ ಬೆಳವಣಿಗೆ

ಮಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ನಡೆದಿದೆ ಎನ್ನಲಾದ ಅಪರಾಧಗಳಲ್ಲಿನ ಮೃತದೇಹಗಳನ್ನು ಹೂತು ಹಾಕಲಾಗಿದೆ ಎಂದು ಆರೋಪಿಸಲಾದ ಪ್ರಕರಣದ ತನಿಖೆ ವೇಳೆ ನೇತ್ರಾವತಿ ಸ್ನಾನಘಟ್ಟದ ಪಕ್ಕದಲ್ಲಿರುವ ಬಂಗ್ಲೆಗುಡ್ಡೆ ಕಾಡಿನಲ್ಲಿ ಮೃತದೇಹದ ಅವಶೇಷಗಳು ನೆಲದ ಮೇಲೆಯೇ ಪತ್ತೆಯಾದ ಜಾಗದಲ್ಲಿ ಮಂಗಳವಾರ ಮತ್ತೆ ಪರಿಶೀಲನೆ ನಡೆದಿದೆ.

ಕೆಲ ಅಧಿಕಾರಿಗಳು ರಸ್ತೆ ಪಕ್ಕದಲ್ಲಿ ವಾಹನ ನಿಲ್ಲಿಸಿ ಬಂಗ್ಲೆಗುಡ್ಡೆ ಕಾಡಿನತ್ತ ತೆರಳಿದರು. ಅಲ್ಲಿ ಅಳತೆ ಕಾರ್ಯ ನಡೆಸಿ ಅರ್ಧ ಗಂಟೆ ಬಳಿಕ ಕಾಡಿನಿಂದ ಮರಳಿದರು.

'ಕಾಡಿನಲ್ಲಿ ಬುರುಡೆಗಳು ಸೇರಿ ಮೃತದೇಹಗಳ ಅವಶೇಷ ಪತ್ತೆಯಾಗಿದ್ದ ಜಾಗದಲ್ಲಿ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಮ್ಯಾಪಿಂಗ್ ನಡೆಸಿದ್ದಾರೆ' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ತಿಮರೋಡಿ ಜಾಮೀನು: ವಿಚಾರಣೆ ಮುಂದೂಡಿಕೆ

ಪ್ರಕರಣದ ಸಾಕ್ಷಿ ದೂರುದಾರನಿಗೆ ಆಶ್ರಯ ನೀಡಿದ್ದ ಮಹೇಶ್ ಶೆಟ್ಟಿ ತಿಮರೋಡಿ ಅವರ ಮನೆ ಪರಿಶೀಲನೆ ವೇಳೆ ಎರಡು ತಲವಾರು ಹಾಗೂ ಬಂದೂಕು ಪತ್ತೆಯಾದ ಕುರಿತು ಬೆಳ್ತಂಗಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಈ ಪ್ರಕರಣದಲ್ಲಿ ನಿರೀಕ್ಷಣಾ ಜಾಮೀನು ಕೋರಿ ಇಲ್ಲಿನ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ಸಲ್ಲಿಕೆಯಾಗಿರುವ ಅರ್ಜಿಯ ವಿಚಾರಣೆ ಮಂಗಳವಾರ ನಡೆಯಿತು.

ಮಹೇಶ್ ಶೆಟ್ಟಿ ಪರ ವಾದ ಮಂಡಿಸಿದ ವಕೀಲ ದಿನೇಶ್ ಹೆಗ್ಡೆ ಉಳೆಪಾಡಿ, 'ದಾಖಲಾದ ಈ ದೂರಿನ ಸಂಬಂಧ ಪುರಾವೆಗಳನ್ನೂ ಒದಗಿಸಲಾಗಿಲ್ಲ. ವಶಪಡಿಸಿಕೊಂಡ ಶಸ್ತ್ರಾಸ್ತ್ರಗಳ ಪೂರ್ತಿ ವಿವರಗಳನ್ನು ನೀಡಿಲ್ಲ' ಎಂದು ಹೇಳಿದರು.

ಪತ್ತೆ ಆದ ಶಸ್ತ್ರಾಸ್ತ್ರಕ್ಕೆ ಸಂಬಂಧಿಸಿದ ಇಂತಹ ವಿವರಗಳು, ಅವು ಶಸ್ತ್ರಾಸ್ತ್ರ ಕಾಯ್ದೆಯ ವ್ಯಾಪ್ತಿಗೆ ಬರುತ್ತದೆಯೋ ಇಲ್ಲವೋ ಎಂದು ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ' ಎಂದರು.

'ಕೆಲ ಆಯುಧಗಳಿಗೆ ಶಸ್ತ್ರಾಸ್ತ್ರ ಕಾಯ್ದೆಯಡಿ ಪರವಾನಗಿ ಪಡೆಯುವ ಅಗತ್ಯವಿಲ್ಲ. ಪತ್ತೆಯಾದ ಶಸ್ತ್ರಗಳ ಸಮಗ್ರ ವಿವರಣೆ ನೀಡದೇ ಶಸ್ತ್ರಾಸ್ತ್ರ ಕಾಯ್ದೆಯಡಿ ಪೊಲೀಸರು ದೂರು ದಾಖಲಿಸಿಕೊಳ್ಳುವಂತಿಲ್ಲ. ಶಸ್ತ್ರಾಸ್ತ್ರಗಳು ದೋಷಪೂರಿತವಾಗಿದ್ದರೆ ಅಥವಾ ಬಳಕೆಗೆ ಯೋಗ್ಯವಲ್ಲದಿದ್ದರೆ, ಎಫ್‌ಐಆರ್ ದಾಖಲಿಸಿಕೊಳ್ಳುವುದರಲ್ಲಿ ಅರ್ಥವಿಲ್ಲ. ಈ ಅಪರಾಧಕ್ಕೆ ಎರಡರಿಂದ ಏಳು ವರ್ಷಗಳವರೆಗೆ ಮಾತ್ರ ಶಿಕ್ಷೆ ವಿಧಿಸಲು ಅವಕಾಶವಿದೆ. ಹಾಗಾಗಿ ಈ ಪ್ರಕರಣದಲ್ಲಿ ಮಹೇಶ್ ಶೆಟ್ಟಿ ಅವರಿಗೆ ಜಾಮೀನು ಮಂಜೂರು ಮಾಡಬಹುದು' ಎಂದು ವಾದಿಸಿದರು. ವಿಚಾರಣೆಯನ್ನು ಅ.4ಕ್ಕೆ ಮುಂದೂಡಲಾಯಿತು.

ಶಾಸಕ ರಾಜೇಗೌಡ ಮನೆಯಲ್ಲಿ ಶೋಧ

ಪ್ರಜಾವಾಣಿ ವಾರ್ತೆ


ರಾಜೇಗೌಡ

ಚಿಕ್ಕಮಗಳೂರು: ಶೃಂಗೇರಿ ಕ್ಷೇತ್ರದ ಕಾಂಗ್ರೆಸ್ ಶಾಸಕ ಟಿ.ಡಿ. ರಾಜೇಗೌಡ ವಿರುದ್ಧ ವಾರದ ಹಿಂದೆ ಎಫ್‌ಐಆರ್ ದಾಖಲಿಸಿಕೊಂಡಿದ್ದ ಲೋಕಾಯುಕ್ತ ಪೊಲೀಸರು, ಮಂಗಳವಾರ ಅವರ ಮನೆ, ಫಾರ್ಮ್ ಹೌಸ್ ಸೇರಿ ನಾಲ್ಕು ಕಡೆ ಶೋಧ ನಡೆಸಿದರು.

ಕೊಪ್ಪ ನಿವಾಸಿ ದಿನೇಶ್ ಎಚ್.ಕೆ. ಸಲ್ಲಿಸಿದ್ದ ಖಾಸಗಿ ದೂರು ಆಧರಿಸಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ತನಿಖೆಗೆ ಆದೇಶಿಸಿತ್ತು. ರಾಜೇಗೌಡ, ಪತ್ನಿ ಡಿ.ಕೆ. ಪುಷ್ಪಾ, ಪುತ್ರ ರಾಜ್‌ದೇವ್ ಟಿ.ಆರ್. ವಿರುದ್ಧ ಸೆ.23ರಂದು ಎಫ್‌ಐಆರ್ ದಾಖಲಾಗಿತ್ತು.

ಮಂಗಳವಾರ ಬೆಳಿಗ್ಗೆಯೇ ಖಾಂಡ್ಯ ಹೋಬಳಿ ಬಸಾಪುರ ಗ್ರಾಮದಲ್ಲಿರುವ ರಾಜೇಗೌಡ ಅವರ ನಿವಾಸಕ್ಕೆ ತೆರಳಿ ದಾಖಲೆಗಳನ್ನು ಸಂಗ್ರಹಿಸಿದರು. ಬೆಂಗಳೂರಿನಲ್ಲಿ ಸಂಬಂಧಿಕರ ಮನೆ ಮತ್ತು ಅವರ ಫಾರಂ ಹೌಸ್ ಸೇರಿ ನಾಲ್ಕು ಕಡೆ ಶೋಧ ನಡೆಸಲಾಗಿದೆ. ದಾಖಲೆಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಲೋಕಾಯುಕ್ತ ಅಧಿಕಾರಿಗಳು ಮಾಹಿತಿ ನೀಡಿದರು.

'ಟಿ.ಡಿ.ರಾಜೇಗೌಡ ಅಧಿಕಾರ ದುರುಪಯೋಗ ಮಾಡಿಕೊಳ್ಳುವ ಜತೆಗೆ ಸರ್ಕಾರಕ್ಕೆ ಮತ್ತು ಆದಾಯ ತೆರಿಗೆ ಇಲಾಖೆಗೆ ವಂಚಿಸಿದ್ದಾರೆ' ಎಂದು ದಿನೇಶ್ ಅವರು ದೂರಿನಲ್ಲಿ ಉಲ್ಲೇಖಿಸಿದ್ದರು.

'ದರ್ಶನ್‌ಗೆ ಪಲ್ಲಂಗ ಕೊಡಲು ಸಾಧ್ಯವೇ?'

ಒಂದನೇ ಪುಟದಿಂದ...

'ಅವರಿಗೆ ಬಿಸಿಲು ಬರುತ್ತಿಲ್ಲ ಎಂದರೆ ಜೈಲಧಿಕಾರಿಗಳನ್ನು ಹೊಣೆ ಮಾಡಲು ಸಾಧ್ಯವೇ? ಮೂಲಭೂತ ಹಕ್ಕು ಇರಬಹುದು. ಆದರೆ, ವಿಚಾರಣಾಧೀನ ಕೈದಿ ಜೈಲಿನ ನಿಯಮಗಳ ಪ್ರಕಾರವೇ ನಡೆದುಕೊಳ್ಳಬೇಕಾಗುತ್ತದೆ' ಎಂದು ಪ್ರಸನ್ನಕುಮಾರ್ ವಾದ ಮಂಡಿಸಿದರು.

ದರ್ಶನ್ ಪರ ವಕೀಲ ಸುನಿಲ್ ಪ್ರತಿವಾದ ಮಂಡಿಸಿ, 'ನ್ಯಾಯಾಲಯ ಈ ಹಿಂದೆ ನೀಡಿದ್ದ ಸೂಚನೆಗಳನ್ನು ಗಾಳಿಗೆ ತೂರಲಾಗಿದೆ. ನ್ಯಾಯಾಲಯದ ಸೂಚನೆಗಳು ಜೈಲಿನ ಅಧಿಕಾರಿಗಳಿಗೆ ಅರ್ಥವಾದಂತೆ ಕಾಣಿಸುತ್ತಿಲ್ಲ' ಎಂದರು.

'ನ್ಯಾಯಾಂಗ ಬಂಧನಕ್ಕೆ ಒಳಗಾದ ದಿನದಿಂದಲೂ ದರ್ಶನ್ ಅವರನ್ನು ಕ್ವಾರಂಟೈನ್ ಸೆಲ್‌ನಲ್ಲಿಯೇ ಇಡಲಾಗಿದೆ. ಜೈಲಿನ ಕೈಪಿಡಿಯಲ್ಲಿ ಕ್ವಾರಂಟೈನ್ ಎಂಬ ಪದವಿದ್ದರೆ ನಾವು ಸಲ್ಲಿಸಿದ್ದ ಅರ್ಜಿಯನ್ನು ವಾಪಸ್ ತೆಗೆದುಕೊಳ್ಳುತ್ತೇವೆ' ಎಂದರು.

'ಆರೋಪಿಗಾಗಿ ಚಿನ್ನದ ಮಂಚವನ್ನು ಕೊಡಿ ಎಂಬುದಾಗಿ ನಾವು ಕೇಳಿಲ್ಲ. ಅವರ ಆರೋಗ್ಯದ ದೃಷ್ಟಿಯಿಂದ ಕೆಲವೊಂದು ವ್ಯವಸ್ಥೆಗಳನ್ನು ಕಲ್ಪಿಸುವಂತೆ ಕೋರಲಾಗಿದೆ. ಯಾವ ಕೈದಿಗೆ, ಯಾವ ಸೆಲ್ ನೀಡಬೇಕೆಂದು ಜೈಲಿನ ಕೈಪಿಡಿಯಲ್ಲಿದೆ. ಆದರೆ, ಜೈಲಧಿಕಾರಿಗಳು ಮಾರ್ಗಸೂಚಿಗಳನ್ನು ಪಾಲಿಸುತ್ತಿಲ್ಲ' ಎಂದು ನ್ಯಾಯಾಧೀಶರ ಗಮನ ಸೆಳೆದರು.

'ದರ್ಶನ್ ಅವರಿಗಾಗಿಯೇ ಜೈಲಿನಲ್ಲಿ ಪ್ರತ್ಯೇಕ ರಿಜಿಸ್ಟರ್ ಇರಿಸಲಾಗಿದೆ. ಅತ್ಯಾಚಾರ ಪ್ರಕರಣದ ಆರೋಪಿಗೆ ನೀಡಿರುವಂಥ ಸವಲತ್ತುಗಳನ್ನೂ ಅವರಿಗೆ ನೀಡಿಲ್ಲ' ಎಂದು ಸುನಿಲ್ ಹೇಳಿದರು.

ಪ್ರಸನ್ನಕುಮಾರ್ ವಾದಿಸಿ, 'ಭದ್ರತಾ ಸವಾಲುಗಳನ್ನು ಗಮನದಲ್ಲಿಟ್ಟುಕೊಂಡು ಆರೋಪಿಯನ್ನು ಕ್ವಾರಂಟೈನ್ ಸೆಲ್‌ನಲ್ಲಿ ಇರಿಸಲಾಗಿದೆ. ಇದೇ ಜೈಲಿನಲ್ಲಿ ದರ್ಶನ್ ಅವರು ಈ ಹಿಂದೆ ನ್ಯಾಯಾಂಗ ಬಂಧನದಲ್ಲಿ ಇದ್ದರು. ಆಗ ಅವರು ಸೌಲಭ್ಯವನ್ನು ದುರುಪಯೋಗ ಮಾಡಿಕೊಂಡಿದ್ದರು' ಎಂದು ಪ್ರಸ್ತಾಪಿಸಿದರು.

ದರ್ಶನ್‌ಗೆ ಸೌಲಭ್ಯ: ವರದಿ

ಸೆ.25ರಂದು ನಡೆದಿದ್ದ ವಿಚಾರಣೆ ವೇಳೆ ಜೈಲು ಸಿಬ್ಬಂದಿ ವಿರುದ್ಧ ದರ್ಶನ್ ಪರ ವಕೀಲರು ಆರೋಪ ಮಾಡಿದ್ದರು. ಮುಂದಿನ ವಿಚಾರಣೆ ವೇಳೆ ಜೈಲಿನ ಮುಖ್ಯ ಅಧೀಕ್ಷಕರು ಖುದ್ದು ಹಾಜರಿರಬೇಕು ಎಂದು ನ್ಯಾಯಾಧೀಶರು ಸೂಚಿಸಿದ್ದರು. ಮಂಗಳವಾರ ಪ್ರಕರಣದ ವಿಚಾರಣೆಗೂ ಮುನ್ನ ಕಾರಾಗೃಹದ ಅಧೀಕ್ಷಕ ಸುರೇಶ್ ಅವರು ಖುದ್ದು ಹಾಜರಾಗಿ, ಜೈಲಿನಲ್ಲಿ ದರ್ಶನ್‌ಗೆ ಕಲ್ಪಿಸಿರುವ ಸೌಲಭ್ಯಗಳ ಕುರಿತು ನ್ಯಾಯಾಲಯಕ್ಕೆ ವರದಿ ಸಲ್ಲಿಸಿದರು.

25ನೇ ವರ್ಷದ ಪುಣ್ಯಸ್ಮರಣೆ

ದಿ|| ಶ್ರೀಯುತ ಚಳ್ಳಕೆರೆ ಎನ್. ಜಯಣ್ಣ

ತಾವುಗಳು ಚಳ್ಳಕೆರೆ ತಾಲೂಕಿನ ಬಡವರ ಬಂಧುಗಳಾಗಿ ಧೀಮಂತ ನಾಯಕರಾಗಿ, ಕಾಂಗ್ರೆಸ್ ಪಕ್ಷದ ಧುರೀಣರಾಗಿ, ಶಾಸಕರಾಗಿ, ಮುಖ್ಯ ಸಚೇತಕರಾಗಿ, ರಾಜಕೀಯ ಮುತ್ಸದ್ದಿಗಳಾಗಿ, ಸರಳ ಸಜ್ಜನಿಕೆಯ ಪ್ರತಿರೂಪವಾಗಿ ಎಲ್ಲರ ನೆನಪಲ್ಲಿ ಚಿರಸ್ಥಾಯಿಯಾಗಿ ಉಳಿದಿರುತ್ತೀರಿ. ಅಲ್ಲದೆ ವಾಣಿಜ್ಯ ಕ್ಷೇತ್ರದಲ್ಲಿ ಸಹ ಚತುರತೆಯಿಂದ ಎಲ್ಲರಿಗೂ ಮಾದರಿಯಾಗಿದ್ದು ಮರೆಯುವಂತಿಲ್ಲ. ತಾವು ಕೊಡುಗೈ ದಾನಿಗಳಾಗಿ ತಾಲೂಕಿನ ಬಡವರಿಗೆ, ಅಶಕ್ತರಿಗೆ ನೀಡಿರುವ ನೆರವು ಅಪಾರ. ತಾವು ನಮ್ಮನ್ನೆಲ್ಲಾ ಅಗಲಿ ಇಂದಿಗೆ 25 ವರ್ಷಗಳಾದವು. ಆದರೂ ನಿಮ್ಮ ನೆನಪು ಅಮರ. ನೀವು ನಡೆದು ಬಂದ ದಾರಿ ನಮಗೆ ಆದರ್ಶ. ತಾವು ಕರುಣಾಮೂರ್ತಿಗಳಾಗಿ, ದಾನಿಗಳಾಗಿ, ಸರ್ವಧರ್ಮ ಸಹಿಷ್ಣುತೆ ಉಳ್ಳವರಾಗಿ, ನಮಗೆಲ್ಲ ಬಾಳಿನ ದೀಪವಾಗಿದ್ದೀರಿ, ಭರವಸೆಯ ಬೆಳಕಾಗಿದ್ದೀರಿ. ತಾವು ಧರ್ಮಸ್ಥಳ, ಶ್ರವಣಬೆಳಗೊಳ, ನಾಯಕನಹಟ್ಟಿ ಶ್ರೀ ಗುರುತಿಪ್ಪೇಸ್ವಾಮಿ ಹಾಗೂ ನಾಡಿನ ಮಠಮಾನ್ಯಗಳಲ್ಲಿ ತೋರುತ್ತಿದ್ದ ಭಕ್ತಿ, ಶ್ರದ್ಧೆ, ವಿನಯ ಎಲ್ಲರೂ ಮೆಚ್ಚುವಂಥದ್ದು.

ನಿಮ್ಮ ಆತ್ಮಕ್ಕೆ ಸದಾ ಶಾಂತಿ ಸಿಗಲೆಂದು ಶಾಸನ ದೇವತೆಗಳಲ್ಲಿ ಪ್ರಾರ್ಥಿಸುತ್ತೇವೆ.

ದಿ|| ಶ್ರೀಮತಿ ಕಮಲಮ್ಮ ಮತ್ತು ನೇಮಿಚಂದ್ರಯ್ಯ ಹಾಗೂ ಕುಟುಂಬದವರು, ಬಂಧು-ಮಿತ್ರರು
ಶ್ರೀಮತಿ ಹರ್ಷಿಣಿ ಶ್ರೀ ಡಿ. ಸುಧಾಕರ ಮತ್ತು ಮಕ್ಕಳು, ಮೊಮ್ಮಕ್ಕಳು
ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಸಚಿವರು ಹಾಗೂ ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ ಮತ್ತು ಅಧ್ಯಕ್ಷರು, ಚಿತ್ರದುರ್ಗ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಚಿತ್ರದುರ್ಗ.
ಶ್ರೀಮತಿ ಪದ್ಮಾ ದಿ|| ಶ್ರೀ ವಿಜಯಕುಮಾರ್ ಮತ್ತು ಮಕ್ಕಳು, ಮೊಮ್ಮಕ್ಕಳು, ಚಳ್ಳಕೆರೆ.
ಶ್ರೀಮತಿ ಪಂಕಜಮ್ಮ ಶ್ರೀ ನಿರ್ಮಲ್ ಕುಮಾರ್ ಮತ್ತು ಮಕ್ಕಳು, ಚಳ್ಳಕೆರೆ.
ಶ್ರೀಮತಿ ಸುಜಾತಾ ದಿ|| ಶ್ರೀ ದಿನೇಶ್ ಮತ್ತು ಮಕ್ಕಳು, ಚಳ್ಳಕೆರೆ.
ಶ್ರೀಮತಿ ಗೀತಾ ಶ್ರೀ ಜೆ. ವೆಂಕಟೇಶ್, ಮಾಜಿ ಅಧ್ಯಕ್ಷರು, ಪುರಸಭೆ, ಚಳ್ಳಕೆರೆ. ಮತ್ತು ಮಕ್ಕಳು, ಚಳ್ಳಕೆರೆ.
ಅಧ್ಯಕ್ಷರು, ಪದಾಧಿಕಾರಿಗಳು, ಮುಖಂಡರು, ಜೈನ ಸಮಾಜ, ಚಳ್ಳಕೆರೆ ಹಾಗೂ ಬಂಧು-ಮಿತ್ರರು

7ನೇ ವರ್ಷದ ಸ್ಮರಣೆ

ಡಾ. ಎಸ್. ಅದೀಪ್
05-06-1989 - 01-10-2018
ಸದಾ ನಿನ್ನ ನೆನಪಿನಲ್ಲಿ
ಕುಟುಂಬವರ್ಗದವರು

ವೈಕುಂಠ ಸಮಾರಾಧನೆ



ಶ್ರೀ ಕೆ.ಎಂ.ಮುನಿರಾಜು
ದಿವಂಗತ ಕೆ.ಎಸ್. ಮಾರಪ್ಪನವರ ಮಗ

ಇವರು ದಿ:22.09.2025 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ವೈಕುಂಠ ಸಮಾರಾಧನೆಯನ್ನು ದಿನಾಂಕ: 02.10.2025, ಗುರುವಾರ, ಬೆಳಗ್ಗೆ 10.00ಕ್ಕೆ ನಮ್ಮ ಸ್ವಗೃಹ ನಂ. 35/1, 19ನೇ 'ಬಿ' ಮುಖ್ಯರಸ್ತೆ, 14ನೇ ಅಡ್ಡರಸ್ತೆ, ಕೇತಮಾರನಹಳ್ಳಿ, ರಾಜಾಜಿನಗರ, ಬೆಂಗಳೂರು-560010. ಇಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖಪತ್ತರು: ಪತ್ನಿ– ಶ್ರೀಮತಿ ಪಾರ್ವತಮ್ಮ ಮತ್ತು ಮಕ್ಕಳು ಹಾಗೂ ಕುಟುಂಬದವರು. ಮೊ: 9980083229

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಬೆಂಗಳೂರು ಮನೆಕೆಲಸಕ್ಕೆ ಒಬ್ಬಳೇ ಮಹಿಳೆ ಇರುವವರು ಶಾಶ್ವತವಾಗಿ ಮನೆಯಲ್ಲಿ ಉಳಿದು ಕೊಳ್ಳುವಂತವರು ವಯಸ್ಸು 45ರ ಒಳಗೆ, ಊಟ, ವಸತಿ, ಜಿಗಣಿ: 9901931555

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777503, 8884777502.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

ಮೈಸೂರಿನಲ್ಲಿ ಬಂಧಿಸಿದ್ದ ವ್ಯಕ್ತಿ ಕುಲು ಪೊಲೀಸ್ ಕಸ್ಟಡಿಗೆ

ಶಿಮ್ಲಾ (ಪಿಟಿಐ): ಇ–ಮೇಲ್ ಮೂಲಕ ಬಾಂಬ್ ಬೆದರಿಕೆ ಹಾಕಿದ್ದ ಪ್ರಕರಣದಲ್ಲಿ ಮೈಸೂರು ಪೊಲೀಸರು ಬಂಧಿಸಿದ್ದ ವ್ಯಕ್ತಿಯನ್ನು ಮಂಗಳವಾರ ಕುಲುವಿಗೆ ಕರೆತರಲಾಗಿದ್ದು, ವಿಚಾರಣೆಗಾಗಿ ಪೊಲೀಸರು ಐದು ದಿನ ವಶಕ್ಕೆ ಪಡೆದಿದ್ದಾರೆ.

ದೆಹಲಿಯ ನಿತಿನ್ ಶರ್ಮಾ ಬಂಧಿತ ಆರೋಪಿ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕುಲುವಿನ ಸರ್ಕಾರಿ ಕಚೇರಿಗಳು, ಸಾರ್ವಜನಿಕ ಸ್ಥಳಗಳಲ್ಲಿ ಬಾಂಬ್ ಸ್ಫೋಟಿಸುವುದಾಗಿ ಕಳೆದ ಮೇ 2ರಂದು ಜಿಲ್ಲಾಧಿಕಾರಿ ಕಚೇರಿಗೆ ಬೆದರಿಕೆಯ ಇ–ಮೇಲ್ ಬಂದಿತ್ತು.

ಕಳೆದ ಏ. 16ರಂದು ಹಿಮಾಚಲ ಪ್ರದೇಶದ ಮುಖ್ಯ ಕಾರ್ಯದರ್ಶಿ ಕಚೇರಿ ಹಾಗೂ ಮಂಡಿ ಜಿಲ್ಲಾಧಿಕಾರಿ ಕಚೇರಿ, ಏ. 25ರಂದು ಚಂಬಾ, ಹಮೀರ್‌ಪುರ ಜಿಲ್ಲಾಧಿಕಾರಿ ಕಚೇರಿಗಳಿಗೂ ಇದೇ ರೀತಿಯ ಬೆದರಿಕೆ ಬಂದಿತ್ತು.

ತನಿಖೆ ಕೈಗೊಂಡಿದ್ದ ಪೊಲೀಸರು ಮಂಗಳೂರು, ಬೆಂಗಳೂರಿನಲ್ಲಿ ಎರಡು ಮೊಬೈಲ್ ವಶಪಡಿಸಿಕೊಂಡಿದ್ದರು. ಈ ಮೊಬೈಲನ್ನು ಮಡಿಕೇರಿಯಲ್ಲಿ ಕಳವು ಮಾಡಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆರೋಪಿ ನಿತಿನ್ ಶರ್ಮಾನನ್ನು ಮೈಸೂರು ಪೊಲೀಸರು ಆಗಸ್ಟ್‌ನಲ್ಲಿ ಬಂಧಿಸಿದ್ದರು. ಇದೇ ರೀತಿಯ ಬೆದರಿಕೆ ಹಾಕಿದ್ದಕ್ಕಾಗಿ ತಮಿಳುನಾಡು, ಪುದುಚೇರಿ, ಹೈದರಾಬಾದ್‌ನಲ್ಲೂ ಈತನ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಾಗಿವೆ ಎಂದಿದ್ದಾರೆ.

ಬಿಜೆಪಿ ನಾಯಕ ಮಲ್ಹೋತ್ರ ನಿಧನ

ನವದೆಹಲಿ (ಪಿಟಿಐ): ಬಿಜೆಪಿ ಹಿರಿಯ ನಾಯಕ ವಿಜಯ್ ಕುಮಾರ್ ಮಲ್ಹೋತ್ರ (93) ಮಂಗಳವಾರ ಬೆಳಿಗ್ಗೆ ಇಲ್ಲಿ ನಿಧನ ಹೊಂದಿದರು. ಕಳೆದ ಕೆಲವು ದಿನಗಳಿಂದ ಮಲ್ಹೋತ್ರ ಅವರು ಏಮ್ಸ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು.


ವಿಜಯ್ ಕುಮಾರ್ ಮಲ್ಹೋತ್ರ

ಬಿಜೆಪಿಯ ದೆಹಲಿ ಘಟಕದ ಮೊದಲ ಅಧ್ಯಕ್ಷರಾಗಿದ್ದ ಅವರು ಈ ಕ್ಷೇತ್ರವನ್ನು ಐದು ಬಾರಿ ಲೋಕಸಭೆಯಲ್ಲಿ ಪ್ರತಿನಿಧಿಸಿದ್ದರು. ದೆಹಲಿ ವಿಧಾನಸಭೆಯಲ್ಲಿ ವಿಪಕ್ಷ ನಾಯಕರಾಗಿದ್ದರು. ಅಲ್ಲದೆ, 2018ರ ವಿಧಾನಸಭೆ ಚುನಾವಣೆಯಲ್ಲಿ ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಬಿಂಬಿಸಲ್ಪಟ್ಟಿದ್ದರು. ಆದರೆ, ಈ ಚುನಾವಣೆಯಲ್ಲಿ ಶೀಲಾ ದೀಕ್ಷಿತ್ ನೇತೃತ್ವದ ಕಾಂಗ್ರೆಸ್ ಅಧಿಕಾರ ಉಳಿಸಿಕೊಂಡಿತ್ತು.

ಪ್ರಜಾವಾಣಿ ನವವರ್ಣ

ಭಾಗವಹಿಸಿದ ಎಲ್ಲರಿಗೂ ಧನ್ಯವಾದಗಳು. ಈ ರೀತಿಯ ಇನ್ನೂ ಹಲವಾರು ಚಟುವಟಿಕೆಗಳಲ್ಲಿ ಭಾಗವಹಿಸಲು ಈ ವಾಟ್ಸಾಪ್ ಸಂಖ್ಯೆಗೆ ನಿಮ್ಮ ಸಂದೇಶ / ಭಾವಚಿತ್ರಗಳನ್ನು ಕಳುಹಿಸಿ.
7338018541
ಹೆಚ್ಚಿನ ಮಾಹಿತಿಗೆ ಪ್ರಜಾವಾಣಿಯನ್ನು ಪ್ರತಿನಿತ್ಯ ತಪ್ಪದೇ ಓದಿರಿ

ಎಂಇಎಸ್ ಸಿಬ್ಬಂದಿ, ಬೆಂಗಳೂರು

ಮಂಜುಳಾಕುಮಾರಿ & ಸಹೋದರಿ, ಬೆಂಗಳೂರು

ಇಥಾನ್ಯ & ಗೆಳತಿಯರು, ಹೊಸಕೋಟೆ

ಎಸ್ ಎಸ್ ಕುಟುಂಬ, ಅತ್ರಾಡಿ

ಅಣೆಕಟ್ಟುಗಳ ಪುನರ್ವಸತಿ & ಸುಧಾರಣಾ ಯೋಜನೆ

ಅಮೃತಾ & ಗೆಳತಿಯರು

ಕ.ರಾ.ಹ.ಸಂ. ಪ್ರಧಾನ ಕಚೇರಿಯ ಸಿಬ್ಬಂದಿ ವಿಭಾಗದವರು

ಶಿವಶಕ್ತಿ ಬಜನಾ ಮಂಡಳಿ, ಇಂದಿರಾನಗರ

ಲಕ್ಷ್ಮಿ & ಗೆಳತಿಯರು, ನಾಗರಭಾವಿ

ಶಾರದ ಕವಿತಾ & ಗೆಳತಿಯರು CEX ಲೇಔಟ್

ಮಂಜುಳಾ & ಗೆಳತಿ, ರಾಜಾಜಿನಗರ

ಹರ್ಷಿತಾ, ಕೆಆರ್‌ಡಿ ಸಿವಿಲ್

ರೂಪ & ಗೆಳತಿಯರು, ನಾಗರಭಾವಿ

ಕವಿತಾ & ಗೆಳತಿಯರು, ಬೆಂಗಳೂರು

ವಿದ್ಯಾ & ರೇಖಾ, KPTCL

ಅಕ್ಷತಾ & ಗೆಳತಿಯರು, ಉಡುಪಿ

ಶ್ರೀ ವಿನಾಯಕ ವಿದ್ಯಾಕೇಂದ್ರ, ಕೊಡಗಿಹಾಳ

ಸುಮಾ & ತಂಡ, ಬೈರಸಂದ್ರ

ಹೇಮಾ & ಗೆಳತಿಯರು, ಬೆಂಗಳೂರು

ಮಮತಾ & ಗೆಳತಿಯರು, ಬೆಂಗಳೂರು

ವಿಜಯಲಕ್ಷ್ಮಿ & ಗೆಳತಿಯರು, ಇಂಡಿಯಾ ಪೋಸ್ಟ್ ಬೆಂಗಳೂರು

ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಭಕ್ತರು, ಬೆಂಗಳೂರು

ದಸರಾ ಹಬ್ಬದ ಶುಭಾಶಯಗಳು

ವಿಜಯಾ & ಗೆಳತಿಯರು, BTM ಲೇಔಟ್

KSMCA ಸಂಸ್ಥೆಯ ಮಹಿಳಾ ಸದಸ್ಯರು

ಶ್ರೀ ಸಾಯಿವಿದ್ಯಾ ಶಿಕ್ಷಣ ಸಿಬ್ಬಂದಿ, ರಾಜಾನುಕುಂಟೆ

ರಾಗಿಣಿ ದ್ವಿವೇದಿ, ನಟಿ

ಸುನಿತಾ & ಮಗಳು, ಬೆಂಗಳೂರು

ಬೆಥನಿ ಪ್ರೌಢಶಾಲಾ ಸಿಬ್ಬಂದಿ, ಕೋರಮಂಗಲ

ರಾಜೇಶ್ವರಿ & ಗೆಳತಿಯರು, ಜಕ್ಕೂರು

DRDO ಸಿಬ್ಬಂದಿ, ಬೆಂಗಳೂರು

ಆಶಾ & ಗೆಳತಿಯರು, ಬೆಂಗಳೂರು

ಸಾಂಸ್ಕೃತಿಕ ಮುನ್ನೋಟ

ಗಾಂಧಿ ಸ್ಮೃತಿ ಸಂಗೀತೋತ್ಸವ

ಪ್ರವೀಣ್ ಗೋಡ್ಖಿಂಡಿ

ಬೆಂಗಳೂರು: ನಗರದ ಸ್ವರ ಫೌಂಡೇಷನ್ ಚೌಡಯ್ಯ ಮೆಮೋರಿಯಲ್ ಹಾಲ್‌ನಲ್ಲಿ ಅ.3ರ ಸಂಜೆ 5 ಗಂಟೆಗೆ 'ಗಾಂಧಿ ಸ್ಮೃತಿ' ಸಂಗೀತೋತ್ಸವ ಹಮ್ಮಿಕೊಂಡಿದೆ.

ಕಲಾವಿದರಾದ ಪ್ರವೀಣ್ ಗೋಡ್ಖಿಂಡಿ, ರವೀಂದ್ರ ಯಾವಗಲ್, ಮುದ್ದುಮೋಹನ್, ವಿಶ್ವನಾಥ ನಾಕೋಡ್, ವ್ಯಾಸಮೂರ್ತಿ ಕಟ್ಟಿ, ರಾಜೇಂದ್ರ ನಾಕೋಡ್, ಪಂಚಾಕ್ಷರಿ ಹಿರೇಮಠ, ಪ್ರದ್ಯುಮ್ನ ಕರ್ಪೂರ, ವೈಶಾಲಿ ಅವರು ಕಾರ್ಯಕ್ರಮದಲ್ಲಿ ಗಾಂಧೀಜಿ ಅವರಿಗೆ ಸಂಗೀತ ನಮನ ಸಲ್ಲಿಸುತ್ತಾರೆ.

ಸಂಗೀತೋತ್ಸವಕ್ಕೆ ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಬಿ.ಎಲ್.ಶಂಕರ್ ಚಾಲನೆ ನೀಡುತ್ತಾರೆ. ನಿವೃತ್ತ ಐಎಎಸ್ ಅಧಿಕಾರಿಗಳಾದ ಚಿರಂಜೀವ್ ಸಿಂಘ್, ಕೆ.ಜೈರಾಜ್, ಶಿವಯೋಗಿ ಕಳಸದ ಅವರು ಅತಿಥಿಗಳಾಗಿ ಭಾಗವಹಿಸುತ್ತಾರೆ. ಎಲ್ಲರಿಗೂ ಪ್ರವೇಶ ಉಚಿತ ಎಂದು ಪ್ರಕಟಣೆ ತಿಳಿಸಿದೆ.

ವ್ಯಂಗ್ಯಚಿತ್ರ ಪ್ರದರ್ಶನ

ಬೆಂಗಳೂರು: ಕರ್ನಾಟಕ ಗಾಂಧಿ ಸ್ಮಾರಕ ನಿಧಿಯು 75ನೇ ವಾರ್ಷಿಕೋತ್ಸವದ ಅಂಗವಾಗಿ ಅ.4ರಿಂದ 31ರವರೆಗೆ ಎಂ.ಜಿ ರಸ್ತೆಯಲ್ಲಿರುವ ಭಾರತೀಯ ವ್ಯಂಗ್ಯಚಿತ್ರಕಾರರ ಸಂಸ್ಥೆಯಲ್ಲಿ 'ಗಾಂಧಿ' ವ್ಯಂಗ್ಯಚಿತ್ರ ಪ್ರದರ್ಶನ ಹಮ್ಮಿಕೊಂಡಿದೆ.

ಭಾನುವಾರ ಮತ್ತು ಸಾರ್ವಜನಿಕ ರಜಾ ದಿನ ಹೊರತುಪಡಿಸಿ, ಉಳಿದ ದಿನಗಳು ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ ಈ ಪ್ರದರ್ಶನ ನಡೆಯಲಿದೆ. ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ ಅವರು ಈ ಪ್ರದರ್ಶನ ಉದ್ಘಾಟಿಸುತ್ತಾರೆ.

ಈ ಪ್ರದರ್ಶನದಲ್ಲಿ 23 ದೇಶಗಳ 110 ವ್ಯಂಗ್ಯಚಿತ್ರಗಳನ್ನು ಪ್ರದರ್ಶಿಸಲಾಗುತ್ತದೆ. ಪ್ರವೇಶ ಉಚಿತ ಎಂದು ಪ್ರಕಟಣೆ ತಿಳಿಸಿದೆ.



ಗಾಂಧೀಜಿ

'ಧ್ವನಿ' ಸಂಗೀತ ಉತ್ಸವ

ಬೆಂಗಳೂರು: ಬೆಂಗಳೂರು ಕಿಡ್ನಿ ಫೌಂಡೇಷನ್ ಅ.4 ಮತ್ತು 5ರಂದು ಕೆ.ಆರ್. ರಸ್ತೆಯಲ್ಲಿರುವ ಬೆಂಗಳೂರು ಗಾಯನ ಸಮಾಜದಲ್ಲಿ 'ಧ್ವನಿ–ಬಿಕೆಎಫ್ ಪಂಡಿತ್ ಮಲ್ಲಿಕಾರ್ಜುನ ಮನ್ಸೂರ್ ಹಿಂದೂಸ್ತಾನಿ ಸಂಗೀತ ಉತ್ಸವ' ಹಮ್ಮಿಕೊಂಡಿದೆ.



ವೆಂಕಟೇಶ್ ಕುಮಾರ್

ಈ ಕಾರ್ಯಕ್ರಮದಿಂದ ಬರುವ ಆದಾಯವನ್ನು ಗ್ರಾಮೀಣ ಭಾಗದ ರೋಗಿಗಳ ಡಯಾಲಿಸಿಸ್ ಸೇವೆಗೆ ಬಳಸಿಕೊಳ್ಳಲಾಗುತ್ತದೆ. ಶನಿವಾರ ಸಂಜೆ 5 ಗಂಟೆಗೆ ಕಾರ್ಯಕ್ರಮ ಪ್ರಾರಂಭವಾಗಲಿದ್ದು, ಅಂದು ಎರಡು ಸಂಗೀತ ಕಛೇರಿ ನಡೆಯಲಿದೆ. ಭಾನುವಾರ ಬೆಳಿಗ್ಗೆ 9.30ರಿಂದ ಇಡೀ ದಿನ ಸಂಗೀತ ಕಾರ್ಯಕ್ರಮ ನಡೆಯಲಿದೆ.

ಎರಡು ದಿನಗಳ ಈ ಉತ್ಸವದಲ್ಲಿ ಶಿವಕುಮಾರ್ ಶರ್ಮಾ, ಎನ್. ರಾಜಂ, ಕಿಶೋರ್ ಅಮೋನ್ಕರ್, ವೆಂಕಟೇಶ್ ಕುಮಾರ್, ವಿಶ್ವಮೋಹನ್ ಭಟ್, ರಶೀದ್ ಖಾನ್, ಗಣಪತಿ ಭಟ್, ಜಯಶ್ರೀ ಪಟ್ನೇಕರ್ ಸೇರಿ ಹೆಸರಾಂತ ಕಲಾವಿದರು ಪಾಲ್ಗೊಳ್ಳುತ್ತಾರೆ ಎಂದು ಪ್ರಕಟಣೆ ತಿಳಿಸಿದೆ.

ವಿವರಕ್ಕೆ: 080 26614848 ಅಥವಾ 9901788354

ಪ್ರತಿ ಗುರುವಾರ ಪ್ರಕಟವಾಗುವ 'ಸಾಂಸ್ಕೃತಿಕ ಮುನ್ನೋಟ' ಅಂಕಣದಲ್ಲಿ ಪ್ರಕಟಿಸಲು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಗಿನ ಇ–ಮೇಲ್‌ಗೆ nagaradalli_indu@prajavani.co.in (ಬುಧವಾರ ಸಂಜೆ 6 ಗಂಟೆ ಒಳಗೆ) ಕಳುಹಿಸಿ

ನೃತ್ಯ ರೂಪಕ

ಬೆಂಗಳೂರು: ಗೋಬ್ರಹ್ಮ ಪ್ರೊಡಕ್ಷನ್ಸ್ ಮತ್ತು ಶಿವಪ್ರಿಯಾ ಸ್ಕೂಲ್ ಆಫ್ ಡಾನ್ಸ್ ಜಂಟಿಯಾಗಿ 'ಚಂದ್ರಲೇಖಾ–ದಿ ಲಾಸ್ಟ್ ಕೋರ್ಟಿಸಾನ್' ಶೀರ್ಷಿಕೆಯಡಿ ಅ.4 ರಂದು ಮಧ್ಯಾಹ್ನ 3 ಮತ್ತು ಸಂಜೆ 7 ಗಂಟೆಗೆ ಮಲ್ಲೇಶ್ವರದಲ್ಲಿರುವ ಚೌಡಯ್ಯ ಸ್ಮಾರಕ ಭವನದಲ್ಲಿ ನೃತ್ಯ ರೂಪಕ ಹಮ್ಮಿಕೊಂಡಿದೆ.

ಪ್ರದರ್ಶನದಲ್ಲಿ ತರಬೇತಿ ಪಡೆದ 80ಕ್ಕೂ ಹೆಚ್ಚು ನೃತ್ಯ ಕಲಾವಿದರು, ಭರತನಾಟ್ಯ, ಕೂಚಿಪುಡಿ, ಕಥಕ್ ಮತ್ತು ಒಡಿಸ್ಸಿ ನೃತ್ಯ ಪ್ರಕಾರಗಳನ್ನು ಸಂಗೀತ ಮತ್ತು ನಾಟಕದೊಂದಿಗೆ ಸಂಯೋಜಿಸಿದ್ದಾರೆ. ಸಂಜಯ್ ಶಾಂತಾರಾಮ್ ಅವರು ಈ ತಂಡವನ್ನು ಮುನ್ನಡೆಸುತ್ತಿದ್ದಾರೆ. ಪ್ರವೀಣ್ ಡಿ. ರಾವ್ ಅವರು ಸಂಗೀತ ನಿರ್ದೇಶನ ಮಾಡಿದ್ದಾರೆ. ಟಿಕೆಟ್‌ಗಳು ಬುಕ್ ಮೈ ಶೋ ದಲ್ಲಿ ಲಭ್ಯ ಎಂದು ಪ್ರಕಟಣೆ ತಿಳಿಸಿದೆ.

'ಚಂದ್ರಲೇಖಾ– ದಿ ಲಾಸ್ಟ್ ಕೋರ್ಟಿಸಾನ್' ನೃತ್ಯ ರೂಪಕ

ಶಾಸಕ ಎಸ್‌ಆರ್‌.ವಿಶ್ವನಾಥ್ ಅವರು ರೈತರೊಂದಿಗೆ ಮಾತುಕತೆ ನಡೆಸಿದರು

ಏಕರೂಪ ತೆರಿಗೆ ನಿಗದಿಗೆ ಆಗ್ರಹ

ಡಾ.ಶಿವರಾಮ ಕಾರಂತ ಬಡಾವಣೆ ಸಂತ್ರಸ್ತ ರೈತರ ಮನವಿ

ಪ್ರಜಾವಾಣಿ ವಾರ್ತೆ

ಯಲಹಂಕ: ಡಾ.ಕೆ.ಶಿವರಾಮ ಕಾರಂತ ಬಡಾವಣೆಯ ಮನೆಗಳಿಗೆ ಅವೈಜ್ಞಾನಿಕವಾಗಿ ವಿಧಿಸಿರುವ ಪುರೋಭಿವೃದ್ಧಿ ತೆರಿಗೆ (ಅಭಿವೃದ್ಧಿ ತೆರಿಗೆ) ರದ್ದುಗೊಳಿಸಿ, ಎಲ್ಲ ಗ್ರಾಮಗಳಿಗೂ ಏಕರೂಪದ ಕನಿಷ್ಠ ದರ ನಿಗದಿಪಡಿಸಬೇಕು ಎಂದು ಶಾಸಕ ಎಸ್.ಆರ್.ವಿಶ್ವನಾಥ್ ಅವರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು (ಬಿಡಿಎ) ಒತ್ತಾಯಿಸಿದರು.

ಶಿವರಾಮ ಕಾರಂತ ಬಡಾವಣೆ ವ್ಯಾಪ್ತಿಗೆ ಒಳಪಡುವ 17 ಹಳ್ಳಿಗಳ ಗ್ರಾಮಸ್ಥರಿಂದ ರಾಮಗೊಂಡನಹಳ್ಳಿ ಗ್ರಾಮದಲ್ಲಿ ಆಯೋಜಿಸಿದ್ದ ಅರಿವು ಮೂಡಿಸುವ ಸಭೆಯಲ್ಲಿ ಮಾತನಾಡಿದ ಅವರು, 'ನ್ಯಾಯಮೂರ್ತಿ ಚಂದ್ರಶೇಖರ್ ಸಮಿತಿಯಿಂದ (ಜೆಸಿಸಿ) ದೃಢೀಕರಣ ಪತ್ರ ನೀಡಿರುವ ಮನೆಗಳಿಗೆ ಅವೈಜ್ಞಾನಿಕವಾಗಿ ತೆರಿಗೆ ವಿಧಿಸಲಾಗಿದೆ. ಬಡಾವಣೆಯಲ್ಲಿ ಈ ಹಿಂದೆಯೇ ನಿವೇಶನ ಖರೀದಿಸಿ, ನಿರ್ಮಿಸಿಕೊಂಡಿರುವ ಮನೆಗಳನ್ನು ತೆರವುಗೊಳಿಸದಂತೆ ಕ್ರಮವಹಿಸಲಾಗಿದೆ. ಆದರೆ, ಬಡಾವಣೆ ವ್ಯಾಪ್ತಿಯ 17 ಗ್ರಾಮಗಳಲ್ಲಿ ಪುರೋಭಿವೃದ್ಧಿ ಶುಲ್ಕ ನಿಗದಿ ವಿಷಯದಲ್ಲಿ ಬಿಡಿಎ ಸರಿಯಾದ ಮಾನದಂಡ ಅನುಸರಿಸಿಲ್ಲ' ಎಂದು ದೂರಿದರು.

ಒಂದೊಂದು ಗ್ರಾಮಗಳಿಗೆ ಒಂದೊಂದು ರೀತಿಯಲ್ಲಿ ತೆರಿಗೆ ವಿಧಿಸಿರುವುದು ಸ್ಥಳೀಯ ಗ್ರಾಮಸ್ಥರ ಆಕ್ಷೇಪ ಮತ್ತು ಆಕ್ರೋಶಕ್ಕೆ ಕಾರಣವಾಗಿದೆ. ಇದರಿಂದ ಮೊದಲೇ ತಮ್ಮ ಜಮೀನುಗಳನ್ನು ಕಳೆದುಕೊಂಡು ಸಂಕಷ್ಟದಲ್ಲಿರುವ ರೈತರಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ. ಈ ದಿಸೆಯಲ್ಲಿ ಎಲ್ಲ ಗ್ರಾಮಗಳಿಗೂ ಏಕರೂಪದ ಮತ್ತು ಕಡಿಮೆ ತೆರಿಗೆಯನ್ನು ವಿಧಿಸಬೇಕೆಂದು ಸ್ಥಳೀಯರು ಮನವಿ ಮಾಡಿದ್ದಾರೆ. ಈ ಕುರಿತು ಬಿಡಿಎ ಆಯುಕ್ತರ ಬಳಿ ಮಾತನಾಡಿ, ಸ್ಥಳೀಯರ ಬೇಡಿಕೆ ಈಡೇರಿಸಬೇಕೆಂದು ಒತ್ತಾಯಿಸಿದ್ದೇನೆ ಎಂದರು.

ಬಡಾವಣೆ ನಿರ್ಮಾಣಕ್ಕಾಗಿ ಭೂಮಿ ಕಳೆದುಕೊಂಡಿರುವ ಸಂತ್ರಸ್ತರಿಗೆ ಪರಿಹಾರವಾಗಿ ಶೇಕಡ 40ರಷ್ಟು ನಿವೇಶನ ನೀಡುವ ಸೂತ್ರವನ್ನು ರೈತರು ಒಪ್ಪಿಕೊಂಡಿದ್ದಾರೆ. ತಮ್ಮ ಸ್ವಂತ ಜಮೀನಿನಲ್ಲೇ ನಿವೇಶನ ನೀಡಬೇಕು, ಸಾಧ್ಯವಾಗದಿದ್ದರೆ ಪಕ್ಕದ ಅಥವಾ ಅದೇ ಗ್ರಾಮಕ್ಕೆ ಒಳಪಡುವ ಪ್ರದೇಶದಲ್ಲಿ ನಿವೇಶನ ನೀಡಬೇಕೆಂಬುದು ರೈತರ ಬೇಡಿಕೆ. ಅಧಿಕಾರಿಗಳು, ಸರ್ಕಾರದ ಪ್ರತಿನಿಧಿಗಳೊಂದಿಗೆ ಚರ್ಚಿಸಿ, ಸಂತ್ರಸ್ತರಿಗೆ ನ್ಯಾಯ ಒದಗಿಸಿಕೊಡಲು ಪ್ರಯತ್ನ ಮಾಡಲಾಗುವುದು ಎಂದು ಭರವಸೆ ನೀಡಿದರು.

ರೈತ ಮುಖಂಡರಾದ ರಾಮಗೊಂಡನಹಳ್ಳಿ ರಮೇಶ್, ಮುನಿರಾಜು, ಬಸವರಾಜ ಪಾದಯಾತ್ರಿ, ಎಚ್. ಸುರೇಶ್, ಪ್ರಭಾಕರ್, ಕೆ.ಪ್ರಕಾಶ್, ಗ್ರಾಮ ಪಂಚಾಯಿತಿ ಸದಸ್ಯರಾದ ನಾಗರಾಜ್. ಎನ್, ಆಂಜಿನಮ್ಮ, ಅಕ್ಕಯಮ್ಮ, ಆರ್. ರಾಜೇಶ್ ಉಪಸ್ಥಿತರಿದ್ದರು.

ಅಪಸ್ಮಾರ ಪೀಡಿತ 1,300 ಬಡರೋಗಿಗಳ ಉಚಿತ ಶಸ್ತ್ರಚಿಕಿತ್ಸೆಗಾಗಿ ಇಸ್ರೊ ಮತ್ತು ಅಮೃತ ಆಸ್ಪತ್ರೆಗಳ ಸಹಕಾರದಲ್ಲಿ ರೂಪಿಸಲಾಗಿರುವ ಯೋಜನೆಗೆ ಕೇಂದ್ರ ಆರೋಗ್ಯ ಸಚಿವ ಜೆ.ಪಿ.ನಡ್ಡಾ ಸಾಂಕೇತಿಕವಾಗಿ ಚಾಲನೆ ನೀಡಿದರು

ಅಮೃತಾನಂದಮಯಿ ಸಾಧನೆ ಅನನ್ಯ: ಆರೋಗ್ಯ ಸಚಿವ ನಡ್ಡಾ

ಪ್ರಜಾವಾಣಿ ವಾರ್ತೆ

ಅಮೃತಪುರಿ (ಕೇರಳ): 'ಮಾತಾ ಅಮೃತಾನಂದಮಯಿ ಅವರು ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲಿ ಸಲ್ಲಿಸುತ್ತಿರುವ ಕರುಣಾಪೂರಿತ ಸೇವೆ ಸಮಾಜದ ವಂಚಿತ ಸಮುದಾಯದ ಪಾಲಿಗೆ ಭರವಸೆಯ ದಾರಿದೀಪ' ಎಂದು ಕೇಂದ್ರ ಆರೋಗ್ಯ ಸಚಿವ ಜೆ.ಪಿ.ನಡ್ಡಾ ಬಣ್ಣಿಸಿದರು.

ಕೇರಳದ ಕೊಲ್ಲಂ ಜಿಲ್ಲೆಯ ಮಾತಾ ಅಮೃತಾನಂದಮಯಿ ಅಂತರರಾಷ್ಟ್ರೀಯ ಕೇಂದ್ರ, ಅಮೃತಪುರಿಯಲ್ಲಿ ಆಯೋಜನೆಗೊಂಡಿದ್ದ ಮಾತಾ ಅಮೃತಾನಂದಮಯಿ ಅವರ 72ನೇ ಜನ್ಮದಿನಾಚರಣೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

'ಅಮ್ಮನ ಸಂಪೂರ್ಣ ಜೀವನ ಮಾನವತೆಯ ಸೇವೆಗೆ ಮೀಸಲಾಗಿದೆ. ಬಡ ವರ್ಗದವರಿಗಾಗಿ ಶಿಕ್ಷಣ ಕ್ಷೇತ್ರದಲ್ಲಿ ಅವರು ಇರಿಸಿರುವ ಹೆಜ್ಜೆಗಳು ಮತ್ತು ಮಹಿಳಾ ಸಬಲೀಕರಣಕ್ಕಾಗಿ ಹಮ್ಮಿಕೊಂಡಿರುವ ಅಸಂಖ್ಯ ಕಾರ್ಯಕ್ರಮಗಳು ಇಂದು ವಿಶ್ವದಾದ್ಯಂತ ಸದ್ದಿಲ್ಲದ ಕ್ರಾಂತಿಯನ್ನೇ ಮಾಡಿವೆ. ಅಮೃತ ಆಸ್ಪತ್ರೆಗಳ ಆರೋಗ್ಯ ಸೇವೆ, ಅಗಣಿತ ಸಂಶೋಧನೆ ಗಮನಾರ್ಹವಾಗಿವೆ' ಎಂದು ಶ್ಲಾಘಿಸಿದರು.

ತಿರುವನಂತಪುರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಸಂಸದ ಶಶಿ ತರೂರ್, 'ಮಾತಾ ಅಮೃತಾನಂದಮಯಿ ಭಾರತದ ಸನಾತನ ಆತ್ಮವಿದ್ದಂತೆ. ಅಮ್ಮನ ವಾತ್ಸಲ್ಯಪೂರಿತ ಅಪ್ಪುಗೆ, ದಯಾಳು ಗುಣ ಮತ್ತು ಲೋಕಸೇವೆ ಅನನ್ಯವಾದುದು. ಸಕಲ ಜೀವರಾಶಿಗಳ ಮೇಲಿನ ಬೇಷರತ್ತಾದ ಅವರ ನಿಷ್ಕಲ್ಮಷ ಪ್ರೀತಿ ಇವತ್ತು ವಿಶ್ವಮನ್ನಣೆ ಪಡೆದಿದೆ' ಎಂದರು.

'ಮಾನವ ಕಲ್ಯಾಣಕ್ಕಾಗಿ ಅಹರ್ನಿಶಿ ದುಡಿಯುತ್ತಿರುವ ಅಮ್ಮ ಪ್ರತಿಯೊಬ್ಬರ ಹೃದಯದೊಳಗಿನ ನಿಜ ಬೆಳಕನ್ನು ಉದ್ದೀಪಿಸುವ ಮೂಲಕ ಮಧುರ ಪ್ರೇಮಧಾರೆಯ ಸಿಂಚನಗೈಯ್ಯುತ್ತಿದ್ದಾರೆ. ಎಲ್ಲ ಕ್ಷೇತ್ರಗಳಲ್ಲಿ ಅವರು ನಿಮ್ನ ವರ್ಗಕ್ಕೆ ನೀಡುತ್ತಿರುವ ಸಹಾಯ ಹಸ್ತ ಮತ್ತು ನಿರ್ಗತಿಕರ ದೈಹಿಕ ಆರೋಗ್ಯಕ್ಕೆ ಅವರು ನೀಡಿರುವ ಒತ್ತು ಮನುಷ್ಯ ಪ್ರೇಮಕ್ಕೆ ಕೈಗನ್ನಡಿ' ಎಂದರು.

ಇದೇ ವೇಳೆ, ಮಲಯಾಳ ಭಾಷೆಯ ಖ್ಯಾತ ಸಾಹಿತಿ ಪಿ.ಆರ್.ನಾಥನ್ ಅವರಿಗೆ ವರ್ಷದ 'ಅಮೃತ ಕೀರ್ತಿ' ಪುರಸ್ಕಾರ ನೀಡಿ ಗೌರವಿಸಲಾಯಿತು. ಜೆ.ಪಿ.ನಡ್ಡಾ ಅವರು ನಾಥನ್ ಅವರಿಗೆ ₹1.23 ಲಕ್ಷ ಮೊತ್ತದ ನಗದು ಬಹುಮಾನ ವಿತರಿಸಿದರು.

ಹಲವು ಯೋಜನೆಗಳಿಗೆ ಚಾಲನೆ

- ಕೊಚ್ಚಿ ಮತ್ತು ಫರೀದಾಬಾದ್‌ನಲ್ಲಿರುವ ಅಮೃತ ಆಸ್ಪತ್ರೆಗಳ ಮೂಲಕ 300 ಉಚಿತ ಶಸ್ತ್ರಕ್ರಿಯೆ ಯೋಜನೆ
- ಕೇರಳ, ತಮಿಳುನಾಡು ಮತ್ತು ಕರ್ನಾಟಕದಲ್ಲಿ 6,000 ಉಚಿತ ಶೌಚಾಲಯಗಳ ನಿರ್ಮಾಣ
- ಅಮೃತ ವಿಶ್ವವಿದ್ಯಾಪೀಠದಲ್ಲಿ ಶಿಕ್ಷಣದಲ್ಲಿ 'ಅಸಿಸ್ಟೀವ್ ಟೆಕ್ನಾಲಜಿ'ಗೆ ಸಂಬಂಧಿಸಿದಂತೆ ನವೀನ ಯುನೆಸ್ಕೊ ಪೀಠ ಸ್ಥಾಪನೆ
- ಸ್ವಸಹಾಯ ಸಂಘಗಳಿಗೆ ಹೂಡಿಕೆ

ರೈಲು ಗಾಲಿ ಕಾರ್ಖಾನೆ
ಯಲಹಂಕ, ಬೆಂಗಳೂರು - 560064
ವೆಬ್‌ಸೈಟ್: www.rwf.indianrailways.gov.in
ಇ ಮೇಲ್: smm.rwfblr@gmail.com

ಟೆಂಡರ್ ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯೂಎಫ್/ಎಸ್/09/2025–26 ದಿ : 29.09.2025
ಟೆಂಡರ್ ಪ್ರಕಟಣೆ ಸಂಖ್ಯೆ ಆರ್‌ಡಬ್ಲ್ಯೂಎಫ್/ಎಸ್/07/2025–26 ದಿ : 25.08.2025 ಗೆ ತಿದ್ದುಪಡಿ

ಟೆಂಡರ್ ನಂ.: ಪಿ 2255344, ಆರ್‌ಡಬ್ಲ್ಯೂಎಫ್ ನಿರ್ದಿಷ್ಟತೆ ನಂ. ಆರ್‌ಡಬ್ಲ್ಯೂಎಫ್/ ಎಂ&ಪಿ/ 2024–25/ ಸಿ ಎನ್ ಸಿ ಎಂಡ್ ಮಿಲ್ಲಿಂಗ್, Rev-3. ಪ್ರಕಾರ ಸಿ ಎನ್ ಸಿ ಎಂಡ್ ಮಿಲ್ಲಿಂಗ್, ಸೆಂಟ್ರಿಂಗ್ ಮತ್ತು ಕಪ್ ಟರ್ನಿಂಗ್ ಯಂತ್ರವನ್ನು ಚಿಪ್ ಕನ್ವೇಯರ್‌ನೊಂದಿಗೆ ಪೂರೈಸುವುದು. ಕೊನೆಯ ದಿನಾಂಕವನ್ನು 26.09.2025 ರಿಂದ 31.10.02025 ಗೆ ಮುಂದುಡಲಾಗಿದೆ.

ಈ ತಿದ್ದುಪಡಿ ಪ್ರಕಟಣೆಯ ಟೆಂಡರ್ ದಸ್ತಾವೇಜು, ನಿರ್ದಿಷ್ಟತೆ ಮತ್ತು ತಿದ್ದುಪಡಿ ಇದ್ದಲ್ಲಿ ನಮ್ಮ ಆರ್‌ಡಬ್ಲ್ಯೂಎಫ್ ವೆಬ್‌ಸೈಟ್ www.rwf.indianrailways.gov.in ಅಥವಾ www.ireps.gov.in. ಪೋರ್ಟಲ್‌ನಲ್ಲಿ ಮಾತ್ರ ಲಭ್ಯವಿರುತ್ತದೆ.

ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು

ಅವಿರೋಧ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಪೂರ್ವ ತಾಲ್ಲೂಕಿನ ಭುವನೇಶ್ವರಿ ಒಕ್ಕಲಿಗರ ಸಂಘದ ನೂತನ ಅಧ್ಯಕ್ಷರಾಗಿ ಪಿ.ಎಂ. ನಾಗರಾಜು ಪನತ್ತೂರು ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಪಿ.ಎಂ. ನಾಗರಾಜು ಪನತ್ತೂರು

ಪ್ರಜಾವಾಣಿ ನವವರ್ಣ

ಭಾಗವಹಿಸಿದ ಎಲ್ಲರಿಗೂ ಧನ್ಯವಾದಗಳು. ಈ ರೀತಿಯ ಇನ್ನೂ ಹಲವಾರು ಚಟುವಟಿಕೆಗಳಲ್ಲಿ ಭಾಗವಹಿಸಲು ಈ ವಾಟ್ಸಾಪ್ ಸಂಖ್ಯೆಗೆ ನಿಮ್ಮ ಸಂದೇಶ / ಭಾವಚಿತ್ರಗಳನ್ನು ಕಳುಹಿಸಿ.

7338018541

ಹೆಚ್ಚಿನ ಮಾಹಿತಿಗೆ ಪ್ರಜಾವಾಣಿಯನ್ನು ಪ್ರತಿನಿತ್ಯ ತಪ್ಪದೇ ಓದಿರಿ

ಸಂಗೀತಾ & ಗೆಳತಿಯರು, ಹಿರಿಯಡ್ಕ

ಎಪಿಎಸ್ ಪಿಯು ಕಾಲೇಜು ಸಿಬ್ಬಂದಿ, ಬೆಂಗಳೂರು

ಗಿರಿನಗರ ಗೆಳತಿಯರ ಬಳಗ

ಅಂಬಿಕಾ & ಗೆಳತಿಯರು, ಗೊಲ್ಲಹಳ್ಳಿ

ವಿದ್ಯಾ & ತಂಡ, ಹೊಸೂರು

ದೇವಿಕಾ & ಗೆಳತಿಯರು, ಜೆಪಿ ನಗರ

ವಿಜಯಾ & ಗೆಳತಿಯರು, ದಿನ್ನೂರು

ಸುನಿತಾ & ಗೆಳತಿಯರು, ತುಮಕೂರು

ಸುಷ್ಮಾ & ಗೆಳತಿಯರು, BTM ಲೇಔಟ್

ಮಂಜುಳಾ & ಸಹೋದರಿಯರು, ದಾಸರಹಳ್ಳಿ

ಕರ್ನಾಟಕ ಗ್ರಾಮೀಣ ಬ್ಯಾಂಕ್ ಪ್ರಾದೇಶಿಕ ಕಚೇರಿ ಸಿಬ್ಬಂದಿ–ಕೋಲಾರ

ಶ್ರೀದೇವಿ & ಗೆಳತಿಯರು, ಆರ್‌ಟಿ ನಗರ

ಸಂಗೀತಾ ಭಟ್, ನಟಿ

ವೀಣಾ & ಗೆಳತಿಯರು, ಆರ್‌ಆರ್‌ನಗರ

SourceHub ಸಿಬ್ಬಂದಿ, ವಿಜಯನಗರ

ಜೆಸಿಂತಾ & ಸುನಂದಾ

ರಾಜ್ಯ ಒಕ್ಕಲಿಗರ ಸಂಘ ಮಹಿಳಾ ಸಿಬ್ಬಂದಿ

ನೈನಾ & ಗೆಳತಿಯರು, ಬೆಂಗಳೂರು

ದಸರಾ ಹಬ್ಬದ ಶುಭಾಶಯಗಳು

ಗೀತಾ & ಗೆಳತಿಯರು, ವಿಜಯನಗರ

ಸಿದ್ಧಗಂಗಾ ಪಬ್ಲಿಕ್ ಸ್ಕೂಲ್ ಸಿಬ್ಬಂದಿ, ಚಂದ್ರಾ ಲೇಔಟ್

ಹೇಮಲತಾ & ಗೆಳತಿಯರು, ಕುಮಾರಸ್ವಾಮಿ ಲೇಔಟ್

ಕೀರ್ತನಾ ಶೆಟ್ಟಿ ಗೆಳತಿಯರು, ಬೆಂಗಳೂರು

ಶ್ರೀರಾಮ ಲೇಔಟ್ ಗೆಳತಿಯರು, ಬೆಂಗಳೂರು

ಶಿಲ್ಪಾ ನೃತ್ಯ ತಂಡ, ಜಗಜ್ಯೋತಿ ನಗರ

ಲಕ್ಷ್ಮಿ & ಕುಟುಂಬ, ಬೆಂಗಳೂರು

ದೀಪ್ತಿ ಮಿಂಚು: ಭಾರತ ಶುಭಾರಂಭ

ಅಮನ್ಜೋತ್, ಸ್ನೇಹ ರಾಣಾ ಉಪಯುಕ್ತ ಕಾಣಿಕೆ • ಲಂಕಾಕ್ಕೆ 59 ರನ್‌ಗಳ ಸೋಲು

ಐಸಿಸಿ ಮಹಿಳಾ ಏಕದಿನ ವಿಶ್ವಕಪ್

ಗುವಾಹಟಿ (ಪಿಟಿಐ): ಅನುಭವಿ ದೀಪ್ತಿ ಶರ್ಮಾ (53 ರನ್; 54ಕ್ಕೆ 3) ಅವರ ಆಲ್‌ರೌಂಡ್ ಆಟದ ನೆರವಿನಿಂದ ಭಾರತ ತಂಡವು ಮಂಗಳವಾರ ಇಲ್ಲಿ ನಡೆದ ಮಹಿಳೆಯರ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಉದ್ಘಾಟನಾ ಪಂದ್ಯದಲ್ಲಿ ಶ್ರೀಲಂಕಾ ತಂಡವನ್ನು ಡಕ್ವರ್ಥ್ ಲೂಯಿಸ್ ನಿಯಮದನ್ವಯ 59 ರನ್‌ಗಳಿಂದ ಮಣಿಸಿ ಶುಭಾರಂಭ ಮಾಡಿತು.

ಬರಸಾಪಾರಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯಕ್ಕೆ ಮಳೆ ಅಡಚಣೆ ಉಂಟು ಮಾಡಿತು. ಹೀಗಾಗಿ, ಇನಿಂಗ್ಸ್ ಅನ್ನು 47 ಓವರ್‌ಗಳಿಗೆ ನಿಗದಿ ಮಾಡಲಾಯಿತು. ಮೊದಲು ಬ್ಯಾಟ್ ಮಾಡಿದ ಆತಿಥೇಯ ತಂಡವು ದೀಪ್ತಿ ಮತ್ತು ಅಮನ್ಜೋತ್ ಕೌರ್ (57; 56ಎ) ಅವರ ಅರ್ಧಶತಕಗಳ ನೆರವಿನಿಂದ 8 ವಿಕೆಟ್‌ಗೆ 269 ರನ್ ಗಳಿಸಿತು. ಡಿಎಲ್‌ಎಸ್ ನಿಯಮದ ಆಧಾರದಲ್ಲಿ ಎದುರಾಳಿ ತಂಡಕ್ಕೆ 271 ರನ್‌ಗುರಿ ಪರಿಷ್ಕರಿಸಲಾಯಿತು.

ಅದನ್ನು ಬೆನ್ನಟ್ಟಿದ ಲಂಕಾ ತಂಡವು 45.4 ಓವರ್‌ಗಳಲ್ಲಿ 211 ರನ್ ಗಳಿಸಿ ಹೋರಾಟವನ್ನು ಮುಗಿಸಿತು. ಒಂದು ಹಂತದಲ್ಲಿ ಒಂದು ವಿಕೆಟ್‌ಗೆ 80 ರನ್ ಗಳಿಸಿ ಸುಸ್ಥಿತಿಯಲ್ಲಿದ್ದ ತಂಡವು ಭಾರತದ ಬೌಲರ್‌ಗಳ ಸಾಂಘಿಕ ದಾಳಿಯ ಮುಂದೆ ಕುಸಿತ ಕಂಡಿತು. ನಾಯಕಿ ಚಾಮರಿ ಅಟ್ಟಪಟ್ಟು (43;47ಎ), ನೀಲಾಕ್ಷಿಕಾ (35;29ಎ) ಹೊರತುಪಡಿಸಿ ಉಳಿದ ಬ್ಯಾಟರ್‌ಗಳು ಕ್ರೀಸ್‌ನಲ್ಲಿ ಹೆಚ್ಚು ಹೊತ್ತು ನಿಲ್ಲಲಿಲ್ಲ. ದೀಪ್ತಿ ಮೂರು ವಿಕೆಟ್ ಪಡೆದರೆ, ಸ್ನೇಹ ರಾಣಾ ಮತ್ತು ಶ್ರೀಚರಣಿ ತಲಾ ಎರಡು ವಿಕೆಟ್ ಗಳಿಸಿದರು.

ದೀಪ್ತಿ, ಕೌರ್ ಮಿಂಚು: ಟಾಸ್ ಸೋತು ಬ್ಯಾಟಿಂಗ್ ಇಳಿದ ಭಾರತ 124 ರನ್‌ಗಳಿಗೆ 6 ವಿಕೆಟ್ ಕಳೆದುಕೊಂಡು ಅಲ್ಪಮೊತ್ತಕ್ಕೆ ಕುಸಿಯುವ ಆತಂಕದಲ್ಲಿತ್ತು. ಈ ಹಂತದಲ್ಲಿ ಅಮನ್ಜೋತ್ ಮತ್ತು ದೀಪ್ತಿ ಅವರ ಶತಕದ ಜೊತೆಯಾಟವು ಆಸರೆಯಾಯಿತು. ಅವರು ಏಳನೇ ವಿಕೆಟ್ ಜೊತೆಯಾಟದಲ್ಲಿ 103 (99ಎಸೆತ) ರನ್ ಗಳಿಸಿದರು. ಕೊನೆಯ ಹಂತದಲ್ಲಿ ಸ್ನೇಹ ರಾಣಾ (ಔಟಾಗದೇ 28; 15ಎ, 4X2, 6X2) ಕೂಡ ಉಪಯುಕ್ತ ಕಾಣಿಕೆ ನೀಡಿದರು.

ಎಂಟನೇ ಕ್ರಮಾಂಕದ ಬ್ಯಾಟರ್ ಅಮನ್ಜೋತ್ ಒತ್ತಡದ ಸ್ಥಿತಿಯಲ್ಲಿಯೂ ದಿಟ್ಟವಾಗಿ ಆಡಿದರು. ತಮ್ಮ ಚೊಚ್ಚಲ ವಿಶ್ವಕಪ್ ಟೂರ್ನಿಯಲ್ಲಿ ಆಡುತ್ತಿರುವ ಅಮನ್ಜೋತ್ 45 ಎಸೆತಗಳಲ್ಲಿ ಅರ್ಧಶತಕದ ಗಡಿ ತಲುಪಿದರು. ದೀಪ್ತಿ ಕೂಡ ಏಕದಿನ ಕ್ರಿಕೆಟ್‌ನಲ್ಲಿ 16ನೇ ಅರ್ಧಶತಕ ದಾಖಲಿಸಿದರು.

ಆತಿಥೇಯ ತಂಡದ ಇನಿಂಗ್ಸ್‌ಗೆ ಉತ್ತಮ ಆರಂಭ ದೊರೆಯಲಿಲ್ಲ. ನಾಲ್ಕನೇ ಓವರ್‌ನಲ್ಲಿ ಲಂಕಾ ತಂಡದ ಉದೇಶಿಕಾ ಪ್ರಬೋಧನಿ ಬೌಲಿಂಗ್‌ನಲ್ಲಿ ಸ್ಮೃತಿ ಮಂದಾನ (8 ರನ್) ಅವರು ವಿಶ್ಮಿ ಗುಣರತ್ನೆಗೆ ಕ್ಯಾಚಿತ್ತು ನಿರ್ಗಮಿಸಿದರು. ಈ ಹಂತದಲ್ಲಿ ಪ್ರತೀಕಾ ರಾವಲ್ (37; 59ಎ) ಮತ್ತು ಹರ್ಲೀನ್ ಡಿಯೊಲ್ (48; 64ಎ) ಎರಡನೇ ವಿಕೆಟ್ ಜೊತೆಯಾಟದಲ್ಲಿ 67 ರನ್ ಸೇರಿಸಿದರು.

ತುಸು ಚೇತರಿಕೆ ನೀಡಿದ ಈ ಜೋಡಿಯನ್ನು ಎಡಗೈ ಸ್ಪಿನ್ನರ್ ಐನೋಕಾ ರಣವೀರಾ ಬೇರ್ಪಡಿಸಿದರು. ಹರ್ಲೀನ್, ಪ್ರತೀಕಾ, ನಾಯಕಿ ಹರ್ಮನ್ ಪ್ರೀತ್ ಕೌರ್ (21; 19ಎ) ಮತ್ತು ಜೆಮಿಮಾ ರಾಡ್ರಿಗಸ್ ವಿಕೆಟ್‌ಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಂಡರು.

ವಿಕೆಟ್ ಪಡೆದ ದೀಪ್ತಿ ಶರ್ಮಾ (ಮಧ್ಯ) ಅವರನ್ನು ಭಾರತ ತಂಡದ ಸಹ ಆಟಗಾರ್ತಿಯರು ಅಭಿನಂದಿಸಿದರು —ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಭಾರತ: 8 ವಿಕೆಟ್‌ಗೆ 269 (47 ಓವರುಗಳಲ್ಲಿ)
ಪ್ರತಿಕಾ ಸಿ ಗುಣರತ್ನೆ ಬಿ ರಣವೀರ 37 (59ಎ, 4x4, 6x1)
ಮಂದಾನ ಸಿ ಗುಣರತ್ನೆ ಬಿ ಪ್ರಬೋಧನಿ 8 (10ಎ, 4x2)
ಹರ್ಲೀನ್ ಸಿ ದಿಲ್ಹಾರಿ ಬಿ ರಣವೀರ 48 (64ಎ, 4x6)
ಹರ್ಮನ್‌ಪ್ರೀತ್ ಸಿ ಸಂಜೀವನಿ ಬಿ ರಣವೀರ 21 (19ಎ, 4x2)
ಜೆಮಿಮಾ ಬಿ ರಣವೀರ 0 (1)
ದೀಪ್ತಿ ಸಿ ಕುಮಾರಿ ಬಿ ಕುಲಸುರಿಯ 53 (53, 4x3)
ರಿಚಾ ಸಿ ಪ್ರಬೋಧನಿ ಬಿ ಅಟಪಟ್ಟು 2 (6ಎ)
ಅಮನ್ಜೋತ್ ಸಿ ಕುಲರತ್ನ ಬಿ ಪ್ರಬೋಧನಿ 57 (56ಎ, 4x5, 6x1)
ಸ್ನೇಹ ರಾಣಾ ಔಟಾಗದೇ 28 (15ಎ, 4x2, 6x2)
ಇತರೆ: 15 (ಲೆಗ್ ಬೈ 5, ನೋಬಾಲ್ 1, ವೈಡ್ 9)
ವಿಕೆಟ್ ಪತನ: 1–14 (ಸ್ಮೃತಿ ಮಂದಾನ, 3.2), 2–81 (ಪ್ರತಿಕಾ ರಾವಲ್, 19.2), 3–120 (ಹರ್ಲೀನ್ ಡಿಯೋಲ್, 25.1), 4–120 (ಜೆಮಿಮಾ ರಾಡ್ರಿಗಸ್, 25.2), 5–121 (ಹರ್ಮನ್‌ಪ್ರೀತ್ ಕೌರ್, 25.5), 6–124 (ರಿಚಾ ಘೋಷ್, 26.6), 7–227 (ಅಮನ್ಜೋತ್ ಕೌರ್, 43.3), 8–269 (ದೀಪ್ತಿ ಶರ್ಮಾ, 46.6).
ಬೌಲಿಂಗ್: ಅಚಿನಿ ಕುಲಸುರಿಯ 8–0–42–1; ಉದೇಶಿಕಾ ಪ್ರಬೋಧನಿ 10–1–55–2; ಸುಗಂಧಿಕಾ ಕುಮಾರಿ 9–0–46–0; ಕವಿಶಾ ದಿಲ್ಹಾರಿ 8–0–51–0; ಇನೋಕಾ ರಣವೀರ 9–0–46–4; ಚಾಮರಿ ಅಟಪಟ್ಟು 3–0–24–1

ಶ್ರೀಲಂಕಾ: 211 (45.4 ಓವರ್‌ಗಳಲ್ಲಿ)
ಹಸಿನಿ ಬಿ ಕ್ರಾಂತಿ 14 (20 ಎ, 4x2)
ಚಾಮರಿ ಬಿ ದೀಪ್ತಿ 43 (47ಎ, 4x4, 6x3)
ಹರ್ಷಿಕಾ ಎಲ್‌ಬಿಡಬ್ಲ್ಯು ಬಿ ಶ್ರೀಚರಣಿ 29 (45ಎ, 4x3)
ವಿಷ್ಮಿ ಎಲ್‌ಬಿಡಬ್ಲ್ಯು ಬಿ ಕೌರ್ 11 (28ಎ)
ಕವಿಶಾ ಸಿ ಘೋಷ್ ಬಿ ದೀಪ್ತಿ 15 (12ಎ, 4x2)
ನೀಲಾಕ್ಷಿಕಾ ಬಿ ಸ್ನೇಹ 35 (29ಎ, 4x1, 6x1)
ಅನುಷ್ಕಾ ಸಿ ಹರ್ಮನ್ ಬಿ ದೀಪ್ತಿ 6 (10ಎ, 4x1)
ಸುಗಂಧಿಕಾ ಬಿ ಸ್ನೇಹಾ 10 (19ಎ)
ಅಚಿನಿ ಸಿ ಮಂದಾನ ಬಿ ಶ್ರೀಚರಣಿ 17 (31ಎ, 4x3)
ಉದೇಶಿಕಾ ಔಟಾಗದೇ 14 (26ಎ, 4x2)
ಇನೊಕಾ ಎಲ್‌ಬಿಡಬ್ಲ್ಯು ಬಿ ರಾವಲ್ 3 (8ಎ)
ಇತರೆ: 14 (ಲೆಗ್‌ಬೈ 4, ನೋಬಾಲ್ 1, ವೈಡ್ 9)
ವಿಕೆಟ್ ಪತನ: 1-30 (ಹಸಿನಿ ಪೆರೇರಾ, 6.4), 2-82 (ಚಾಮರಿ ಅಟಪಟ್ಟು, 14.6), 3-103 (ಹರ್ಷಿತಾ ಸಮರವಿಕ್ರಮ, 22.3), 4-105 (ವಿಷ್ಮಿ ಗುಣರತ್ನೆ, 23.6), 5-130 (ಕವಿಶಾ ದಿಲ್ಹಾರಿ, 26.2 ov), 6-140 (ಅನುಷ್ಕಾ ಸಂಜೀವನಿ, 28.6 ov), 7-173 (ನೀಲಕ್ಷಿಕಾ, 34.4), 8-184 (ಸುಗಂದಿಕಾ ಕುಮಾರಿ, 36.4), 9-199 (ಅಚಿನಿ ಕುಲಸುರಿಯ, 42.3), 10-211 (ಇನೊಕಾ ರಣವೀರ, 45.4)
ಬೌಲಿಂಗ್: ಕ್ರಾಂತಿ ಗೌಡ 9-0-41-1, ಅಮನ್ಜೋತ್ 9-0-41-1, ಸ್ನೇಹ ರಾಣಾ 10-0-32-2, ದೀಪ್ತಿ ಶರ್ಮಾ 10-1-54-3, ಶ್ರೀಚರಣಿ 8-0-37-2, ಪ್ರತಿಕಾ ರಾವಲ್ 2.4-0-6-1,
ಪಂದ್ಯದ ಆಟಗಾರ್ತಿ: ದೀಪ್ತಿ ಶರ್ಮಾ

ಫಲಿತಾಂಶ: ಭಾರತಕ್ಕೆ 59 ರನ್ ಜಯ (ಡಿಎಲ್‌ಎಸ್ ನಿಯಮ)

ವರ್ಣರಂಜಿತ ಚಾಲನೆ

ಪಿಟಿಐ ಚಿತ್ರ

ಗುವಾಹಟಿಯ ಬರಸಾಪಾರಾ ಕ್ರೀಡಾಂಗಣದಲ್ಲಿ ಮಂಗಳವಾರ ಐಸಿಸಿ ಮಹಿಳಾ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಉದ್ಘಾಟನಾ ಸಮಾರಂಭದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಮನಸೂರೆಗೊಂಡಿತು

ಅಲಿಸಾ ಹೀಲಿ– ಸೋಫಿ ಡಿವೈನ್ ಮುಖಾಮುಖಿ ಇಂದು

ಆಸ್ಟ್ರೇಲಿಯಾಕ್ಕೆ ಕಿವೀಸ್ ಪಡೆ ಸವಾಲು

ಇಂದೋರ್ (ಪಿಟಿಐ): ಏಳು ಬಾರಿಯ ಚಾಂಪಿಯನ್ ಆಸ್ಟ್ರೇಲಿಯಾ ತಂಡವು ಬುಧವಾರ ಮಹಿಳೆಯರ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ನ್ಯೂಜಿಲೆಂಡ್ ಎದುರಿನ ಪಂದ್ಯದೊಂದಿಗೆ ಅಭಿಯಾನ ಆರಂಭಿಸಲಿದೆ.

ಅಲಿಸಾ ಹೀಲಿ ನಾಯಕತ್ವದ ಆಸ್ಟ್ರೇಲಿಯಾ ತಂಡಕ್ಕೆ ಕಿವೀಸ್ ವನಿತೆಯರು ಕಠಿಣ ಸವಾಲೊಡ್ಡುವ ಸಮರ್ಥರು. ಕಿವೀಸ್ ತಂಡವು ಟಿ20 ವಿಶ್ವಕಪ್ ಕ್ರಿಕೆಟ್‌ನ ಹಾಲಿ ಚಾಂಪಿಯನ್ ಕೂಡ ಹೌದು. ಆದರೆ ಆಸ್ಟ್ರೇಲಿಯಾದ ಆಟಗಾರ್ತಿಯರು, ಅನುಭವ, ಕೌಶಲ ಮತ್ತು ತಂತ್ರಗಾರಿಕೆಯಲ್ಲಿ ಕಿವೀಸ್ ಪಡೆಗಿಂತ ಒಂದು ಹೆಜ್ಜೆ ಮುಂದೆ ಇದ್ದಾರೆ ಎಂಬುದರಲ್ಲಿ ಅನುಮಾನವಿಲ್ಲ.

ಆಸ್ಟ್ರೇಲಿಯಾ ತಂಡದ ಎಡಗೈ ಸ್ಪಿನ್ನರ್ ಸೋಫಿ ಮಾಲಿನೆ ಮತ್ತು ಲೆಗ್‌ಸ್ಪಿನ್ನರ್ ಜಾರ್ಜಿಯಾ ವೇರ್ಹಾಮ್ ಅವರು ಗಾಯದಿಂದ ಚೇತರಿಸಿಕೊಂಡಿದ್ದಾರೆ. ಕಣಕ್ಕಿಳಿಯಲಿರುವ ಹನ್ನೊಂದರ ಬಳಗದಲ್ಲಿ ಅವರಿಗೆ ಅವಕಾಶ ಕೊಡುವುದರತ್ತ ಆಸ್ಟ್ರೇಲಿಯಾ ತಂಡದ

ಅಲಿಸಾ ಹೀಲಿ

ಸೋಫಿ ಡಿವೈನ್

ವ್ಯವಸ್ಥಾಪನ ಮಂಡಳಿ ಯೋಚಿಸುತ್ತಿದೆ. ಇವರಿಬ್ಬರಲ್ಲೇ ಅಲಾನಾ ಕಿಂಗ್ ಕೂಡ ಸ್ಥಾನದ ಆಕಾಂಕ್ಷಿಯಾಗಿದ್ದಾರೆ.

ವೇಗದ ಬೌಲರ್‌ಗಳಲ್ಲಿ ಮೇಗನ್ ಶುಟ್, ಅನಾಬೆಲ್ ಸದರ್ಲೆಂಡ್, ಎಲೀಸ್ ಪೆರಿ, ತಹಿಲಿಯಾ ಮೆಕ್‌ಗ್ರಾ ಮತ್ತು ಡಾರ್ಸಿ ಬ್ರೌನ್ ಅವರೆಲ್ಲರೂ ಪಂದ್ಯ ಗೆಲ್ಲಿಸಿಕೊಡುವ ಸಮರ್ಥರಾಗಿದ್ದಾರೆ. ಪಿಚ್ ಪರಿಸ್ಥಿತಿಯ ಅವಲೋಕನದ ನಂತರ ಅವರಲ್ಲಿ ಇಬ್ಬರು ಅಥವಾ ಮೂವರು ಕಣಕ್ಕಿಳಿಯಬಹುದು.

ಬ್ಯಾಟಿಂಗ್ ವಿಭಾಗದಲ್ಲಿ ಬೆತ್ ಮೂನಿ, ಫೊಬಿ ಲಿಚ್‌ಫೀಲ್ಡ್, ಆಷ್ಲೆ ಗಾರ್ಡನರ್ ಹಾಗೂ ಅಲಿಸಾ ಅವರ ಆಟವೇ ನಿರ್ಣಾಯಕವಾಗಲಿದೆ. ಈಚೆಗೆ ಉತ್ತಮವಾಗಿ ಆಡುತ್ತಿರುವ ಜಾರ್ಜಿಯಾ ವೊಲ್ ಕೂಡ ತಂಡದ ಬಲ ಹೆಚ್ಚಿಸುವ ಆಟಗಾರ್ತಿ.

ನ್ಯೂಜಿಲೆಂಡ್ ತಂಡವು ಉತ್ತಮ ಪೂರ್ವ ಸಿದ್ಧತೆಯೊಂದಿಗೆ ಕಣಕ್ಕಿಳಿಯುತ್ತಿದೆ. ಚೆನ್ನೈನ ಸಿಎಸ್‌ಕೆ ಅಕಾಡೆಮಿ, ಅಬುಧಾಬಿ ಹಾಗೂ ಬೆಂಗಳೂರಿನಲ್ಲಿ ಅಭ್ಯಾಸ ಪಂದ್ಯಗಳನ್ನು ಆಡಿತ್ತು. ಸೂಝಿ ಬೇಟ್ಸ್, ಅಮೆಲಿಯಾ ಕೆರ್, ಈಡನ್ ಕಾರ್ಸನ್, ಮ್ಯಾಡಿ ಗ್ರೀನ್, ಬ್ರೂಕ್ ಹಾಲಿಡೆ ಅವರು ಪ್ರಮುಖರಾಗಿದ್ದಾರೆ.

ಪಂದ್ಯ ಆರಂಭ: ಮಧ್ಯಾಹ್ನ 3
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಚಿಟಿಕೆ ಸುದ್ದಿ

ರಾಜ್ಯ ಅಮೆಚೂರ್ ಚೆಸ್ ನಾಳೆಯಿಂದ

ಬೆಂಗಳೂರು: ಕರ್ನಾಟಕ ರಾಜ್ಯ ಚೆಸ್ ಸಂಸ್ಥೆ ಆಶ್ರಯದಲ್ಲಿ ಕರ್ನಾಟಕ ರಾಜ್ಯ ಅಮೆಚೂರ್ ಚೆಸ್ ಚಾಂಪಿಯನ್‌ಷಿಪ್ ಅಕ್ಟೋಬರ್ 2 ರಿಂದ 5ರವರೆಗೆ ನಡೆಯಲಿದೆ. ಗೋಲ್ಡನ್ ಆರಾ ಟ್ರಸ್ಟ್ ಈ ಚಾಂಪಿಯನ್‌ಷಿಪ್ ಸಂಘಟಿಸುತ್ತಿದೆ.

2300 ರೇಟಿಂಗ್‌ಗಿಂತ ಕೆಳಗಿನವರು ಈ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಬಹುದು. ಎಂದು ಪ್ರಕಟಣೆ ತಿಳಿಸಿದೆ. ಕೋಣನಕುಂಟೆ ಮೆಟ್ರೋ ನಿಲ್ದಾಣದ ಬಳಿಯಿರುವ ಪ್ರೆಸ್ಟೀಜ್ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್‌ನಲ್ಲಿ ಈ ಚಾಂಪಿಯನ್‌ಷಿಪ್ ನಡೆಯಲಿದೆ. ವಿಜೇತರಿಗೆ ಮತ್ತು ವಯೋವರ್ಗ ವಿಜೇತರಿಗೆ ₹ 4 ಲಕ್ಷ ಬಹುಮಾನ ಮತ್ತು ಟ್ರೋಫಿಗಳನ್ನು ನೀಡಲಾಗುವುದು.

ರೇಸಿಂಗ್: ಗಮನಸೆಳೆದ ಅನೀಶ್, ನವನೀತ್

ಕೊಯಮತ್ತೂರು: ಬೆಂಗಳೂರಿನ ಅನೀಶ್ ಡಿ.ಶೆಟ್ಟಿ ಮತ್ತು ಪುದುಚೇರಿಯ ನವನೀತ್ ಕುಮಾರ್ ಅವರು ಇಲ್ಲಿನ ಕಾರಿ ಮೋಟರ್ ಸ್ಪೀಡ್‌ವೇನಲ್ಲಿ ನಡೆದ ಜೆಕೆ ಟೈರ್ ಎಫ್‌ಎಂಎಸ್‌ಸಿಐ ರೇಸಿಂಗ್ ಚಾಂಪಿಯನ್‌ಷಿಪ್‌ನ ಎರಡನೇ ಸುತ್ತಿನ ಅಂತಿಮ ದಿನವಾದ ಭಾನುವಾರ ಗಮನ ಸೆಳೆದರು.

ಆರ್‌ಇ ಕಾಂಟಿನೆಂಟಲ್ ಜಿಟಿ ಕಪ್‌ನ ಎರಡನೇ ರೇಸ್‌ನಲ್ಲಿ (10 ಲ್ಯಾಪ್) ಅನೀಶ್ (13:10.550) ಮೊದಲಿಗರಾದರು. ನವನೀತ್ ಎರಡನೇ ಸ್ಥಾನ ಪಡೆದರು. ಆದರೆ ಮೂರನೇ ರೇಸ್‌ನಲ್ಲಿ ನವನೀತ್ (13:21.934) ಅಗ್ರಸ್ಥಾನದೊಡನೆ ಮಿಂಚಿದರು. ಜೆಕೆ ಟೈರ್ಸ್ ಲೆವಿಡಾಸ್ ಕಪ್ ಮೂರನೇ ರೇಸ್‌ನಲ್ಲಿ ದೀಪಾಯನ್ ದತ್ತಾ (15:15:11.024) ಮತ್ತು ನಾಲ್ಕನೇ ರೇಸ್‌ನಲ್ಲಿ ಜೈ ಪ್ರಶಾಂತ್ (14:38.490) ಮೊದಲಿಗರಾಗಿ ಗುರಿ ತಲುಪಿದರು.

ರಿಯಲ್ ಬೆಂಗಳೂರು ತಂಡಕ್ಕೆ ಗೆಲುವು

ಬೆಂಗಳೂರು: ಸಯ್ಯದ್ ಅಹ್ಮದ್ ಅವರ ಆಟದ ನೆರವಿನಿಂದ ಎಫ್‌ಸಿ ರಿಯಲ್ ಬೆಂಗಳೂರು ತಂಡವು ಕೆಎಸ್‌ಎಫ್‌ಎ ಸೂಪರ್ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 3–0 ಗೋಲುಗಳಿಂದ ರೆಬೆಲ್ಸ್ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ರಿಯಲ್ ಪರ ಸಯ್ಯದ್ (41ನೇ ಮತ್ತು 73ನೇ) ಎರಡು ಗೋಲು, ವೈಶಾಖ ಎ. (12ನೇ) ಒಂದು ಗೋಲು ಗಳಿಸಿದರು.

ಇತರ ಪಂದ್ಯಗಳಲ್ಲಿ ಬೆಂಗಳೂರು ಸಿಟಿ ಎಫ್‌ಸಿ ತಂಡವು 2–1 ಗೋಲುಗಳಿಂದ ರೂಟ್ಸ್ ಎಫ್‌ಸಿ ತಂಡವನ್ನು ಸೋಲಿಸಿತು. ಎಎಸ್‌ಸಿ ಅಂಡ್ ಸೆಂಟರ್ ಎಫ್‌ಸಿ ತಂಡವು ಗೋಲುರಹಿತವಾಗಿ ಎಫ್‌ಸಿ ಬೆಂಗಳೂರು ಯುನೈಟೆಡ್ ಜೊತೆ ಡ್ರಾ ಸಾಧಿಸಿತು.

ಶೂಟಿಂಗ್: ಜೂನಿಯರ್ ವಿಶ್ವ ಕಪ್

ಏರ್ ರೈಫಲ್ ಮಿಶ್ರ ತಂಡಕ್ಕೆ ಚಿನ್ನ

ನವದೆಹಲಿ (ಪಿಟಿಐ): ತೀವ್ರ ಹೋರಾಟ ನಡೆಸಿದ ಇಶಾ ಅನಿಲ್ ಟಕ್ಸಾಲೆ ಮತ್ತು ಹಿಮಾಂಶು ಜೋಡಿ, ಸ್ವದೇಶದ ಶಾಂಭವಿ ಕ್ಷೀರಸಾಗರ– ನರೇನ್ ಪ್ರಣವ್ ಅವರನ್ನು ಸೋಲಿಸಿ ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವಕಪ್‌ನ 10 ಮೀ. ಏರ್ ರೈಫಲ್ ಮಿಶ್ರ ತಂಡ ವಿಭಾಗದಲ್ಲಿ ಮಂಗಳವಾರ ಸ್ವರ್ಣ ಜಯಿಸಿತು.

ಪುರುಷರ ಟ್ರ್ಯಾಪ್ (50 ಗುರಿ) ಸ್ಪರ್ಧೆಯಲ್ಲಿ ವಿನಯ್ ಪ್ರತಾಪ್ ಚಂದ್ರಾವತ್ ಅವರು ಕಂಚಿನ ಪದಕ ಗೆದ್ದರು. ಬುಧವಾರ ಈ ಕೂಟದ ಕೊನೆಯ ದಿನವಾಗಿದ್ದು, ಭಾರತ ಪದಕ ಪಟ್ಟಿಯಲ್ಲಿ 23 ಪದಕಗಳೊಂದಿಗೆ ಅಗ್ರಸ್ಥಾನ ಕಾಪಾಡಿಕೊಂಡಿದೆ. ಇದರಲ್ಲಿ 7 ಚಿನ್ನ, 9 ಬೆಳ್ಳಿ ಮತ್ತು 7 ಕಂಚಿನ ಪದಕಗಳು ಸೇರಿವೆ.

ಫೈನಲ್‌ನ ಒಂದು ಹಂತದಲ್ಲಿ ಇಶಾ– ಹಿಮಾಂಶು ಜೋಡಿ 9–15ರಲ್ಲಿ ಹಿನ್ನಡೆಯಲ್ಲಿತ್ತು. ಆದರೆ ಅಮೋಘವಾಗಿ ಚೇತರಿಸಿ 17–15ರಲ್ಲಿ ಜಯಗಳಿಸಿತು. ಈ ಸ್ಪರ್ಧೆಯ ಕಂಚಿನ ಪದಕ ಐಎನ್‌ಎ (ವೈಯಕ್ತಿಕ ತಟಸ್ಥ ಅಥ್ಲೀಟ್ಸ್) ಪ್ರತಿನಿಧಿಸಿದ ವರ್ವರಾ ಕರ್ದಕೋವಾ–ಕಮಿಲ್ ನುರಿಯಖ್ಮೆಟೋವ್ ಜೋಡಿ ಪಾಲಾಯಿತು.

ಪುರುಷರ ಟ್ರ್ಯಾಪ್ ಸ್ಪರ್ಧೆಯಲ್ಲಿ ಕ್ರೊವೇಷ್ಯಾದ 20 ವರ್ಷ ವಯಸ್ಸಿನ ಟೋನಿ ಗುಡೆಲ್ ಅವರು 44 ಟಾರ್ಗೆಟ್ ಸಾಧಿಸಿ ಚಿನ್ನ ಗೆದ್ದರು. ಇದು ಈ ದೇಶಕ್ಕೆ ಮೊದಲ ಚಿನ್ನ. ಕ್ವಾಲಿಫಿಕೇಷನ್‌ನಲ್ಲಿ ಅಗ್ರಸ್ಥಾನ ಗಳಿಸಿದ್ದ ಸ್ಪೇನ್‌ನ ಐಸಾಕ್ ಹರ್ನಾಂಡೆಝ್ (41) ಬೆಳ್ಳಿ ಗೆದ್ದರು. ಚಂದ್ರಾವತ್ (34) ಮೂರನೇ ಸ್ಥಾನ ಗಳಿಸಿದರೆ, ಅರ್ಜುನ್ (29) ನಾಲ್ಕನೇ ಸ್ಥಾನ ಪಡೆದರು.

ಮಹಿಳೆಯರ 25 ಮೀ. ಪಿಸ್ತೂಲ್ ಪ್ರಿಸಿಷನ್ ಹಂತದ ನಂತರ ಭಾರತದ ತೇಜಸ್ವಿನಿ 288 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದ್ದಾರೆ. ಬುಧವಾರ ರ್‍ಯಾಪಿಡ್ ಫೈರ್ ಹಂತ ನಡೆಯಲಿದ್ದು, ಒಟ್ಟಾರೆ ಮೊದಲ ಆರು ಸ್ಥಾನ ಗಳಿಸಿದವರು ಫೈನಲ್ ತಲುಪುವರು.

ಪುರುಷರ 25 ಮೀ. ಪಿಸ್ತೂಲ್ ಸ್ಪರ್ಧೆಯ ಪ್ರಿಸಿಷನ್ ಹಂತದ ನಂತರ ಭಾರತದ ರಾಘವ್ ಶರ್ಮಾ (290) ಅಗ್ರಸ್ಥಾನದಲ್ಲಿದ್ದಾರೆ. ಮುಕೇಶ್ ನೆಲವಳ್ಳಿ (289) ನಿಕಟ ಪೈಪೋಟಿ ನೀಡಿ ಎರಡನೇ ಸ್ಥಾನದಲ್ಲಿದ್ದಾರೆ.

10 ಮೀ. ಏರ್ ರೈಫಲ್ ಮಿಶ್ರ ತಂಡ ವಿಭಾಗದಲ್ಲಿ ಬೆಳ್ಳಿ ಗೆದ್ದ ಶಾಂಭವಿ ಕ್ಷೀರಸಾಗರ– ನರೇನ್ ಪ್ರಣವ್, ಚಿನ್ನ ಗೆದ್ದ ಇಶಾ ಅನಿಲ್ ಟಕ್ಸಾಲೆ –ಹಿಮಾಂಶು

ಏಷ್ಯನ್ ಈಜು ಚಾಂಪಿಯನ್‌ಷಿಪ್: ಬೆನೆಡಿಕ್ಟನ್‌ಗೆ ಬೆಳ್ಳಿ ಪದಕ

ಐದನೇ ಪದಕ ಗೆದ್ದ ಶ್ರೀಹರಿ ನಟರಾಜ್

ಅಹಮದಾಬಾದ್ (ಪಿಟಿಐ): ಉತ್ತಮ ಪ್ರದರ್ಶನ ನೀಡುತ್ತಿರುವ ಭಾರತದ ಈಜುತಾರೆ ಶ್ರೀಹರಿ ನಟರಾಜ್ ಅವರು 11ನೇ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಮಂಗಳವಾರ 100 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಕಂಚಿನ ಪದಕ ಗೆದ್ದುಕೊಂಡರು. ಇದು ಅವರಿಗೆ ಈ ಕೂಟದಲ್ಲಿ ಐದನೇ ಪದಕ.

ಪುರುಷರ 50 ಮೀ. ಬಟರ್‌ಫ್ಲೈನಲ್ಲಿ ರೋಹಿತ್ ಬಿ.ಬೆನೆಡಿಕ್ಟನ್ ಅವರು ಬೆಳ್ಳಿ ಗೆದ್ದುಕೊಂಡರು. ಇದರೊಂದಿಗೆ ಭಾರತ ಈ ಕೂಟದಲ್ಲಿ 9 ಪದಕಗಳನ್ನು ಗೆದ್ದಂತಾಗಿದೆ.

ಐದನೇ ಲೇನ್‌ನಲ್ಲಿದ್ದ ಶ್ರೀಹರಿ, ಜಾಣ್ಮೆಯಿಂದ ವೇಗ ಹೆಚ್ಚಿಸಿದರು. 50 ಮೀ. ಕಳೆಯುವಷ್ಟರಲ್ಲಿ ಅವರು ಮೂರನೇ ಸ್ಥಾನದಲ್ಲಿದ್ದರು. ಕೊನೆಯ 50 ಮೀ. ನಲ್ಲೂ ಅವರು ಅದೇ ಲಯವನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾದರು. ಚೀನಾದ ವಾಂಗ್ ಹಾವೊಯು (49.19 ಸೆ.) ಮತ್ತು ಕತಾರ್‌ನ ಅಲಿ ತಮೆರ್ ಹಸನ್ (49.46 ಸೆ.) ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಗೆದ್ದರು.

ಶ್ರೀಹರಿ 49.96 ಸೆ.ಗಳಲ್ಲಿ ಸ್ಪರ್ಧೆ ಪೂರೈಸಿದರು. ಅವರು ಸ್ವದೇಶದ ಆಕಾಶ್ ಮಣಿ (50.45 ಸೆ.) ಪೈಪೋಟಿ ಮೀರಿ ನಿಂತರು. ಆಕಾಶ್ ನಾಲ್ಕನೇ ಸ್ಥಾನ ಪಡೆದರು.

‘ಈ ಋತುವಿನಲ್ಲಿ ನನ್ನಿಂದ ಉತ್ತಮ ಪ್ರದರ್ಶನ ಮೂಡಿಬಂದಿದೆ. ತರಬೇತಿಯೂ ಚೆನ್ನಾಗಿ ನಡೆದಿದೆ. ಹೀಟ್ಸ್‌ನಲ್ಲಿ ನಾನೇ ವೇಗವಾಗಿ ಈಜಿದ್ದೆ. ಆದರೆ ಪದಕ ಗೆದ್ದ ಇತರ ಇಬ್ಬರೂ ಅಮೋಘವಾಗಿ ಈಜಿದರು. ಪೋಡಿಯಂ ಏರಲು ಸಾಧ್ಯವಾಗಿದ್ದರಿಂದ ಸಂತಸವಾಗಿದೆ’ ಎಂದು 24 ವರ್ಷ ವಯಸ್ಸಿನ ಶ್ರೀಹರಿ ಫೈನಲ್ ನಂತರ ಪ್ರತಿಕ್ರಿಯಿಸಿದರು.

50 ಮೀ. ಬಟರ್‌ಫ್ಲೈನಲ್ಲಿ ರೋಹಿತ್ ಉತ್ತಮ ಆರಂಭ ಪಡೆದು, 23.89 ಸೆ.ಗಳಲ್ಲಿ ಗುರಿ ತಲುಪಿ ಎರಡನೇ ಸ್ಥಾನ ಪಡೆದರು. ಅವರಿಂದ ತೀವ್ರ ಪೈಪೋಟಿ ಎದುರಿಸಿದರೂ ಕಜಾಕಸ್ತಾನದ ಅದಿಲ್ಬೆಕ್ ಮುಸ್ಸಿನ್ 23.74 ಸೆ.ಗಳಲ್ಲಿ ಗುರಿತಲುಪಿ ಚಿನ್ನ ಗೆಲ್ಲುವಲ್ಲಿ ಯಶಸ್ವಿ ಆದರು.

ಕರ್ನಾಟಕದವರಾದ ಧಿನಿಧಿ ದೇಸಿಂಗು ಮತ್ತು ಎಸ್.ರುತುಜಾ ಅವರು ಮಹಿಳೆಯರ 100 ಮೀ. ಫ್ರೀಸ್ಟೈಲ್‌ನಲ್ಲಿ ಫೈನಲ್‌ಗೆ ತಲುಪಿದ್ದರು. ಆದರೆ ಪದಕ ಗೆಲ್ಲಲಾಗಲಿಲ್ಲ. ಅವರು ಕ್ರಮವಾಗಿ ಆರು ಮತ್ತು ಎಂಟನೇ ಸ್ಥಾನ ಗಳಿಸಿದರು.

ಕಂಚಿನ ಪದಕ ಗೆದ್ದ ಶ್ರೀಹರಿ ನಟರಾಜ್

ಬೆಳ್ಳಿ ಪದಕ ಜಯಿಸಿದ ರೋಹಿತ್ ಬಿ.ಬೆನೆಡಿಕ್ಟನ್

ಆರ್‌ಸಿಬಿ ಮಾರಾಟದ ಮಾತುಗಳಿಗೆ ಮತ್ತೆ ಜೀವ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಮಾರಾಟದ ಊಹಾಪೋಹಗಳಿಗೆ ಈಗ ಮತ್ತೆ ರೆಕ್ಕೆ ಮೂಡಿವೆ.

ಐಪಿಎಲ್ ಮಾಜಿ ಮುಖ್ಯಸ್ಥ ಲಲಿತ್ ಮೋದಿ ಅವರು ‘ಎಕ್ಸ್’ನಲ್ಲಿ ಹಾಕಿರುವ ಸಂದೇಶವೇ ಇದಕ್ಕೆ ಕಾರಣ.

‘ಆರ್‌ಸಿಬಿಯ ಮೌಲ್ಯವು ₹ 17 ಸಾವಿರ ಕೋಟಿಯಾಗಬಹುದು‘ ಎಂದು ಮೋದಿ ಸಲಹೆ ನೀಡಿದ್ದಾರೆ. ಆದರೆ ಹೌಲಿಹಾನ್ ಲೋಕೆಸ್ ಮಾಡಿರುವ ಐಪಿಎಲ್ ಬ್ರ್ಯಾಂಡ್ ಮೌಲ್ಯದ ಅಧ್ಯಯನದ ಪ್ರಕಾರ ಆರ್‌ಸಿಬಿ ಮೌಲ್ಯವು ₹2300 ಕೋಟಿಯಾಗುವ ಅಂದಾಜು ಇದೆ.

ಆರ್‌ಸಿಬಿ ಖರೀದಿಸುವ ಆಕಾಂಕ್ಷಿಗಳಲ್ಲಿ ಪ್ರಮುಖವಾಗಿ ಸಿರಮ್ ಇನ್‌ಸ್ಟಿಟ್ಯೂಟ್‌ನ ಮುಖ್ಯಸ್ಥ ಆಧಾರ್ ಪೂನಾವಾಲಾ ಅವರ ಹೆಸರು ಕೂಡ ಈಚೆಗೆ ವರದಿಯಾಗಿತ್ತು.

ಆರ್‌ಸಿಬಿ ಮಾರಾಟದ ವದಂತಿಗಳು ಕಳೆದ ಜೂನ್ ತಿಂಗಳಲ್ಲಿ ಕೇಳಿಬಂದಿದ್ದವು. ಐಪಿಎಲ್ ಪ್ರಶಸ್ತಿ ಜಯಸಿದ್ದ ಆರ್‌ಸಿಬಿಯ ವಿಜಯೋತ್ಸವದ ಸಂದರ್ಭದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತ ಸಂಭವಿಸಿ 11 ಜನ ಸಾವಿಗೀಡಾಗಿದ್ದರು. ಹಲವರು ಗಾಯಗೊಂಡಿದ್ದರು.

ಆ ಸಂದರ್ಭದಲ್ಲಿ ಮುಂಬೈ ಶೇರು ವಿನಿಮಯ ಕೇಂದ್ರವು ಆರ್‌ಸಿಬಿಯ ಮಾಲೀಕತ್ವದ ಸಂಸ್ಥೆ ಡಿಯಾಜಿಯೊದಿಂದ ಸ್ಪಷ್ಟನೆ ಕೇಳಿತ್ತು. ಆಗ ಪ್ರತಿಕ್ರಿಯಿಸಿದ್ದ ಸಂಸ್ಥೆಯು ಮಾರಾಟ ಕುರಿತ ವದಂತಿಗಳನ್ನು ತಳ್ಳಿ ಹಾಕಿತ್ತು. ‘ಮಾಧ್ಯಮ ವರದಿಗಳು ಊಹಾಪೋಹಗಳಿಂದ ಕೂಡಿವೆ. ಮಾರಾಟ ಕುರಿತ ಮಾತುಕತೆಗಳು ನಡೆಯುತ್ತಿಲ್ಲ’ ಎಂದು ಡಿಯಾಜಿಯೊ ಸಂಸ್ಥೆಯು ಜೂನ್ 10ರಂದು ಬಿಎಸ್‌ಇಗೆ ಲಿಖಿತ ಸ್ಪಷ್ಟನೆ ನೀಡಿತ್ತು.

ಆದರೆ ಈಗ ಅದೇ ಕಂಪನಿಯು ‘ಮಾರುಕಟ್ಟೆಯೊಳಗಿನ ಊಹಾಪೋಹಗಳ ಬಗ್ಗೆ ಪ್ರತಿಕ್ರಿಯಿಸಲು ನಿರಾಕರಿಸಿದೆ’ ಎಂದು ಆರ್‌ಸಿಬಿ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ. ಆರ್‌ಸಿಬಿಯ ಮಾಧ್ಯಮ ಸಮನ್ವಯ ವಿಭಾಗ ಕೂಡ ಇದೇ ಮಾತನ್ನು ಪುನರುಚ್ಚರಿಸಿದೆ.

ವಿರಾಟ್ ಕೊಹ್ಲಿ ಅವರು ಆರಂಭದಿಂದಲೂ ಈ ಫ್ರ್ಯಾಂಚೈಸಿಯಲ್ಲಿದ್ದಾರೆ. ಪ್ರಸ್ತುತ ಆರ್‌ಸಿಬಿಯು ಐಪಿಎಲ್‌ನ ಅತ್ಯಧಿಕ ಮೌಲ್ಯಯುಳ್ಳ ತಂಡವಾಗಿದೆ.

ಪ್ರೊ ಕಬಡ್ಡಿ ಲೀಗ್: ಪಟ್ನಾ ಪೈರೇಟ್ಸ್ ತಂಡಕ್ಕೆ ಸೋಲು

ಟೈಟನ್ಸ್ ಗೆಲುವಿನಲ್ಲಿ ಮಿಂಚಿದ ವಿಜಯ್

ಚೆನ್ನೈ (ಪಿಟಿಐ): ನಾಯಕ ವಿಜಯ್ ಮಲಿಕ್ ಅವರ ಅಮೋಘ ಪ್ರದರ್ಶನದಿಂದ ತೆಲುಗು ಟೈಟನ್ಸ್ ತಂಡ ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಮಂಗಳವಾರ 37–28 ರಿಂದ ಪಟ್ನಾ ಪೈರೇಟ್ಸ್ ತಂಡವನ್ನು 9 ಪಾಯಿಂಟ್‌ಗಳಿಂದ ಸೋಲಿಸಿತು.

ಎಸ್‌ಡಿಎಟಿ ಒಳಾಂಗಣ ಕ್ರೀಡಾಂಗಣದಲ್ಲಿ ವಿಜಯ್ ಹೊನಲು ಬೆಳಕಿನಲ್ಲಿ ಮಿಂಚಿ 13 ಪಾಯಿಂಟ್ಸ್ ಕಲೆಹಾಕಿದರು. ಅವರ ಸೂಪರ್‌ಟೆನ್ ಸಾಧನೆಯಿಂದ ಟೈಟನ್ ಸತತ ಮೂರನೇ ಗೆಲುವನ್ನು ದಾಖಲಿಸಿತಲ್ಲದೇ, ಪಾಯಿಂಟ್ ಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೇರಿತು. ಟೈಟನ್ಸ್‌ನ ರೇಟರ್ 8 ಅಂಕ ಗಳಿಸಿದರು.

ಪಟ್ನಾ ಪೈರೇಟ್ಸ್ ತಂಡದ ಅಯಾನ್ ಲೋಚಬ್ ಸಹ ಉತ್ತಮ ರೇಡಿಂಗ್ ಪ್ರದರ್ಶಿಸಿ ಸೂಪರ್ ಟೆನ್ ಸಾಧಿಸಿದರೂ, ಟೈಟನ್ ತಂಡದ ಸರ್ವಾಂಗೀಣ ಆಟದೆದುರು ಅವರ ಒಳ್ಳೆಯ ಆಟ ಫಲ ನೀಡಲಿಲ್ಲ.

ಪಲ್ಟನ್ ತಂಡಕ್ಕೆ ಗೆಲುವು: ಹೆಚ್ಚಿನ ಸ್ಕೋರುಗಳನ್ನು ಕಂಡ ದಿನದ ಎರಡನೇ ಪಂದ್ಯದಲ್ಲಿ ಪುಣೇರಿ ಪಲ್ಟನ್ ತಂಡ 37–28 ರಿಂದ ಬೆಂಗಾಲ್ ವಾರಿಯರ್ಸ್ ತಂಡವನ್ನು ಸೋಲಿಸಿತು.

ಬೆಂಗಾಲ್ ವಾರಿಯರ್ಸ್ ತಂಡದ ನಾಯಕ ದೇವಾಂಕ್ ಗಳಿಸಿದ 25 ಪಾಯಿಂಟ್ಸ್ ಫಲ ನೀಡಲಿಲ್ಲ. ಹಿಮಾಂಶು ನರ್ವಾಲ್ (7) ಬಿಟ್ಟರೆ ಉಳಿದವರಿಂದ ಅವರಿಗೆ ಬೆಂಬಲ ಸಿಗಲಿಲ್ಲ.

ವಿಜೇತ ಪಲ್ಟನ್ ಪರ ಆದಿತ್ಯ ಶಿಂದೆ 18, ಪಂಕಜ್ ಮೋಹಿತೆ 10 ಮತ್ತು ನಾಯಕ ಅಸ್ಲಂ ಇನಾಮದಾರ 7 ಪಾಯಿಂಟ್ಸ್ ಕಲೆಹಾಕಿ ಸಾಂಘಿಕ ಪ್ರದರ್ಶನ ನೀಡಿದರು.

ಬುಧವಾರದ ಪಂದ್ಯಗಳು: **ಹರಿಯಾಣ ಸ್ಟೀಲರ್ಸ್– ಜೈಪುರ ಪಿಂಕ್ ಪ್ಯಾಂಥರ್ಸ್ (ರಾತ್ರಿ 8.00); ಯು ಮುಂಬಾ– ತಮಿಳು ತಲೈವಾಸ್ (9.00)**



ತೆಲುಗು ಟೈಟನ್ಸ್ ತಂಡದ ರೇಡರ್ ಭರತ್ ಪಾಯಿಂಟ್ಸ್ ಗಳಿಸಲು ಯತ್ನಿಸಿದರು

ಟ್ರೋಫಿ ವಿವಾದ: ಎಸಿಸಿ ಸಭೆಯಲ್ಲಿ ಭಾರತ ಆಕ್ಷೇಪ

ದುಬೈ (ಪಿಟಿಐ): ಏಷ್ಯಾ ಕಪ್ ಗೆದ್ದ ಭಾರತ ತಂಡಕ್ಕೆ ಟ್ರೋಫಿ ನೀಡದಿರುವ ಕ್ರಮಕ್ಕೆ ಮಂಗಳವಾರ ನಡೆದ ಏಷ್ಯನ್ ಕ್ರಿಕೆಟ್ ಮಂಡಳಿ (ಎಸಿಸಿ) ವಾರ್ಷಿಕ ಮಹಾಸಭೆಯಲ್ಲಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ತೀವ್ರ ಆಕ್ಷೇಪ ವ್ಯಕ್ತಪಡಿಸಿತು. ಆದರೆ, ಎಸಿಸಿ ಅಧ್ಯಕ್ಷ ಮೊಹ್ಸಿನ್ ನಕ್ವಿ ತನ್ನ ಹಠವನ್ನು ಸಡಿಲಿಸಿಲ್ಲ.

ಎಸಿಸಿ ವಾರ್ಷಿಕ ಮಹಾಸಭೆಯಲ್ಲಿ ಬಿಸಿಸಿಐ ಪರ ಉಪಾಧ್ಯಕ್ಷ ರಾಜೀವ್ ಶುಕ್ಲಾ ಮತ್ತು ಮಾಜಿ ಖಜಾಂಚಿ ಆಶಿಷ್ ಶೆಲಾರ್ ಭಾಗವಹಿಸಿದ್ದರು.

ಏಷ್ಯಾ ಕಪ್ ಟ್ರೋಫಿ ಈಗಲೂ ಎಸಿಸಿ ಕಚೇರಿಯಲ್ಲಿದೆ. ಅದು ವಿಜೇತ ತಂಡಕ್ಕೆ ಯಾವಾಗ ಸಿಗಲಿದೆ ಎಂಬ ಬಗ್ಗೆ ಇನ್ನೂ ಸ್ಪಷ್ಟತೆಯಿಲ್ಲ.

ಪಾಕಿಸ್ತಾನ ಸರ್ಕಾರದಲ್ಲಿ ಸಚಿವ ಮತ್ತು ಪಾಕಿಸ್ತಾನ ಕ್ರಿಕೆಟ್ ಮಂಡಳಿಯ ಅಧ್ಯಕ್ಷರೂ ಆಗಿರುವ ನಕ್ವಿ ಅವರಿಂದ ಟ್ರೋಫಿ ಪಡೆಯಲು ಭಾರತ ನಿರಾಕರಿಸಿತ್ತು. ಎಸಿಸಿ ಅಧ್ಯಕ್ಷರಾಗಿ ಟ್ರೋಫಿ ಪ್ರದಾನ ಮಾಡುವುದು ತಮ್ಮ ಹಕ್ಕು ಎಂದು ಪ್ರತಿಪಾದಿಸಿದ ನಕ್ವಿ ಅವರು ಟ್ರೋಫಿಯೊಡನೆ ಹೊರಟಿದ್ದರು.

‘ಟ್ರೋಫಿಯನ್ನು ವಿಜೇತ ತಂಡಕ್ಕೆ ಹಸ್ತಾಂತರಿಸದಿರುವ ಬಗ್ಗೆ ಮತ್ತು ಪಂದ್ಯಾನಂತರದ ಪ್ರಶಸ್ತಿ ಪ್ರದಾನ ಸಮಾರಂಭದ ವೇಳೆ ಎಸಿಸಿ ಅಧ್ಯಕ್ಷರು ನಡೆಸಿದ ಹೈಡ್ರಾಮಾದ ಬಗ್ಗೆ ಎಸಿಸಿ ಸಭೆಯಲ್ಲಿ ಭಾರತ ತೀವ್ರ ಆಕ್ಷೇಪ ವ್ಯಕ್ತಪಡಿಸಿತು’ ಎಂದು ಎಸಿಸಿ ಮೂಲವೊಂದು ಪಿಟಿಐಗೆ ತಿಳಿಸಿದೆ.

‘ಟ್ರೋಫಿಯನ್ನು ವಿಜೇತ ತಂಡಕ್ಕೆ ಹಸ್ತಾಂತರಿಸಬೇಕು ಎಂಬುದಾಗಿ ಶುಕ್ಲಾ ಸ್ಪಷ್ಟವಾಗಿ ಹೇಳಿದರು. ಅದು ಎಸಿಸಿ ಟ್ರೋಫಿಯಾಗಿದ್ದು, ಯಾವುದೇ ವ್ಯಕ್ತಿಗೆ ಸೇರಿದ್ದಲ್ಲ ಎಂದು ಅವರು ಪ್ರತಿಪಾದಿಸಿದರು’ ಎಂದು ಮೂಲ ಹೇಳಿದೆ.

ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಸುಮಿತ್‌ಗೆ ಹ್ಯಾಟ್ರಿಕ್ ಚಿನ್ನ

ನವದೆಹಲಿ (ಪಿಟಿಐ): ಭಾರತದ ಪ್ಯಾರಾ ಜಾವೆಲಿನ್ ಪಟು ಸುಮಿತ್ ಅಂಟಿಲ್ ಅವರು ವಿಶ್ವ ಪ್ಯಾರಾ ಅಥ್ಲೆಟಿಕ್ಸ್‌ನಲ್ಲಿ ಸತತ ಮೂರನೇ ಬಾರಿ ಪುರುಷರ ಎಫ್64 ವಿಭಾಗದಲ್ಲಿ ಚಿನ್ನ ಗೆದ್ದು ಹ್ಯಾಟ್ರಿಕ್ ಪೂರೈಸಿದರು.

ಮಂಗಳವಾರ ನಡೆದ ಜಾವೆಲಿನ್ ಸ್ಪರ್ಧೆಯಲ್ಲಿ ಸುಮಿತ್ ಅವರು ತಮ್ಮ ಐದನೇ ಯತ್ನದಲ್ಲಿ 71.37 ಮೀ. ದೂರ ಎಸೆದಿದ್ದು ಅವರ ಉತ್ತಮ ಥ್ರೊ ಎನಿಸಿತು. 27 ವರ್ಷ ವಯಸ್ಸಿನ ಸುಮಿತ್ ಈ ಹಿಂದೆ 2023 ಮತ್ತು 2024ರ ಆವೃತ್ತಿಗಳಲ್ಲೂ ಚಾಂಪಿಯನ್ ಆಗಿದ್ದರು.

ಇಂದಿನ ಸಾಧನೆ ಅವರ ವೈಯಕ್ತಿಕ ಶ್ರೇಷ್ಠವೂ ಆಗಿದೆ. ಕಳೆದ ವರ್ಷದ ಚಾಂಪಿಯನ್‌ಷಿಪ್‌ನಲ್ಲಿ ಅವರು 70.83 ಮೀ. ದೂರ ಎಸೆದಿದ್ದು ಇದುವರೆಗಿನ ಅತ್ಯುತ್ತಮ ಎನಿಸಿತ್ತು.

ಪ್ಯಾರಾಲಿಂಪಿಕ್ಸ್‌ನಲ್ಲೂ ಅವರು ಎರಡು ಬಾರಿಯ (2021ರ ಟೋಕಿಯೊ ಮತ್ತು 2024ರ ಪ್ಯಾರಿಸ್) ಚಿನ್ನದ ಪದಕ ವಿಜೇತರಾಗಿದ್ದಾರೆ. ಹಾಲಿ ಪ್ಯಾರಾ ಏಷ್ಯನ್ ಗೇಮ್ಸ್ ಚಾಂಪಿಯನ್ ಕೂಡ ಆಗಿದ್ದಾರೆ.

ಸುಮಿತ್ ಅಂಟಿಲ್

ಯೂತ್ ಟೆಸ್ಟ್: 243 ರನ್‌ಗಳಿಗೆ ಆಲೌಟ್ ಆದ ಆಸ್ಟ್ರೇಲಿಯಾ

ಬ್ರಿಸ್ಬೇನ್ (ಪಿಟಿಐ): ವೇಗದ ಬೌಲರ್ ದೀಪೇಶ್ ದೇವೇಂದ್ರನ್ ಅವರ ಐದು ವಿಕೆಟ್ ಗೊಂಚಲಿನ ನೆರವಿನಿಂದ ಭಾರತ 19 ವರ್ಷದೊಳಗಿನವರ ತಂಡ ಮೊದಲ ಯೂತ್ ಟೆಸ್ಟ್ ಪಂದ್ಯದ ಮೊದಲ ದಿನವಾದ ಮಂಗಳವಾರ ಆಸ್ಟ್ರೇಲಿಯಾ 19 ವರ್ಷದೊಳಗಿನವರ ತಂಡವನ್ನು 243 ರನ್‌ಗಳಿಗೆ ಆಲೌಟ್ ಮಾಡಿತು.

ತಮಿಳುನಾಡಿನ 17 ವರ್ಷ ವಯಸ್ಸಿನ ದೀಪೇಶ್ 16.2 ಓವರುಗಳಲ್ಲಿ 45 ರನ್ನಿಗೆ 5 ವಿಕೆಟ್ ಪಡೆದು ಗಮನಸೆಳೆದರು. ಕಿಶನ್ ಕುಮಾರ್ 48 ರನ್ನಿಗೆ 3 ವಿಕೆಟ್ ಪಡೆದು ಅವರಿಗೆ ಬೆಂಬಲ ನೀಡಿದರು. ಆತಿಥೇಯ ತಂಡದ ಪರ ಮೂರನೇ ಕ್ರಮಾಂಕದ ಆಟಗಾರ ಸ್ಟೀವನ್ ಹಾಗನ್ ಸಹನೆಯ ಆಟವಾಡಿ 246 ಎಸೆತಗಳಲ್ಲಿ 92 ರನ್ ಬಾರಿಸಿ ಅತಿ ಹೆಚ್ಚಿನ ಕಾಣಿಕೆ ನೀಡಿದರು.

ಸ್ಕೋರುಗಳು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ ಅಂಡರ್ 19: 91.2 ಓವರುಗಳಲ್ಲಿ 243 (ಸ್ಟೀವ್ ಹಾಗನ್ 92, ಝೆಡ್ ಹಾಲಿಕ್ 38; ದೀಪೇಶ್ ದೇವೇಂದ್ರನ್ 45ಕ್ಕೆ5, ಕಿಶನ್ ಕುಮಾರ್ 48ಕ್ಕೆ3) ವಿರುದ್ಧ ಭಾರತ ಅಂಡರ್ 19.

LG
Celebrating Trust Across Generations
Generations change, the celebrations continue with
LG – India's Most Trusted Brand*
CELEBRATION OFFERS
Up to 26%* Cashback (On Select Debit/Credit Cards)
Max. up to ₹50000 (On Select Models)
Fixed EMI ₹ 888* Onwards (On Select Models)
LG BEST Care Ask for AMC*
*Annual Maintenance Contract
ಪೈ ಇಂಟರ್‌ನ್ಯಾಶನಲ್
ಮೆಗಾ ಫೆಸ್ಟಿವಲ್ ಸೇಲ್
ಗೆಲ್ಲಿರಿ 25 ರವರೆಗೆ ಕಾರುಗಳು*
ಗೆಲ್ಲಿರಿ 17 ಕೋಟಿ ವರೆಗೆ ಪೈ ಲಾಯಲ್ಟಿ ಪಾಯಿಂಟ್ಸ್*
LG OLED evo AI
3 YEAR WARRANTY | UP TO 26% CASHBACK Max. up to ₹26000 | FIXED EMI STARTING FROM ₹2999*
RANGE STARTS FROM : ₹109990*
LG QNED evo AI
MiniLED
3 YEAR WARRANTY | UP TO 10% CASHBACK Max. up to ₹10000 | FIXED EMI STARTING FROM ₹1999*
RANGE STARTS FROM : ₹45990*
LG NanoCell AI
3 YEAR WARRANTY | UP TO 10% CASHBACK Max. up to ₹10000 | UP TO 30% OFF ON LG SOUNDBAR (With Select 4K TVs)
RANGE STARTS FROM : ₹36990*
LG UHD AI
3 YEAR WARRANTY | UP TO 10% CASHBACK Max. up to ₹7500 | FIXED EMI STARTING FROM ₹1999*
RANGE STARTS FROM : ₹31990*
SOUND BAR
Dolby Atmos
World's 1st CENTRE UP-FIRING SPEAKER
NO DRILLING REQUIRED
UP TO 5% CASHBACK Max. up to ₹2500 (On Select Models)
FIXED EMI STARTING FROM ₹ 999*
RANGE STARTS FROM : ₹11799*
SIDE-BY-SIDE REFRIGERATOR
FREE* MINI REFRIGERATOR worth up to ₹13999* & ₹11999* (On Select Side-by-Side Refrigerators)
FIXED EMI STARTING FROM ₹2999*
RANGE STARTS FROM : ₹71990*
TOP FREEZER REFRIGERATOR
BOTTOM FREEZER REFRIGERATOR
FIXED EMI STARTING FROM ₹1499*
RANGE STARTS FROM : ₹23990*
SINGLE DOOR REFRIGERATOR
SMART INVERTER COMPRESSOR 10 YEAR WARRANTY
Smart Inverter Compressor
FIXED EMI STARTING FROM ₹999*
RANGE STARTS FROM : ₹12990*
FRONT LOAD WASHING MACHINE
DD MOTOR 10 YEAR WARRANTY
FIXED EMI STARTING FROM ₹1999*
RANGE STARTS FROM : ₹29990*
TOP LOAD WASHING MACHINE
DD MOTOR 10 YEAR WARRANTY
AI DD
TurboWash
FIXED EMI STARTING FROM ₹1499*
RANGE STARTS FROM : ₹18990*
DISHWASHER
INVERTER DIRECT DRIVE MOTOR 10 YEAR WARRANTY
FIXED EMI STARTING FROM ₹2999* (On Select Models)
RANGE STARTS FROM : ₹46900*
AIR CONDITIONERS
New 2025 SERIES
10% RETURN AVAILABLE AS CASHBACK up to ₹4000*
FREE STANDARD INSTALLATION on Split ACs
FIXED EMI STARTING FROM @ ₹1999* (Offer on 5 Star/Hot and Cold ACs)
RANGE STARTS FROM : ₹36990*
YOUR HOME CHEF Wi-Fi ENABLED MICROWAVE OVEN
401
40* SCAN TO COOK MENU
CHARCOAL Lighting Heater™
FREE* GLASS BOWL SET (On Select Convection Models)
FIXED EMI STARTING FROM ₹1499*
RANGE STARTS FROM : ₹7990*
AMERICAN EXPRESS | AXIS BANK | BOBCARD | DBS | FEDERAL BANK | HDFC BANK | ICICI Bank | IDFC FIRST Bank Credit & Debit Cards | J&K Bank | SBI card
Pai INTERNATIONAL
PRODUCT & SERVICE RELATED ENQUIRIES +91 91084 44777
SERVICE/HELPLINE: 080-42 46 43 43 10AM TO 7PM
FOLLOW US!
FREE DELIVERY FOR REFRIGERATORS, WASHING MACHINES, LED TV'S
24 HOURS DELIVERY CHALLENGE*
GET 100% ADDITIONAL LUCKY DRAW COUPON* IF NOT DELIVERED WITHIN 24 HOURS (Within City Limits)
WE ARE CELEBRATING 220 OUTLETS
STORE LOCATOR
*Terms and Conditions Apply. For more information please visit www.lg.com

ಹಳೆಯ ಎಕ್ಸ್-ಶೋರೂಮ್	ಹೊಸ ಎಕ್ಸ್-ಶೋರೂಮ್
~~₹80 216~~	₹73 946#

GST ಲಾಭಗಳು ₹6 270

ಸೀಮಿತ ಅವಧಿಯ ಕೊಡುಗೆ

ಹಳೆಯ ಎಕ್ಸ್-ಶೋರೂಮ್	ಹೊಸ ಎಕ್ಸ್-ಶೋರೂಮ್
~~₹64 958~~	₹59 881#

GST ಲಾಭಗಳು ₹5 077

ಇನ್‌ಸ್ಟಂಟ್ ಡಿಸ್ಕೌಂಟ್ ₹10 000^ ವರೆಗೆ

HDFC BANK ಕ್ರೆಡಿಟ್ ಕಾರ್ಡ್ FESTIVE TREATS Powered by pine labs

+

ದೈನಂದಿನ EMI ₹59$ ರಿಂದ ಪ್ರಾರಂಭ

ಡೌನ್ ಪೇಮೆಂಟ್ ₹999$ ರಿಂದ ಪ್ರಾರಂಭ

ವಿಶೇಷ ಕಾರ್ಪೊರೇಟ್ ಆಫರ್‌ಗಳು ₹2 200~ ವರೆಗೆ

INDIA'S FIRST 5 YEAR WARRANTY* *Conditions apply

Hero GoodLife ಗೆಲ್ಲುವ ಅವಕಾಶದ ಜೊತೆಗೆ 100% ಕ್ಯಾಶ್‌ಬ್ಯಾಕ್ | 24 ಕ್ಯಾರೆಟ್ ಚಿನ್ನದ ನಾಣ್ಯ
ಅನೇಕ ಖಾತರಿಯ ಪ್ರಯೋಜನಗಳು ಪಡೆಯಿರಿ*

Additional offers on: Flipkart amazon.in

Hero MotoCorp Ltd. Regd. Office: The Grand Plaza, Plot No.2, Nelson Mandela Road, Vasant Kunj Phase - II, New Delhi - 110070, India. I CIN: L35911DL1984PLC017354 I For further information, contact your nearest Hero MotoCorp authorized outlet or visit us on www.HeroMotoCorp.com. Accessories and features shown may not be a part of standard fitment. Always wear a helmet while riding a two-wheeler. ~Offer amount and combination of offer may vary for model/variant and states and it is applicable on select models only, for a limited time period or till stock lasts. $Finance offer is at the sole discretion of the Financier, subject to its respective T&Cs, Available at select dealerships. ^T&C apply, Offer available only on limited stores. *Limited period offer, T&C apply. As per cumulative dispatch numbers till August 2025. #Ex-showroom price of HF Deluxe and Splendor+ in Bengaluru.

TOLL FREE 1800 266 0018

AUTHORISED DEALERS: BENGALURU - HOSUR ROAD: RT KRISHNA HERO - PH: 9289923177. LALBAGH ROAD: PRAKASH HERO - PH: 9289922117. BYATARAYANAPURA: BIMAL HERO - PH: 9289922863. PEENYA: SAI HERO - PH: 9289922830. HOSUR ROAD: RT KRISHNA HERO - PH: 9289923177. BANASHANKARI: SAI HERO - PH: 9289922476. BANASWADI: BHAGATH HERO - PH: 9289922738. MAGADI ROAD: POORNA HERO - PH: 9289923212. MARATHALLI: VAAYURATHA HERO - PH: 9289923811. RAJAJI NAGAR: MAX HERO - PH: 9289923023. KOLAR: SAI BALAJI HERO PH. 9821745024. CHIKKABALLAPUR: MANJUNATH HERO - PH: 9821751332. TUMKUR: SAI HERO - PH: 9289922986. B.H.ROAD – SAI HERO, PH. 7022752841. KAMAKSHIPALYA: POORNA MOTORS – PH: 9606922534. JP NAGAR: SAI HERO, PH: 99002 36280. KANAKPURA ROAD: SAI HERO - 8904677394. HOSKOTE: BHAGATH HERO - PH: 8884600051. K R PURAM: BHAGATH HERO - PH: 7829488706. JIGANI: RT KRISHNA HERO – PH: 8762860999. RT NAGAR: BIMAL HERO 9535327710.. TIPTUR: SAI HERO PH. 9164840456. KUNIGAL: SAI HERO - PH: 7022752858. DODDABALLAPURA: BIMAL HERO 9742202125. Associate Dealer: BELATHUR - 9902649569. MADIWALA - 9731660639. BANASHANKARI 3RD STAGE - 9513353864. BANNERGHATTA ROAD - 41209619. KENGERI - 9739275523. YELAHANKA - 28462524, 9341025589. MYSORE ROAD:9611997733. DEVANAHALLI - 9964560599. KANAKAPURA - 9880212346. WHITEFIELD - 9741646466. BAGEPALLI - 282828. SRINIVASPUR - 9738504002. SIDLAGHATTA - 254827. NELAMANGALA - 27723395. PAVAGADA - 9740324639. MADHUGIRI - 9972278989. VIJAYAPURA: 9449619920. SIRA: 9448417393. CHANDAPURA: 9481329064. VIDYARANYAPURA: 9606934533. MAGADI: 9482090890. GOTTIGERE: 81976 78979. Also Available at: DUNNASANDRA: 8310166369. HSR LAYOUT: 7428893265. MATHIKERE: 9035027951. DOMLUR: 7353919910- J.P.NAGAR: 9035024274. RT NAGAR: 9535327710. . ATTIBELE: 8050609104. B NARAYANAPURA: 9945472149. VARTHUR: 9900877227. PAPAREDDYPALYA: 9916678309. ANEKAL: 9739519252. KONANKUNTE: 9886122251. SARJAPUR MAIN ROAD: 8762860999. BIDADI: 9844767719. RAMANAGARA: 9663399909. JIGANI: 9986498884. CHIKKANAYAKANAHALLI: 9880807399. TURUVEKERE: 9448403205. KORATAGERE: 9731713711. PERESANDRA: 9901502049. For Bulk deals/Corporate purchase - "bangalore@heromotocorp.com" & "kiran.kumart@heromotocorp.com"
For Buy/Sell/Exchange Old any Vehicle contact VV PURAM, Bengaluru Olety Sai Hero Sure: 98450 74491

ಬುಧವಾರ, ಅಕ್ಟೋಬರ್ 1, 2025 | ₹ 7.00

prajavani.net prajavani • www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಬಿಡುವು

ಪ್ರಿಯ ಓದುಗರು, ಜಾಹೀರಾತುದಾರರು, ಪತ್ರಿಕಾ ವಿತರಕರಿಗೆ ಆಯುಧ ಪೂಜೆ ಹಾಗೂ ವಿಜಯದಶಮಿ ಶುಭಾಶಯಗಳು

ಆಯುಧಪೂಜೆ ನಿಮಿತ್ತ ಬುಧವಾರ ನಮ್ಮ ಕಚೇರಿಗೆ ಬಿಡುವು. ಹೀಗಾಗಿ ಗುರುವಾರದ ಸಂಚಿಕೆ ಪ್ರಕಟವಾಗುವುದಿಲ್ಲ.

ದಿನದ ಬೆಳವಣಿಗೆಗಾಗಿ www.prajavani.net ನೋಡಿ.

ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ..

ಎಂಟು ಶಾಸಕರಿಗೆ ಕಳಂಕದ ನಂಟು

ಕರ್ನಾಟಕದ 16ನೇ ವಿಧಾನಸಭೆ ಅಸ್ತಿತ್ವಕ್ಕೆ ಬಂದು ಎರಡೂವರೆ ವರ್ಷ ಕಳೆಯುತ್ತಿದೆ. 2023ರ ಮೇ 30ಗಳಿನಿಂದ ಇಲ್ಲಿಯವರೆಗೆ ಆಡಳಿತಾರೂಢ ಕಾಂಗ್ರೆಸ್‌ನ ಐವರು, ವಿರೋಧ ಪಕ್ಷಗಳಾದ ಬಿಜೆಪಿಯ ಇಬ್ಬರು ಮತ್ತು ಜೆಡಿಎಸ್‌ನ ಒಬ್ಬರು ಶಾಸಕರ ಮೇಲೆ ಪ್ರಕರಣಗಳಿವೆ. ಸಿಬಿಐ, ಆದಾಯ ತೆರಿಗೆ, ಜಾರಿ ನಿರ್ದೇಶನಾಲಯ, ನ್ಯಾಯಾಲಯ, ಚುನಾವಣಾ ಆಯೋಗ, ಲೋಕಾಯುಕ್ತ, ಪೊಲೀಸ್ ಹೀಗೆ ನಾನಾ ಬಗೆಯ 'ಉರುಳು'ಗಳು ಇವರಿಗೆ ಸುತ್ತಿಕೊಂಡಿವೆ. ಮೂವರು ಶಾಸಕರು ಜೈಲಿನಲ್ಲಿದ್ದರೆ, ಮೂವರ 'ಸದಸ್ಯತ್ವ'ವೇ ನ್ಯಾಯಾಂಗದ ತಕ್ಕಡಿಯಲ್ಲಿದೆ

ಬಿ.ನಾಗೇಂದ್ರ

• ಕ್ಷೇತ್ರ: ಬಳ್ಳಾರಿ ಗ್ರಾಮಾಂತರ

• **2008ರಲ್ಲಿ ಬಿಜೆಪಿ, 2013ರಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಕೂಡ್ಲಿಗಿ ಕ್ಷೇತ್ರದಿಂದ ಆಯ್ಕೆ. 2018ರಲ್ಲಿ ಬಳ್ಳಾರಿ ಗ್ರಾಮಾಂತರ ಕ್ಷೇತ್ರದಿಂದ ಬಿಜೆಪಿಯಿಂದ ಆಯ್ಕೆ. 2023ರಲ್ಲಿ ಕಾಂಗ್ರೆಸ್‌ನಿಂದ ಆಯ್ಕೆ**

ಪ್ರಕರಣದ ವಿವರ: ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಖಾತೆಗಳಿಂದ ₹89 ಕೋಟಿ ಅಕ್ರಮವಾಗಿ ವರ್ಗಾವಣೆ ಮಾಡಿದ ಪ್ರಕರಣದಲ್ಲಿ ಕಾಂಗ್ರೆಸ್ ಶಾಸಕ ಬಿ.ನಾಗೇಂದ್ರ ಅವರನ್ನು ಇ.ಡಿ ಬಂಧಿಸಿತ್ತು. ಈ ಪ್ರಕರಣದಲ್ಲಿ ಒಂದೆಡೆ ಸಿಐಡಿ, ಇನ್ನೊಂದೆಡೆ ಸಿಬಿಐ ಮತ್ತು ಇ.ಡಿ ತನಿಖೆ ನಡೆಸುತ್ತಿವೆ. ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರಾಗಿದ್ದ ನಾಗೇಂದ್ರ, ಪ್ರಕರಣ ಪತ್ತೆಯಾಗುತ್ತಿದ್ದ ಹಾಗೆಯೇ ಸಚಿವ ಸ್ಥಾನ ತೊರೆದಿದ್ದರು.4 ತಿಂಗಳು ಬಂಧನದಲ್ಲಿದ್ದು, ಜಾಮೀನಿನ ಮೇಲೆ ಹೊರಗಿದ್ದಾರೆ.

ವಿನಯ್ ಕುಲಕರ್ಣಿ

• ಕ್ಷೇತ್ರ: ಧಾರವಾಡ

• **2013 ಹಾಗೂ 2023ರಲ್ಲಿ ಕಾಂಗ್ರೆಸ್‌ನಿಂದ ಆಯ್ಕೆ**

ಪ್ರಕರಣದ ವಿವರ: 2016ರಲ್ಲಿ ಬಿಜೆಪಿ ಮುಖಂಡ ಯೋಗೇಶ್ ಗೌಡ ಕೊಲೆ ಪ್ರಕರಣದಲ್ಲಿ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಈಗಲೂ ಜೈಲಿನಲ್ಲಿಯೇ ಇದ್ದಾರೆ.ಅವರಿಗೆ ನೀಡಿದ್ದ ಜಾಮೀನನ್ನು ಇದೇ ಜೂನ್ 6ರಂದು ಸುಪ್ರೀಂ ಕೋರ್ಟ್ ರದ್ದುಪಡಿಸಿತ್ತು.ಈಗ ನ್ಯಾಯಾಂಗ ಬಂಧನದಲ್ಲಿ ಇದ್ದಾರೆ.

ಸಾಮಾಜಿಕ ಕಾರ್ಯಕರ್ತೆಯೊಬ್ಬರ ಮೇಲೆ ಅತ್ಯಾಚಾರ ಎಸಗಿದ ಆರೋಪದಲ್ಲಿ ವಿನಯ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಐಶ್ವರ್ಯ ಗೌಡ ಚಿನ್ನಾಭರಣ ವಂಚನೆ ಪ್ರಕರಣದಲ್ಲಿ ಇ.ಡಿ ವಿನಯ್ ಅವರನ್ನು ವಿಚಾರಣೆ ನಡೆಸಿದೆ.

ಕೆ.ಸಿ.ವೀರೇಂದ್ರ

• ಕ್ಷೇತ್ರ: ಚಿತ್ರದುರ್ಗ

• **2023 ಮೊದಲ ಬಾರಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ, ಆಯ್ಕೆ**

ಪ್ರಕರಣದ ವಿವರ: 2016ರಲ್ಲಿ ವೀರೇಂದ್ರ (ಪಪ್ಪಿ) ಅವರ ಚಳ್ಳಕೆರೆ ಮನೆಯಲ್ಲಿ ಶೋಧ ನಡೆಸಿದ್ದ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು, ಅಪಾರ ಪ್ರಮಾಣದ ನಗದು ಮತ್ತು ಚಿನ್ನಾಭರಣ ಪತ್ತೆ ಮಾಡಿದ್ದರು.ಘೋಷಿತ ಆದಾಯಕ್ಕಿಂತ ಹೆಚ್ಚು ಆಸ್ತಿ ಗಳಿಸಿದ ಆರೋಪದಲ್ಲಿ ಪ್ರಕರಣ ದಾಖಲಾಗಿತ್ತು.ಇದೇ ಪ್ರಕರಣ ಮತ್ತು ಪೂರಕ ದೂರುಗಳ ಆಧಾರದಲ್ಲಿ ಜಾರಿ ನಿರ್ದೇಶನಾಲಯವು, ವೀರೇಂದ್ರ ಅವರಿಗೆ ಸೇರಿದ ಮನೆ ಮತ್ತು ದೇಶದ ವಿವಿಧೆಡೆ ಇರುವ ಕ್ಯಾಸಿನೊಗಳಲ್ಲಿ ಈಚೆಗೆ ಶೋಧ ನಡೆಸಿತ್ತು. ಆನ್‌ಲೈನ್ ಮತ್ತು ಆಫ್‌ಲೈನ್‌ನಲ್ಲಿ ಬೆಟ್ಟಿಂಗ್ ನಡೆಸಿದ ಆರೋಪದಲ್ಲಿ ವೀರೇಂದ್ರ ಅವರನ್ನು ಬಂಧಿಸಿತ್ತು. ವೀರೇಂದ್ರ ಅವರು ಈಗಲೂ ಇ.ಡಿ ಬಂಧನದಲ್ಲಿ ಇದ್ದು, ತನಿಖೆ ಮುಂದುವರೆದಿದೆ.

ಜಿ.ಜನಾರ್ದನ ರೆಡ್ಡಿ

• ಕ್ಷೇತ್ರ: ಗಂಗಾವತಿ

• **ಮೊದಲ ಬಾರಿ ವಿಧಾನಸಭೆಗೆ ಆಯ್ಕೆ. ಹಿಂದೆ ಬಿಜೆಪಿಯಿಂದ ವಿಧಾನ ಪರಿಷತ್ ಸದಸ್ಯರಾಗಿ, ಸಚಿವರಾಗಿದ್ದರು.**

ಪ್ರಕರಣದ ವಿವರ: ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ಹೈದರಾಬಾದ್‌ನ ಸಿಬಿಐ ವಿಶೇಷ ನ್ಯಾಯಾಲಯವು ಜನಾರ್ದನ ರೆಡ್ಡಿಗೆ ಏಳು ವರ್ಷ ಜೈಲು ಶಿಕ್ಷೆ ವಿಧಿಸಿ, ಇದೇ ಮೇ 12ರಂದು ತೀರ್ಪು ನೀಡಿತ್ತು. ಈ ತೀರ್ಪಿನ ವಿರುದ್ಧ ತೆಲಂಗಾಣ ಹೈಕೋರ್ಟ್ ಮೊರೆ ಹೋಗಿದ್ದ ಜನಾರ್ದನ ರೆಡ್ಡಿ, ಶಿಕ್ಷೆ ಜಾರಿಗೆ ತಡೆ ತಂದಿದ್ದರು.

ಸತೀಶ್ ಸೈಲ್

• ಕ್ಷೇತ್ರ: ಕಾರವಾರ

• **ಮೊದಲ ಬಾರಿ 2013ರಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಆಯ್ಕೆ. 2018ರಲ್ಲಿ ಬಿಜೆಪಿ ಎದುರು ಸೋಲು. 2023ರಲ್ಲಿ ಕಾಂಗ್ರೆಸ್‌ನಿಂದ ಗೆಲುವು**

ಪ್ರಕರಣದ ವಿವರ: ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ಬೇಲೆಕೇರಿ ಬಂದರಿನಲ್ಲಿ ಸಂಗ್ರಹಿಸಲಾಗಿದ್ದ ಕಬ್ಬಿಣದ ಅದಿರನ್ನು ಕದ್ದು ಸಾಗಿಸಿದ ಪ್ರಕರಣದಲ್ಲಿ ಸತೀಶ್ ಸೈಲ್ ವಿರುದ್ಧ ಪ್ರಕರಣ ದಾಖಲಾಗಿತ್ತು.

ಈ ಪ್ರಕರಣದಲ್ಲಿ ಜನಪ್ರತಿನಿಧಿಗಳ ವಿಶೇಷ ಕೋರ್ಟ್, ಸತೀಶ್ ಸೈಲ್ ಅವರಿಗೆ ಏಳು ವರ್ಷ ಜೈಲು ಶಿಕ್ಷೆ ವಿಧಿಸಿತ್ತು. ಶಿಕ್ಷೆ ಜಾರಿಗೆ ಸೈಲ್ ಅವರು ಹೈಕೋರ್ಟ್ ಮೂಲಕ ತಡೆ ತಂದಿದ್ದರು. ಆದರೆ, ಈ ಪ್ರಕರಣದಲ್ಲಿ ಇಸಿಐಆರ್ ದಾಖಲಿಸಿದ ಜಾರಿ ನಿರ್ದೇಶನಾಲಯವು (ಇ.ಡಿ) ಸತೀಶ್ ಅವರನ್ನು ಈಚೆಗೆ ಬಂಧಿಸಿದೆ. ಸತೀಶ್ ಈಗಲೂ ಇ.ಡಿ ಬಂಧನದಲ್ಲಿ ಇದ್ದಾರೆ.

ಕೆ.ವೈ.ನಂಜೇಗೌಡ

• ಕ್ಷೇತ್ರ: ಮಾಲೂರು



• **ಮೊದಲ ಬಾರಿ 2018ರಲ್ಲಿ ಕಾಂಗ್ರೆಸ್‌ನಿಂದ ಗೆಲುವು, 2023ರಲ್ಲಿ ಪುನರಾಯ್ಕೆ**

ಪ್ರಕರಣದ ವಿವರ: 2023ರ ವಿಧಾನಸಭಾ ಚುನಾವಣೆಗೆ ನಡೆದ ಮತದಾನದ ಮತ ಎಣಿಕೆಯಲ್ಲಿ ಕೆ.ವೈ.ನಂಜೇಗೌಡ ಅವರು ಅಕ್ರಮ ಎಸಗಿದ್ದಾರೆ ಎಂದು ಬಿಜೆಪಿಯ ಪರಾಜಿತ ಅಭ್ಯರ್ಥಿ ಕೆ.ಎಸ್. ಮಂಜುನಾಥ್ ಗೌಡ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ಹೈಕೋರ್ಟ್ ನಂಜೇಗೌಡ ಅವರ ಆಯ್ಕೆಯನ್ನು ಅಸಿಂಧುಗೊಳಿಸಿ, ಇದೇ ಸೆಪ್ಟೆಂಬರ್ 15ರಂದು ಆದೇಶ ಹೊರಡಿಸಿತ್ತು. ಜತೆಗೆ ನಾಲ್ಕು ವಾರಗಳಲ್ಲಿ ಮರು ಎಣಿಕೆ ನಡೆಸುವಂತೆ ಚುನಾವಣಾ ಆಯೋಗಕ್ಕೆ ಸೂಚಿಸಿತ್ತು. ಇನ್ನಷ್ಟೇ ಮತಗಳ ಮರು ಎಣಿಕೆ ನಡೆಯಬೇಕಿದೆ.

ಎಚ್.ಡಿ. ರೇವಣ್ಣ

• ಕ್ಷೇತ್ರ: ಹೊಳೆನರಸೀಪುರ

• **1994ರಲ್ಲಿ ಮೊದಲ ಬಾರಿ ಸ್ಪರ್ಧಿಸಿ ಗೆಲುವು. 1999ರಲ್ಲಿ ಸೋತಿದ್ದು, ನಂತರ ಐದು ಬಾರಿ ಸತತ ಗೆಲುವು. ಸಚಿವರೂ ಆಗಿದ್ದರು**

ಪ್ರಕರಣದ ವಿವರ: ಪ್ರಜ್ವಲ್ ರೇವಣ್ಣ ವಿರುದ್ಧದ ಅತ್ಯಾಚಾರ ಪ್ರಕರಣದಲ್ಲಿ ಭಾಗಿಯಾದ ಆರೋಪದಲ್ಲಿ ಎಚ್.ಡಿ.ರೇವಣ್ಣ ವಿರುದ್ಧವೂ ತನಿಖೆ ನಡೆಯುತ್ತಿದೆ. ಸಂತ್ರಸ್ತೆ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಆರೋಪದ ಅಡಿಯಲ್ಲೂ ಅವರ ವಿರುದ್ಧ ಪ್ರಕರಣ ದಾಖಲಾಗಿದೆ. ಪ್ರಜ್ವಲ್ ರೇವಣ್ಣ ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿಯ ವಿಶೇಷ ತನಿಖಾ ತಂಡವೇ ಈ ಪ್ರಕರಣದ ತನಿಖೆ ನಡೆಸುತ್ತಿದೆ. ಅತ್ಯಾಚಾರ ಪ್ರಕರಣದ ಸಂತ್ರಸ್ತೆಯನ್ನು ಅಪಹರಿಸಿದ ಆರೋಪವನ್ನೂ ಅವರು ಎದುರಿಸುತ್ತಿದ್ದಾರೆ. ಈ ಎಲ್ಲ ಪ್ರಕರಣಗಳಲ್ಲಿ, ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಅವರಿಗೆ ಜಾಮೀನು ನೀಡಿದೆ.

ಮುನಿರತ್ನ

• ಕ್ಷೇತ್ರ: ಆರ್. ಆರ್. ನಗರ

• **2013, 2018ರಲ್ಲಿ ಕಾಂಗ್ರೆಸ್‌ನಿಂದ ಆಯ್ಕೆ. 2019ರಲ್ಲಿ ಕಾಂಗ್ರೆಸ್ ತೊರೆದು ಉಪಚುನಾವಣೆಯಲ್ಲಿ ಬಿಜೆಪಿಯಿಂದ ಗೆಲುವು. 2023– ಬಿಜೆಪಿಯಿಂದ ಆಯ್ಕೆ**

ಪ್ರಕರಣದ ವಿವರ: ಜಾತಿ ನಿಂದನೆ, ಕೊಲೆ ಬೆದರಿಕೆ, ಅತ್ಯಾಚಾರ ಆರೋಪದಲ್ಲಿ ವಿವಿಧ ಪ್ರಕರಣಗಳು ದಾಖಲಾಗಿವೆ.ಪೊಲೀಸ್ ಮತ್ತು ನ್ಯಾಯಾಂಗ ಬಂಧನ. ಈಗ ಜಾಮೀನಿನ ಮೇಲೆ ಹೊರಗಿದ್ದಾರೆ.

ಮೈಸೂರು ದಸರಾ ಉತ್ಸವದ ಪ್ರಮುಖ ಘಟ್ಟವಾದ ಜಂಬೂ ಸವಾರಿಗಾಗಿ ಅಂಬಾವಿಲಾಸ ಅರಮನೆಯಲ್ಲಿ ಸಿದ್ಧತೆಗಳು ನಡೆದಿದ್ದು, ಕಾರ್ಮಿಕರು ಮಂಗಳವಾರ ಸಾವಿರಾರು ಕುರ್ಚಿಗಳನ್ನು ಜೋಡಿಸಿದರು ಚಿತ್ರ:ಅನೂಪ್ ರಾಘ.ಟಿ.

ಜಂಬೂಸವಾರಿ: ಭರದ ತಯಾರಿ

ನಾಡಹಬ್ಬ ದಸರಾದಲ್ಲಿ ಲಕ್ಷಾಂತರ ಮಂದಿ ಪಾಲ್ಗೊಳ್ಳುವ ನಿರೀಕ್ಷೆ

• ಎಂ.ಮಹೇಶ್

ಮೈಸೂರು: 11 ದಿನ ಸಂಭ್ರಮದ ಹೊನಲು ಹರಿಸಿದ ನಾಡಹಬ್ಬ 'ಮೈಸೂರು ದಸರಾ' ಮಹೋತ್ಸವದ ಪ್ರಮುಖ ಆಕರ್ಷಣೆ 'ಜಂಬೂಸವಾರಿ'ಯು ವಿಜಯ ದಶಮಿಯ ದಿನವಾದ ಗುರುವಾರ (ಅ.2) ನಡೆಯಲಿದ್ದು, ಜಿಲ್ಲಾಡಳಿತ ಅಂತಿಮ ಹಂತದ ತಯಾರಿ ನಡೆಸಿದೆ.

ಅರಮನೆ ನಗರಿಯ ರಾಜಮಾರ್ಗದಲ್ಲಿ ಸಾಗುವ 'ಪರಂಪರೆಯ ರಥ'ವನ್ನು ವೀಕ್ಷಿಸಲು ಲಕ್ಷಾಂತರ ಮಂದಿ ಪಾಲ್ಗೊಳ್ಳುವ ನಿರೀಕ್ಷೆ ಇದೆ. ನಾಡಿನ ಕಲೆ, ಸಂಸ್ಕೃತಿ, ಪರಂಪರೆ ಹಾಗೂ ಸಂಪ್ರದಾಯ ಬಿಂಬಿಸುವ ಮೆರವಣಿಗೆ ವೀಕ್ಷಿಸಲು ದೇಶ-ವಿದೇಶಗಳ ಪ್ರವಾಸಿಗರು ಉತ್ಸುಕರಾಗಿದ್ದಾರೆ. ಹಲವು ರೀತಿಯಲ್ಲಿ 'ತಾಲೀಮು' ನಡೆಸಿ ಸಜ್ಜಾಗಿರುವ ಗಜಪಡೆಯು ಮೆರವಣಿಗೆಯ ಮೆರುಗು ಹೆಚ್ಚಿಸಲಿದೆ. ಸಾಂಸ್ಕೃತಿಕ ವೈಭವ ಬಿಂಬಿಸಲು ಕಲಾತಂಡಗಳು ಹಾಗೂ ರಾಜ್ಯದ ಸಾಧನೆ–ಸೌಹಾರ್ದದ ಸಂದೇಶ ಸಾರಲು ಸ್ತಬ್ಧಚಿತ್ರಗಳು ಸಜ್ಜಾಗಿವೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುರುವಾರ ಮಧ್ಯಾಹ್ನ 1ರಿಂದ 1.18ರವರೆಗೆ ಅರಮನೆಯ ಬಲರಾಮ ದ್ವಾರದಲ್ಲಿ ನಂದಿಧ್ವಜ ಪೂಜೆ ನೆರವೇರಿಸಿ ಚಾಲನೆ ನೀಡುವರು. ಸಂಜೆ 4.42ರಿಂದ 5.06ರವರೆಗೆ ಅಂಬಾವಿಲಾಸ ಅರಮನೆ ಆವರಣದಲ್ಲಿ ಗಜಪಡೆಯ ಕ್ಯಾಪ್ಟನ್ 'ಅಭಿಮನ್ಯು' ಹೊರಲಿರುವ 750 ಕೆ.ಜಿ. ತೂಕದ ಚಿನ್ನದ ಅಂಬಾರಿಯಲ್ಲಿ ವಿರಾಜಮಾನ ಚಾಮುಂಡೇಶ್ವರಿದೇವಿ ಮೂರ್ತಿಗೆ ಪುಷ್ಪಾರ್ಚನೆ ಮಾಡುವರು.

ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಡಾ.ಎಚ್.ಸಿ. ಮಹದೇವಪ್ಪ, ಕೆ.ವೆಂಕಟೇಶ್ ಹಾಗೂ ಶಿವರಾಜ್ ಎಸ್. ತಂಗಡಗಿ ಪಾಲ್ಗೊಳ್ಳಲಿದ್ದಾರೆ.

ಆಸನಗಳು ಕಡಿತ, ನಿರ್ಬಂಧ: ಅರಮನೆ ಆವರಣದಲ್ಲಿ, ಅತಿ ಗಣ್ಯರು, ಗಣ್ಯರು, 'ಗೋಲ್ಡ್ ಕಾರ್ಡ್' ಹಾಗೂ ಟಿಕೆಟ್ ಉಳ್ಳವರಿಗೆ ಆಸನಗಳ ವ್ಯವಸ್ಥೆ ಮಾಡಲಾಗಿದೆ. ಬೆಂಗಳೂರಿನಲ್ಲಿ ಆರ್‌ಸಿಬಿ ಸಂಭ್ರಮಾಚರಣೆ ವೇಳೆ ಸಂಭವಿಸಿದ ಕಾಲ್ತುಳಿತದ ಪರಿಣಾಮ, ಹಿಂದಿನ ವರ್ಷಗಳಿಗೆ ಹೋಲಿಸಿದರೆ ಈ ಬಾರಿ ಅರಮನೆ ಆವರಣದಲ್ಲಿ ಆಸನಗಳ ಸಂಖ್ಯೆಯನ್ನು ಕಡಿತಗೊಳಿಸಲಾಗಿದೆ. 11 ಸಾವಿರ ಕುರ್ಚಿಗಳು ಕಡಿಮೆಯಾಗಿವೆ.

3

ಗಾಂಧೀಜಿ 'ಹೆಜ್ಜೆಗುರುತು'

ಗಾಂಧಿ ಜಯಂತಿಯ ದಿನವಾದ ಅ.2ರಂದೇ ಈ ಬಾರಿ ವಿಜಯದಶಮಿ ಮೆರವಣಿಗೆ ನಡೆಯುತ್ತಿರುವುದು ವಿಶೇಷ.

ಹೀಗಾಗಿ, ರಾಜ್ಯದಲ್ಲಿ ಗಾಂಧೀಜಿ ಅವರ 'ಹೆಜ್ಜೆಗುರುತು' ಬಿಂಬಿಸುವ ಹಾಗೂ ಅವರ ಸಂದೇಶಗಳನ್ನು ಹೊತ್ತ ಸ್ತಬ್ಧಚಿತ್ರಗಳು 'ರಾಜಪಥ'ದಲ್ಲಿ ಸಾಗಲಿವೆ. ಎಚ್‌ಎಎಲ್, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಎಚ್‌ಎಂಟಿ, ವಾಯುಪಡೆಯ ಸ್ತಬ್ಧಚಿತ್ರಗಳು ಇದೇ ಮೊದಲ ಬಾರಿಗೆ ಪಾಲ್ಗೊಳ್ಳುತ್ತಿರುವುದು ವಿಶೇಷ.

ಜಂಬೂಸವಾರಿ ದಿನ ಈ ಬಾರಿ ನಿರೀಕ್ಷೆ ಮೀರಿ ಜನ ಬರುವ ಸಾಧ್ಯತೆ ಇದ್ದು, ಮುಂಜಾಗ್ರತೆಯಾಗಿ ವ್ಯಾಪಕ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.

ಬಿಹಾರದಲ್ಲಿ 7.42 ಕೋಟಿ ಮತದಾರರು

ಪಟ್ನಾ/ನವದೆಹಲಿ (ಪಿಟಿಐ): ಚುನಾವಣಾ ಆಯೋಗವು ಮಂಗಳವಾರ ಬಿಹಾರದ ಮತದಾರರ ಅಂತಿಮ ಪಟ್ಟಿಯನ್ನು ಪ್ರಕಟಿಸಿದ್ದು, ಅದರಲ್ಲಿ 7.42 ಕೋಟಿ ಮತದಾರರ ವಿವರಗಳಿವೆ.

ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಬಳಿಕ ರಾಜ್ಯದಲ್ಲಿ ಒಟ್ಟು 47 ಲಕ್ಷ ಮತದಾರರು ಕಡಿಮೆಯಾಗಿದ್ದಾರೆ. ಆದರೆ, ಎಸ್‌ಐಆರ್‌ನ ಕರಡು ಪಟ್ಟಿಗಿಂತ (7.24 ಕೋಟಿ) ಅಂತಿಮ ಪಟ್ಟಿಯಲ್ಲಿ ಹೆಚ್ಚಿನ ಸಂಖ್ಯೆಯ ಮತದಾರರ ಹೆಸರುಗಳು ಸೇರ್ಪಡೆಯಾಗಿವೆ.

ಆಗಸ್ಟ್‌ನಲ್ಲಿ ಪ್ರಕಟಿಸಿದ್ದ ಕರಡು ಪಟ್ಟಿಯಲ್ಲಿ ಗೈರುಹಾಜರಿ, ಸ್ಥಳಾಂತರ ಅಥವಾ ಮೃತಪಟ್ಟಿದ್ದಾರೆ ಎಂಬ ಕಾರಣಗಳನ್ನು ನೀಡಿ 65 ಲಕ್ಷ ಮತದಾರರ ಹೆಸರುಗಳನ್ನು ಹೊರಗಿಡಲಾಗಿತ್ತು. ಕರಡುಪಟ್ಟಿಯಲ್ಲಿ ಬಿಟ್ಟುಹೋಗಿದ್ದ 21.53 ಲಕ್ಷ ಅರ್ಹ ಮತದಾರರ ಹೆಸರುಗಳನ್ನು ಅಂತಿಮ ಪಟ್ಟಿಯಲ್ಲಿ ಸೇರಿಸಲಾಗಿದೆ ಎಂದು ಬಿಹಾರದ ಮುಖ್ಯ ಚುನಾವಣಾ ಅಧಿಕಾರಿ ಮಾಹಿತಿ ನೀಡಿದ್ದಾರೆ.

ಗಾಜಾ: ಸಂಘರ್ಷ ಅಂತ್ಯಕ್ಕೆ 20 ಅಂಶ

ನೆತನ್ಯಾಹು ಜೊತೆ ಮಾತುಕತೆ ಬಳಿಕ ಟ್ರಂಪ್ ಘೋಷಣೆ

ವಾಷಿಂಗ್ಟನ್/ಜೆರುಸಲೇಂ (ಎಪಿ): ಗಾಜಾದಲ್ಲಿ ಯುದ್ಧ ಕೊನೆಗೊಳಿಸುವ ಸಂಬಂಧ ರೂಪಿಸಿರುವ ಶಾಂತಿ ಒಪ್ಪಂದಕ್ಕೆ ಒಪ್ಪಿಗೆಯಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾಗೂ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ತಿಳಿಸಿದ್ದಾರೆ. ಆದರೆ, ಈ ಪ್ರಸ್ತಾವವನ್ನು ಹಮಾಸ್ ಒಪ್ಪಿಕೊಂಡಿದೆಯೇ ಎಂಬುದು ದೃಢಪಟ್ಟಿಲ್ಲ.

ಪ್ಯಾಲೆಸ್ಟೀನ್‌ನ ಗಾಜಾ ಪಟ್ಟಿಯಲ್ಲಿ ಇಸ್ರೇಲ್– ಹಮಾಸ್ ನಡುವಿನ ಸಂಘರ್ಷ ಕೊನೆಗೊಳಿಸುವುದಕ್ಕಾಗಿ 20 ಅಂಶಗಳ ಯೋಜನೆಯನ್ನು ಟ್ರಂಪ್ ಮಂಡಿಸಿದ್ದಾರೆ. ಇದರ ಅನ್ವಯ, ಯುದ್ಧದಿಂದ ಜರ್ಜರಿತರಾಗಿರುವ ಪ್ಯಾಲೆಸ್ಟೀನ್‌ನ ಪ್ರದೇಶಕ್ಕೆ ತಾತ್ಕಾಲಿಕ ಆಡಳಿತ ಮಂಡಳಿ ಸ್ಥಾಪಿಸಿ, ಇದರ ನೇತೃತ್ವವನ್ನು ಡೊನಾಲ್ಡ್ ಟ್ರಂಪ್ ಅವರೇ ವಹಿಸಿಕೊಳ್ಳಲಿದ್ದಾರೆ. ಈ ಮಂಡಳಿಯಲ್ಲಿ ಬ್ರಿಟನ್‌ನ ಮಾಜಿ ಪ್ರಧಾನಿ ಟೋನಿ ಬ್ಲೇರ್ ಕೂಡ ಇರಲಿದ್ದಾರೆ.

'ಎರಡು ಕಡೆಯವರೂ ಒಪ್ಪಿಗೆ ಸೂಚಿಸಿದರೆ, ಯುದ್ಧಪೀಡಿತ ಗಾಜಾದಿಂದ ಯಾವ ನಾಗರಿಕರೂ ಬಿಟ್ಟು ತೆರಳಬೇಕಿಲ್ಲ. ಹಮಾಸ್ ವಶದಲ್ಲಿರುವ ಬಾಕಿ ಉಳಿದ ಒತ್ತೆಯಾಳುಗಳನ್ನು 72 ಗಂಟೆಗಳ ಒಳಗಾಗಿ ಬಿಡುಗಡೆಗೊಳಿಸಬೇಕು ಎಂಬ ಪ್ರಸ್ತಾವವೂ ಒಳಗೊಂಡಿದೆ ಎಂದು ಟ್ರಂಪ್ ಹೇಳಿದ್ದಾರೆ.

8

ಶ್ವೇತಭವನದಲ್ಲಿ ಮಂಗಳವಾರ ನಡೆದ ಸಭೆಯ ಬಳಿಕ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಮತ್ತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ —ಎಪಿ / ಪಿಟಿಐ ಚಿತ್ರ

ಗಾಜಾ ಸಂಘರ್ಷ ಕೊನೆಗೆ ಟ್ರಂಪ್ ಮುಂದಿಟ್ಟಿರುವ ಶಾಂತಿ ಪ್ರಸ್ತಾವದಿಂದ ದೀರ್ಘಾವಧಿ ಶಾಂತಿ ಸಾಧ್ಯ. ಜೊತೆಗೆ ಪ್ಯಾಲೆಸ್ಟೀನ್– ಇಸ್ರೇಲ್‌ನ ಜನರಿಗೆ ಭದ್ರತೆ ದೊರೆಯಲಿದೆ
ನರೇಂದ್ರ ಮೋದಿ, ಪ್ರಧಾನಿ

ಅರಬ್ ರಾಷ್ಟ್ರಗಳ ಸ್ವಾಗತ

ದುಬೈ (ಪಿಟಿಐ): ಗಾಜಾದಲ್ಲಿ ಯುದ್ಧವನ್ನು ಕೊನೆಗೊಳಿಸಲು ಹಾಗೂ ತೊಂದರೆಗೊಳಗಾದ ಪ್ರದೇಶದಲ್ಲಿ ಶಾಂತಿಯನ್ನು ಪುನರ್‌ಸ್ಥಾಪಿಸಲು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ 20 ಅಂಶಗಳ ಯೋಜನೆಯನ್ನು ಅರಬ್‌ನ ಎಂಟು ಮತ್ತು ಇಸ್ಲಾಂನ ಬಹುತೇಕ ರಾಷ್ಟ್ರಗಳು ಮಂಗಳವಾರ ಸ್ವಾಗತಿಸಿವೆ. ಶಾಂತಿ ಯೋಜನೆಯನ್ನು ಜೋರ್ಡನ್, ಕತಾರ್, ಯುಎಇ, ಇಂಡೊನೇಷ್ಯಾ, ಪಾಕಿಸ್ತಾನ, ಟರ್ಕಿ, ಸೌದಿ ಅರೇಬಿಯಾ ಮತ್ತು ಈಜಿಪ್ಟ್ ವಿದೇಶಾಂಗ ಸಚಿವರು ಸ್ವಾಗತಿಸಿದ್ದಾರೆ.

ಕೊಪ್ಪಳ ಸಮೀಪದ ಗ್ರಾಮದಲ್ಲಿ ಹೋಟೆಲ್‌ಗಳಿಲ್ಲ, ಗುಟ್ಕಾ, ಮದ್ಯ ಸಿಗುವುದಿಲ್ಲ

'ಗಾಂಧಿ ಮಾರ್ಗ'ದಲ್ಲಿ ಕಾಮನೂರು

• ಪ್ರಮೋದ ಕುಲಕರ್ಣಿ

ಕೊಪ್ಪಳ: ಭಾರತವನ್ನು ಮದ್ಯಪಾನ ಮುಕ್ತ ದೇಶವನ್ನಾಗಿ ಮಾಡಲು ಮಹಾತ್ಮ ಗಾಂಧಿ ಅವರು ಪ್ರಯತ್ನಿಸಿದ್ದರು. ಅವರ ಕೆಲ ಆದರ್ಶಗಳನ್ನು ಅನುಸರಿಸುತ್ತಿರುವ ತಾಲ್ಲೂಕಿನ ಲೇಬಗೇರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಾಮನೂರು ಗ್ರಾಮದ ಜನ ಮೂರ್ನಾಲ್ಕು ದಶಕಗಳಿಂದ 'ಗಾಂಧಿ ಮಾರ್ಗ'ದಲ್ಲಿ ಸಾಗುತ್ತಿದ್ದಾರೆ.

ಅಂದಾಜು ಎರಡೂವರೆ ಸಾವಿರ ಜನಸಂಖ್ಯೆಯುಳ್ಳ ಗ್ರಾಮದಲ್ಲಿ ಎಲ್ಲೂ ಹೋಟೆಲ್‌ಗಳಿಲ್ಲ. ಅಂಗಡಿಗಳಿವೆ, ಗುಟ್ಕಾ ಮಾರುವುದಿಲ್ಲ. ಮದ್ಯ ಕುಡಿಯಲು ಅವಕಾಶ ಇಲ್ಲವೇ ಇಲ್ಲ. ಗ್ರಾಮದ ಸುತ್ತ ಹಸಿರ ಸಿರಿ ಆವರಿಸಿದೆ. ಸಾವಯವ ಕೃಷಿಯೇ ಜನರ ಜೀವಾಳ. ನಿಯಮಗಳನ್ನು ಕಟ್ಟುನಿಟ್ಟಾಗಿ, ಕರಾರುವಾಕ್ಕಾಗಿ ಪಾಲನೆ ಮಾಡುತ್ತಿರುವ ಕಾರಣ ಗ್ರಾಮವು ಈಗಲೂ ಆಧುನಿಕ ಭರಾಟೆಯ ಹಿಡಿತಕ್ಕೆ ಸಿಲುಕದೇ ಅಪ್ಪಟ ಹಳ್ಳಿಯ ಸೊಬಗನ್ನು ಉಳಿಸಿಕೊಂಡಿದೆ.

ಗ್ರಾಮದ ಹಿರಿಯರು ಸೇರಿಕೊಂಡು 3–4 ದಶಕಗಳ ಹಿಂದೆ ಕೈಗೊಂಡ ಮದ್ಯ ಮಾರಾಟ ನಿಷೇಧ ನಿರ್ಧಾರವನ್ನು ಈಗಿನ ಪೀಳಿಗೆಯೂ ಮುಂದುವರಿಸಿಕೊಂಡು ನಡೆದಿದೆ. ಕಾಮನೂರಿನಲ್ಲಿ ಐದಾರು ಕಿರಾಣಿ ಅಂಗಡಿಗಳಿದ್ದರೂ ಅಲ್ಲಿ ಗುಟ್ಕಾ ಚೀಟಿ ಕಾಣುವುದಿಲ್ಲ. ಹೊಸದಾಗಿ ಅಂಗಡಿ ಆರಂಭಿಸಿದವರೂ ಈ ಬದ್ಧತೆ ಮುಂದುವರಿಸಿಕೊಂಡು ಹೋಗಿದ್ದಾರೆ.

ಗ್ರಾಮದ ಜನ ತಮ್ಮೂರಿನ ಮಕ್ಕಳ ಶಿಕ್ಷಣಕ್ಕೆ ಒತ್ತು ಕೊಟ್ಟಿದ್ದಾರೆ. ಶಿಕ್ಷಕರು, ದಾನಿಗಳು ನೆರವಿನಿಂದ 75 ವರ್ಷ ಹಳೆಯದಾದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಗೆ ₹21 ಲಕ್ಷ ಹಣ ಸಂಗ್ರಹಿಸಿ ಒಂದು ಎಕರೆ 20 ಗುಂಟೆ ಜಾಗ ಖರೀದಿಸಿದ್ದಾರೆ.

3

ಕಾಮನೂರಿನ ಆದರ್ಶಗಳನ್ನು ಮೆಚ್ಚಿಕೊಂಡು ಕೊಪ್ಪಳದ ಗಾಂಧಿ ಬಳಗದ ಸದಸ್ಯರು 2024ರಲ್ಲಿ ನಡೆಸಿದ್ದ ಪಾದಯಾತ್ರೆಯ ಸಂಗ್ರಹ ಚಿತ್ರ

ಮೂರ್ನಾಲ್ಕು ದಶಕಗಳಿಂದ ನಮ್ಮೂರಿನಲ್ಲಿ ಯಾರೂ ಮದ್ಯ ಕುಡಿಯುವುದಿಲ್ಲ. ಈ ಕ್ರಮವನ್ನು ಯುವ ಪೀಳಿಗೆಯವರು ಉಳಿಸಿಕೊಂಡು ಬಂದಿದ್ದಾರೆ
ಮಾನಪ್ಪ ಬಡಿಗೇರ, ಗ್ರಾಮಸ್ಥ

ಕೆಲ ವರ್ಷಗಳ ಹಿಂದಷ್ಟೇ ಚಿಕ್ಕ ಕಿರಾಣಿ ಅಂಗಡಿ ಆರಂಭಿಸಿದ್ದೇನೆ. ಗ್ರಾಮದಲ್ಲಿ ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬಂದ ಗುಟ್ಕಾ ಮಾರಾಟ ನಿಷೇಧವನ್ನು ಪಾಲಿಸುತ್ತಿದ್ದೇನೆ
ಈರಮ್ಮ, ಅಂಗಡಿಯ ಒಡತಿ

ವರವಾದೀತೆ ನ್ಯಾನೋ ಗೊಬ್ಬರ?

• ವಿಕ್ರಮ ಜೋಶಿ

ಈಗ ನಾನಾರೂಪದಲ್ಲಿ ನ್ಯಾನೋ ತಂತ್ರಜ್ಞಾನ ಬೆಳೆಯುತ್ತಲೇ ಇದೆ. ನ್ಯಾನೋ ತಂತ್ರಜ್ಞಾನವೆಂದರೆ 1ರಿಂದ 100 ನ್ಯಾನೋ ಮೀಟರ್‌ಗಳ ವ್ಯಾಪ್ತಿಯಲ್ಲಿಯ ವಸ್ತುಗಳನ್ನು ಕುರಿತಾದ ವಿಜ್ಞಾನ. ಒಂದು ನ್ಯಾನೋ ಮೀಟರ್ (0.000000001 ಮೀಟರ್), ಎಂದರೆ ಅದರ ದಪ್ಪವು ನಮ್ಮ ಕೂದಲೆಳೆಗಿಂತ ಸರಿಸುಮಾರು ಒಂದು ಲಕ್ಷ ಪಟ್ಟು ಕಡಿಮೆ! ಒಂದು ಕಾಲದಲ್ಲಿ ಕೇವಲ ಇದೊಂದು 'ಸಾಧ್ಯತೆ' ಎನಿಸಿಕೊಂಡಿದ್ದ ಅತ್ಯಂತ ಸಂಕೀರ್ಣ ಹಾಗೂ ಸೂಕ್ಷ್ಮ ತಂತ್ರಜ್ಞಾನ. ನ್ಯಾನೋ ತಂತ್ರಜ್ಞಾನ ಮೊದಮೊದಲು ಸೂಕ್ಷ್ಮದರ್ಶಕ ತಂತ್ರಜ್ಞಾನ ಹಾಗೂ ವಸ್ತುವಿಜ್ಞಾನದ ಕ್ಷೇತ್ರವನ್ನು ಪ್ರವೇಶಿಸಿತು. ಇಂದು ಔಷಧತಯಾರಿಕೆ, ಆರೋಗ್ಯ, ಪರಿಸರ ಮಾಲಿನ್ಯ ನಿರ್ವಹಣೆ, ಸೌರಫಲಕಗಳ ತಯಾರಿಕೆ, ಚಿಪ್‌ಗಳ ವಿನ್ಯಾಸ, ನ್ಯಾನೋ ರೋಬೋಟ್ – ಹೀಗೆ ಹಲವಾರು ವಿವಿಧ ಕ್ಷೇತ್ರಗಳಲ್ಲಿ ಕಾರ್ಯರೂಪಕ್ಕೆ ಬಂದಿದೆ. ನ್ಯಾನೋ ಟೆಕ್ನಾಲಜಿ ಇಂದು ಕೃಷಿಯಲ್ಲಿಯೂ ಬಳಕೆಯಾಗುತ್ತಿದೆ. ಕಳೆದ ಕಾಲು ಶತಮಾನಗಳಿಂದ ನ್ಯಾನೋ ತಂತ್ರಜ್ಞಾನವನ್ನು ಕೃಷಿಯ ಕ್ಷೇತ್ರದಲ್ಲಿಯೂ ಪ್ರಯೋಗ ಮಾಡಲಾಗುತ್ತಿದೆ. ಆ ಅವಿರತ ಪರಿಶ್ರಮದ ಫಲವೇ ನ್ಯಾನೋ ಗೊಬ್ಬರ.

ಗೊಬ್ಬರಗಳಲ್ಲಿನ ಪೋಷಕಾಂಶಗಳನ್ನು ಹೆಚ್ಚು ಪರಿಣಾಮಕಾರಿಯಾಗಿಸಲು ಗೊಬ್ಬರವನ್ನು ನ್ಯಾನೋ ಗಾತ್ರಕ್ಕೆ ತರಲಾಗುವುದು. ಅದೇ 'ನ್ಯಾನೋ ಗೊಬ್ಬರ'. ಸಾಮಾನ್ಯ ಗೊಬ್ಬರದ ಹಾಗೆ ಮಣ್ಣಿನಲ್ಲಿ ಬೆರೆಸುವುದರ ಬದಲಾಗಿ ಇದನ್ನು ನೇರವಾಗಿ ಕಾಂಡಕ್ಕೆ ಹಾಗೂ ಎಲೆಗಳಿಗೆ ಸಿಂಪಡಿಸಲಾಗುತ್ತದೆ. ಇದು ಸಾಂಪ್ರದಾಯಿಕ ಗೊಬ್ಬರಕ್ಕಿಂತ ಸೋವಿ, ಬಳಕೆಯ ಅವಶ್ಯಕತೆಯ ಪ್ರಮಾಣವೂ ಕಡಿಮೆ, ನಿರ್ವಹಣೆಯೂ ಸುಲಭ, ಅತ್ಯಂತ ಪರಿಣಾಮಕಾರಿ; ಅಷ್ಟೇ ಇಳುವರಿ, ಹಾಗೂ ಸುಲಭವಾಗಿ ಇದನ್ನು ಸಂಗ್ರಹಿಸಿಡಬಹುದು. ಕೃಷಿಯಲ್ಲಿ ಸುಸ್ಥಿರತೆಗಾಗಿ ಇದೊಂದು ಅತ್ಯಂತ ಮಹತ್ವದ ಪರಿಹಾರವಾಗಿದೆ. ನ್ಯಾನೋ ಗೊಬ್ಬರದಲ್ಲಿ ನಾಲ್ಕು ಬಗೆಗಳುಂಟು: ನ್ಯಾನೋ ಯೂರಿಯಾ ಅಥವಾ ನ್ಯಾನೋ ಸಾರಜನಕ, ನ್ಯಾನೋ ಫಾಸ್ಫರಸ್, ನ್ಯಾನೋ ಪೊಟ್ಯಾಸಿಯಮ್, ಹಾಗೂ ನ್ಯಾನೋ ಸೂಕ್ಷ್ಮ ಪೋಷಕಾಂಶಗಳು. ಈಗ ನ್ಯಾನೋ ಗೊಬ್ಬರದ ಕೆಲವು ಲಕ್ಷಣಗಳನ್ನು ನೋಡೋಣ.

ನ್ಯಾನೋ ಗಾತ್ರ: ಈ ಗೊಬ್ಬರದ ಪ್ರಧಾನ ಲಕ್ಷಣವೇ ಅದರ ಸೂಕ್ಷ್ಮ ಗಾತ್ರ. ಸಾಂಪ್ರದಾಯಿಕ ರಾಸಾಯನಿಕ ಗೊಬ್ಬರವು ಗಾತ್ರದಲ್ಲಿ ದೊಡ್ಡದಾಗಿರುವುದರಿಂದ ಅದರ ಬಳಕೆಯ ಪ್ರಮಾಣ ಹೆಚ್ಚಾಗಿರುತ್ತದೆ. ಬಳಸಿದ ಎಲ್ಲಾ ಗೊಬ್ಬರವೂ ಬೆಳೆಗಳಿಗೆ ಉಪಯೋಗವಾಗುವುದಿಲ್ಲ; ಪೋಷಕಾಂಶದ ಸೋರಿಕೆಯಾಗುತ್ತದೆ, ಗೊಬ್ಬರವು ನೀರಿನಲ್ಲಿ ಸೇರಿ ಹರಿದು ಹೋಗುತ್ತದೆ, ಇಲ್ಲವೇ ಮಣ್ಣಿನಲ್ಲೇ ಉಳಿದುಬಿಡುತ್ತದೆ. ಅಚ್ಚರಿಯ ವಿಷಯವೆಂದರೆ, ಗೊಬ್ಬರದಲ್ಲಿನ ಶೇ 50-70ರಷ್ಟು ಪೋಷಕಾಂಶವು ಬೆಳೆಗಳಿಗೆ ಸಿಗುವುದೇ ಇಲ್ಲ. ಇದಕ್ಕೆ ರಾಮಬಾಣವೇ ನ್ಯಾನೋ ಗೊಬ್ಬರ. ಇದರ ಗಾತ್ರ ಅತಿ ಚಿಕ್ಕದು; ಅದನ್ನು ಪೋಷಕಾಂಶಗಳ ಸಮೇತ ಕ್ಯಾಪ್ಸೂಲ್‌ನಲ್ಲಿ ತುಂಬಿಸಲಾಗುತ್ತದೆ. ದ್ರವದ ರೂಪದಲ್ಲಿ ನೇರವಾಗಿ ಕಾಂಡಗಳು, ಎಲೆಗಳು, ಕೆಲವೊಮ್ಮೆ ಬೇರುಗಳೂ ಹೀರಿಕೊಳ್ಳುವಂತೆ ಸಿಂಪಡಿಸಲಾಗುತ್ತದೆ.

ಪೋಷಕಾಂಶಗಳ ಬಿಡುಗಡೆ ನಿಧಾನ: ನ್ಯಾನೋ ಗೊಬ್ಬರವನ್ನು ಹಾಕಿದ ಮೇಲೆ ಅದರಲ್ಲಿನ ಪೋಷಕಾಂಶಗಳು ನಿಧಾನವಾಗಿ ಬಿಡುಗಡೆಯಾಗುತ್ತವೆ. ಇದರಿಂದಾಗಿ ಸಸ್ಯಗಳು ಪೋಷಕಾಂಶಗಳನ್ನು ಹೀರಿಕೊಳ್ಳುವ ಪ್ರಮಾಣ ಹೆಚ್ಚುತ್ತದೆ. ಈ ವಿಶೇಷವಾದ ಲಕ್ಷಣದಿಂದಾಗಿ ಪೋಷಕಾಂಶವು ಪೋಲಾಗುವುದು ಕಡಿಮೆ ಆಗುವುದಲ್ಲದೆ, ಮತ್ತೆ ಮತ್ತೆ ಗೊಬ್ಬರದ ಸಿಂಪಡಣೆಯ ಅಗತ್ಯವೂ ಇಲ್ಲ.

ಪರಿಣಾಮಕಾರಿ: 500 ಮಿಲಿಲೀಟರ್ ನ್ಯಾನೋ ಯೂರಿಯಾವು 45 ಕೆಜಿಗಳಷ್ಟು ಸಾಂಪ್ರದಾಯಿಕ ರಾಸಾಯನಿಕ ಯೂರಿಯಾ ಗೊಬ್ಬರಕ್ಕೆ ಸಮ! ನ್ಯಾನೋ ಗೊಬ್ಬರವು ಒಳ್ಳೆಯ ಇಳುವರಿಯನ್ನು ನೀಡುವುದಲ್ಲದೆ ಕಿಸೆಗೂ ಹಗುರ.

ಪರಿಸರಸ್ನೇಹಿ: ನ್ಯಾನೋ ಗೊಬ್ಬರವು ಪರಿಸರಸ್ನೇಹಿ. ಮೊದಲನೆಯದಾಗಿ ಅನಗತ್ಯ ರಾಸಾಯನಿಕ ಸೋರಿಕೆಯು ತಪ್ಪಿ ಜಲಮಾಲಿನ್ಯವು ಕಡಿಮೆಯಾಗುತ್ತದೆ. ಎರಡನೆಯದಾಗಿ ಗೊಬ್ಬರದ ತಯಾರಿಕೆಯಲ್ಲಿ ಗಣನೀಯವಾದ ಇಳಿಕೆಯಾಗಿ ಅದರಿಂದ ಆಗುತ್ತಿರುವ ಹಸಿರುಮನೆ ಅನಿಲಗಳ ಹೊರಸೂಸುವಿಕೆಯಲ್ಲಿ ಕೂಡ ಇಳಿಕೆಯನ್ನು ಕಾಣಬಹುದು. ❖

ಭಾರತದ ಪಾತ್ರ

1960ರ ನಂತರದಲ್ಲಿ ಭಾರತದಲ್ಲಿ ನಡೆದ ಹಸಿರು ಕ್ರಾಂತಿಯು ರಾಸಾಯನಿಕ ಗೊಬ್ಬರಗಳ ಬಳಕೆಯನ್ನು ಹೆಚ್ಚಿಸಿ, ಮಣ್ಣನ್ನು ದುರ್ಬಲಗೊಳಿಸಿದೆ. ಆದರೆ ಈಗ ಭಾರತದ ಕೆಲವು ಸಹಕಾರಿ, ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳು (ಇಂಡಿಯನ್ ಫಾರ್ಮರ್ಸ್ ಫರ್ಟಿಲೈಸರ್ಸ್ ಕೋ-ಓಪರೇಟಿವ್ ಲಿಮಿಟೆಡ್ (IFFCO), ನ್ಯಾಷನಲ್ ಫರ್ಟಿಲೈಸರ್ಸ್ ಲಿಮಿಟೆಡ್ (NFL), ಟಾಟಾ ಕೆಮಿಕಲ್ಸ್, ರಾಷ್ಟ್ರೀಯ ಕೆಮಿಕಲ್ಸ್ ಫರ್ಟಿಲೈಸರ್ಸ್ (RCF), ಮುಂತಾದವು) ಅಭಿವೃದ್ಧಿಪಡಿಸಿರುವ ನ್ಯಾನೋ ಗೊಬ್ಬರಗಳು ಕೃಷಿಯಲ್ಲಿ ಹೊಸ ಯುಗವನ್ನು ಶುರುಮಾಡಿವೆ. ಭಾರತವು ಜಗತ್ತಿಗೆ ಸುಸ್ಥಿರ ಸಮಾಜದ ಮಾದರಿಯೊಂದನ್ನು ನ್ಯಾನೋ ಗೊಬ್ಬರದ ತಂತ್ರಜ್ಞಾನ ಮೂಲಕ ಒದಗಿಸುವಂತಿದೆ. ಚೀನಾ ಹಾಗೂ ಭಾರತವನ್ನು ಹೊರತುಪಡಿಸಿ ಇದರ ಮೇಲೆ ಹೆಚ್ಚು ಸಂಶೋಧನೆಯು ಮತ್ತೆಲ್ಲಿಯೂ ಆಗಿಲ್ಲ. ಈಗಾಗಲೇ ಭಾರತದಲ್ಲಿ ಲಕ್ಷಾಂತರ ರೈತರು ನ್ಯಾನೋ ಗೊಬ್ಬರವನ್ನು ಬಳಸುತ್ತಿದ್ದಾರೆ. ಸಾರ್ವಜನಿಕವಾಗಿ ಲಭ್ಯವಿರುವ ಮಾಹಿತಿಯ ಪ್ರಕಾರ IFFCOವು ಜಗತ್ತಿನಲ್ಲಿ ಅತಿ ಹೆಚ್ಚು ನ್ಯಾನೋ ಗೊಬ್ಬರವನ್ನು ತಯಾರಿಸುವ ಸಂಸ್ಥೆಯಾಗಿದ್ದು, ವರ್ಷಕ್ಕೆ 3.6 ಕೋಟಿ ನ್ಯಾನೋ ಗೊಬ್ಬರದ ಬಾಟಲಿಗಳನ್ನು ಉತ್ಪಾದಿಸಿದೆ. 'ದಿ ಎನರ್ಜಿ ಆ್ಯಂಡ್ ರಿಸರ್ಚ್ ಇನ್ಸ್ಟಿಟ್ಯೂಟ್'(ಟೆರಿ)ಯ ವರದಿಯ ಪ್ರಕಾರ ಭಾರತದಲ್ಲಿ ರಾಸಾಯನಿಕ ಗೊಬ್ಬರದ ಬಳಕೆಯು ಮುಂದಿನ ದಿನಗಳಲ್ಲಿ ಸುಮಾರು ಶೇ 50ರಷ್ಟು ಕಡಿಮೆ ಆಗಲಿದೆಯಂತೆ. ಇದು ನಮ್ಮ ನೆಲ, ಜಲ ಹಾಗೂ ಜನರ ಸ್ವಾಸ್ಥ್ಯಕ್ಕೆ ಒಳ್ಳೆಯದಾಗಲಿದೆ. ಕಾಲಕ್ರಮೇಣ ಬಳಕೆ ಹಾಗೂ ಇದರ ಕುರಿತಾದ ಸಂಶೋಧನೆಗಳು ಹೆಚ್ಚಿದಂತೆ ನ್ಯಾನೋ ಗೊಬ್ಬರದ ಬಳಕೆಯ ಬಗೆಗೆ ಇರುವ ಸಂಶಯಗಳೂ ಕಡಿಮೆಯಾಗಲಿವೆ.

ಚಿವುಟು ಚುಚ್ಚುಮದ್ದು!

• ಕೊಳ್ಳೇಗಾಲ ಶರ್ಮ

ಚಿವುಟುವುದೂ ಚುಚ್ಚುವುದೂ – ಎರಡೂ ನೋಯುವ ಸಂಗತಿಗಳೇ. ಆದರೂ ಚುಚ್ಚುಮದ್ದನ್ನು ನೀಡುವ ಬದಲು ಚಿವುಟಿ ಮದ್ದನ್ನು ನೀಡಿದರೆ?! ಪ್ಯಾರಿಸಿನ 'ಕ್ಯೂರೀ ಸಂಶೋಧನಾಲಯ'ದ ಫ್ರೆಂಚ್ ವಿಜ್ಞಾನಿ ಎಲೊಡಿ ಸೆಗುರಾ ಚಿವುಟಿಯೇ ಲಸಿಕೆಯನ್ನು ನೀಡುವ ಉಪಾಯ ಹೂಡಿದ್ದಾರೆ. ಚರ್ಮವನ್ನು ಚುಚ್ಚದೆ, ಹರಿಯದೆ, ಕೇವಲ ಅದನ್ನು ಎಳೆದು ಹಿಡಿದು, ಲಸಿಕೆಗಳಲ್ಲಿರುವ ರಾಸಾಯನಿಕಗಳನ್ನು ಒಳತೂರಿಸಬಹುದು ಎಂದು ಇವರು ಪತ್ತೆ ಮಾಡಿದ್ದಾರೆ.

ಲಸಿಕೆಗಳು ಅಥವಾ ಚುಚ್ಚುಮದ್ದನ್ನು ನೀಡಲು ಸೂಜಿ ಅನಿವಾರ್ಯ ಎನ್ನುವ ಕಾಲ ಒಂದಿತ್ತು. ಆದರೆ ಈಗ ಸೂಜಿ ಇಲ್ಲದೆಯೇ ಚುಚ್ಚುಮದ್ದನ್ನು ನೀಡುವ ಹಲವು ವಿಧಾನಗಳು ಬಳಕೆಯಲ್ಲಿವೆ. ನಲವತ್ತು ವರ್ಷಗಳ ಹಿಂದೆ, ಮದ್ದನ್ನು ತುಂಬಿದ ಜೆಲ್ಲಿ ಗುಳಿಗೆಗಳನ್ನು ಚರ್ಮದೊಳಗೆ ಹುದುಗಿಸುವ ತಂತ್ರ ಬಂದಿತ್ತು. ಆದರೆ ಅದಕ್ಕೂ ಚರ್ಮವನ್ನು ಹರಿಯಲೇಬೇಕಿತ್ತು. ತದನಂತರ ಪ್ಯಾಚುಗಳು ಬಂದವು. ಪುಟ್ಟ ಬ್ಯಾಂಡೇಜಿನ ಮೇಲೆ, ಗಟ್ಟಿಯಾದ ಆದರೆ ಕರಗಬಲ್ಲಂತಹ ಮುಳ್ಳುಗಳೊಳಗೆ ಔಷಧವನ್ನು ತುಂಬಿ ಚರ್ಮಕ್ಕೆ ಭದ್ರವಾಗಿ ಅಂಟಿಸಬಹುದು. ಚರ್ಮವನ್ನು ಚುಚ್ಚಿ ನಿಂತ ಆ ಮುಳ್ಳುಗಳು ನಿಧಾನವಾಗಿ ಕರಗಿ, ಔಷಧ ರಕ್ತಗತವಾಗುತ್ತದೆ. ಆದರೆ ಇಲ್ಲಿಯೂ ಮುಳ್ಳುಗಳು ಚರ್ಮವನ್ನು ಚುಚ್ಚಿಯೇ ತೀರುತ್ತವೆ.

ಇವು ಸರಳ ಉಪಾಯಗಳಾದರೂ, ಲಸಿಕೆಗಳಿಗೆ ಯೋಗ್ಯವಾದ ಉಪಾಯಗಳೆನ್ನಿಸಲಿಲ್ಲ. ಏಕೆಂದರೆ ಲಸಿಕೆಗಳಲ್ಲಿ ಬಳಸುವ ಸೂಕ್ಷ್ಮಜೀವಿ ಅಥವಾ ಅದರ ಅಂಶಗಳು ಅಥವಾ ರಾಸಾಯನಿಕಗಳು ನೆಗಡಿ, ಕೆಮ್ಮು, ಸಂತಾನನಿಯಂತ್ರಣ, ಜ್ವರ ಮೊದಲಾದ ಸಂದರ್ಭಗಳಲ್ಲಿ ನೀಡುವ ಔಷಧಗಳಷ್ಟು ಸಣ್ಣ ಅಣುಗಳಲ್ಲ; ಅಣುಗಳಲ್ಲಿಯೇ ಅತಿ ದೊಡ್ಡವು. ಆದ್ದರಿಂದ ಅವನ್ನು ದೇಹದೊಳಗೆ ತುರುಕುವುದು ಕೂಡ ಅಷ್ಟೇ ಕಷ್ಟ. ಹೀಗಾಗಿ ಲಸಿಕೆಗಳಿಗೆ ಚುಚ್ಚುಮದ್ದೇ ಅವಶ್ಯಕವಾಗಿತ್ತು.

ಲಸಿಕೆಗಳು ಎಂದರೆ, ನಮ್ಮದೇ ದೇಹದ ರೋಗ ರಕ್ಷಣೆಯ ವ್ಯವಸ್ಥೆಯನ್ನು ಚುರುಕುಗೊಳಿಸುವುದು. ಅಣುಗಳ ಸ್ತರದಲ್ಲಿ ಇದು ರಕ್ತದಲ್ಲಿರುವ ಕೆಲವು ಬಿಳಿಯ ರಕ್ತಕಣಗಳನ್ನು ಪ್ರಚೋದಿಸುವ ಕೆಲಸ. ಅವಕ್ಕೆ ದೇಹವನ್ನು ಸೇರಿದ ವೈರಸ್ಸಿನ ಪರಿಚಯವನ್ನು ಹೇಳಿಕೊಡುವ ಕೆಲಸ. ಲಸಿಕೆಯಲ್ಲಿ ಅಂತಹ ರೋಗಜನಕ ಸೂಕ್ಷ್ಮಜೀವಿಗಳನ್ನು ಪರಿಚಯಿಸುವ ಪ್ರತಿಜನಕ ಪ್ರೋಟೀನುಗಳ ಜೊತೆಗೆ ದೇಹದ ರೋಗದಿಂದ ರಕ್ಷಿಸುವ ಬಿಳಿಯರಕ್ತಕಣಗಳು ಸಂಖ್ಯೆಯಲ್ಲಿ ಹೆಚ್ಚಾಗುವಂತೆ ಪ್ರಚೋದಿಸುವ ಅಣುಗಳಿರುತ್ತವೆ. ಪ್ರತಿಜನಕಗಳು ದೇಹದ ಒಳಹೊಕ್ಕರೆ ಸಾಲದು; ಅವು ರೋಗದಿಂದ ರಕ್ಷಿಸುವ ಬಿಳಿಯ ರಕ್ತಕಣಗಳನ್ನೂ ಎಚ್ಚರಿಸಬೇಕು. ಚುಚ್ಚುಮದ್ದು ಚುಚ್ಚಿದಾಗ ಅಥವಾ ಚರ್ಮ ಹರಿದಾಗ, ಆ ಜಾಗಕ್ಕೆ ರಕ್ತದಲ್ಲಿರುವ ಬಿಳಿಕಣಗಳು ಧಾವಿಸಿ ಬರುತ್ತವೆ. ಊತ ಉಂಟಾಗುತ್ತದೆ.

ಸೆಗುರಾ ತಂಡಕ್ಕೆ ಒಂದು ಕುತೂಹಲ. ವಿಕ್ಸ್, ಅಮೃತಾಂಜನ್ ಮೊದಲಾದ ಎಣ್ಣೆಗಳನ್ನು ಚರ್ಮದ ಮೇಲೆ ಉಜ್ಜಿದರೂ ಅವು ಒಳಗೆ ಹೋಗುತ್ತವೆ. ಅದೇ ರೀತಿಯಲ್ಲಿ ಲಸಿಕೆಗಳನ್ನೂ ಉಜ್ಜಿ ಚರ್ಮದ ಒಳಸೇರಿಸಬಹುದೇ? ಪ್ರತಿಕಾಯಗಳಂತಹ ಅಣುಗಳು ಒಳಗೆ ನುಸುಳುವಂತೆ ಮಾಡಿದರೂ, ರೋಗದಿಂದ ರಕ್ಷಿಸುವ ರಕ್ತಕಣಗಳು ಎಚ್ಚರಗೊಳ್ಳುವವೇ? ಇವೆರಡೂ ಕ್ರಿಯೆಗಳೂ ನಡೆದರಷ್ಟೆ ರೋಗವನ್ನು ಪ್ರತಿರೋಧಿಸುವ ಶಕ್ತಿಯನ್ನು ದೇಹ ಪಡೆಯುತ್ತದೆ. ಲಸಿಕೆ ಸಫಲವಾಗುತ್ತದೆ.

ಈ ಅನುಮಾನವನ್ನು ಪರೀಕ್ಷಿಸಲು ಸೆಗುರಾ ತಂಡ ಪ್ರಯೋಗಗಳನ್ನು ನಡೆಸಿತು. ಚರ್ಮವನ್ನು ಉಜ್ಜಿದಾಗ ಅಮೃತಾಂಜನ ಒಳಸೇರುತ್ತದೆ. ಏಕೆಂದರೆ ಅದು ವಿದ್ಯುದಾವೇಶ ಇರುವ ಅಣುಗಳ ಔಷಧ. ಆದರೆ ಲಸಿಕೆಗಳಲ್ಲಿ ಇರುವ ಪ್ರತಿಜನಕಗಳಲ್ಲಿ ವಿದ್ಯುದಾವೇಶ ಇರುವುದಿಲ್ಲ. ಅವು ಅಯಾನುಗಳಲ್ಲದ ಅಣುಗಳು. ಚರ್ಮದ ಮೇಲೆ ಉಜ್ಜಿದರೆ ಅವು ಒಳಸೇರುವವೇ? ಇದನ್ನು ಪರೀಕ್ಷಿಸಲು ಸೆಗುರಾ ತಂಡ ಮೊದಲು ಉಜ್ಜಿದರೆ ಚರ್ಮದಲ್ಲಿ ಏನೇನು ಬದಲಾವಣೆಗಳಾಗುತ್ತವೆ ಎಂದು ಪರಿಶೀಲಿಸಿತು. ಒಂದು ಅನುಮಾನ. ಚುಚ್ಚುಮದ್ದನ್ನು ಚುಚ್ಚಿದಾಗ ಅಲ್ಲೇನಾಗುತ್ತದೆ? ಇದನ್ನು ಪರಿಶೀಲಿಸಲು ತಂಡ ಹೊರಟಿತು. ಚುಚ್ಚುಮದ್ದನ್ನು ಚುಚ್ಚಿದ ಜಾಗದಲ್ಲಿ ಚರ್ಮದಲ್ಲಾಗುವ ಬದಲಾವಣೆಗಳನ್ನು ಗುರುತಿಸಿತು. ಇಲಿಗಳ ಬೆನ್ನಿನ ಚರ್ಮವನ್ನು ಇಪ್ಪತ್ತು ನಿಮಿಷಗಳ ಕಾಲ ಎಳೆದು ಹಿಡಿದು, ಚರ್ಮದಡಿಯಲ್ಲಿರುವ ಸ್ನಾಯುಪದರದೊಳಗಡೆ ಇರುವ ವಸ್ತು ಹಾಗೂ ಸ್ನಾಯುಗಳ ಎಳೆಗಳನ್ನು ಸೂಕ್ಷ್ಮದರ್ಶಕದ ಅಡಿಯಲ್ಲಿ ಗಮನಿಸಿತು. ಚರ್ಮವನ್ನು ಎಳೆದು ಹಿಡಿದಾಗ, ಪದರದಲ್ಲಿನ ವಸ್ತುವಿನಲ್ಲಿ ಬದಲಾವಣೆ ಕಾಣದಿದ್ದರೂ, ಸ್ನಾಯುವಿನ ಎಳೆಗಳ ಜೋಡಣೆ, ಗಾಯವಾದಾಗ ಆಗುವಂತೆ, ಅಡ್ಡಾದಿಡ್ಡಿಯಾಯಿತು. ಗಾಯವಾದಾಗ ಚುರುಕಾಗುವ ನರಗಳು ಈಗಲೂ ಚುರುಕಾಗಿದ್ದುವು. ಅಂದರೆ ಚರ್ಮವನ್ನು ಎಳದರೆ ಅದು ಗಾಯವೇ ಆದಂತೆ ಪ್ರತಿಕ್ರಯಿಸುತ್ತದೆ. ಹಾಗಿದ್ದರೆ, ರೋಗದಿಂದ ರಕ್ಷಿಸುವ ರಕ್ತಕಣಗಳೂ ಗಾಯವಾದಂತೆಯೇ ಪ್ರತಿಕ್ರಿಯಿಸುತ್ತುವೆಯೇ ಎಂದೂ ಗಮನಿಸಿದರು. ಚರ್ಮವನ್ನು ಎಳೆದ ಜಾಗದಲ್ಲಿ 'ಸಿಡಿ4' ಬಿಳಿರಕ್ತಕಣಗಳೆಂಬ ರೋಗದಿಂದ ರಕ್ಷಿಸುವ ರಕ್ತಕಣಗಳು ಉಳಿದ ಕಡೆಗಳಿಗಿಂತ ದಟ್ಟವಾಗಿದ್ದುವು.

> ಚುಚ್ಚುಮದ್ದನ್ನು ನೀಡುವ ಬದಲು ಚಿವುಟ ಮದ್ದನ್ನು ನೀಡಬಹುದೇ? ಈ ಬಗ್ಗೆ ಸಂಶೋಧನೆಯೊಂದು ನಡೆದಿದೆ...

ಚರ್ಮವನ್ನು ಎಳೆದ ಕಡೆಯಲ್ಲಿ ನೋವಾದಾಗ ಪ್ರತಿಕ್ರಿಯಿಸುವ ಚರ್ಮದ ಕೋಶಗಳ ಜೀನುಗಳೆಲ್ಲದರ ಚಟುವಟಿಕೆ ಹೆಚ್ಚಿತ್ತು. ಅಂದರೆ ರೋಗನಿರೋಧಕ ವ್ಯವಸ್ಥೆಯೂ ಚರ್ಮಕ್ಕೆ ಗಾಯವಾದ ಹಾಗೆಯೇ ಪ್ರತಿಕ್ರಿಯಿಸಿತ್ತು. ಅರ್ಥಾತ್, ಚರ್ಮವನ್ನು ಎಳೆದು ಹಿಡಿದರೆ ರೋಗನಿರೋಧಕತೆಯನ್ನು ಬಡಿದೆಬ್ಬಿಸಬಹುದು.

ಇನ್ನು ಅದಕ್ಕೆ ಪರಿಚಯ ನೀಡುವ ಪ್ರತಿಕಾಯಗಳನ್ನು ತೋರಿಸಬೇಕಷ್ಟೆ. ಅದಕ್ಕಾಗಿ ಅವನ್ನು ಚರ್ಮದೊಳಗೆ ಸೇರಿಸಬೇಕು. ಅದು ಸಾಧ್ಯವೇ? ವಸ್ತುಗಳು ಎಳೆದಿಟ್ಟ ಚರ್ಮದೊಳಗಿಂದ ನುಸುಳಬಲ್ಲವೇ? ಇದನ್ನು ಪರೀಕ್ಷಿಸಲು ಸೆಗುರಾ ತಂಡ ಎಳೆದಿಟ್ಟ ಚರ್ಮದ ಮೇಲೆ 'ಡೆಕ್ಸ್ಟ್ರಾನ್' ಎನ್ನುವ ಬಣ್ಣವನ್ನು ಹಚ್ಚಿತು. ಸೂಕ್ಷ್ಮದರ್ಶಕದ ಅಡಿಯಲ್ಲಿ ನೋಡಿದಾಗ ಈ ಬಣ್ಣ ಚರ್ಮದ ಮೇಲಿದ್ದ ರೋಮಗಳ ಬುಡದಿಂದ ಒಳ ನುಗ್ಗುತ್ತಿದ್ದುದು ಕಂಡಿತು. ಎಳೆದಿಟ್ಟ ಚರ್ಮದ ಸುತ್ತಮುತ್ತಲಿನ ಪ್ರದೇಶದಿಂದ ವಿವಿಧ ಅವಧಿಯ ನಂತರ ಕೋಶಗಳನ್ನು ತೆಗೆದು ಬಣ್ಣವಿದೆಯೇ ಎಂದು ಪರೀಕ್ಷಿಸಿದರು. ಬಣ್ಣ ನಿಧಾನವಾಗಿ ಒಳಸೇರಿದ್ದು ಗೊತ್ತಾಯಿತು. ಅಂದರೆ ದೊಡ್ಡ ಅಣುಗಳನ್ನೂ ಒಳಸೇರಿಸಬಹುದು. ಇನ್ನೊಂದು ಪ್ರಯೋಗದಲ್ಲಿ ಎಚ್1ಎನ್1 ಲಸಿಕೆಯಲ್ಲಿ ಬಳಸುವ ಪ್ರತಿಕಾಯವನ್ನು ಕೊಬ್ಬಿನ ದ್ರಾವಣದಲ್ಲಿ ಕೂಡಿಸಿ, ಚರ್ಮವನ್ನು ಎಳೆದು ಹಚ್ಚಿದರು. ಪ್ರತಿಕಾಯಗಳು ಎಲ್ಲೆಲ್ಲಿಗೆ ಹೋಗುತ್ತವೆ ಎಂದು ಗಮನಿಸಿದರು. ಅವು ರಕ್ತವನ್ನು ಹಾಗೂ ರೋಗ ಪ್ರತಿರೋಧಕತೆಯಲ್ಲಿ ಪ್ರಮುಖವಾದ ದುಗ್ಧರಸನಾಳಗಳನ್ನು ತಲುಪಿದ್ದನ್ನು ಕಂಡರು.

ಚರ್ಮವನ್ನು ಒಮ್ಮೆ ಹೀಗೆ ಎಳೆದಿಟ್ಟು, ಲಸಿಕೆಗಳನ್ನು ಹಚ್ಚಬಹುದು. ಚರ್ಮಕ್ಕೆ ಯಾವ ತೊಂದರೆಯೂ ಆಗುವುದಿಲ್ಲ. ಲಸಿಕೆಯೂ ದೇಹದೊಳಗೆ ಸೇರುತ್ತದೆ. ನಾಳೆಯಿಂದಲೇ ಹೀಗೆ ಉಜ್ಜಿ ಲಸಿಕೆ ಹಚ್ಚೋಣ ಎಂದಿರಾ? ತಾಳಿ, ಇದೇ ರೀತಿಯಲ್ಲಿ ಪರಿಸರದಲ್ಲಿರುವ ಅಲರ್ಜಿ ತರುವ ವಸ್ತುಗಳು, ವಿಷವಸ್ತುಗಳೂ ಚರ್ಮದೊಳಗೆ ಸೇರಬಹುದಾದ ಅಪಾಯ ಇರಬಹುದು. ಅದನ್ನು ನಿಶ್ಚಯಿಸದೆ ಆತುರ ಬೇಡ ಎನ್ನುತ್ತಾರೆ, ಸೆಗುರಾ.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್‌ಎಸ್‌ಎಲ್‌ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ವಿಜ್ಞಾನ

ವಿಜ್ಞಾನ

ನಿಯಂತ್ರಣ ಮತ್ತು ಸಹಭಾಗಿತ್ವ

15) ಮಿದುಳು ಬಳ್ಳಿಯನ್ನು ಯಾವುದು ರಕ್ಷಿಸುತ್ತದೆ?
ಉತ್ತರ:– ಕಶೇರು ಸ್ತಂಭ ಅಥವಾ ಬೆನ್ನು ಮೂಳೆ

16) ಸಸ್ಯಗಳಲ್ಲಿರುವ ಗುತ್ವಾನುವರ್ತನೆಯ ಬಗ್ಗೆ ಬರೆಯಿರಿ.
ಉತ್ತರ:– ಸಸ್ಯದ ಬೇರುಗಳು ಯಾವಾಗಲೂ ಕೆಳಮುಖವಾಗಿ ಬೆಳೆಯುತ್ತವೆ ಹಾಗೆಯೇ ಚಿಗುರುಗಳು ಸಾಮಾನ್ಯವಾಗಿ ಭೂಮಿಯಿಂದ ದೂರಕ್ಕೆ ಮೇಲ್ಮುಖವಾಗಿ ಬೆಳೆಯುತ್ತವೆ. ಭೂಮಿಯ ಅಥವಾ ಗುರುತ್ವದ ಸೆಳೆತಕ್ಕೆ ಪ್ರತಿಕ್ರಿಯೆಯಾಗಿ ಚಿಗುರುಗಳ ಮೇಲ್ಮುಖ ಬೆಳವಣಿಗೆ ಮತ್ತು ಬೇರುಗಳ ಕೆಳಮುಖ ಬೆಳವಣಿಗೆಯನ್ನು ಗುರುತ್ವಾನುವರ್ತನೆ (geotropism) ಎಂದು ಹೇಳಬಹುದು

17) ಸಸ್ಯಗಳಲ್ಲಿರುವ ಹಾರ್ಮೋನ್‌ಗಳ ಕುರಿತು ಬರೆಯಿರಿ.
ಉತ್ತರ:– ಸಸ್ಯಗಳು ಬೆಳಕನ್ನು ಗ್ರಹಿಸಿದಾಗ ಅದರ ಕಾಂಡದ ತುದಿಯಲ್ಲಿ ಆಕ್ಸಿನ್ (auxin) ಎಂಬ ಹಾರ್ಮೋನ್ ಸಂಶ್ಲೇಷಿಸಲ್ಪಟ್ಟು ಜೀವಕೋಶಗಳು ಉದ್ದವಾಗಿ ಬೆಳೆಯಲು ಸಹಾಯ ಮಾಡುತ್ತದೆ. ಯಾವಾಗ ಬೆಳಕು ಸಸ್ಯದ ಒಂದು ಕಡೆಯಿಂದ ಪಸರಿಸಲು ಪ್ರಾರಂಭಿಸುತ್ತದೋ, ಆಕ್ಸಿನ್ ಕಾಂಡದ ನೆರಳಿನ ಭಾಗದ ಕಡೆಗೆ ವಿಸರಣೆಗೊಳ್ಳುತ್ತದೆ. ಆಕ್ಸಿನ್‌ನ ಈ ಸಾಂಧ್ರತೆಯು ಬೆಳಕಿನಿಂದ ದೂರವಿರುವ ಕಾಂಡದ ಭಾಗದಲ್ಲಿರುವ ಜೀವಕೋಶಗಳನ್ನು ಉದ್ದವಾಗಿ ಬೆಳೆಯಲು ಪ್ರಚೋದಿಸುತ್ತದೆ. ಹೀಗೆ ಸಸ್ಯವು ಬೆಳಕಿನ ಕಡೆಗೆ ಬಾಗಿದಂತೆ ಕಾಣುತ್ತದೆ. ಆಕ್ಸಿನ್‌ಗಳಂತೆಯೇ ಕಾಂಡದ ಬೆಳವಣಿಗೆಯಲ್ಲಿ ಸಹಕರಿಸುವ ಸಸ್ಯ ಹಾರ್ಮೋನ್‌ಗಳಿಗೆ ಮತ್ತೊಂದು ಉದಾಹರಣೆ ಎಂದರೆ ಜಿಬ್ಬರ್‌ಲಿನ್‌ಗಳು (gibberellins). ಸೈಟೋಕೈನಿನ್‌ಗಳು (cytokinin) ಕೋಶವಿಭಜನೆಯನ್ನು ಉತ್ತೇಜಿಸುತ್ತವೆ ಮತ್ತು ಸಾಮಾನ್ಯವಾಗಿ ಇವು ಹಣ್ಣು ಮತ್ತು ಬೀಜಗಳಂತಹ ತೀವ್ರ ಕೋಶವಿಭಜನೆಗೆ ಒಳಪಡುವ ಪ್ರದೇಶಗಳಲ್ಲಿ ಅತಿ ಹೆಚ್ಚಿನ ಸಾಂಧ್ರತೆಯಲ್ಲಿ ಕಂಡುಬರುತ್ತವೆ. ಇವು ಸಸ್ಯಗಳಲ್ಲಿ ಬೆಳವಣಿಗೆಯನ್ನು ಉತ್ತೇಜಿಸಲು ಸಹಾಯ ಮಾಡುವ ಹಾರ್ಮೋನ್‌ಗಳಿಗೆ ಕೆಲವು ಉದಾಹರಣೆಗಳಾಗಿವೆ. ಆದರೆ, ಸಸ್ಯಗಳಿಗೆ ಬೆಳವಣಿಗೆಯನ್ನು ನಿಲ್ಲಿಸಲೂ ಸಹ ಸಂಕೇತಗಳ ಅಗತ್ಯವಿದೆ. ಒಂದು ಉದಾಹರಣೆ ಎಂದರೆ ಅಬ್ಸಿಸಿಕ್ ಆಮ್ಲ (abscisic acid) ಎಂಬ ಹಾರ್ಮೋನ್, ಅದು ಬೆಳವಣಿಗೆಯನ್ನು ಪ್ರತಿಬಂಧಿಸುತ್ತದೆ. ಇದರ ಪರಿಣಾಮಗಳು ಎಲೆಗಳ ಬಾಡುವಿಕೆಯನ್ನೂ ಕಾಣಬಹುದು.

18) ಮಾನವನಲ್ಲಿರುವ ಅಂತಃಸ್ರಾವಕ ಗ್ರಂಥಿಗಳ ಚಿತ್ರ ಬರೆದು ಗುರುತಿಸಿ
ಉತ್ತರ:–



ಗಮನಿಸಿ:– ಮೊದಲ ಚಿತ್ರವು ಪುರುಷ ಹಾಗೂ ದ್ವಿತೀಯ ಚಿತ್ರವು ಸ್ತ್ರೀಯದ್ದಾಗಿದೆ

9) ಮಾನವನಿಗೆ ಆಯೋಡಿನ ಮಹತ್ವವೇನು?
ಉತ್ತರ:– ಥೈರಾಕ್ಸಿನ್ ಉತ್ಪತ್ತಿ ಮಾಡಲು ಥೈರಾಯ್ಡ್ ಗ್ರಂಥಿಗೆ ಅಯೋಡಿನ್ ಅಗತ್ಯವಾಗಿ ಬೇಕು. ನಮ್ಮ ದೇಹದಲ್ಲಿ ಕಾರ್ಬೋಹೈಡ್ರೇಟ್, ಪ್ರೋಟಿನ್ ಮತ್ತು ಕೊಬ್ಬಿನ ಚಯಾಪಚಯ ಕ್ರಿಯೆಯನ್ನು ಥೈರಾಕ್ಸಿನ್ ನಿಯಂತ್ರಿಸಿ ಬೆಳವಣಿಗೆಗಾಗಿ ಅತ್ಯುತ್ತಮ ಸಮತೋಲನವನ್ನು ಒದಗಿಸುತ್ತದೆ. ಥೈರಾಕ್ಸಿನ್‌ನ ಸಂಶ್ಲೇಷಣೆಗೆ ಅಯೋಡಿನ್ ಅಗತ್ಯವಾಗಿ ಬೇಕು. ನಮ್ಮ ಆಹಾರದಲ್ಲಿ ಅಯೋಡಿನ್‌ನ ಕೊರತೆ ಉಂಟಾದರೆ ಗಳಗಂಡ ರೋಗಕ್ಕೆ ತುತ್ತಾಗುವ ಸಂಭವವಿದೆ.

10) ಪಿಟ್ಯೂಟರಿ ಗ್ರಂಥಿಯ ಹೊರಸೂಸುವ ಹಾರ್ಮೋನನ್ನು ಏನೆಂದು ಕರೆಯುವರು ಮತ್ತು ಏಕೆ?
ಉತ್ತರ:– ಪಿಟ್ಯುಟರಿ ಗ್ರಂಥಿಯ ಹಾರ್ಮೋನ್‌ಗಳಲ್ಲಿ ಬೆಳವಣಿಗೆಯ ಹಾರ್ಮೋನ್ ಕೂಡಾ ಒಂದು. ಅದರ ಹೆಸರೇ ಸೂಚಿಸುವಂತೆ ಬೆಳವಣಿಗೆಯ ಹಾರ್ಮೋನ್. ಇದು ದೇಹದ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ನಿಯಂತ್ರಿಸುತ್ತದೆ. ಒಂದೊಮ್ಮೆ ಬಾಲ್ಯದಲ್ಲಿ ಈ ಹಾರ್ಮೋನಿನ ಕೊರತೆಯಾದರೆ ಕುಬ್ಜತೆ ಉಂಟಾಗುತ್ತದೆ.

ಬಹು ಆಯ್ಕೆ ಪ್ರಶ್ನೆಗಳು

1) ಮಿದುಳಿನ ಯಾವ ಭಾಗವು ದೇಹದ ಭಂಗಿ ಮತ್ತು ಸಮತೋಲನವನ್ನು ನಿರ್ವಹಿಸುತ್ತದೆ?
ಎ) ಹಿಮ್ಮೆದುಳಿನ ಅನುಮಸ್ತಿಷ್ಕ ಬಿ) ಮುಮ್ಮಿದಳು
ಸಿ) ಕಣ್ಣುಗಳು ಡಿ) ಮೇಲಿನ ಯಾವುದು ಅಲ್ಲ
ಉತ್ತರ:–(ಎ) ಹಿಮ್ಮೆದುಳಿನ ಅನುಮಸ್ತಿಷ್ಕ

2) ಬೆಳವಣಿಗೆಯನ್ನು ಉತ್ತೇಜಿಸುವ ಸಸ್ಯ ಹಾರ್ಮೋನ್‌ಗೆ ಉದಾಹರಣೆ ....
ಎ) ಅಬ್ಸಿಸಿಕ್ ಆಮ್ಲ (abscisic acid) ಬಿ) ಆಕ್ಸಿನ್
ಸಿ) ಜಿಬ್ಬರ್‌ಲಿನ್ ಡಿ) ಮೇಲಿನ ಯಾವುದೂ ಅಲ್ಲ
ಉತ್ತರ:– (ಬಿ) ಆಕ್ಸಿನ್

3) ಸಸ್ಯಗಳ ಬೆಳವಣಿಗೆ ನಿಲ್ಲಲು ಯಾವ ಹಾರ್ಮೋನು ಕಾರಣವಾಗುತ್ತದೆ?
ಎ) ಅಬ್ಸಿಸಿಕ್ ಆಮ್ಲ (abscisic acid)
ಬಿ) ಆಕ್ಸಿನ್ ಸಿ) ಸೈಟೋಕೈನಿನ್
ಡಿ) ಮೇಲಿನ ಯಾವುದೂ ಅಲ್ಲ
ಉತ್ತರ:– (ಎ) ಅಬ್ಸಿಸಿಕ್ ಆಮ್ಲ (abscisic acid)

4) ರಕ್ತದ ಒತ್ತಡ, ಬಾಯಲ್ಲಿ ನೀರೂರುವಿಕೆ ಮತ್ತು ವಾಂತಿಯಾಗುವಿಕೆಗಳಂಥ ಎಲ್ಲಾ ಅನೈಚ್ಛಿಕ ಕ್ರಿಯೆಗಳನ್ನು ಯಾವುದು ನಿಯಂತ್ರಿಸುತ್ತದೆ?
ಎ) ಹಿಮ್ಮೆದುಳಿನ ಅನುಮಸ್ತಿಷ್ಕ
ಬಿ) ಹಿಮ್ಮೆದುಳಿನ ಮೆಡುಲ್ಲ ಸಿ) ಸೈಟೋಕೈನಿನ್
ಡಿ) ಮೇಲಿನ ಯಾವುದೂ ಅಲ್ಲ
ಉತ್ತರ:– (ಬಿ) ಹಿಮ್ಮೆದುಳಿನ ಮೆಡುಲ್ಲ

5) ನೇರ ರೇಖೆಯಲ್ಲಿ ನಡೆಯುವುದು, ಬೈಸಿಕಲ್ ಸವಾರಿ, ಒಂದು ಪೆನ್ಸಿಲ್‌ಅನ್ನು ಎತ್ತಿಕೊಳ್ಳುವುದು ಮುಂತಾದ ಚಟುವಟಿಕೆಗಳನ್ನು ಮಾಡಲು ಯಾರ ಅವಶ್ಯಕತೆ ಇದೆ?
ಎ) ಹಿಮ್ಮೆದುಳಿನ ಮೆಡುಲ್ಲ ಬಿ) ಸೈಟೋಕೈನಿನ್
ಸಿ) ಕಾಲುಗಳು ಡಿ) ಹಿಮ್ಮೆದುಳಿನ ಅನುಮಸ್ತಿಷ್ಕ
ಉತ್ತರ:– (ಡಿ) ಹಿಮ್ಮೆದುಳಿನ ಭಾಗವಾದ ಅನುಮಸ್ತಿಷ್ಕ

6) ಸಸ್ಯಗಳಲ್ಲಿ ಧನಗುರುತ್ವಾನುವರ್ತನೆಗೆ ಒಂದು ಉದಾಹಣೆ

(ಜೂನ್: 2022) *ಮುಂದುವರಿಯುವುದು......*

CHEMISTRY

II PUC : CHEMISTRY

Co-ordination Compounds

1) Explain the bonding in coordination compounds in terms of Werner's postulates.
Ans: (a) A metal shows two kinds of valencies viz primary valency and secondary valency. Negative ions satisfy primary valencies, and secondary valencies are filled by both neutral ions and negative ions.
(b) A metal ion has a fixed amount of secondary valencies about the central atom. These valencies also orient themselves in a particular direction in the space provided to the definite geometry of the coordination compound.
(c) Secondary valencies cannot be ionised, while primary valencies can usually be ionised.

2) $FeSO_4$ solution mixed with $(NH_4)_2SO_4$ solution in 1:1 molar ratio gives the test of Fe^{2+} ion, but $CuSO_4$ solution mixed with aqueous ammonia in 1:4 molar ratio does not give the test of Cu^{2+} ion. Explain why.
Ans: $FeSO_4$ solution, when mixed with $(NH_4)_2SO_4$ in 1:1 molar ratio, produces a double salt $FeSO_4(NH_4)_2SO_4$-$6H_2O$. This salt is responsible for giving the Fe^{2+}.$CuSO_4$ mixed with aqueous ammonia in a ratio of 1:4 gives a complex salt. The complex salt does not ionize to give Cu^{2+}, hence failing the test.

3) Explain with two examples for each of the following: ligand, coordination entity, coordination number, coordination polyhedron, heteroleptic and homoleptic.
Ans: (a) **Ligands**: They are neutral molecules or negative ions bound to a metal atom in the coordination entity. For example, Cl^-, ^-OH
(b) Coordination entity: They are electrically charged radicals or species. They constitute a central ion or atom surrounded by neutral molecules or ions. Example– $[Ni(CO)_4]$, $[COCL_3(NH_3)_3]$**(C)**
Coordination number: It is the number of bonds formed between ligands and central atom/ion. For example, (i) In $K_2[PtCl_6]$, 6 chloride ions are attached to Pt in the coordinate sphere. Thus, 6 is the coordination number of Pt. (ii) In $[Ni(NH_3)_4]Cl_2$, the coordination number of the central metal ion (Ni) is 4. **(d) Coordination polyhedron**: It is the spatial positioning of ligands that are directly connected to the central atom in the coordination sphere. For example,



(e) Heteroleptic: they are complexes with their metal ion being bounded to more than one kind of donor group. For example, $[Co(NH_3)_4Cl_2]^+$, $[Ni(CO)_4]$
(f) Homoleptic: they are complexes with their metal ion being bounded to only one type of donor. Example – $[PtCl_4]^{2-}$, $[Co(NH_3)_6]^{3+}$

4) What are the postulates of Werner's theory?
Ans:- Negative ions satisfy the primary valances, which are generally ionisable. Secondary valences cannot be ionised. Neutral molecules or negative ions satisfy these needs. For a metal, the secondary valence is equal to the coordination number and is constant

Werners theory of coordination compounds, isomers in coordination compounds, primary valence, secondary valence, etc.

Werner's theory's important postulates are as follows: The central metal or metal atoms in coordination compounds have two forms of valency which are primary valency and secondary valency. The oxidation state corresponds to the primary valency, while the coordinate number corresponds to the secondary valency.

Each metal atom has a fixed number of secondary valencies, like it has a fixed coordinate number.

The metal atom satisfies both its primary and secondary valencies. Negative ions satisfy primary valencies, but neutral molecules or negative ions satisfy secondary valencies.

The secondary valencies are always directed towards a particular place in space, resulting in determination of geometry of the coordinate compound's. As an example: A metal ion's secondary valencies are grouped octahedrally around the central metal ion if it has six of them. If the metal ion contains four secondary valencies, they are organized in a tetrahedral or square planar pattern around the center metal ion. The stereochemistry of the complex ion is thus determined by the secondary valency while the primary valency is non-directional.

5) What is meant by unidentate, bidentate and ambidentate ligands? Give two examples for each.
Ans: (i) Unidentate ligands: These are ligands with one donor site. For example, Cl^-, NH_3
(ii) Ambidentate ligands: These are ligands that fasten themselves to the central metal ion/atom via two different atoms.

(Contd.....)

ನೀರೆಯರಿಗೆ ಸಿಗದ ರೇಷ್ಮೆ ಸೀರೆ

ಪ್ರತಿ ಶನಿವಾರ ಕೆಲವೇ ಮೈಸೂರು ರೇಷ್ಮೆ ಸೀರೆ ಲಭ್ಯ • ಟೋಕನ್‌ಗಾಗಿ ಪರದಾಟ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಬೇಡಿಕೆಗೆ ತಕ್ಕಂತೆ ಪೂರೈಕೆಯಾಗದೇ ಇರುವುದರಿಂದ ರೇಷ್ಮೆ ಸೀರೆ ಮಾರಾಟ ಮಳಿಗೆಗಳಲ್ಲಿ ಟೋಕನ್‌ಗಾಗಿ ನೂಕುನುಗ್ಗಲು ಉಂಟಾಗಿದೆ. ದಸರಾ ಸಮಯದಲ್ಲಿಯೂ ಪ್ರತಿ ಶನಿವಾರ ಮಾತ್ರ 'ಮೈಸೂರು ಸಿಲ್ಕ್ ಸೀರೆ'ಗಳು ಸೀಮಿತ ಪ್ರಮಾಣದಲ್ಲಿ ದೊರೆಯುತ್ತಿವೆ.

ಐಷಾರಾಮಿ ಗುಣಮಟ್ಟ, ಕಲಾತ್ಮಕ ವಿನ್ಯಾಸ, ದೀರ್ಘ ಬಾಳಿಕೆ ಮತ್ತು ಆಕರ್ಷಕ ಸೌಂದರ್ಯಕ್ಕೆ ಹೆಸರುವಾಸಿಯಾಗಿರುವ ಇತಿಹಾಸ ಪ್ರಸಿದ್ಧ ಮೈಸೂರು ರೇಷ್ಮೆ ಸೀರೆಗಳು ಪ್ರತಿಷ್ಠೆಯ ಪ್ರತೀಕವೂ ಆಗಿವೆ. ಹಬ್ಬಗಳ ಸಮಯದಲ್ಲಿ ರೇಷ್ಮೆ ಸೀರೆಗೆ ಬೇಡಿಕೆ ಹೆಚ್ಚಿರುತ್ತದೆ. ಆದರೆ, ಒಂದು ವರ್ಷದಿಂದ ಸೀರೆಗಳ ಕೊರತೆ ಉಂಟಾಗಿದೆ ಎಂದು ಗ್ರಾಹಕರು ದೂರಿದ್ದಾರೆ.

ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತವು (ಕೆಎಸ್‌ಐಸಿಎಲ್) ಮೈಸೂರು, ಟಿ. ನರಸೀಪುರ ಮತ್ತು ಚನ್ನಪಟ್ಟಣದಲ್ಲಿ ಮೈಸೂರು ರೇಷ್ಮೆ ಸೀರೆಗಳನ್ನು ಉತ್ಪಾದಿಸುತ್ತಿದೆ. ಅಧಿಕೃತ ಮಳಿಗೆಗಳು ಕೂಡ ರಾಜ್ಯದಲ್ಲಿ ಬಹಳ ಕಡಿಮೆ ಇವೆ. ಬೆಂಗಳೂರಿನಲ್ಲಿ ಅತ್ಯಧಿಕ 8 ಮಳಿಗೆಗಳಿವೆ. ಮೈಸೂರಿನಲ್ಲಿ 5, ಚನ್ನಪಟ್ಟಣ ಮತ್ತು ದಾವಣಗೆರೆಯಲ್ಲಿ ತಲಾ ಒಂದು ಮಳಿಗೆಗಳಿವೆ. ರಾಜ್ಯದ ಯಾವುದೇ ನಗರದವರು ಮೈಸೂರು ರೇಷ್ಮೆ ಸೀರೆ ಬೇಕಿದ್ದರೆ ಇದೇ ಮಳಿಗೆಗಳಿಗೆ ಬರಬೇಕು. ಇಲ್ಲದೇ ಇದ್ದರೆ ಚೆನ್ನೈ ಅಥವಾ ಹೈದರಾಬಾದ್‌ನಲ್ಲಿರುವ ಮಳಿಗೆಯಿಂದ ಖರೀದಿಸಬೇಕು.

ರಾಜ್ಯದಲ್ಲಿ ಸೀಮಿತ ಮಳಿಗೆಗಳಿದ್ದರೂ ಬೇಕಾದಷ್ಟು ಸೀರೆಗಳ ಪೂರೈಕೆಯಾಗುತ್ತಿಲ್ಲ. ಬೆಂಗಳೂರಿನಲ್ಲಿ ಡಿ.ವಿ.ಜಿ ರಸ್ತೆ, ಗಾಂಧಿಬಜಾರ್, ಮಲ್ಲೇಶ್ವರ, ಕೆ.ಜಿ. ರಸ್ತೆ, ಬಸವೇಶ್ವರ ನಗರ, ಎಂ.ಜಿ. ರಸ್ತೆ (ಕಾಮರಾಜ ರಸ್ತೆ) ಮುಂತಾದ ಕಡೆಗಳಲ್ಲಿ ಮಳಿಗೆಗಳಿವೆ. ಸೀರೆಗಳೇ ಇಲ್ಲದ ಮೇಲೆ ಮಳಿಗೆ ಇದ್ದು ಏನು ಪ್ರಯೋಜನ ಎಂದು ಗ್ರಾಹರಾದ ಹರ್ಷಿತಾ ಪ್ರಶ್ನಿಸಿದರು.

ಪ್ರತಿ ಮಳಿಗೆಗೆ 60ರಿಂದ 70 ಸೀರೆಗಳು ವಾರಕ್ಕೊಮ್ಮೆ ಪೂರೈಕೆಯಾಗುತ್ತವೆ. ಶನಿವಾರ ಬೆಳಿಗ್ಗೆ ಬೇಗ ಹೋಗಿ ಟೋಕನ್‌ಗಾಗಿ ಸರದಿಯಲ್ಲಿ ನಿಲ್ಲಬೇಕು. ಕೆಲವರು ಬೆಳಿಗ್ಗೆ 5 ಗಂಟೆಗೇ ಬಂದು ನಿಂತಿರುತ್ತಾರೆ. 9.30ರ ಹೊತ್ತಿಗೆ ಭದ್ರತಾ ಸಿಬ್ಬಂದಿ ಬಂದು ಟೋಕನ್ ನೀಡುತ್ತಾರೆ. ಬೆಳಿಗ್ಗೆ 11.30ರ ಒಳಗೆ ಸೀರೆ ಖರೀದಿಯೇ ಮುಗಿದಿರುತ್ತದೆ. ಸೀರೆ ಬೇಕಿದ್ದರೆ ಮತ್ತೆ ಮುಂದಿನ ಶನಿವಾರವರೆಗೆ ಕಾಯಬೇಕು ಎಂದು ಗ್ರಾಹಕರು ದೂರಿದರು.

'ನಮಗೆ ಪ್ರತಿವಾರ ಎಷ್ಟು ಸೀರೆಗಳು ಬರುತ್ತವೋ ಅಷ್ಟನ್ನು ಗ್ರಾಹಕರಿಗೆ ನೀಡುತ್ತಿದ್ದೇವೆ. ನಾವು ಬೇಡಿಕೆ ಇಟ್ಟಿದ್ದರೂ ಹೆಚ್ಚು ಸೀರೆ ಪೂರೈಕೆ ಯಾಗುತ್ತಿಲ್ಲ' ಎಂದು ಮಳಿಗೆ ನಿರ್ವಾಹಕರು ಮಾಹಿತಿ ನೀಡಿದರು. ಕೆಎಸ್‌ಐಸಿಎಲ್ ಅಧಿಕಾರಿಗಳು ಸಂಪರ್ಕಕ್ಕೆ ಲಭ್ಯರಾಗಲಿಲ್ಲ.

ಜರಿ ಆಧರಿಸಿ ದರ

ಮೈಸೂರು ರೇಷ್ಮೆ ಸೀರೆಗಳ ದರವು ಸೀರೆಯ ಗುಣಮಟ್ಟ, ಜರಿ, ವಿನ್ಯಾಸವನ್ನು ಅವಲಂಬಿಸಿರುತ್ತದೆ. ₹ 5,000ದಿಂದ ₹ 50 ಸಾವಿರ ವರೆಗಿನ ಸೀರೆಗಳು ಸಾಮಾನ್ಯವಾಗಿ ಮಾರಾಟವಾಗುತ್ತವೆ. ಶುದ್ಧ ರೇಷ್ಮೆ, ನೈಜ ಚಿನ್ನದ ಜರಿ, ಚಿನ್ನ-ಬೆಳ್ಳಿ ಜರಿ, ಸಂಕೀರ್ಣವಾದ ನೇಯ್ಗೆ ಮತ್ತು ವಿಶೇಷ ಡೈಯಿಂಗ್ ತಂತ್ರಗಳು ಮೌಲ್ಯವನ್ನು ನಿರ್ಧರಿಸುತ್ತವೆ. ಅತಿ ಶ್ರೀಮಂತರು ₹ 1 ಲಕ್ಷವರೆಗಿನ ಸೀರೆಗಳನ್ನೂ ಖರೀದಿಸುತ್ತಾರೆ.

ಬಸವೇಶ್ವರನಗರ ಕೆಎಸ್‌ಐಸಿ ಮಾರಾಟ ಮಳಿಗೆಯ ಮುಂದೆ ಶನಿವಾರ ಟೋಕನ್‌ಗಾಗಿ ಗ್ರಾಹಕರು ಕಾದಿದ್ದರು

'ಸತತ ಎರಡನೇ ವಾರ ಬಂದೆ'

ಮೈಸೂರು ರೇಷ್ಮೆ ಸೀರೆ ಎಂದರೆ ಕೇವಲ ಪ್ರತಿಷ್ಠೆ ಅಲ್ಲ. ಅದು ನಮ್ಮ ಪರಂಪರೆಯನ್ನು ಬಿಂಬಿಸುತ್ತದೆ. ಅದಕ್ಕಾಗಿ ಸೀರೆ ಖರೀದಿಗಾಗಿ ಬಸವೇಶ್ವರ ನಗರದಲ್ಲಿರುವ ಮಳಿಗೆಗೆ ಕಳೆದ ಶನಿವಾರ ಹೋಗಿದ್ದೆ. ಆದರೆ ಟೋಕನ್ ಸಿಗಲಿಲ್ಲ. ಈ ಶನಿವಾರ ಮತ್ತೆ ಬೇಗ ಹೋಗಿ ಟೋಕನ್ ತೆಗೆದುಕೊಂಡೆ' ಎಂದು ಹರ್ಷಿತಾ ತಿಳಿಸಿದರು.

'ಸರದಿಯಲ್ಲಿ ಮೊದಲಿದ್ದವರಿಗೆ ಸೀರೆ ಆಯ್ಕೆ ಮಾಡುವ ಅವಕಾಶವಾದರೂ ಸ್ವಲ್ಪ ಸಿಗುತ್ತದೆ. ಕೊನೆ ಕೊನೆಗೆ ಆಯ್ಕೆಯೂ ಇರುವುದಿಲ್ಲ. ಆರಿಸಿ ಬಿಟ್ಟಿದ್ದನ್ನು ತೆಗೆದುಕೊಳ್ಳಬೇಕು. ಅಲ್ಲದೇ ಒಂದು ಟೋಕನ್‌ಗೆ ಒಂದೇ ಸೀರೆ ಖರೀದಿಸಲು ಅವಕಾಶ ನೀಡಲಾಗಿದೆ' ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಬೇರೆ ರೇಷ್ಮೆ ಸೀರೆಗೆ ಬೇಡಿಕೆ

ಕೆಎಸ್‌ಐಸಿಎಲ್‌ನ ಅಧಿಕೃತ ಮಳಿಗೆಗಳಲ್ಲಿ ಸೀರೆಗಳು ಸಿಗದೇ ಇರುವುದರಿಂದ ಖಾಸಗಿ ಮಳಿಗೆಗಳಲ್ಲಿರುವ ರೇಷ್ಮೆ ಸೀರೆಗಳಿಗೆ ಬೇಡಿಕೆ ಹೆಚ್ಚಿದೆ. ಮೈಸೂರು ರೇಷ್ಮೆ ಸೀರೆಯಷ್ಟೇ ಗುಣಮಟ್ಟವನ್ನು ಇವು ಹೊಂದಿವೆ ಎಂದು ಖಾಸಗಿ ಮಳಿಗೆಗಳ ಮಾಲೀಕರು ಮಾರಾಟ ಮಾಡುತ್ತಿದ್ದಾರೆ ಎಂದು ಗ್ರಾಹಕ ನಾಡಿಗೇರ್ ಹೇಳಿದರು.

ನವರಾತ್ರಿ ಸಂಸ್ಕೃತಿಯ ಬೆಳಕು

• ನಚಿಕೇತ್ ಹೆಗಡೆ

ನವರಾತ್ರಿಯನ್ನಾಗಲೀ ದುರ್ಗಾಪೂಜೆಯನ್ನಾಗಲೀ ಯಾರು ಬೇಕಾದರೂ ಆಚರಿಸಬಹುದು ಎನ್ನುವುದನ್ನು ಪುರಾಣಗಳೇ ಸಾರಿವೆ. ಮಹಾಕಾಳೀ, ಮಹಾಲಕ್ಷ್ಮೀ ಮತ್ತು ಮಹಾಸರಸ್ವತೀ ಎನ್ನುವ ಮೂರು ರೂಪಗಳಲ್ಲಿ ಆರಾಧಿಸಲ್ಪಡುವ ದೇವಿಯು ತ್ರಿಗುಣಗಳ ಸಮನ್ವಯದ ಪ್ರತೀಕವಾಗಿ ನಿಲ್ಲುತ್ತಾಳೆ. ಆಕೆಯ ಪೂಜಾವಿಧಿಯಲ್ಲಿಯೂ ಮೂರು ವಿಧಗಳಿವೆ; ಸಾತ್ವಿಕ, ರಾಜಸ ಮತ್ತು ತಾಮಸಿಕ. ಪರಂಪರೆ ಎಲ್ಲ ಪ್ರಕಾರದ ಭಕ್ತಿಗಳಿಗೂ ಆಶ್ರಯವನ್ನು ನೀಡಿದೆ.

ನವರಾತ್ರಿಯಲ್ಲಿ ಮಹಾನವಮಿಗೆ ಬಹಳ ಮಾನ್ಯತೆಯಿದೆ. ಅಂದು ವಿಶೇಷವಾಗಿ ಸಾಧಕನು ಹೆಣ್ಣುಮಕ್ಕಳನ್ನು ಪೂಜಿಸಿದರೆ ದೇವಿಯು ಉಳಿದೆಲ್ಲ ಬಗೆಯ ಪೂಜೆಗಳಿಗಿಂತಲೂ ಸಂತುಷ್ಟಳಾಗುತ್ತಾಳೆ ಎನ್ನುತ್ತದೆ, ಕಾಳಿಕಾಪುರಾಣ. ಈ ಹಬ್ಬ ಶಕ್ತಿಸ್ವರೂಪಿಣಿಯರಾದ ಸ್ತ್ರೀಯರದೇ ಪರ್ವ.

ಭಾರತದಲ್ಲಿ ಕ್ಷಾತ್ರಪರಂಪರೆಯನ್ನು ಜಾಗೃತವಾಗಿಡುವುದರಲ್ಲಿ ನವರಾತ್ರಿಯ ಪಾತ್ರ ಬಹಳ ಮಹತ್ತ್ವದ್ದಾಗಿದೆ. ಶರದೃತುವಿನಲ್ಲಿ ರಾಜರೆಲ್ಲ ಶಕ್ತಿಯನ್ನು ಆರಾಧಿಸಿ ಅನಂತರ ವಿಜಯಯಾತ್ರೆಗೆ ಹೊರಡುತ್ತಿದ್ದರಂತೆ. ಮುಂದೆ ಘಟಿಸಲಿಕ್ಕಿರುವ ಯುದ್ಧದಲ್ಲಿ ತಮಗೆ ಸಹಾಯವಾಗಿ ಒದಗಿಬರಲಿರುವ ಆಯುಧಗಳನ್ನು ಅವರು ಪೂಜಿಸುತ್ತಿದ್ದುದು ಒಂದು ಸಂಪ್ರದಾಯ. ಸದ್ಯ ನಮ್ಮ ಕರ್ನಾಟಕದ ಮೈಸೂರಿನ ಒಡೆಯರು ಈ ಪರಂಪರೆಯನ್ನು ಇನ್ನೂ ಜೀವಂತವಾಗಿಟ್ಟುಕೊಂಡು ಬಹಳ ವಿಜೃಂಭಣೆಯಿಂದ ಆಚರಿಸುತ್ತಾರೆ. ಇಷ್ಟಕ್ಕೂ ಆಯುಧವೆಂದರೇನು? ಯಾವ ಸಲಕರಣೆಯು ನಮಗೆ ಜೀವನವನ್ನು ಕೊಡುತ್ತದೆಯೋ ಅದಷ್ಟೇ? ಹೀಗಿರುವಾಗ ರೈತನೊಬ್ಬನಿಗೆ ಆತನ ನೇಗಿಲು–ಗುದ್ದಲಿಗಳೂ, ಒಬ್ಬ ಬರಹಗಾರನಿಗೆ ಅವನ ಹರಿತವಾದ ಲೇಖನಿಯೂ ಆಯುಧಗಳೇ ಆಗುತ್ತವೆ. ಹಾಗಾಗಿ ಅವರು ಆಯಾ ಉಪಕರಣಗಳನ್ನೇ ಪೂಜಿಸಿ ಅವುಗಳಿಗೆ ಋಣವನ್ನು ಸಲ್ಲಿಸುತ್ತಾರೆ.

ವಿಜಯದಶಮಿ: 'ವಿಜಯದಶಮಿ' ಎನ್ನುವುದು ದುರ್ಗೆಯು ಮಹಿಷಾಸುರನ ಮೇಲೆ ಸಾಧಿಸಿದ ವಿಜಯದ ಪ್ರತೀಕ. ಶರದೃತುವು ದಿಗ್ವಿಜಯದ ಋತು. ಅಶ್ವಯುಜಮಾಸದ ಹತ್ತನೇ ತಿಥಿಯಂದು 'ವಿಜಯ' ಎಂಬ ಹೆಸರಿನ ತಿಥಿಯಂದು ಯುದ್ಧಕ್ಕೆ ಹೊರಟರೆ ಜಯವು ಶತಸ್ಸಿದ್ಧ ಎನ್ನುವ ನಂಬಿಕೆ ರಾಜರಲ್ಲಿತ್ತು.

ವಿಜಯದಶಮಿಯ ದಿನದ ಮುಖ್ಯ ಆಚರಣೆಗಳು ಅಪರಾಜಿತಾದೇವಿಯ ಪೂಜೆ, ಶಮೀವೃಕ್ಷದ (ಬನ್ನಿಮರ) ಪೂಜೆ ಮತ್ತು ಸೀಮೋಲ್ಲಂಘನ ಎಂಬ ಮೂರು ಕ್ರಿಯೆಗಳ ಗುಚ್ಛವಾಗಿದೆ. ಬನ್ನಿಮರವು ನಮಗೆ ತಿಳಿದೇ ಇರುವಂತೆ 'ವಹ್ನಿ' ಅರ್ಥಾತ್, ಅಗ್ನಿಯ ಸಂಕೇತ; ಇದು ಕ್ಷಾತ್ರವನ್ನೇ ಸೂಚಿಸುತ್ತಿದೆ. ರಾಜರಾದವರು ವಿಜಯ ದಶಮಿಯಂದು ಶಮೀವೃಕ್ಷವನ್ನು ಅರ್ಚಿಸಿ ಅನಂತರ ಮಾನುಷ ಪ್ರತಿಕೃತಿಯೊಂದನ್ನು ನಿರ್ಮಿಸಿ, ಅದರಲ್ಲಿ ತಮ್ಮ ವೈರಿಯನ್ನು ಕಲ್ಪಿಸಿಕೊಂಡು ಬಾಣ ಮತ್ತು ಭರ್ಚಿಯಿಂದ ಅದನ್ನು ಘಾತಿಸಬೇಕು. ಇಂದಿಗೂ ರಾಜಮನೆತನಗಳು (ವಿಶೇಷವಾಗಿ ಮೈಸೂರಿನ ಒಡೆಯರು ಇದೇ ಹೊತ್ತಿನಲ್ಲಿ ಆಯುಧಪೂಜೆಯನ್ನು ಸಹ ಶಮೀವೃಕ್ಷದಡಿಯಲ್ಲಿ ಕೈಗೊಳ್ಳುತ್ತಾರೆ.) ಶಮೀವೃಕ್ಷವು ಸಿಗುವುದು ಕಷ್ಟ; ವಿರಳವಾದ ಪ್ರಜಾತಿಯದು. ಅದನ್ನು ಬೆಳೆಸುವುದು ಮತ್ತೂ ಕಷ್ಟ. ಪ್ರಾಯಶಃ ಹಾಗಾಗಿಯೇ ಮಹಾರಾಷ್ಟ್ರ ಮತ್ತು ಕೊಂಕಣ ಭಾಗಗಳಲ್ಲಿ 'ಅಪ್ಟಾ' ಎಂಬ ಮರದ ಕೊಂಬೆಗಳನ್ನು ಕಡಿದು ತಂದು ಅದನ್ನು ಪೊದೆಯ ಆಕಾರದಲ್ಲಿ ಜೋಡಿಸಿ ಅನಂತರ ಅದರ ಪತ್ರೆಗಳನ್ನು ಹಂಚುವ ಕ್ರಮವಿದೆ. ಅನಂತರದ್ದು ಸೀಮೋಲ್ಲಂಘನ. ಹಿಂದಿನ ಕಾಲದಲ್ಲಿ ರಾಜರು ತಮ್ಮ ರಾಜ್ಯದ ಗಡಿಯನ್ನು ದಾಟಿ ಯುದ್ಧಕ್ಕೆ ಹೋಗುತ್ತಿದ್ದಿರಬಹುದು. ಆದರೆ ಈ ಹೊತ್ತು ಸೀಮೋಲ್ಲಂಘನದ ಸಂಕೇತವಾಗಿಯಷ್ಟೇ ಊರಿನ ಗಡಿಯನ್ನು ದಾಟಿ ಮರಳುವ ಪದ್ಧತಿಯಿದೆ.

ಈ ಹೊತ್ತು ರಾಜಮನೆತನಗಳಿಲ್ಲದಿರಬಹುದು; ಆದರೆ ವಿಜಯ ದಶಮಿಯಿದೆ. ಈ ನೆಲದ ಪ್ರತಿಯೊಬ್ಬ ಶ್ರೀಸಾಮಾನ್ಯನೂ ತನ್ನದೇ ಆದ ರೀತಿಯಲ್ಲಿ ಅಂದಿಗೆ ಉಕ್ತವಾಗಿರುವ ಪೂಜಾಪದ್ಧತಿಗಳನ್ನು ಆಚರಿಸುತ್ತಾನೆ. ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿಯಂತೂ 'ದುರ್ಗಾಪೂಜಾ' ಎನ್ನುವುದು ಜನರಲ್ಲಿ ವಿದೇಶಿಗರ ದಬ್ಬಾಳಿಕೆಯ ವಿರುದ್ಧ ಸಿಡಿದೇಳಲು ಪ್ರೇರೆಪಿಸುವ ಮಾಧ್ಯಮವಾಗಿ ರೂಪುಗೊಂಡಿತ್ತು. ಸ್ವದೇಶೀ ಚಳವಳಿಯ ಹೊತ್ತಿನಲ್ಲಿ ಬಂಗಾಳದ ಜನರು ರಾಷ್ಟ್ರವಾದದ, ಸ್ವಾತಂತ್ರ್ಯದ, ಜನರನ್ನು ಒಗ್ಗೂಡಿಸುವ ಸಂದೇಶಗಳನ್ನು ಹರಡಲು ಕ್ಷಾತ್ರದ ಹಬ್ಬವಾದ ದುರ್ಗಾಪೂಜೆಗಿಂತ ಬಲವಾದ ಸಾಧನವಿಲ್ಲ ಎಂದೇ ನಂಬಿದ್ದರು. ಪುಲಿನ್ ದಾಸ್ ಎಂಬ ಕ್ರಾಂತಿಕಾರಿಗಳು ಮಹಾಷ್ಟಮಿಯಂದು 'ಬೀರಾಷ್ಟಮಿ' (ವೀರರ ಅಷ್ಟಮಿ) ಎಂಬ ಉತ್ಸವವನ್ನು ಹೊಸದಾಗಿ ಜಾರಿಗೆ ತಂದು, ಅದರಲ್ಲಿ ಯುದ್ಧಕಲೆಗಳ ಪ್ರದರ್ಶನವನ್ನು ಮಾಡಿಸಿದ್ದರು. ಸುಭಾಷ್ ಚಂದ್ರ ಬೋಸರಂಥ ಕಟ್ಟಾಳುಗಳಿಂದ ಈ ಅಭಿಯಾನವು ಬಂಗಾಲದಿಂದ ಅಂಡಮಾನಿನವರೆಗೂ ಹಬ್ಬಿತ್ತು; ಎಲ್ಲ ವರ್ಣ-ಜಾತಿ-ಪಂಥಗಳಾಚೆಯೂ ಭಾರತೀಯರು ಸಾಂಸ್ಕೃತಿಕವಾಗಿ ಒಂದೇ ಆಗಿದ್ದಾರೆ ಎಂಬುದಕ್ಕೆ ಇದು ಪುರಾವೆ.

ಒಂದಷ್ಟು ಉತ್ತರ ಸಿಗದ ಪ್ರಶ್ನೆಗಳು, ಒಂದಷ್ಟು ಬೆರಗು, ಒಂದಷ್ಟು ಪುರಾಣಕಥೆಗಳು, ಮತ್ತೊಂದಷ್ಟು ಆಚರಣೆಗಳೂ ಇಲ್ಲದಿದ್ದರೆ ಭಾರತೀಯ ಜೀವನವು ಎಷ್ಟು ರಸಹೀನವಾಗಿ ಬಿಡುತ್ತಿತ್ತು ಎಂದೆನ್ನಿಸುವುದು ಸುಳ್ಳಲ್ಲ. ನಿಜಕ್ಕೂ ಭಾರತೀಯರ ಜೀವಪ್ರೇಮ, ಜೀವನಪ್ರೇಮ ಮತ್ತು ಮಹತ್ತಾದದ್ದನ್ನು ಅರಿತುಕೊಳ್ಳುವತ್ತಣ ಜ್ಞಾನಪ್ರೇಮ ಈ ಮೂರೂ ಈ ನಾಗರಿಕತೆಯ ಜೀವನಾಡಿಗಳಾಗಿ, ಕಾಶ್ಮೀರದಿಂದ ಕನ್ಯಾಕುಮಾರಿಯ ವರೆಗೂ ಪ್ರವಹಿಸುತ್ತ ಈ ರಾಷ್ಟ್ರವನ್ನು ಲವಲವಿಕೆಯಿಂದ ತುಂಬಿ ಜೀವಂತವಾಗಿಟ್ಟಿವೆ. ❖

'ಗಾಂಧಿ ಮಾರ್ಗ'ದಲ್ಲಿ ಕಾಮನೂರು

ಒಂದನೇ ಪುಟದಿಂದ...

ಸಂಚಲನ ಮೂಡಿಸಿದ ಮೆರವಣಿಗೆ: ಕೊಪ್ಪಳದಲ್ಲಿರುವ 'ಗಾಂಧಿ ಬಳಗ'ದ ಸ್ನೇಹಿತರು ಕಳೆದ ವರ್ಷದ ಗಾಂಧಿ ಜಯಂತಿ ವೇಳೆ ಕೊಪ್ಪಳದಿಂದ ಕಾಮನೂರಿಗೆ ಪಾದಯಾತ್ರೆ ಮಾಡಿ ಕಾಮನೂರಿನ ಜನರಿಗೆ ನೈತಿಕ ಬೆಂಬಲ ನೀಡಿದ್ದರು.

ಪಾದಯಾತ್ರೆ ಬಳಿಕ ಸಂಸದ ರಾಜಶೇಖರ ಹಿಟ್ನಾಳ ಕಾಮನೂರು ಗ್ರಾಮವನ್ನು ದತ್ತು ಪಡೆದಿದ್ದಾರೆ. ಜಿಲ್ಲಾ ಪಂಚಾಯಿತಿಯು ಉದ್ಯೋಗ ಖಾತ್ರಿ ಯೋಜನೆಯಡಿ ಹೆಚ್ಚಿನ ಕಾಮಗಾರಿಗಳನ್ನು ಗ್ರಾಮದಲ್ಲಿ ಕೈಗೊಳ್ಳುತ್ತಿದೆ. ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿವೆ.

ಕಾಮನೂರು ಮಾರ್ಗದಲ್ಲಿ ಬಿನ್ನಾಳ

ವಿಪರೀತ ಮದ್ಯ ಮಾರಾಟದಿಂದ ಜಿಲ್ಲೆಯ ಕುಕನೂರು ತಾಲ್ಲೂಕಿನ ಯರೇಹಂಚಿನಾಳ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಿನ್ನಾಳ ಗ್ರಾಮದಲ್ಲಿ 2–3 ವರ್ಷಗಳಲ್ಲಿ 15ಕ್ಕೂ ಹೆಚ್ಚು ಯುವಕರು ಮೃತಪಟ್ಟಿದ್ದಾರೆ. ಗ್ರಾಮದಲ್ಲಿ ಮದ್ಯ ಅಕ್ರಮ ಮಾರಾಟ ಅವ್ಯಾಹತವಾಗಿ ಜನರಲ್ಲಿ ಆತಂಕ ಮೂಡಿಸಿತ್ತು.

ಕೆಲ ತಿಂಗಳು ಹಿಂದೆ ಬಿನ್ನಾಳ ಗ್ರಾಮದ ಹಲವರು ಸಭೆ ನಡೆಸಿ ಗ್ರಾಮವನ್ನು ಮದ್ಯ ಮಾರಾಟ ಮುಕ್ತ ಗ್ರಾಮವಾಗಿಸಲು ಸಂಕಲ್ಪ ಮಾಡಿ ಜಾಗೃತಿ ಮೂಡಿಸಿದ್ದಾರೆ. ಆರಂಭದಲ್ಲಿ ಕೆಲವರು ಗುಪ್ತವಾಗಿ ಮದ್ಯ ಮಾರಲು ಮುಂದಾಗಿದ್ದಾಗ, ಗ್ರಾಮಸ್ಥರೇ ಖರೀದಿಸಿ ಮತ್ತೆ ಮಾರದಂತೆ ಎಚ್ಚರಿಸಿದ್ದರು. ಈಗ ಅಲ್ಲಿ ಸಂಪೂರ್ಣವಾಗಿ ಮದ್ಯ ಮಾರಾಟ ನಿಷೇಧಿಸಲಾಗಿದೆ.

ಜಂಬೂಸವಾರಿ: ಭರದ ತಯಾರಿ

ಒಂದನೇ ಪುಟದಿಂದ...

'ಪಾಸ್ ಇಲ್ಲದವರಿಗೆ ಪ್ರವೇಶ ನೀಡುವುದಿಲ್ಲ' ಎಂದು ಪೊಲೀಸ್ ಇಲಾಖೆ ತಿಳಿಸಿದ್ದು, ಕಟ್ಟಡಗಳು ಮತ್ತು ಮರಗಳ ಮೇಲೇರಿ ವೀಕ್ಷಿಸುವುದಕ್ಕೂ ಕಟ್ಟುನಿಟ್ಟಿನ ನಿರ್ಬಂಧ ವಿಧಿಸಲಾಗಿದೆ.

ಮೆರವಣಿಗೆಯು ಐದು ಕಿ.ಮೀ. ಅಂತರ ಕ್ರಮಿಸಿ ಬನ್ನಿಮಂಟಪ ತಲುಪಲಿದೆ. ಸಂಜೆ 7ಕ್ಕೆ ಪಂಜಿನ ಕವಾಯತು ನಡೆಯಲಿದ್ದು, ರಾಜ್ಯಪಾಲ ಥಾವರಚಂದ್ ಗೆಹಲೋತ್ ಗೌರವವಂದನೆ ಸ್ವೀಕರಿಸುವರು. ಈ ಪ್ರದರ್ಶನದೊಂದಿಗೆ ನಾಡಹಬ್ಬಕ್ಕೆ ತೆರೆ ಬೀಳಲಿದೆ.

ಅರಮನೆಯಲ್ಲಿ, ಯದುವಂಶದ ಸಂಪ್ರದಾಯದಂತೆ 'ಖಾಸಗಿ ದರ್ಬಾರ್' ನಡೆಸುತ್ತಿರುವ ರಾಜ ವಂಶಸ್ಥ ಯದುವೀರ್ ಬುಧವಾರ ಆಯುಧಪೂಜೆ ಹಾಗೂ ಗುರುವಾರ ವಿಜಯದಶಮಿ ಮೆರವಣಿಗೆ ನಡೆಸುವರು. ವಜ್ರಮುಷ್ಟಿ ಕಾಳಗವೂ ನಡೆಯಲಿದೆ.

ಅಂಬಾವಿಲಾಸ ಅರಮನೆ ಆವರಣದಲ್ಲಿ ಮಂಗಳವಾರ 'ಅಂತಿಮ ಹಂತದ ಜಂಬೂಸವಾರಿ ತಾಲೀಮು' ಯಶಸ್ವಿಯಾಗಿ ನಡೆಯಿತು ಗಜಪಡೆ, ಅಶ್ವಾರೋಹಿದಳ, ಪೊಲೀಸ್ ತುಕಡಿಗಳು ಪಾಲ್ಗೊಂಡವು. ಅ.2ರ ಮೆರವಣಿಗೆಗೆ ಪೂರ್ವಭಾವಿ ಅಭ್ಯಾಸ ಜರುಗಿತು.

ಮುಖ್ಯಾಂಶಗಳು

- ಎಲ್ಲರ ಚಿತ್ತ ಅರಮನೆ ನಗರದತ್ತ
- ಪಂಜಿನ ಕವಾಯತಿನೊಂದಿಗೆ ತೆರೆ

ನೇರ ಪ್ರಸಾರದಲ್ಲೂ ನೋಡಿ

ಮೈಸೂರಿಗೆ ಬಂದು ಜಂಬೂಸವಾರಿ ವೀಕ್ಷಿಸಲು ಆಗದವರಿಗಾಗಿ ಜಿಲ್ಲಾಡಳಿತ ನೇರ ಪ್ರಸಾರದ ವ್ಯವಸ್ಥೆ ಮಾಡಿದೆ. ಆಸಕ್ತರು ಈ ಲಿಂಕ್ ಬಳಸಿ ವೀಕ್ಷಿಸಬಹುದು.

Facebook Link- https://facebook.mysoredasara.gov.in
YouTube Link- https://youtube.mysoredasara.gov.in
Website Link- https://mysoredasara.gov.in/

'ಸಮಾಜ ಒಡೆಯಲು ಸಮೀಕ್ಷೆ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಅನಗತ್ಯ ಮಾಹಿತಿ ಕಲೆ ಹಾಕುತ್ತಿದ್ದು ಸಮಾಜದಲ್ಲಿ ಒಡಕು ಮೂಡಿಸುವ ಉದ್ದೇಶ ಹೊಂದಿದೆ' ಎಂದು ಸಂಸದ ಬಸವರಾಜ ಬೊಮ್ಮಾಯಿ ಆರೋಪಿಸಿದರು.



ಬೊಮ್ಮಾಯಿ

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಾತ್ಯತೀತತೆ ಬಗ್ಗೆ ಹೆಚ್ಚು ಮಾತನಾಡುತ್ತಾರೆ. ಆದರೆ, ಈ ಸಮೀಕ್ಷೆ ಮೂಲಕ ಜಾತಿಪದ್ಧತಿ ಹೆಚ್ಚಿಸಿ ಸಮಾಜವನ್ನು ಒಡೆದ ಅಪಕೀರ್ತಿಗೆ ಅವರು ಒಳಗಾಗಬೇಕಾಗುತ್ತದೆ' ಎಂದರು.

'ಕೇಂದ್ರ ಸರ್ಕಾರ ಇಡೀ ದೇಶದಲ್ಲಿ ಜನಗಣತಿ ಮಾಡಲಿದೆ. ರಾಜಕೀಯ ಲಾಭಕ್ಕಾಗಿ ಈಗ ರಾಜ್ಯದ ಸಮೀಕ್ಷೆ ತರಾತುರಿಯಲ್ಲಿ ನಡೆದಿದೆ. ಸಿದ್ದರಾಮಯ್ಯ ಅವರು ಧರ್ಮವನ್ನು ನೋಡಿ ಮೀಸಲಾತಿ ಕೊಡುತ್ತಾರಾ' ಎಂದು ಅವರು ಪ್ರಶ್ನಿಸಿದರು.

'ವೀರಶೈವ–ಲಿಂಗಾಯತ ಸಮಾಜವನ್ನು ಒಡೆಯುವ ಪ್ರಯತ್ನವನ್ನು ಕಾಂಗ್ರೆಸ್ 2013ರಿಂದಲೇ ನಡೆಸಿದೆ. 2018ರಲ್ಲಿ ಜನರು ಅದಕ್ಕೆ ತಕ್ಕ ಉತ್ತರ ಕೊಟ್ಟಿದ್ದರು. ಈಗ ಮತ್ತೆ ಅಂತಹ ದುಸ್ಸಾಹಸಕ್ಕೆ ಕೈಹಾಕಿದ್ದು, ಜನ ಪಾಠ ಕಲಿಸುವರು' ಎಂದರು.

> **ಸಿದ್ದರಾಮಯ್ಯ ಸ್ಥಾನ ಭದ್ರಪಡಿಸಿಕೊಳ್ಳಲು ಸಮೀಕ್ಷೆ ಕಸರತ್ತು ನಡೆಸಿದ್ದಾರೆ. ಅವರು ಆಡಳಿತ ವಿರೋಧಿ ಅಲೆ ಎದುರಿಸುತ್ತಿದ್ದಾರೆ**
> **ಅರವಿಂದ ಬೆಲ್ಲದ,** ವಿಧಾನಸಭೆ ವಿಪಕ್ಷದ ಉಪನಾಯಕ

Terms and Conditions applied. *Approval of the loan is at the sole discretion of the financiers, and additional documentation may be required. *The interest rates, loan amount, down payment, tenure options and EMI are based on the financier's assessment of the applicant's credit profile. *Low EMI offers are applicable for select HMSI models as follows: ₹49/- per day for Shine100 DX ; ₹79/- per day for Shine125, SP125 & CB125 Hornet; ₹1999/- per month for Activa. *Some of the mentioned components of the scheme cannot be clubbed together. *The offers/features may be modified or withdrawn at any time without prior intimation. *Offer valid until 31st October 2025. **Instant Cashback up to ₹5000 is available on selected HMSI models for EMI transactions using HDFC Bank credit cards with a minimum transaction value of ₹40000. **An instant cashback of flat ₹2000 is applicable on a minimum full swipe transaction of ₹40000, and flat ₹3000 Instant cashback on a minimum full swipe transaction of ₹75002. **Instant Cashback up to ₹4000 is available on selected HMSI models for EMI transactions made using IDFC Bank credit cards with a minimum transaction value of ₹40000. **The offer is valid on credit card transactions processed through Pine Labs machines only and is applicable for one transaction per card/order during the offer period. **The Instant Cashback offers from HDFC Bank and IDFC Bank are valid until 31st October 2025. ^GST benefit is based on a reduction from 28% to 18% GST on the Ex-showroom price of NX 200. ^The actual savings may vary depending on the selected model and state. Product shown in the picture may vary from actual product available in the market. Accessories shown in the picture are not part of standard equipment.

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) - 122052, India; **Website:** www.honda2wheelersindia.com; **Customer Care:** customercare@honda.hmsi.in

Honda Exclusive Authorised Dealerships: Ananda Honda - BOMMANAHALLI: 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; **Anekal Honda - ANEKAL:** 9880458863; **City Honda - ST. JOHNS ROAD:** 08025139199; **H.R.B.R:** 9845941305; **FRAZER TOWN:** 9480812353; **LALBAGH:** 9480812397; **Haiku Honda - DOMLUR:** 9342432156; **INDIRANAGAR:** 9342432157; **Dhruvdesh Honda - MEKHRI CIRCLE:** 9343968419; **THANISANDRA (NAGAWARA):** 7353030333; **YELAHANKA:** 9343968407; **VIDYARANYAPURA:** 8150866333; **MALLESHWARAM:** 8971887792; **Raja Honda - KORAMANGALA:** 08067329000; **Prime Honda - VIJAYNAGAR:** : 080-23010300; **NAGARBHAVI:** 080-23010700; **KAMAKSHIPALYA:** 080-23019700; **Silicon Honda - RV ROAD:** 9844502222; **BANSHANKARI:** 9844502444; **R.R. NAGAR:** 9964388333; **MONOTYPE:** 7353744400; **JAYANAGAR:** 8722801626; **Saphire Honda - JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; **VFM Honda - KR PURAM:** 9071858885; **HENNUR ROAD:** 9108989811; **Tansi Honda - HOODI:** 7259030091; **MARTHAHALLI:** 7259030100; **VARTHUR RD:** 8105597877; **GUNJUR:** 9606450642; **Turbo Honda - DODDABALLAPURA:** 7022620885; **NELAMANAGALA:** 7022008894; **Wings Honda - HOSKOTE:** 7676907272; **MALUR:** 7676155600; **TC PALYA:** 9590815959; **Sri Kausthub Honda - KOLAR:** 9900018515; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; **Namma Honda - CHIKKABALLAPUR:** 9606060610; **CHINTAMANI:** 9606060620; **BAGEPALLI:** 9611596112; **Shankar Honda - GOWRIBIDANUR:** 9900007422/33; **SIDLAGHATTA:** 9611596113; **Shantinath Honda - TUMKUR:** 9972433799; **KUNIGAL:** 08132-295609; **KUNIGAL ROAD:** 9844351599; **KORATAGERE:** 9606955149; **Honey Honda - PAVAGADA:** 9535941215; **Annapoorna Honda - MADHUGIRI:** 9886627429; **Vignesh Honda - TIPTUR:** 9886711161; **TURUVEKERE:** 9964605093; **Sri Srinivasa Honda - CHIKKANAYAKANAHALLI:** 8722522221; **Prestige Honda - RAMNAGARA:** 9606490030; **KANAKAPURA:** 9606036053; **CHANNAPATNA:** 9606490034; **ART Honda - BIDADI:** 9945966771; **Springs Honda - KENGERI:** 9513771114; **Nideesh Honda - DEVANAHALLI:** 9108871999; **VIJAYAPURA:** 9108871999.

For Bulk/Institutional enquiries, please write us at: institutionalsales@honda.hmsi.in

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಸುಭಾಷಿತ



ಸಂತೋಷ ಎಂಬುದು ಬೇಕೆಂದಾಗ ಕೊಳ್ಳಬಹುದಾದ ಸಿದ್ಧವಸ್ತುವಲ್ಲ. ಅದು ನಮ್ಮದೇ ಕ್ರಿಯೆಗಳಿಂದ ಒಡಮೂಡುತ್ತದೆ.
-ದಲೈಲಾಮಾ

ಸಂಪಾದಕೀಯ

‘ಸಾಮಾಜಿಕ ನ್ಯಾಯ’ದ ಸಮೀಕ್ಷೆ ಗೊಂದಲ ಸೃಷ್ಟಿ, ಬಹಿಷ್ಕಾರ ಸಲ್ಲದು

ರಾಜ್ಯದಲ್ಲಿ ನಡೆಯುತ್ತಿರುವ ‘ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ’ಯನ್ನು ಬಹಿಷ್ಕರಿಸುವಂತೆ ಕರೆ ನೀಡಿರುವ ಬಿಜೆಪಿ ಸಂಸದ ತೇಜಸ್ವಿ ಸೂರ್ಯ, ಸಮೀಕ್ಷಕರೊಂದಿಗೆ ತಾವು ಯಾವುದೇ ಮಾಹಿತಿ ಹಂಚಿಕೊಳ್ಳುವುದಿಲ್ಲ ಎಂದು ಹೇಳಿದ್ದಾರೆ; ಸಮೀಕ್ಷೆಯನ್ನು ‘ಸಿದ್ದರಾಮಯ್ಯ ಸಮೀಕ್ಷೆ’ ಎಂದು ಕರೆದಿದ್ದಾರೆ. ಆಳವಾದ ನಗರ ಪಕ್ಷಪಾತಿ ಧೋರಣೆಯಂತೆ ಕಾಣಿಸುವ ಈ ನಿಲುವು ಸಮೀಕ್ಷೆಯ ನೈಜ ಉದ್ದೇಶಕ್ಕೆ ತೊಡಕು ಉಂಟುಮಾಡುತ್ತದೆ. ಈಗ ನಡೆಯುತ್ತಿರುವುದು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯೇ ಹೊರತು ಸಾಂಪ್ರದಾಯಿಕ ಸ್ವರೂಪದ ಜಾತಿಜನಗಣತಿ ಅಲ್ಲ ಎಂದು ರಾಜ್ಯ ಸರ್ಕಾರ ಮತ್ತೆ ಮತ್ತೆ ಸ್ಪಷ್ಟಪಡಿಸಿದೆ. ಸಮುದಾಯಗಳ ಹಿಂದುಳಿಯುವಿಕೆಗೆ ಅಧಿಕೃತ ಕಾರಣಗಳನ್ನು ಕಂಡುಕೊಳ್ಳುವುದು ಸಮೀಕ್ಷೆಯ ಉದ್ದೇಶವಾಗಿದೆ. ಸರ್ಕಾರದ ಕಲ್ಯಾಣ ಕಾರ್ಯಕ್ರಮಗಳು ಸರಿಯಾಗಿ ಮುಟ್ಟದ ಸಮುದಾಯಗಳನ್ನು ಗುರ್ತಿಸುವುದು ಹಾಗೂ ಅವರಿಗೆ ಭವಿಷ್ಯದಲ್ಲಿ ಅಗತ್ಯ ಸವಲತ್ತುಗಳನ್ನು ಕಲ್ಪಿಸುವುದಕ್ಕೆ ಅಗತ್ಯವಾದ ಮಾಹಿತಿಯನ್ನು ಸಮೀಕ್ಷೆ ದೊರಕಿಸಿಕೊಡಲಿದೆ. ಭಾರತೀಯ ಸಮಾಜದಲ್ಲಿ ಜಾತಿ ಒಂದು ನಿರಾಕರಿಸಲಾಗದ ವಾಸ್ತವವಾಗಿದೆ. ಸಮೀಕ್ಷೆಯ ಹೊರತಾಗಿ ಹಿಂದುಳಿದ ಸಮುದಾಯಗಳನ್ನು ಗುರ್ತಿಸುವುದಕ್ಕೆ ಸರ್ಕಾರಕ್ಕೆ ಬೇರೆ ದಾರಿಯಾದರೂ ಯಾವುದಿದೆ? ಸಮೀಕ್ಷೆಗೆ ಒಳಪಡುವವರು ನಿರ್ದಿಷ್ಟ ಜಾತಿಯೊಂದಿಗೆ ಗುರ್ತಿಸಿಕೊಳ್ಳುವ ಬದಲಾಗಿ, ‘ಹಿಂದೂ’ ಎಂದು ಉಲ್ಲೇಖಿಸುವಂತೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿರುವುದು ಮತ್ತಷ್ಟು ಗೊಂದಲಕ್ಕೆ ಕಾರಣ ಆಗುವಂತಿದೆ. ಸಮೀಕ್ಷೆಯನ್ನು ಧರ್ಮದ ಅಂಕಿಅಂಶಗಳಿಗಾಗಿ ನಡೆಸುತ್ತಿಲ್ಲ ಎನ್ನುವುದನ್ನು ಗಮನಿಸದೆ ವಿಜಯೇಂದ್ರ ಅವರು ನೀಡಿರುವ ಹೇಳಿಕೆ ಬೇಜವಾಬ್ದಾರಿತನದಿಂದ ಕೂಡಿದೆ ಹಾಗೂ ಸಾಮಾಜಿಕ ನ್ಯಾಯದ ಬಗ್ಗೆ ಅವರು ಪ್ರತಿನಿಧಿಸುವ ಪಕ್ಷದ ಬದ್ಧತೆಯ ಬಗ್ಗೆ ಸಂಶಯ ಹುಟ್ಟಿಸುವಂತಿದೆ.

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ಬಹಿಷ್ಕರಿಸುವುದರಿಂದ, ನಿರ್ಲಕ್ಷಿತ ಸಮುದಾಯಗಳ ಧ್ವನಿಯನ್ನು ಹತ್ತಿಕ್ಕಿದಂತೆ ಆಗುತ್ತದೆ; ಸಾಮಾಜಿಕ ನ್ಯಾಯದ ಪರಿಕಲ್ಪನೆಗೆ ಧಕ್ಕೆ ಉಂಟಾಗುತ್ತದೆ.

ಸಮೀಕ್ಷೆಯಲ್ಲಿ ಪಾಲ್ಗೊಳ್ಳುವುದು ಕಡ್ಡಾಯವೇನಲ್ಲ ಎಂದು ಹೈಕೋರ್ಟ್ ನೀಡಿರುವ ನಿರ್ದೇಶನವನ್ನು, ಸಮೀಕ್ಷೆಯನ್ನು ಬಹಿಷ್ಕರಿಸುವಂತೆ ಕರೆ ನೀಡುತ್ತಿರುವ ವರ್ಗ ತನ್ನ ಅನುಕೂಲಕ್ಕೆ ಬಳಸಿಕೊಳ್ಳುತ್ತಿದೆ. ಪಂಜಾಬ್ ಸರ್ಕಾರ ವರ್ಸಸ್ ದೇವಿಂದರ್ ಸಿಂಗ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪನ್ನು ಮಾರ್ಗದರ್ಶಕ ಸೂತ್ರವನ್ನಾಗಿ ಪರಿಗಣಿಸಿ ಹೈಕೋರ್ಟ್ ನಿರ್ದೇಶನ ನೀಡಿದ್ದಲ್ಲಿ, ಸಮೀಕ್ಷೆಯ ಕುರಿತ ಗೊಂದಲಗಳಿಗೆ ಆಸ್ಪದ ಇರುತ್ತಿರಲಿಲ್ಲ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಒಂದೇ ಕುಟುಂಬಕ್ಕೆ ಸೇರಿದವುಗಳಲ್ಲ ಎನ್ನುವುದನ್ನು ಎತ್ತಿಹಿಡಿದಿದ್ದ ಸುಪ್ರೀಂ ಕೋರ್ಟ್, ಮೀಸಲಾತಿ ಸೌಲಭ್ಯವನ್ನು ನ್ಯಾಯಬದ್ಧವಾಗಿ ನೀಡುವುದಕ್ಕಾಗಿ ಉಪ ವರ್ಗೀಕರಣವನ್ನು ರಾಜ್ಯ ಸರ್ಕಾರಗಳು ಮಾಡಿಕೊಳ್ಳಬಹುದು ಎಂದು ಹೇಳಿತ್ತು. ವಿವಿಧ ಹಿಂದುಳಿದ ಸಮುದಾಯಗಳಿಗೆ ಸಂಬಂಧಿಸಿದಂತೆ ಪ್ರಮಾಣೀಕರಿಸಬಹುದಾದ ಅಧಿಕೃತ ದತ್ತಾಂಶ ಇಲ್ಲದೆ ಹೋದಲ್ಲಿ, ಬಲಿಷ್ಠ ಉಪಜಾತಿಗಳ ಏಕಸ್ವಾಮ್ಯದ ಅಪಾಯ ಉಂಟಾಗಬಹುದು. ಈ ಹಿನ್ನೆಲೆಯಲ್ಲಿ, ಅತ್ಯಂತ ಹಿಂದುಳಿದ ಸಮುದಾಯಗಳಿಗೆ ಕಲ್ಯಾಣ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ತಲಪಿಸಲು ಅನುಕೂಲವಾಗುವಂತೆ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ರಾಜ್ಯ ಸರ್ಕಾರ ನಡೆಸುತ್ತಿರುವುದು ಸೂಕ್ತವಾಗಿದೆ. ಈ ಸಮೀಕ್ಷೆಯಿಂದ ಅತ್ಯಂತ ಸಣ್ಣ ಹಾಗೂ ಬಡತನಕ್ಕೆ ಸಿಲುಕಿರುವ ಜಾತಿಗಳಿಗೆ ದೊರೆಯಬೇಕಾದ ಪ್ರಯೋಜನಗಳನ್ನು ಸಬಲ ಜಾತಿಗಳು ಕಬಳಿಸದಂತೆ ತಡೆಯಲು ಸಾಧ್ಯವಾಗಲಿದೆ.

ಸಮೀಕ್ಷೆಯ ಕುರಿತು ಎದುರಾಗಿರುವ ವಿರೋಧಕ್ಕೆ ಸರ್ಕಾರವೂ ಅವಕಾಶ ಕಲ್ಪಿಸಿದೆ. ಸಮೀಕ್ಷೆಯ ಉದ್ದೇಶಗಳನ್ನು ಜನಸಾಮಾನ್ಯರಿಗೆ ಪರಿಣಾಮಕಾರಿಯಾಗಿ ತಲಪಿಸುವಲ್ಲಿ ಆಗಿರುವ ವೈಫಲ್ಯ, ವದಂತಿಗಳು ಹುಟ್ಟಿಕೊಳ್ಳಲು ಕಾರಣವಾಗಿದೆ. ಗೊಂದಲಗಳೇನೇ ಇದ್ದರೂ, ಸಾಮಾಜಿಕ ನ್ಯಾಯ ಖಾತರಿಪಡಿಸುವ ಪ್ರಕ್ರಿಯೆಯ ರೂಪದಲ್ಲಿ ಸಮೀಕ್ಷೆ ಅನಿವಾರ್ಯವಾಗಿದೆ. ಅಂಚಿನ ವರ್ಗಕ್ಕೆ ಸೇರಿದವರು ಸಮೀಕ್ಷೆಯನ್ನು ಬಹಿಷ್ಕರಿಸಿದ್ದೇ ಆದಲ್ಲಿ, ಅದರಿಂದ ಅವರಿಗೇ ನಷ್ಟವಾಗುತ್ತದೆ ಹಾಗೂ ಸಮುದಾಯಗಳ ಹಿಂದುಳಿದಿರುವಿಕೆಯ ಸ್ವರೂಪ ಅಸ್ಪಷ್ಟವಾಗಿಯೇ ಉಳಿಯುತ್ತದೆ. ಸ್ವಪ್ರತಿಷ್ಠೆಯ ರಾಜಕಾರಣ ಅಥವಾ ಜಾತಿಗಳ ನಡುವಣ ಸಂಘರ್ಷದ ರೂಪದಲ್ಲಿ ಸಮೀಕ್ಷೆಯನ್ನು ಬಿಂಬಿಸುವುದು ಇನ್ನಾದರೂ ಕೊನೆಗೊಳ್ಳಬೇಕು. ಸಾರ್ವಜನಿಕ ನೀತಿಯಲ್ಲಿ ನಿರ್ಲಕ್ಷಿತ ಸಮುದಾಯಗಳು ನ್ಯಾಯಬದ್ಧ ಪಾಲನ್ನು ಹೊಂದುವ ಹಕ್ಕೊತ್ತಾಯಕ್ಕೆ ಸಮೀಕ್ಷೆ ಬಲ ಒದಗಿಸಲಿದೆ. ಸಮೀಕ್ಷೆಯನ್ನು ಬಹಿಷ್ಕರಿಸುವ ಮನಃಸ್ಥಿತಿಯಿಂದ ಕೇಳಿಸಿಕೊಳ್ಳಲೇಬೇಕಾದ ಧ್ವನಿಗಳನ್ನು ಹತ್ತಿಕ್ಕಿದಂತಾಗುತ್ತದೆ.

ಚುಟುಕು

ಹಗೆಯ ಹುಂಬತನ

ಹವಾಮಾನ ವೈಪರೀತ್ಯದಿಂದಾಗಿ ಬುವಿಯಲ್ಲಿನ ಸಕಲ ಜೀವಸಂಕುಲವೂ, ಅವುಗಳ ತಾವಾದ ಭೂಮಿಯೂ ಸಂಕಷ್ಟಕ್ಕೀಡಾಗಿ ಬದುಕುಳಿಯುವುದೇ ಸವಾಲಾಗಿರುವಾಗ, ಮನುಷ್ಯರೂ ದೇಶಗಳೂ ಪೀಳಿಗೆಯಿಂದ ಪೀಳಿಗೆಗೆ ಹಗೆಯನ್ನು ದಾಟಿಸುವುದು ಹುಂಬತನ ಎನಿಸಿಕೊಳ್ಳುತ್ತದೆ.

ಸವಿತಾ ನಾಗಭೂಷಣ, ಕವಯಿತ್ರಿ, ‘ಫೇಸ್‌ಬುಕ್’ನಿಂದ

ಕಿಡಿನುಡಿ

ರಾಜ್ಯ ಸರ್ಕಾರಕ್ಕೆ ಹಿಂದುಳಿದವರು, ದಲಿತರ ಬಗೆಗೆ ಅಷ್ಟೊಂದು ಕಾಳಜಿ ಇದ್ದಿದ್ದರೆ ₹180 ಕೋಟಿ ವೆಚ್ಚ ಮಾಡಿ ತಯಾರಿಸಿದ ಕಾಂತರಾಜ ವರದಿಯನ್ನು ಕಸದ ಬುಟ್ಟಿಗೆ ಯಾಕೆ ಎಸೆಯಿತು? ಗೋಪ್ಯವಾಗಿ ಇಡಬೇಕಿದ್ದ ವರದಿಯನ್ನು ಸೋರಿಕೆ ಮಾಡಿದ್ದು ಯಾರು?

ಗೋವಿಂದ ಕಾರಜೋಳ, ಬಿಜೆಪಿ ಸಂಸದ

25 ವರ್ಷಗಳ ಹಿಂದೆ

ಭಾನುವಾರ, 1-10-2000

• **ಬಸ್ ಪ್ರಯಾಣ ದರ ಶೇ 10 ಏರಿಕೆ**

ಬೆಂಗಳೂರು, ಸೆ. 30– ಕೇಂದ್ರ ಸರ್ಕಾರವು ಡೀಸೆಲ್ ಮತ್ತಿತರ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಸಿದ ಹಿಂದೆಯೇ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು, ಮಂಗಳವಾರ ಮಧ್ಯರಾತ್ರಿಯಿಂದ (ಅ. 3) ಜಾರಿಗೆ ಬರುವಂತೆ ಶೇ 9ರಿಂದ 10ರಷ್ಟು ಪ್ರಯಾಣ ದರ ಏರಿಸಲು ನಿರ್ಧರಿಸಿದೆ.

ಸಾರಿಗೆ ಸಚಿವ ಸಗೀರ್ ಅಹ್ಮದ್ ಇಂದು ಸಂಜೆ ತುರ್ತು ಪತ್ರಿಕಾಗೋಷ್ಠಿಯಲ್ಲಿ ಈ ಮಾಹಿತಿ ನೀಡಿದರು.

ಆಟೊರಿಕ್ಷಾ ಮತ್ತು ಖಾಸಗಿ ಬಸ್ ಪ್ರಯಾಣ ದರ ಏರಿಕೆ ಕುರಿತು ನಿರ್ಧರಿಸಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ ಎಂದರು.

• **ಆದಾಯ ತೆರಿಗೆದಾರರಿಗೆ ಪಡಿತರ ಸಕ್ಕರೆ ಇಲ್ಲ**

ಬೆಂಗಳೂರು, ಸೆ. 30– ಸುಮಾರು ಒಂಬತ್ತು ಲಕ್ಷ ಜನ ಆದಾಯ ತೆರಿಗೆದಾರರನ್ನು ಪಡಿತರ ಸಕ್ಕರೆ ವ್ಯಾಪ್ತಿಯಿಂದ ಹೊರಗಿಡಲು ರಾಜ್ಯ ಸರ್ಕಾರ ಎಲ್ಲ ಸಿದ್ಧತೆಗಳನ್ನು ನಡೆಸಿದ್ದು, ಅಕ್ಟೋಬರ್ ತಿಂಗಳ ಪಡಿತರದ ಜೊತೆಗೆ, ‘ನೀವು ಒಬ್ಬ ಆದಾಯ ತೆರಿಗೆ ಪಾವತಿದಾರರೇ?’ ಎಂಬ ನೋಟಿಸ್ ಜಾರಿಗೊಳ್ಳಲಿದೆ.

75 ವರ್ಷಗಳ ಹಿಂದೆ

ಭಾನುವಾರ, 1-10-1950

• **ಮನರಂಜನೆ ತೆರಿಗೆ ವಿಧಿಸಲು ಅಧಿಕಾರ**

ಬೆಂಗಳೂರು, ಸೆ. 30– ಬೆಂಗಳೂರು ಕಾರ್ಪೊರೇಷನ್‌ನ ನಿಯೋಗವೊಂದು ಇಂದು ಹಣಕಾಸು ಸಚಿವ ಎಚ್.ಸಿ. ದಾಸಪ್ಪ ಮತ್ತು ಸ್ಥಳೀಯ ಸಂಸ್ಥೆಗಳ ಸಚಿವ ಆರ್. ಚೆನ್ನಿಗರಾಮಯ್ಯ ಅವರನ್ನು ಕಂಡು, ಮನರಂಜನೆ ತೆರಿಗೆ ವಿಧಿಸುವ ಅಧಿಕಾರವನ್ನು ಕಾರ್ಪೊರೇಷನ್‌ಗೆ ಕೊಡಬೇಕೆಂದೂ, ಕಾರ್ಪೊರೇಷನ್ ಪ್ರದೇಶದಲ್ಲಿ ನಡೆಸಲಾಗುವ ಮಾರಾಟ ತೆರಿಗೆಯಲ್ಲಿ ಒಂದು ಭಾಗ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಂಡಿತು.

• **ಸೇವಾದಳಗಳ ಕಾರ್ಯಕ್ಕೆ ನೆಹರೂ ಮೆಚ್ಚುಗೆ**

ನವದೆಹಲಿ, ಸೆ. 30– ಭಾರತದ ವೈಮಾನಿಕ ದಳವು ಏಷ್ಯಾದಲ್ಲೂ ಮತ್ತು ಸೇನಾ ದಳವು ಅಸ್ಸಾಂ ಹಾಗೂ ಕಾಶ್ಮೀರದಲ್ಲಿ ಪ್ರವಾಹ ತಡೆಗಟ್ಟುವ ಕಾರ್ಯದಲ್ಲಿ, ನಷ್ಟ ಸರಿಪಡಿಸುವುದರಲ್ಲಿ, ಸಂತ್ರಸ್ತರಿಗೆ ನೆರವು ನೀಡುವುದರಲ್ಲಿ ಸಾಧಿಸಿದ ಮಹತ್ಕಾರ್ಯಕ್ಕಾಗಿ ಪ್ರಧಾನಿ ನೆಹರೂ ಅವರು, ಪತ್ರಿಕಾಗೋಷ್ಠಿಯಲ್ಲಿ ಮೆಚ್ಚುಗೆ ವ್ಯಕ್ತಪಡಿಸಿದರು.

ಗಾಂಧೀಜಿ ಆತ್ಮಕಥನಕ್ಕೆ 100 ವರ್ಷ

ವಿಶ್ಲೇಷಣೆ

ಬರಗೂರು ರಾಮಚಂದ್ರಪ್ಪ

ವಿಶ್ವದ ಅತ್ಯುತ್ತಮ ಆತ್ಮಕಥನಗಳಲ್ಲೊಂದಾದ ಗಾಂಧೀಜಿ ಅವರ ‘ನನ್ನ ಸತ್ಯಾನ್ವೇಷಣೆ’ ಕೃತಿಗೀಗ 100 ವರ್ಷ. ಗಾಂಧೀಜಿ ಅವರ ಸತ್ಯ, ಅಹಿಂಸೆ, ತ್ಯಾಗದ ಪ್ರಯೋಗಗಳೊಂದಿಗೆ, ನಿರಂತರವಾಗಿ ಬದಲಾಗುತ್ತಲೇ ಹೋದ ಮಹಾತ್ಮನ ವ್ಯಕ್ತಿತ್ವವನ್ನು ಈ ಕೃತಿ ಪರಿಚಯಿಸುತ್ತದೆ.

‘ಸತ್ಯದೊಂದಿಗೆ ನನ್ನ ಪ್ರಯೋಗಗಳು’ ಎಂಬ ಹೆಸರಿನ ಗಾಂಧೀಜಿಯವರ ಆತ್ಮಕಥನವು ಪ್ರಕಟಗೊಂಡು 2025ಕ್ಕೆ ನೂರು ವರ್ಷಗಳಾಗಿವೆ. ಈ ಆತ್ಮಕಥನವನ್ನು ಮಹಾದೇವ ದೇಸಾಯಿಯವರು ಗುಜರಾತಿನಿಂದ ಆಂಗ್ಲ ಭಾಷೆಗೆ ಅನುವಾದಿಸಿದರು. ಈ ಆಂಗ್ಲ ಅನುವಾದವನ್ನು ಕನ್ನಡಕ್ಕೆ ತಂದ ಪ್ರಸಿದ್ಧ ಸಾಹಿತಿ, ಗಾಂಧೀವಾದಿ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಜನ್ಮ ಶತಮಾನದ ವರ್ಷದಲ್ಲೇ ಗಾಂಧಿ ಆತ್ಮಕಥನಕ್ಕೂ ‘ಜನ್ಮ’ ಶತಮಾನದ ವರ್ಷವಾಗಿರುವುದು ಒಂದು ವಿಶೇಷ. ಗೊರೂರರ ಅನುವಾದವು ಗಾಂಧೀಜಿಯವರ ‘ಅಂತರಂಗದ ಮಾತುಗಳಿಗೆ’ ಕನ್ನಡಿಯಾದದ್ದು ಕನ್ನಡ ಓದುಗರಿಗೆ ಹೆಮ್ಮೆಯ ಕೊಡುಗೆಯಾಗಿದೆ.

ಗಾಂಧೀಜಿಯವರ ಆತ್ಮಕಥನವನ್ನು ‘ಅಂತರಂಗದ ಮಾತುಗಳು’ ಎಂದು ನಾನು ಕರೆಯಲು ಕಾರಣವಿದೆ. ಗಾಂಧೀಜಿಯವರು ತಮ್ಮ ಆತ್ಮಕಥನ ಕುರಿತಂತೆ ಹೇಳಿರುವ ಮಾತುಗಳನ್ನು ಗಮನಿಸಿ: ‘ನಾನು ಆಳವಾದ ಅಂತರಂಗ ವೀಕ್ಷಣೆಗೆ ಒಳಗಾಗಿದ್ದೇನೆ. ನನ್ನನ್ನು ನಾನೇ ಆಮೂಲಾಗ್ರವಾಗಿ ಶೋಧಿಸಿಕೊಂಡಿದ್ದೇನೆ ಮತ್ತು ಮಾನಸಿಕ ಸಂದರ್ಭಗಳನ್ನು ಪರೀಕ್ಷಿಸಿ, ವಿಶ್ಲೇಷಿಸಿಕೊಂಡಿದ್ದೇನೆ. ಆದರೂ, ನನ್ನ ನಿರ್ಧಾರಗಳನ್ನು ಅವೇ ಅಂತಿಮ ಅಥವಾ ದೋಷಾತೀತವೆಂದು ಹೇಳುವುದರಿಂದ ಬಹಳ ದೂರವೇ ಉಳಿದಿದ್ದೇನೆ’. ಗಾಂಧೀಜಿಯವರ ಈ ಮಾತುಗಳು ಅವರ ಸತ್ಯನಿಷ್ಠೆ, ಪ್ರಾಮಾಣಿಕತೆಗೆ ಸಾಕ್ಷಿಯಾಗಿರುವುದಲ್ಲದೆ, ಆತ್ಮಕಥನವನ್ನು ಆತ್ಮಾವಲೋಕನ ಕಥನವೆಂದು ಭಾವಿಸಿರುವುದನ್ನು ಸ್ಪಷ್ಟಪಡಿಸುತ್ತವೆ. ನಿಜ; ಯಾರದೇ ಆತ್ಮಕಥನವು ಆತ್ಮಾವಲೋಕನದ ಆಯಾಮವನ್ನು ಪಡೆಯದೆ ಇದ್ದರೆ ಆತ್ಮರತಿಯಾಗುವ ಅಪಾಯ ಇದ್ದೇ ಇರುತ್ತದೆ. ಆತ್ಮರತಿಗೆ ಅಹಂಕಾರದ ಸ್ಪರ್ಶವೂ ಅಗೋಚರವಾಗಿ ಕೆಲಸ ಮಾಡುತ್ತದೆ. ಆತ್ಮಕಥನಗಳು ಅಂತರಂಗಿಕ ಶೋಧವೂ, ಪರೀಕ್ಷೆಗೊಡ್ಡಿಕೊಂಡ ಪರಿಶೀಲನೆಯೂ ಆದಾಗ ಸತ್ಯಕಥನಗಳಾಗುತ್ತವೆ. ಹಾಗೆಂದು ಆತ್ಮಕಥನಕಾರರು ತಮ್ಮ ಬದುಕಿನ ಸಮಸ್ತಸತ್ಯಗಳನ್ನು ದಾಖಲಿಸಿರುತ್ತಾರೆಂದು ಭಾವಿಸಲಾಗದು. ಅನುಭವಗಳ ಆಯ್ಕೆಯೂ ಆತ್ಮಕಥನಗಳ ಅಂಗವಾಗಿರುತ್ತದೆ. ಈ ಇತಿಮಿತಿಗಳ ನಡುವೆ ವಾಸ್ತವಿಕತೆ ಮತ್ತು ಪ್ರಾಮಾಣಿಕತೆಯುಳ್ಳ ಆತ್ಮಕಥನಗಳು ಮೌಲ್ಯಯುತವಾಗುತ್ತವೆ. ಗಾಂಧೀಜಿ ಆತ್ಮಕಥನಕ್ಕೆ ಇಂತಹ ಮೌಲ್ಯ ತಾನಾಗಿಯೇ ಲಭ್ಯವಾಗಿದೆ. ಯಾಕೆಂದರೆ, ಅವರು ತಮ್ಮ ಅನುಭವಗಳನ್ನು ತಮಗೆ ತಾವೇ ಹೇಳಿಕೊಂಡಂತೆ ಬರೆಯುತ್ತಾರೆ. ಓದುಗರಿಗೆ ಬೋಧೆ ಮಾಡುತ್ತೇನೆ ಎಂಬ ಹಮ್ಮುಬಿಮ್ಮುಗಳಿಲ್ಲದೆ ನಿವೇದಿಸುತ್ತಾರೆ. ಇನ್ನೊಂದು ಗಮನಾರ್ಹ ಅಂಶವೆಂದರೆ– ಗಾಂಧಿ ಆತ್ಮಕಥನದ ಅವಧಿ 56 ವರ್ಷಗಳು ಮಾತ್ರ. ಗಾಂಧೀಜಿ ಹುಟ್ಟಿದ್ದು 1869ರ ಅಕ್ಟೋಬರ್ 2ರಂದು. ಆತ್ಮಕಥನ ಹೊರಬಂದದ್ದು 1925ರ ನವೆಂಬರ್ ತಿಂಗಳಲ್ಲಿ. ಆನಂತರ 23 ವರ್ಷಗಳ ಕಾಲ ಗಾಂಧೀಜಿ ಬದುಕಿದ್ದರು. ಈ 23 ವರ್ಷ ಗಾಂಧೀಜಿ ಬದುಕಿನ ಅತ್ಯಮೂಲ್ಯ ಆಕರಗಳೆಂದರೆ ತಪ್ಪಾಗಲಾರದು. ಯಾಕೆಂದರೆ, ಗಾಂಧೀಜಿಯವರು ಜಾತಿ, ವರ್ಣವೇ ಮುಂತಾದ ಸಾಮಾಜಿಕ ಸಂರಚನೆಗಳನ್ನು ಕುರಿತು ಮೊದಲು ಪ್ರತಿಪಾದಿಸಿದ್ದ ಸಾಂಪ್ರದಾಯಿಕ ಜಡ ಚಿಂತನೆಗಳಿಗೆ, ಚಲನಶೀಲ ಪ್ರಗತಿಪರ ಆಯಾಮ ದೊರಕಿದ್ದು, ಇದೇ ಅವಧಿಯಲ್ಲಿ.

ಗಾಂಧೀಜಿಯವರು 1919ರಲ್ಲಿ ಅಂತರ್ಜಾತಿ ವಿವಾಹ ಮತ್ತು ಅಂತರ್ಜಾತಿ ಭೋಜನ ವ್ಯವಸ್ಥೆಯನ್ನು ಒಪ್ಪಿರಲಿಲ್ಲ. ಈ ಭಾವನೆಯು 1936ರಲ್ಲಿ ಖಚಿತತೆ ಮತ್ತು ಸ್ಪಷ್ಟತೆಯೊಂದಿಗೆ ಪ್ರಕಟಗೊಂಡಿತು. ಒಬ್ಬ ಪತ್ರಿಕಾ ವರದಿಗಾರನಿಗೆ ಕೊಟ್ಟ ಸಂದರ್ಶನದಲ್ಲಿ ಗಾಂಧೀಜಿ ಹೀಗೆ ಹೇಳಿದ್ದಾರೆ: ‘ತನ್ನ ಎಲ್ಲಾ ಭಯಾನಕತೆಗಳಿಂದ ನಮಗೆ ಇವತ್ತು ಕಾಣಿಸುತ್ತಿರುವ ಜಾತಿಯನ್ನು ಶಾಸ್ತ್ರಗಳು ಪುರಸ್ಕರಿಸುವುದಾದರೆ, ನಾನು ನನ್ನನ್ನು ಹಿಂದೂವೆಂದು ಕರೆದುಕೊಂಡು ಅದರಲ್ಲಿ ಉಳಿದುಕೊಳ್ಳಲಾರೆ. ಕಾರಣ, ಅಂತರ್ಜಾತಿ ಭೋಜನ ಅಥವಾ ಅಂತರ್ಜಾತಿ ವಿವಾಹಗಳ ಬಗ್ಗೆ ನನಗೆ ಯಾವುದೇ ವಿರೋಧವಿಲ್ಲ. ಅಂಬೇಡ್ಕರ್ ಅವರು ಮೊದಲಿಂದಲೂ ಅಂತರ್ಜಾತಿ ವಿವಾಹದ ಪ್ರತಿಪಾದಕರಾಗಿದ್ದರು ಎಂಬ ಅಂಶವನ್ನು ಇಲ್ಲಿ ಗಮನಿಸಬೇಕು. ಗಾಂಧೀಜಿಯವರು ಅಂಬೇಡ್ಕರ್ ಅವರ ಬಗ್ಗೆ ಅಪಾರ ಆದರವುಳ್ಳವರಾಗಿದ್ದರು ಎನ್ನುವುದಕ್ಕೆ ಒಂದು ನಿದರ್ಶನವನ್ನು ನೀಡಬಹುದು. ಜಗತ್ತಿನಲ್ಲೇ ಮೊದಲ ಅಧಿಕೃತ ನಾಸ್ತಿಕ ಕೇಂದ್ರವನ್ನು ಆಂಧ್ರದಲ್ಲಿ ಸ್ಥಾಪಿಸಿದ್ದ ಗೋರಾ ಅವರ ಅಳಿಯ ಗಾಂಧೀಜಿಯವರ ಶಿಷ್ಯತ್ವವನ್ನು ಬಯಸಿದಾಗ, ‘ನೀನು ಅಂಬೇಡ್ಕರ್ ಅವರಂತೆ ಆಗಬೇಕು. ಅಸ್ಪೃಶ್ಯತೆ ಮತ್ತು ಜಾತಿ ನಿರ್ಮೂಲನಕ್ಕಾಗಿ ಕೆಲಸ ಮಾಡಬೇಕು. ಯಾವ ಬೆಲೆಯನ್ನು ತೆತ್ತಾದರೂ ಸರಿಯೇ, ಅಸ್ಪೃಶ್ಯತೆಯು ಹೋಗಲೇಬೇಕು’ (1946) ಎಂದು ಗಾಂಧೀಜಿ ಬರೆದು ತಿಳಿಸಿದರು. 1946ರಲ್ಲಿ ಗಾಂಧೀಜಿ ‘ವರ್ಗರಹಿತ, ಜಾತಿರಹಿತ ಇಂಡಿಯಾ ನಿರ್ಮಾಣದ ಅಗತ್ಯ’ವನ್ನು ಅಮೆರಿಕದ ಸಂದರ್ಶಕರೊಂದಿಗೆ ಹಂಚಿಕೊಂಡಿದ್ದರು. ಜಾತಿಯು ಬೇರುಸಹಿತ ಹೋಗಬೇಕು ಎಂದು ಆಶಿಸಿದ್ದರು. ‘ನನ್ನ ಮನಸ್ಸು ಸತತವಾಗಿ ಬೆಳೆಯುತ್ತಿದೆ’ ಎಂದೂ ಹೇಳಿದ್ದರು. ಆದರೆ ಇವರ ಬೆಳವಣಿಗೆ ಮತ್ತು ಬದಲಾವಣೆಯನ್ನು ಗಮನಿಸದ, ಗುರುತಿಸದ, ಟೀಕಾಕಾರರಿಗೆ ಆಹಾರವೂ ಆದರು.

1925ರವರೆಗಿನ ಗಾಂಧೀಜಿಯವರ ಆತ್ಮಕಥನ ಕೂಡ ಅವರ ಬೆಳವಣಿಗೆ ಮತ್ತು ಬದಲಾವಣೆಯ ಚರಿತೆಯಾಗಿದೆ. ತಾಯಿ, ತಂದೆಯವರ ಬಗ್ಗೆ ಅಪಾರ ಭಕ್ತಿ ಹೊಂದಿದ್ದ ಗಾಂಧೀಜಿ ತಮ್ಮ ದೌರ್ಬಲ್ಯಗಳನ್ನು ತೆರೆದಿಡುತ್ತಲೇ ಆನಂತರ ಆದ ಬದಲಾವಣೆಗಳನ್ನು ಉಲ್ಲೇಖಿಸುತ್ತಾರೆ. ತಮ್ಮ ಪ್ರತಿಯೊಂದು ಪ್ರಮುಖ ಪ್ರಸಂಗವನ್ನು ‘ಪ್ರಯೋಗ’ ಎಂದೇ ಕರೆಯುತ್ತಾರೆ. ಈ ಪ್ರಯೋಗಗಳ ಆಂತರ್ಯದಲ್ಲಿ ಆಧ್ಯಾತ್ಮಿಕ, ಧಾರ್ಮಿಕ ಭಾವನೆಯಿದೆಯೆಂದು ಸ್ಪಷ್ಟಪಡಿಸುತ್ತಾರೆ: ‘ನಾನು ಕಟ್ಟಿಕೊಡುತ್ತಿರುವ ಕಥನಗಳು, ಆಧ್ಯಾತ್ಮಿಕವಾದವು ಅಥವಾ ಖಚಿತವಾಗಿ ನೈತಿಕವಾದವು. ಧರ್ಮದ ಮೂಲಸಾರವೇ ನೈತಿಕತೆ’ ಎಂದು ಹೇಳಿದ್ದಾರೆ.

ಗಾಂಧೀಜಿಯವರಿಗೆ ಧರ್ಮವೆನ್ನುವುದು ನೈತಿಕವೇ ಹೊರತು ಸಾಂಸ್ಥಿಕ ಸ್ವರೂಪದ ನಿಯಂತ್ರಕವಲ್ಲ. ಆದ್ದರಿಂದಲೇ ಅವರು ಹಿಂದೂ ಧರ್ಮವನ್ನು ನಂಬಿ ನಡೆಯುತ್ತಲೇ ಅದರ ಒಳವಿಮರ್ಶಕರಾಗಿದ್ದರು. ದ್ವೇಷವಿಲ್ಲದ ಧಾರ್ಮಿಕ ಸಾಮರಸ್ಯದ ನೈತಿಕ ಪ್ರತಿಪಾದಕರಾಗಿದ್ದರು. ನೈತಿಕತೆಯ ಮೂಲತತ್ತ್ವಗಳಿಗೆ ವಿರುದ್ಧವಾದ ಎಲ್ಲವನ್ನೂ ನಿರಾಕರಿಸುತ್ತೇನೆ ಎಂದು ಬರೆದರು. ವೇದ, ಉಪನಿಷತ್ತು ಮುಂತಾದವುಗಳಲ್ಲಿ ನಂಬಿಕೆಯಿದ್ದರೂ ‘ಮಂತ್ರ ಪಠಣದಿಂದ ಧರ್ಮ ನಿರ್ಧಾರ ಆಗುವುದಿಲ್ಲ’ ಎಂದರು. ಯಾಕೆಂದರೆ, ನೈತಿಕತೆ ಮತ್ತು ಪ್ರಾಮಾಣಿಕತೆಗಳೇ ಅವರ ಬದುಕಿನ ಸತ್ಯಶೋಧದ ಸಾಧನವಾಗಿದ್ದವು.

ಗಾಂಧೀಜಿಯವರು ಸ್ನೇಹಿತರ ಜೊತೆಗೆ ಸಿಗರೇಟು ಸೇದಿದ್ದು, ಸಿಗರೇಟು ಖರೀದಿಸಲು ಹಣ ಕದ್ದಿದ್ದು, ಮೇಕೆಮಾಂಸ ತಿಂದಿದ್ದು, ಮುಂತಾದ ಪ್ರಸಂಗಗಳನ್ನು ಆತ್ಮಾವಲೋಕನದ ಮಾದರಿಯಲ್ಲಿ ಕಟ್ಟಿಕೊಡುತ್ತಾರೆ. ತಾಯಿ, ತಂದೆ ಹಾಗೂ ಹಿರಿಯರ ಬಗ್ಗೆ ಇದ್ದ ಗೌರವ ಮತ್ತು ಅವರ ಕಟ್ಟುಪಾಡುಗಳು ತಮ್ಮ ‘ಹವ್ಯಾಸಗಳಿಗೆ’ ಅಡ್ಡಿಯಾಗಿ ‘ಸ್ವಾತಂತ್ರ್ಯ’ವನ್ನು ಕಸಿಯುತ್ತಿವೆಯೆಂಬ ಅನುಭವದಿಂದ ಬಾಲಕ ಗಾಂಧೀಜಿ, ತಳಮಳಕ್ಕೆ ಒಳಗಾಗುತ್ತಾರೆ. ತೃಪ್ತಿಯೇ ಇಲ್ಲದ ಮಾನಸಿಕ ತಳಮಳಗಳನ್ನು ತಾಳಿಕೊಳ್ಳಲಾರದೆ ಸ್ನೇಹಿತರೊಂದಿಗೆ ಸೇರಿ ಆತ್ಮಹತ್ಯೆ ಮಾಡಿಕೊಳ್ಳುವ ನಿರ್ಧಾರಕ್ಕೂ ಬರುತ್ತಾರೆ. ದತ್ತೂರಿ ಗಿಡದ ಬೀಜಗಳನ್ನು ತಿಂದರೆ ಸಾವು ಸಂಭವಿಸುತ್ತದೆಯೆಂದು ತಿಳಿದಿದ್ದ ಇವರು ಆ ಗಿಡಕ್ಕಾಗಿ ಹುಡುಕಿ, ಪತ್ತೆ ಮಾಡಿ, ಒಂದೆರಡು ಬೀಜ ತಿಂದು, ತಕ್ಷಣವೇ ಆತ್ಮಹತ್ಯೆಯ ನಿರ್ಧಾರದಿಂದ ಹಿಂದೆ ಸರಿಯುತ್ತಾರೆ. ‘ಆತ್ಮಹತ್ಯೆ ಮಾಡಿಕೊಳ್ಳಬೇಕೆಂಬ ಆಲೋಚನೆಯಷ್ಟು ಅದನ್ನು ಸಾಧಿಸುವುದು ಸುಲಭವಲ್ಲ ಎಂದು ನಾನು ಮನಗಂಡೆ’ ಎಂದು ಬರೆಯುತ್ತಾರೆ.

ಮೇಕೆಮಾಂಸ ತಿಂದ ಪ್ರಸಂಗ ಮತ್ತು ಆನಂತರದ ಬೆಳವಣಿಗೆಗಳ ನಿರೂಪಣೆ ಆಸಕ್ತಿದಾಯಕವಾಗಿದೆ. ಮಾಂಸ ಸೇವನೆಯು, ಶಕ್ತಿವಂತ ಹಾಗೂ ಧೈರ್ಯವಂತನನ್ನಾಗಿ ಮಾಡುತ್ತದೆ. ಇಂಗ್ಲಿಷರನ್ನು ಮಣಿಸಲು ಇದು ಸಹಾಯಕವಾಗುತ್ತದೆ ಎಂದು ಬಾಲಕ ಗಾಂಧಿ ಭಾವಿಸುತ್ತಾರೆ. ಬ್ರಿಟಿಷರನ್ನು ಮಣಿಸಲು ಮಾಂಸ ತಿನ್ನಬೇಕೆಂಬ ಬಯಕೆ ವಿಚಿತ್ರ ಎನ್ನಿಸಿದರೂ, ಬ್ರಿಟಿಷರ ವಿರುದ್ಧ ಬಾಲ್ಯದಲ್ಲೇ ಮೂಡಿದ್ದ ಅವರ ಪ್ರತಿರೋಧವನ್ನು ಇಲ್ಲಿ ಗಮನಿಸಬಹುದು. ಆನಂತರ ಧೂಮಪಾನ, ಮಾಂಸ ಸೇವನೆಗಳನ್ನು ತೊರೆದು ತಂದೆಗೆ ತಪ್ಪೊಪ್ಪಿಗೆ ಪತ್ರ ಬರೆದು ನೇರವಾಗಿ ಕೊಟ್ಟ ಸನ್ನಿವೇಶವನ್ನು ಗಾಂಧೀಜಿ ಭಾವುಕವಾಗಿ ವಿವರಿಸಿದ್ದಾರೆ. ಹಾಗೆಂದು ಗಾಂಧೀಜಿ ಮಾಂಸಾಹಾರದ ವಿರೋಧಿಯಾಗಿರಲಿಲ್ಲ. ತಾಯಿ-ತಂದೆಗೆ ನೋವಾಗುತ್ತದೆಯೆಂದು ತಾನು ಅವರು ಬದುಕಿರುವವರೆಗೆ ಮಾಂಸಾಹಾರ ಸೇವನೆ ಮಾಡುವುದಿಲ್ಲವೆಂದೂ, ಅವರು ಗತಿಸಿದ ನಂತರ ತನಗೆ ‘ಸ್ವಾತಂತ್ರ್ಯ’ ಬಂದಾಗ, ಬಹಿರಂಗವಾಗಿಯೇ ತಿನ್ನುವುದಾಗಿಯೂ ಬರೆದುಕೊಂಡಿದ್ದಾರೆ.

ಗಾಂಧಿ ಆತ್ಮಕಥನದ ಒಂದು ಮುಖ್ಯ ಘಟನೆಯೆಂದರೆ – ಅವರನ್ನು ಜಾತಿಭ್ರಷ್ಟರನ್ನಾಗಿ ಮಾಡಿದ್ದು. ವಿದ್ಯಾಭ್ಯಾಸಕ್ಕಾಗಿ ಲಂಡನ್‌ಗೆ ಹೊರಟಾಗ ಜಾತಿ ಮುಖಂಡರು ‘ಸಮುದ್ರಯಾನವು ತಮ್ಮ ಜಾತಿಯಲ್ಲಿ ನಿಷಿದ್ಧ’ವೆಂದು ವಿರೋಧಿಸುತ್ತಾರೆ. ಸಮುದ್ರಯಾನ ಮಾಡಿದರೆ ಬಂಧುಬಳಗದವರು ಗಾಂಧಿ ಜೊತೆಗೆ ಒಡನಾಡುವಹಾಗಿಲ್ಲ,ನೀರನ್ನುಕೂಡಕೊಡುವಂತಿಲ್ಲ. ಆದರೆ ಗಾಂಧೀಜಿ ಬಗ್ಗಲಿಲ್ಲ. ‘ಜಾತಿ ಭ್ರಷ್ಟನನ್ನಾಗಿಸಿ; ನಾನು ಹೆದರುವುದಿಲ್ಲ’ ಎಂದರು. ಜಾತಿಯಿಂದ ಹೊರಹಾಕಲ್ಪಟ್ಟರು; ಜಾತಿಯಿಲ್ಲದವರಾದರು. ಇಂತಹ ಅನೇಕ ಪ್ರಸಂಗಗಳು ಗಾಂಧಿ ಆತ್ಮಕಥನದಲ್ಲಿ ಹಾಸುಹೊಕ್ಕಾಗಿವೆ. ವೈರುಧ್ಯಗಳೂ ಇವೆ. ಬ್ರಹ್ಮಚರ್ಯದ ಪ್ರಯೋಗ, ಅಸ್ಪೃಶ್ಯ ಮೂಲದ ಕ್ರಿಶ್ಚಿಯನ್ ಉದ್ಯೋಗಿಯ ಕಕ್ಕಸ್ಸಿನ ಕೊಡವನ್ನು ಶುದ್ಧ ಮಾಡದೆ ಇದ್ದ ಕಸ್ತೂರ್ ಬಾ ಅವರ ಬಗ್ಗೆ ನಡೆದುಕೊಂಡ ಗಂಡಾಳಿಕೆಯ ದರ್ಪ, ಆನಂತರದ ಪಶ್ಚಾತ್ತಾಪ– ಇಂತಹ ಅನೇಕ ಆತ್ಮಾವಲೋಕನ ಮತ್ತು ಮಂಥನಗಳಿಂದ ಗಾಂಧಿ ಆತ್ಮಕಥನವು ವೈರುಧ್ಯಗಳನ್ನು ಮೀರಿದ ಮಾಹಿತಿ ಕೇಂದ್ರವೂ ಆಗಿದೆ.

ಗಾಂಧೀಜಿಯವರು ರೈಲಿನ ಮೂರನೇ ದರ್ಜೆ ಬೋಗಿಯಲ್ಲಿ ಪ್ರಯಾಣಿಸಿ ಭಾರತವನ್ನು ‘ಕಂಡುಕೊಂಡದ್ದು’ ಅವರ ಬದುಕಿನ ಒಂದು ಮುಖ್ಯಘಟ್ಟ; ತನ್ನ ‘ವರ್ಗ’ವು ಅನುಭವಿಸುತ್ತಿರುವ ವಿಶೇಷ ಸವಲತ್ತುಗಳ ಬಗ್ಗೆ ಆಗ ಮೂಡಿದ್ದು ಪಾಪಪ್ರಜ್ಞೆ. ಸೂಟುಧಾರಿಯಾಗಿದ್ದ ಗಾಂಧೀಜಿ ಅರೆಬೆತ್ತಲೆ ಉಡುಪಿಗೆ ಅಪವರ್ಗೀಕರಣಗೊಂಡದ್ದು ಮತ್ತು ಅರೆಬೆತ್ತಲೆ ಉಡುಪಿನ ವಲಯದಿಂದ ಬಂದ ಅಂಬೇಡ್ಕರ್ ಸೂಟುಧಾರಿಯಾದದ್ದು ಕೇವಲ ಉಡುಪಿನ ಬದಲಾವಣೆಯಲ್ಲ. ಗಾಂಧೀಜಿಯವರ ಪಾಪಪ್ರಜ್ಞೆಯ ಕೆಳಮುಖ ಚಲನೆ ಮತ್ತು ಅಂಬೇಡ್ಕರ್ ಅವರ ಜಾಗೃತ ಪ್ರಜ್ಞೆಯ ಮೇಲ್ಮುಖ ಚಲನೆಗೆ ಉಡುಪಿನ ಬದಲಾವಣೆ ಸಕಾರಾತ್ಮಕ ಚಾರಿತ್ರಿಕ ಸಂಕೇತ. ಎರಡೂ ಹೋರಾಟದ ಮಾದರಿಗಳು.

ಕೊನೆಗೊಂದು ಮಾತು: ಗಾಂಧೀಜಿ ಮತ್ತು ಅಂಬೇಡ್ಕರ್ ಅವರ ಬಾಳ ಕಥನವಿಲ್ಲದೆ ಭಾರತ ಕಥನ ಪೂರ್ಣವಾಗುವುದಿಲ್ಲ.



ವಾಚಕರ ವಾಣಿ

ಆಟ–ರಾಜಕೀಯ: ಪ್ರಬುದ್ಧ ವಿಶ್ಲೇಷಣೆ

ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಕ್ರೀಡಾಸ್ಫೂರ್ತಿ ಮಣ್ಣುಪಾಲಾದ ಕುರಿತ ‘ಪ್ರಜಾವಾಣಿ’ ಸಂಪಾದಕೀಯ (ಸೆ. 30) ನೇರವಾಗಿದೆ, ನಿಖರವಾಗಿದೆ ಮತ್ತು ಪ್ರಬುದ್ಧವಾಗಿದೆ. ಎರಡೂ ದೇಶಗಳ ತಂಡಗಳು ಪ್ರಜ್ಞಾಪೂರ್ವಕವಾಗಿಯೇ ಕ್ರಿಕೆಟ್ ಧರ್ಮಕ್ಕೆ ಅಧರ್ಮವೆಸಗಿದ್ದನ್ನು; ಸ್ವಾಧ್ಯಾಯ ನಾಶವಾಗಿರುವುದನ್ನೂ; ಒಂದು ತಪ್ಪನ್ನು ಇನ್ನೊಂದು ತಪ್ಪಿನಿಂದ ಸರಿಪಡಿಸುವ ಪ್ರಯತ್ನವನ್ನು ವಸ್ತುನಿಷ್ಠೆಯಿಂದ ಅವಲೋಕಿಸಲಾಗಿದೆ. ಎರಡೂ ದೇಶಗಳ ರಾಜಕೀಯ ಮುಖಂಡರು ಆಟಗಾರರ ಮುಖವಾಡ ತೊಟ್ಟು ಬ್ಯಾಟು ಮತ್ತು ಬಾಲನ್ನು ಹಿಡಿದಂತಿರುವ ವಿವರಗಳು ಕಣ್ಣಿಗೆ ಕಟ್ಟುವಂತಿವೆ. ಆಟಗಾರರ ವರ್ತನೆಯನ್ನು ಪ್ರಧಾನಿ ನರೇಂದ್ರ ಮೋದಿ ಸಮರ್ಥಿಸಿಕೊಂಡಿರುವ ರೀತಿಯನ್ನು ಸಂಪಾದಕೀಯ ಖಂಡಿಸಿರುವುದು, ಪಾಕಿಸ್ತಾನದ ಸಚಿವ ಮತ್ತು ಏಷ್ಯಾ ಕ್ರಿಕೆಟ್ ಕೌನ್ಸಿಲ್ ಅಧ್ಯಕ್ಷರಾದ ಮೊಹ್ಸಿನ್ ನಕ್ವಿ ಅವರ ಅಪ್ರಬುದ್ಧ ನಡವಳಿಕೆ ಯನ್ನು ಎತ್ತಿತೋರಿಸಿರುವ ರೀತಿ ಶ್ಲಾಘನೀಯ. ಎರಡೂ ದೇಶಗಳ ರಾಜಕೀಯ ಅಸ್ವಸ್ಥತೆಯನ್ನು ಮತ್ತು ಅತಿವರ್ತನೆಯನ್ನು ಕ್ರಿಕೆಟ್ ಮೂಲಕ ನೋಡಬಹುದೆಂದು ಸಂಪಾದಕೀಯ ಅದ್ಭುತವಾಗಿ ನಿರೂಪಿಸಿದೆ.

ಸಿ.ಎಚ್. ಹನುಮಂತರಾಯ, ಬೆಂಗಳೂರು

ಕಾಲ್ತುಳಿತ ತಡೆಗೆ ಮಾರ್ಗಸೂಚಿ ಅಗತ್ಯ

ತಮಿಳುನಾಡಿನ ಕರೂರಿನಲ್ಲಿ ನಡೆದ ಕಾಲ್ತುಳಿತ ದುರಂತದಿಂದ ದೇಶವು ಇನ್ನಾದರೂ ಎಚ್ಚೆತ್ತುಕೊಳ್ಳಬೇಕಿದೆ. ಸಮಾವೇಶ, ಪ್ರಚಾರಸಭೆ, ವಿಜಯೋತ್ಸವ, ಧಾರ್ಮಿಕ ಸಮಾರಂಭ ನಡೆಸಲು ಅನುಮತಿ ನೀಡುವಾಗ ಮುಂಜಾಗ್ರತಾ ಕ್ರಮಗಳ ಪಾಲನೆಗೆ ಹೊಸ ಮಾರ್ಗಸೂಚಿ ರೂಪಿಸಬೇಕಿದೆ. ವಿಶಾಲ ಪ್ರದೇಶದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳುವುದು, ವಿದ್ಯುತ್ ತಂತಿಗಳ ನಿರ್ವಹಣೆ, ಊಟ ಹಾಗೂ ಕುಡಿಯುವ ನೀರಿನ ವ್ಯವಸ್ಥೆ, ಪ್ರಥಮ ಚಿಕಿತ್ಸಾ ಸೌಲಭ್ಯ, ವೈದ್ಯರ ನಿಯೋಜನೆ, ಆ್ಯಂಬುಲೆನ್ಸ್ ಸೇವೆ... ಇಂತಹ ಮುಂಜಾಗ್ರತಾ ಮತ್ತು ಸುರಕ್ಷತಾ ಕ್ರಮಗಳನ್ನು ಕಡ್ಡಾಯಗೊಳಿಸಬೇಕಿದೆ.

ಹರೀಶ ಎಸ್., ಶಿರಾ

ಬಾಡಿಗೆದಾರರು ಹುಷಾರಾಗಿರಬೇಕು

ಸಣ್ಣ ನಿವೇಶನಗಳಲ್ಲಿ ಕಾನೂನುಬಾಹಿರವಾಗಿ ಬೆಂಕಿ ಪೊಟ್ಟಣದಂತೆ ಮಹಡಿಗಳು ತಲೆ ಎತ್ತುತ್ತಿವೆ. ಇದರಿಂದ ಕಟ್ಟಡ ವಾಲುವುದು, ಬಿರುಕು ಬಿಡುವುದು, ಕುಸಿಯುವುದು ವರದಿಯಾಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಕಣ್ಣುಮುಚ್ಚಿ ಕುಳಿತಿರುವುದೇ ಇದಕ್ಕೆ ಕಾರಣ. ಕಟ್ಟಡಗಳ ಮಾಲೀಕರಂತೂ ಹೆಚ್ಚಿನ ಬಾಡಿಗೆಯ ದುರಾಸೆಯಿಂದ ಕಟ್ಟಡಗಳನ್ನು ಕಟ್ಟುತ್ತಲೇ ಇರುತ್ತಾರೆ. ಅಂತಹ ಕಟ್ಟಡಗಳ ಆಸುಪಾಸಿನಲ್ಲಿ ನೆಲಸಿರುವ ಜನರ ಪ್ರಾಣ, ಆಸ್ತಿಪಾಸ್ತಿಗೆ ಅಪಾಯ ಇರುತ್ತದೆ. ಬಾಡಿಗೆದಾರರು ಕೂಡ ಮನೆ ಹುಡುಕುವಾಗ ಜಾಗರೂಕರಾಗಿರಬೇಕಿದೆ.

ಬಿ.ಎನ್. ಭರತ್, ಬೆಂಗಳೂರು

ಸರ್ವಸ್ಪರ್ಶಿ ನೈಜ ಕಥೆಗಳನ್ನು ಪೋಷಿಸಿ

‘ನಮ್ಮನ್ನು ಆಳುತ್ತಿರುವ ಕಥೆಗಳು’ ಲೇಖನ (ಲೇ: ಎಸ್. ನಟರಾಜ ಬೂದಾಳು, ಪ್ರ.ವಾ., ಸೆ. 30) ಓದಿದಾಗ ಆಶ್ಚರ್ಯ ವಾಯಿತು. ಕಥೆ ಹೇಳುವ ಮತ್ತು ಆಲಿಸುವ ಗುಣ ಮಾನವ ವಿಕಾಸದ ಭಾಗವಾಗಿದೆ. ತಮ್ಮ ಬದುಕಿಗೆ ಬೇಕಾದ ಜ್ಞಾನ, ಕೌಶಲ ಮತ್ತು ಮೌಲ್ಯಗಳನ್ನೆಲ್ಲ ಕಥೆಗಳ ಮೂಲಕ ಹಂಚಿಕೊಳ್ಳುತ್ತಲೇ ಜಗತ್ತಿನಾದ್ಯಂತ ನಾಗರಿಕತೆಗಳು ಬೆಳೆದುಬಂದಿವೆ. ಆ ಮೂಲಕವೇ ವ್ಯಕ್ತಿ–ಕುಟುಂಬ, ಊರು–ಕೇರಿ, ಸಮಾಜ–ದೇಶ ಎಲ್ಲವೂ ತಮ್ಮ ಸ್ಮೃತಿ ಮತ್ತು ಗುರುತುಗಳನ್ನು ಉಳಿಸಿಕೊಳ್ಳುವುದು. ಮಾನವನ ಕಲ್ಪನಾ ಸಾಮರ್ಥ್ಯ ಹಾಗೂ ಸೃಜನಶೀಲತೆಯನ್ನು ಸದಾ ವಿಸ್ತರಿಸುತ್ತ, ಕರುಣೆ, ಸಹನೆ, ಸಹಕಾರ, ಏಕತೆಯಂಥ ಮೌಲ್ಯಗಳನ್ನು ಪೋಷಿಸಿ ಸಮುದಾಯಗಳನ್ನು ಈಗಲೂ ಬೆಳೆಸುತ್ತಿರುವುದು ಕಥೆಗಳೇ. ಸಮಾಜದ ನಂಬಿಕೆ–ನಡವಳಿಕೆಗಳನ್ನು ನಿರಂತರ ಕಟ್ಟುವ ಹಾಗೂ ಮುರಿಯುವ ಪ್ರಕ್ರಿಯೆಗಳನ್ನು ಈ ಕಥೆಗಳು ನಿರ್ವಹಿಸುವುದರಿಂದ ಅಲ್ಲೊಂದು ಚಲನಶೀಲ ಸಂಸ್ಕೃತಿ ರೂಪುಗೊಳ್ಳುತ್ತದೆ. ಹೀಗಾಗಿ, ಕಥೆಗಳು ಯಾವುದೇ ಕಾಲ–ದೇಶದ ಸಹಜಗುಣವೇ ಸರಿ. ಸಮಸ್ಯೆಯಿರುವುದು ಕಥೆ ಎಂಬ ತತ್ತ್ವದಲ್ಲಲ್ಲ; ಕಥೆಯ ಸ್ವರೂಪ ಹಾಗೂ ಪರಿಣಾಮಗಳನ್ನು ನಿರ್ದೇಶಿಸುವ ಅಧಿಕಾರ ಹಾಗೂ ಸಾಂಸ್ಕೃತಿಕ ರಾಜಕಾರಣ ದಲ್ಲಿ. ಎಲ್ಲ ದೇಶ–ಕಾಲಗಳಲ್ಲೂ ಕಥೆಗಳನ್ನು ಕೆಲವರ ಅನುಕೂಲಕ್ಕಾಗಿ ಪ್ರಭಾವಿಸುವ ರಾಜಕೀಯ ಇದ್ದೇ ಇದೆ. ಜಗತ್ತಿನ ಯಾವುದೇ ಧರ್ಮ, ದೇಶ, ಸಿದ್ಧಾಂತವು ಇದಕ್ಕೆ ಹೊರತಲ್ಲ.

ಕೇಶವ ಎಚ್. ಕೊರ್ಸೆ, ಶಿರಸಿ

ಗಂಡಾ‘ಗುಂಡಿ’

ಹಳೇ ಮಾತು:
ಸಾವಿಲ್ಲದ ಮನೆಯ
ಸಾಸಿವೆ ತಾ...
ಹೊಸ ಮಾತು:
ಗುಂಡಿಗಳೇ ಇಲ್ಲದ
ಬೀದಿಗಳಲ್ಲಿ
ಓಡಾಡಿಕೊಂಡು ಬಾ!

ಎಸ್. ಭಗವತಿ, ಗೊರೂರು

ಕನ್ನಡ ಗೊತ್ತಿಲ್ಲದ, ಕಲಿಯದ ಉದ್ಧಟತನ

‘ಕನ್ನಡ್ ಗೊತ್ತಿಲ್ಲ’, ‘ಹಿಂದಿ ಮೆ ಭೋಲೊ’ – ಬೆಂಗಳೂರಿನಲ್ಲಿ ಪ್ರತಿದಿನ ಉತ್ತರ ಭಾರತೀಯರ ಇಂಥ ಉದ್ಧಟತನ ವಿಪರೀತವಾಗುತ್ತಿದೆ. ಬಹಳಷ್ಟು ಜನ ಎರಡು ಮೂರು ದಶಕಗಳಿಂದ ಇಲ್ಲೇ ನೆಲಸಿದ್ದರೂ ಒಂದೂ ಕನ್ನಡ ಪದ ಕಲಿತಿರುವುದಿಲ್ಲ. ಈ ವಿದ್ಯಮಾನವನ್ನು ಗಮನಿಸಿದರೆ, ಕೆಲವೇ ವರ್ಷಗಳಲ್ಲಿ ಕನ್ನಡ ವಿನಾಶದ ಅಂಚಿಗೆ ತಲಪಿದರೆ ಆಶ್ಚರ್ಯಪಡಬೇಕಾಗಿಲ್ಲ. ಗೋಕಾಕ್ ಮಾದರಿ ಚಳವಳಿ ಈಗ ಹಿಂದಿಗಿಂತಲೂ ಹೆಚ್ಚು ಅವಶ್ಯ ಎನಿಸುತ್ತದೆ.

ಹೆಚ್.ವಿ. ಶ್ರೀಧರ್, ಬೆಂಗಳೂರು

ಸಮೀಕ್ಷೆ: ಅವಸರದ ಹೆರಿಗೆ ಆಗದಿರಲಿ

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸಲು ಮನೆಗಳಿಗೆ ಆಗಮಿಸುತ್ತಿರುವ ಸಮೀಕ್ಷಾದಾರರು ತ್ವರಿತಗತಿಯಲ್ಲಿ ಸಮೀಕ್ಷೆ ಪೂರ್ಣಗೊಳಿಸುವ ಧಾವಂತ ತೋರುತ್ತಿದ್ದಾರೆ. ಸರ್ಕಾರದ ಆದೇಶ ಪಾಲಿಸುವ ಅವರ ಆತುರ ಸರಿಯಲ್ಲ. ನಿಯಮಗಳನ್ನು ಗಾಳಿಗೆ ತೂರಿ ಬಹುತೇಕ ಕಾಲಂಗಳನ್ನು ತಾವೇ ತಮಗೆ ಬೇಕಾದಂತೆ ಭರ್ತಿ ಮಾಡುತ್ತಿರುವ ಘಟನೆಗಳು ನಡೆಯುತ್ತಿವೆ. ಇತ್ತ ಮನೆಯವರಿಗೆ, ಸಮೀಕ್ಷಾದಾರರಿಗೆ ನೀಡಿರುವ ಆ್ಯಪ್‌ನಲ್ಲಿ ಏನಿದೆ ಎಂಬ ಮಾಹಿತಿ ತಿಳಿಯುವುದಿಲ್ಲ. ಸಮೀಕ್ಷೆಯು ಅವಸರದ ಹೆರಿಗೆ ಆಗದಿರಲಿ.

ಸುರೇಂದ್ರ ಪೈ, ಭಟ್ಕಳ

ಚುರುಮುರಿ

ಕ್ರಿಕೆಟ್ ಫೈಟ್



• ಮಣ್ಣೆ ರಾಜು

ಆ ಊರು, ಈ ಊರಿನ ತಂಡಗಳ ನಡುವಿನ ದಸರಾ ಕಪ್ ಕ್ರಿಕೆಟ್ ಪಂದ್ಯಾವಳಿ ಕಾವೇರಿತ್ತು. ಎರಡು ಊರಿನವರು ಬದ್ಧ ವೈರಿಗಳು. ತಟಸ್ಥ ಸ್ಥಳದಲ್ಲಿ ಕ್ರಿಕೆಟ್ ಆಡುವುದರ ಹೊರತಾಗಿ ಈ ಊರುಗಳ ನಡುವೆ ಯಾವುದೇ ಸ್ನೇಹ, ಸಂಬಂಧಗಳಿಲ್ಲ.

ಜಿದ್ದಾಜಿದ್ದಿ ಪಂದ್ಯವನ್ನು ಕಣ್ತುಂಬಿಕೊಳ್ಳಲು ಎರಡೂರಿನ ಪ್ರೇಕ್ಷಕರು ಕಿಕ್ಕಿರಿದು ತುಂಬಿದ್ದರು. ಒಂದೆರಡು ಓವರ್ ಆಗಿದ್ದಾಗ ಬೌಲರ್ ಎಲ್‌ಬಿಡಬ್ಲ್ಯುಗೆ ಅಪೀಲ್ ಮಾಡಿದ.

ಅಂಪೈರ್ ತಲೆಯಾಡಿಸಿದರು. ಕೋಪಗೊಂಡ ಬೌಲರ್ ಬ್ಯಾಟರ್‌ನತ್ತ ಅಸಹ್ಯ ಸನ್ನೆ ಮಾಡಿದ. ಬ್ಯಾಟರೂ ಅಂತದ್ದೇ ಮಾಡಿದ. ವಿಕೆಟ್ ಕೀಪರ್ ಕಿಚಾಯಿಸಿದ. ಸಿಟ್ಟಿಗೆದ್ದ ಬ್ಯಾಟರ್ ಕೀಪರ್‌ಗೆ ಬ್ಯಾಟ್‌ನಲ್ಲಿ ಬಡಿದ. ರೊಚ್ಚಿಗೆದ್ದ ಬೌಲರ್ ಬಿರುಸಾಗಿ ಬಾಲ್ ಎಸೆದ, ಬ್ಯಾಟರ್‌ನ ಎರಡು ಹಲ್ಲು ಉದುರಿದವು.

ಆಟಗಾರರು ಬ್ಯಾಟು, ಬಾಲು, ವಿಕೆಟ್ ಹಿಡಿದು ಬಡಿದಾಟಕ್ಕಿಳಿದರು. ಪ್ರೇಕ್ಷಕರೂ ಮೈದಾನಕ್ಕೆ ನುಗ್ಗಿ ಹೊಡೆದಾಡಿದರು.

ಪೊಲೀಸ್ ವ್ಯಾನ್, ಆ್ಯಂಬುಲೆನ್ಸ್ ಬಂದವು. ಪೊಲೀಸರು ಹೊಡೆದಾಟ ಬಿಡಿಸಿದರು. ಆ್ಯಂಬುಲೆನ್ಸ್‌ನವರು ಗಾಯಾಳುಗಳನ್ನು ಎತ್ತಿಕೊಂಡುಹೋದರು.

‘ಅಂಪೈರ್ ರಾಂಗ್ ಡಿಸಿಷನ್ ಕೊಟ್ಟಿದ್ದಕ್ಕೆ ಹೀಗಾಯ್ತು ಸಾರ್’ ಪೊಲೀಸ್ ಇನ್‌ಸ್ಪೆಕ್ಟರ್‌ಗೆ ಒಬ್ಬ ವರದಿ ಕೊಟ್ಟ.

‘ಅಂಪೈರ್‌ಗಳು ಎಲ್ಲಿ ಹೋದ್ರು?’ ಇನ್‌ಸ್ಪೆಕ್ಟರ್ ಕೇಳಿದರು.

‘ಇಂಜುರಿಯಾಗಿದ್ದ ಇಬ್ಬರೂ ಅಂಪೈರ್‌ಗಳನ್ನು ಆ್ಯಂಬುಲೆನ್ಸ್‌ನವರು ಎತ್ತಿಕೊಂಡು ಹೋದ್ರು ಸಾರ್’.

‘ಕಪ್ ನಮ್ದೇ...’ ಎಂದು ಎರಡು ಊರಿನವರು ಕಪ್ ಹಿಡಿದು ಕಿತ್ತಾಟ ಶುರು ಮಾಡಿದರು. ಅವರಿಂದ ಕಪ್ ಕಿತ್ತುಕೊಂಡ ಇನ್‌ಸ್ಪೆಕ್ಟರ್, ‘ಗೆದ್ದವರಿಗೆ ಕೊಡ್ತೀವಿ’ ಅಂದರು.

‘ಮತ್ತೆ ಮ್ಯಾಚ್ ಆಡಿಸ್ತೀರಾ ಸಾರ್? ಆಟಗಾರರು ಗಾಯಗೊಂಡು ಆಸ್ಪತ್ರೆ ಸೇರಿದ್ದಾರಲ್ಲಾ’ ಅಂದ.

‘ಆಟಗಾರರು ಚೇತರಿಸಿಕೊಂಡ ನಂತರ ಪೊಲೀಸ್ ಕಾವಲಿನಲ್ಲಿ ಸೌಹಾರ್ದ ಕ್ರಿಕೆಟ್ ಪಂದ್ಯ ಆಡಿಸ್ತೀವಿ...’ ಎಂದು ಹೇಳಿ ಇನ್‌ಸ್ಪೆಕ್ಟರ್ ಕಪ್ ತಗೊಂಡು ಜೀಪ್ ಹತ್ತಿ ಹೊರಟರು.

ಸಂಗತ

ಸಮೀಕ್ಷೆ: ಪ್ರಶ್ನೆ ಕೇಳುತ್ತ, ಎದುರಿಸುತ್ತ...

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಸಮೀಕ್ಷಾದಾರರು ಪ್ರಶ್ನೆ ಕೇಳುವುದರ ಜೊತೆಗೆ ತಾವೂ ಪ್ರಶ್ನೆಗಳನ್ನೂ ಎದುರಿಸಬೇಕಾಗುತ್ತದೆ. ಅದರಲ್ಲೂ, ಜಾತಿಯ ಪ್ರಶ್ನೆ!

• ಗುರುಪ್ರಸಾದ್ ಕಂಟಲಗೆರೆ

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಭಾಗವಾಗಿ, ಮೊದಲ ದಿನ ಒಂದು ಮನೆಯ ಮುಂದೆ ಬೆಳಗ್ಗೆಯೇ ನಿಂತೆ. ನನ್ನ ಉಡುಗೆ ತೊಡುಗೆ, ಸಮೀಕ್ಷಾದಾರರಿಗೆ ನೀಡಿರುವ ಬಿಳಿ ಟೋಪಿ, ಗುರುತಿನ ಕಾರ್ಡ್, ಇದೆಲ್ಲ ನೋಡಿ ಮನೆಯವರು ಒಳಗೆ ಕರೆದರಾದರೂ, ಕುರ್ಚಿಯನ್ನು ಆಚೆಯೇ ಹಾಕಿ, ಮಾಹಿತಿ ನೀಡಿ, ಕಳುಹಿಸಿದರು. ಬನ್ನಿ, ತಿಂಡಿ ತಿನ್ನೋಣವೆಂದು ಮಾತಿಗೆ ಕರೆದರಾದರೂ ಬಲವಂತಪಡಿಸಲಿಲ್ಲ.

ಎರಡನೇ ದಿನ ಮತ್ತೊಂದು ಮನೆಗೆ ಹೋದೆ. ಆ ಮನೆಗೆ ಹೋಗುವ ಮುಂಚೆಯೇ ಆ ಮನೆಯ ಹಿರಿಯ ಸದಸ್ಯರು, ಬೇರೆ ಮನೆಯ ಬಾಗಿಲಲ್ಲಿ ಕೂತು ಸಮೀಕ್ಷೆ ಮಾಡುತ್ತಿದ್ದ ನನ್ನನ್ನು ‘ನಮ್ಮ ಮನೆಗೂ ಬನ್ನಿ ಸರ್’ ಎಂದು ಸ್ವಾಗತಿಸಿದ್ದರು. ಒಂದೆರಡು ಮನೆ ಮುಗಿಸಿ ಆ ಮನೆಗೆ ಹೋದೆ. ವಯಸ್ಸಾದ ದಂಪತಿ, ಮಗ–ಸೊಸೆ, ಮೊಮ್ಮಗ ಎಲ್ಲ ಇದ್ದ ತುಂಬು ಕುಟುಂಬ. ‘ಆಚೆ ಕುರ್ಚಿ ಹಾಕಿ ಸಾಕು, ಇಲ್ಲೇ ಗಾಳಿ-ಬೆಳಕು, ನೆಟ್‌ವರ್ಕ್ ಎಲ್ಲಾ ಇದೆ’ ಎಂದರೂ ಬಿಡದೆ, ‘ಒಳಗೆ ಬನ್ನಿ’ ಎಂದು ನಡುಮನೆಯ ಕುರ್ಚಿ ಮೇಲೆ ಕೂರಿಸಿದರು.

ಮನೆಯ ಮುಖ್ಯಸ್ಥನ ತಂದೆಯ ವಿವರ, ಮಕ್ಕಳು ಮೊಮ್ಮಕ್ಕಳು, ವಿವಾಹವಾದಾಗಿನ ವಯಸ್ಸು, ಜಾತಿ, ಉಪಜಾತಿ, ಯಾಕೆ ಓದಲಿಲ್ಲ, ಆಡು– ಕುರಿ– ಕೋಳಿ ಎಷ್ಟಿವೆ, ಶೌಚಾಲಯ ಒಳಗಿದೆಯಾ, ಹೊರಗಿದೆಯಾ, ಸೌಲಭ್ಯಗಳು ಯಾಕೆ ಸಿಗಲಿಲ್ಲ, ರೋಗಗಳು ಇವೆಯಾ, ಆಸ್ತಿ ಕಳೆದುಕೊಂಡಿದ್ದೀರಾ, ಪರಿಹಾರ ಸಿಕ್ಕಿದೆಯಾ, ಇತ್ಯಾದಿ ಖಾಸಗಿಯೂ ಆಪ್ತವೂ ಆದ ಪ್ರಶ್ನೆಗಳಿಗೆ ಉತ್ತರ ಕೇಳಿ ಪಡೆಯುವಷ್ಟರಲ್ಲಿ ಸಮೀಕ್ಷಾದಾರನಾದ ನನಗೂ, ಸಮೀಕ್ಷೆಗೆ ಒಳಪಡುವವರ ನಡುವೆಯೂ ಅವಿನಾಭಾವ ಸಂಬಂಧ ಉಂಟಾಗಿರುತ್ತದೆ; ಒಬ್ಬರ ಗೋಳು ಇನ್ನೊಬ್ಬರು ಕೇಳುವಂತೆ. ಆ ಮನೆಯ ಒಡತಿ ‘ಯಾಕೆ ಕೇಳ್ತೀರ ಸಾ, ನಮ್ಮವ ಅಕ್ಕಿ ಕಾರ್ಡ್ ಕಿತ್ತಾಕ್ತರೆ, ಅವರು ಕೊಡೋದು ಬೇಡ ಕಿತ್ಕೊಣೋದು ಬೇಡ’ ಎಂದು ಆಗಿಂದಾಗ್ಗೆ ತಮ್ಮ ಆತಂಕವನ್ನು ಪ್ರಕಟಿಸುತ್ತಲೇ ಇದ್ದರು. ಇವೆಲ್ಲದ್ದರ ನಡುವೆ ಆ ಮನೆಯ ಸೊಸೆ, ನಾನು ಬೇಡ ಎಂದರೂ, ತಿಂಡಿ ತಂದುಕೊಟ್ಟರು. ಮನೆಯ ಯಜಮಾನರೂ ‘ತಿನ್ನಿ ಸರ್, ಬೆಳಗ್ಗೇನೆ ಬಂದಿದೀರಿ’ ಎಂದು ಪ್ರೀತಿಯಿಂದ ಒತ್ತಾಯಿಸಿದರು. ಅವರ ಪ್ರೀತಿ–ಆದರಕ್ಕೆ ಸೋಲಲೇಬೇಕಾಯಿತು. ಆ ವೇಳೆಗೆ ಸಮೀಕ್ಷೆಯ ಅಂತಿಮ ಹಂತ ತಲಪಿಯಾಗಿತ್ತು. ಪ್ರೀತಿ, ವಿಶ್ವಾಸ ತುಂಬಿರುವ ಅವರ ಕೂಡುಕುಟುಂಬದ ಬಗ್ಗೆ ನಾನೂ ಮೆಚ್ಚುಗೆಯ ಮಾತಾಡಿದೆ.



ನನ್ನ ಅರವತ್ತೂ ಪ್ರಶ್ನೆಗಳಿಗೆ ತನ್ಮಯತೆಯಿಂದ ಉತ್ತರಿಸಿದ ಅವರು, ನನ್ನನ್ನು ಒಂದಾದರೂ ಪ್ರಶ್ನೆ ಕೇಳಲೇಬೇಕಲ್ಲವೇ? ಅವಿನಾಭಾವ ಸಂಬಂಧ ಏರ್ಪಟ್ಟ ನಂತರವೂ ಅವರು ಕೇಳದಿದ್ದರೆ, ನಾನು ಹೇಳದಿದ್ದರೆ ಹೇಗೆ?

‘ನಿಮ್ದು ಯಾವ ಜಾತಿ ಸರ್?’ ಎಂಬ ಪ್ರಶ್ನೆ ಬಂದೇ ಬಿಟ್ಟಿತು.

ಸಮೀಕ್ಷೆ ಸಂದರ್ಭದಲ್ಲಿ ಇಂಥ ಪ್ರಶ್ನೆಯನ್ನು ಎದುರಿಸಬೇಕಾದ ಸಂದರ್ಭ ಸಾಮಾನ್ಯವಾಗಿ ಬಂದಿತ್ತಾದರೂ, ಆಗೆಲ್ಲ ನಾನು ಮನೆಯ ಆಚೆ ಇರುತ್ತಿದ್ದೆ. ಇಲ್ಲಿ ಪ್ರಶ್ನೆ ಬಂದಾಗ ನಾನು ಅವರ ಮನೆಯೊಳಗಿದ್ದೆ. ಅಲ್ಲೇ ತಿಂಡಿ ತಿಂದು ಕೈತೊಳೆದಿದ್ದೆ.

‘ನನ್ನದು ಸರ್ಕಾರಿ ಕೆಲಸ. ಇದನ್ನೆಲ್ಲ ನೀವು ಕೇಳುವಂತಿಲ್ಲ’ ಎಂದು ಕಾನೂನಾತ್ಮಕ ಪರಿಹಾರ ಹುಡುಕಿಕೊಳ್ಳಬಹುದಾದರೂ, ಅವರ ಜಾತಿ–ಉಪಜಾತಿಯನ್ನೆಲ್ಲ ಕೇಳಿ ಬರೆದುಕೊಳ್ಳುವ ಸಮೀಕ್ಷಾದಾರನಿಗೆ ಅಷ್ಟರಲ್ಲಾಗಲೇ ಸಂಬಂಧ ಕಾನೂನು ಕಟ್ಟಳೆ ಮೀರಿ ಬೆಳೆದಿರುತ್ತದೆ. ಆ ಪ್ರಶ್ನೆಗೆ ಉತ್ತರಿಸುವ ನೈತಿಕತೆ ಉದ್ಭವವಾಗಿರುತ್ತದೆ. ನನಗೆ ತಳಮಳ ಶುರುವಾಯಿತು. ಅವರ ಅಷ್ಟೂ ಹೊತ್ತಿನ ಸಂತೋಷ, ನಿರುಮ್ಮಳತೆಯನ್ನು ಹಾಗೇ ಉಳಿಸುವ ಒಂದು ಜಾತಿಯ ಹೆಸರು ಹೇಳಿ ಕೈತೊಳೆದುಕೊಳ್ಳಲೆ? ನನ್ನ ನಿಜ ಜಾತಿಯನ್ನು ಬಹಿರಂಗಗೊಳಿಸಿ ಅವರ ಆದರ ಆತಿಥ್ಯಕ್ಕೆ ಅವರಲ್ಲೇ ಪಶ್ಚಾತ್ತಾಪ ಉಂಟಾಗುವಂತೆ ಮಾಡಲೆ? ಆತ್ಮಸಾಕ್ಷಿಗೆ ವಿರುದ್ಧವಾಗಿ ಸುಳ್ಳು ಹೇಳಿ ಅವರನ್ನು ಸಿಹಿಯಲ್ಲಿ ಇರಿಸಲೇ ಅಥವಾ ನಿಜವನ್ನೇ ಹೇಳಿ ಕಹಿಯಾಗಿಸಲೆ? ಗೊಂದಲಕ್ಕೆ ಬಿದ್ದೆ.

ಆ ಮನೆಯಿಂದ ಆಚೆ ಬರುವಾಗ... ಒಂದು ಘಟನೆ ನೆನಪಾಗುತ್ತಿತ್ತು: ಶುಭ್ರ ಬಟ್ಟೆ ಧರಿಸಿ ನಡೆದು ಹೋಗುತ್ತಿದ್ದ ಬಾಲಕ ಅಂಬೇಡ್ಕರ್ ಮತ್ತು ಆತನ ಸೋದರರನ್ನು ದಾರಿಯಲ್ಲಿ ಹೋಗುತ್ತಿದ್ದ ಎತ್ತಿನ ಗಾಡಿಯಾತ ಬಂಡಿಯಲ್ಲಿ ಕೂರಿಸಿಕೊಂಡು ಹೋಗುವಾಗ, ಮಾತಿನ ಮಧ್ಯೆ ಜಾತಿ ಸ್ಫೋಟಗೊಂಡು ಬಂಡಿಯ ಮೂಕು ಎತ್ತಿ ಕಸದ ಗೊಬ್ಬರದಂತೆ ಉರುಳಿಸಿದ ಘಟನೆ...

ಜಾತಿ ಜಿಜ್ಞಾಸೆಯನ್ನೇ ತಲೆಯಲ್ಲಿ ತುಂಬಿಕೊಂಡು ಸಾಗುತ್ತಿದ್ದ ನನ್ನನ್ನು ಮತ್ತೆ ಹಿಡಿದು ನಿಲ್ಲಿಸಿದ್ದು, ನಾನು ಸಮೀಕ್ಷೆ ನಡೆಸಿದ ಮೊದಲ ಮನೆಯಲ್ಲಿ ಸಿಕ್ಕ ಯುವಕ. ಆತನಿಗೆ ಆ ವೇಳೆಗಾಗಲೇ ಹೇಗೋ ನನ್ನ ಜಾತಿ ಪತ್ತೆಯಾಗಿ, ‘ನಿಮ್ಮ ಉಡುಗೆ ತೊಡುಗೆ ನೋಡಿ, ನೀವ್ಯಾರೋ ಮೇಲ್ಜಾತಿಯವರೆನಿಸಿ ತಿಂಡಿಗೆ ಕರೆಯಲಿಲ್ಲ ಸರ್. ನಮ್ಮ ಮನೆ ಅಷ್ಟೊಂದು ಚೆನ್ನಾಗಿಯೂ ಇರಲಿಲ್ಲ. ಹಾಗಾಗಿ, ಒಳಗೂ ಕರೆಯದೆ ಆಚೆಯೇ ಕೂರಿಸಿದೆವು. ಇವತ್ತಾದರೂ ಬನ್ನಿ ಸರ್’ ಎಂದು ಒತ್ತಾಯಿಸತೊಡಗಿದ.

ವಿದೇಶಿ ಸಿನಿಮಾಗಳ ಮೇಲೆ ಅಮೆರಿಕದಲ್ಲಿ ಶೇ 100ರಷ್ಟು ಸುಂಕ: ಅಮೆರಿಕ ಅಧ್ಯಕ್ಷ ಟ್ರಂಪ್ ಘೋಷಣೆ

ಭಾರತೀಯ ಚಿತ್ರೋದ್ಯಮಕ್ಕೆ ಕಂಟಕ?

40% ಭಾರತೀಯ ಚಲನಚಿತ್ರಗಳು ಹೊರದೇಶಗಳಲ್ಲಿ ಗಳಿಸುವ ಒಟ್ಟು ಹಣದಲ್ಲಿ ಅಮೆರಿಕದ ಪಾಲು

85% ತೆಲುಗು ಸಿನಿಮಾಗಳ ವಿದೇಶಿ ಗಳಿಕೆಯಲ್ಲಿ ಅಮೆರಿಕದ ಪಾಲು

300-400 ಹಿಂದಿ ಮತ್ತು ತೆಲುಗು ಚಿತ್ರಗಳು ಅಮೆರಿಕದಲ್ಲಿ ಪ್ರದರ್ಶನ ಕಾಣುವ ಚಿತ್ರ ಮಂದಿರಗಳ ಸಂಖ್ಯೆ

17 ಕೋಟಿ ಡಾಲರ್ (₹1,510 ಕೋಟಿ) 2024ರಲ್ಲಿ ಭಾರತದ ಸಿನಿಮಾಗಳು ಅಮೆರಿಕದಲ್ಲಿ ಮಾಡಿರುವ ಅಂದಾಜು ಗಳಿಕೆ

2.2 ಕೋಟಿ ಡಾಲರ್ (₹195 ಕೋಟಿ) ತೆಲುಗಿನ ಬಾಹುಬಲಿ ಸಿನಿಮಾ ಅಮೆರಿಕದ ಬಾಕ್ಸ್ ಆಫೀಸ್‌ನಲ್ಲಿ ಮಾಡಿದ ಗಳಿಕೆ

1.85 ಕೋಟಿ (₹164 ಕೋಟಿ) ಕಲ್ಕಿ 2898 ಎಡಿ ಚಿತ್ರ ಅಮೆರಿಕದಲ್ಲಿ ಗಳಿಸಿದ್ದ ಮೊತ್ತ

10 ಕೋಟಿ ಡಾಲರ್ (₹888 ಕೋಟಿ) ಅಮೆರಿಕದಲ್ಲಿ ಭಾರತೀಯರು ಸಿನಿಮಾ ವೀಕ್ಷಣೆಗೆ ಪ್ರತಿ ವರ್ಷ ಮಾಡುವ ಅಂದಾಜು ವೆಚ್ಚ

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಹೊರದೇಶಗಳ ಮೇಲೆ 'ಸುಂಕ ಸಮರ'ವನ್ನು ಮುಂದುವರಿಸಿದ್ದಾರೆ. ಅಮೆರಿಕದ ಹೊರಗೆ ತಯಾರಾಗುವ ಎಲ್ಲ ಚಿತ್ರಗಳ ಮೇಲೆ ಶೇ 100ರಷ್ಟು ಸುಂಕ ವಿಧಿಸುವುದಾಗಿ ಟ್ರಂಪ್ ಘೋಷಿಸಿದ್ದಾರೆ. ಇದು ಭಾರತೀಯ ಚಿತ್ರರಂಗದ ಮೇಲೆ ಎಂಥ ಪರಿಣಾಮ ಉಂಟುಮಾಡಬಹುದು ಎನ್ನುವ ಬಗ್ಗೆ ಸಹಜವಾಗಿಯೇ ಆತಂಕ ಮೂಡಿದೆ. ದೇಶದಲ್ಲಿ ಬಾಲಿವುಡ್ (ಹಿಂದಿ) ಮತ್ತು ಟಾಲಿವುಡ್ (ತೆಲುಗು) ಅತಿ ದೊಡ್ಡ ಚಿತ್ರೋದ್ಯಮಗಳಾಗಿದ್ದು, ಈ ಎರಡೂ ಭಾಷೆಗಳ ಚಿತ್ರಗಳ ಗಳಿಕೆಗೆ ಭಾರಿ ಪೆಟ್ಟು ಬೀಳುವ ಸಾಧ್ಯತೆ ಇದೆ ಎನ್ನುವ ವಿಶ್ಲೇಷಣೆಗಳು ಕೇಳಿಬರುತ್ತಿವೆ

• ಸೂರ್ಯನಾರಾಯಣ ವಿ., ಬಿ.ವಿ.ಶ್ರೀನಾಥ್

'ಮಗುವಿನ ಕೈಯಿಂದ ಕ್ಯಾಂಡಿ ಕಸಿದುಕೊಳ್ಳುವಂತೆ, ಸಿನಿಮಾ ಉದ್ಯಮವನ್ನು ಇತರ ದೇಶಗಳು ಅಮೆರಿಕದಿಂದ ಕಸಿದುಕೊಂಡಿವೆ...'

ಈ ಮಾತನ್ನು ಹೇಳಿದವರು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್. ಅಮೆರಿಕದಿಂದ ಹೊರಗೆ ತಯಾರಾಗುವ ಚಿತ್ರಗಳಿಗೆ ಶೇ 100ರಷ್ಟು ಸುಂಕ ವಿಧಿಸುವ ಬಗ್ಗೆ ಘೋಷಿಸುವ ಸಂದರ್ಭದಲ್ಲಿ ಅವರು ಪರಿಸ್ಥಿತಿಯನ್ನು ವಿಶ್ಲೇಷಿಸಿರುವ ಪರಿ ಇದು.

ಮೊನ್ನೆಯಷ್ಟೇ ಹೊಸ ಎಚ್‌-1ಬಿ ವೀಸಾ ಅರ್ಜಿಗಳ ಮೇಲೆ ಒಂದು ಲಕ್ಷ ಡಾಲರ್ ಶುಲ್ಕ ಘೋಷಿಸಿ ಭಾರತದಲ್ಲಿ ತಲ್ಲಣ ಮೂಡಿಸಿದ್ದ ಟ್ರಂಪ್, ಈಗ ಜನರ ನೆಚ್ಚಿನ ಮನರಂಜನಾ ಮಾಧ್ಯಮವಾದ ಸಿನಿಮಾ ಮೇಲೂ ಕೆಂಗಣ್ಣು ಬೀರಿದ್ದಾರೆ. ಅಮೆರಿಕದ ಹೊರಗಿನ ಚಿತ್ರಗಳ ಮೇಲೆ ಶೇ 100ರಷ್ಟು ಸುಂಕ ಹೇರುವ ಅವರ ನಿರ್ಧಾರದಿಂದ ಭಾರತೀಯ ಚಿತ್ರರಂಗದ ಮೇಲೆ, ಮುಖ್ಯವಾಗಿ ಹಿಂದಿ ಮತ್ತು ತೆಲುಗು ಚಿತ್ರಗಳ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಬಹುದು. ಹೊರದೇಶಗಳಲ್ಲಿ ನಿರ್ಮಾಣವಾಗುವ ಇಂಗ್ಲಿಷ್ ಚಿತ್ರಗಳ ಮೇಲೂ ಇದು ಹೆಚ್ಚು ಪರಿಣಾಮ ಬೀರಲಿದೆ. ಶೇ 100ರಷ್ಟು ಸುಂಕ ಯಾವಾಗಿನಿಂದ ಜಾರಿಯಾಗಲಿದೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.

ವ್ಯಾಪಾರದ ದೃಷ್ಟಿಯಿಂದ ದೇಶದಲ್ಲಿ ಹಿಂದಿ ಮತ್ತು ತೆಲುಗು ಚಿತ್ರರಂಗಗಳು ಮುಂಚೂಣಿಯಲ್ಲಿದ್ದು, ಈ ಚಿತ್ರಗಳಿಗೆ ಅಮೆರಿಕದಲ್ಲಿಯೂ ದೊಡ್ಡ ಸಂಖ್ಯೆಯ ಪ್ರೇಕ್ಷಕರಿದ್ದಾರೆ. ಅಮೀರ್ ಖಾನ್, ಶಾರುಕ್ ಖಾನ್ ಸೇರಿದಂತೆ ಹಿಂದಿ ಚಿತ್ರರಂಗದ ಹಲವರು ಅಮೆರಿಕದಲ್ಲಿಯೂ ಅಪಾರ ಜನಪ್ರಿಯತೆ ಹೊಂದಿದ್ದಾರೆ. ಆಂಧ್ರಪ್ರದೇಶದ ಉಪಮುಖ್ಯಮಂತ್ರಿಯೂ ಆಗಿರುವ ಪವನ್ ಕಲ್ಯಾಣ್ ನಟಿಸಿರುವ 'ದೇ ಕಾಲ್ ಹಿಮ್ ಓಜಿ' ತೆಲುಗು ಚಿತ್ರವು ಬಿಡುಗಡೆಯಾದ ಮೊದಲೆರಡು ದಿನದಲ್ಲೇ ವಿದೇಶಗಳಲ್ಲಿ ₹48 ಕೋಟಿ ಗಳಿಸಿತ್ತು. ಅದರಲ್ಲಿ ಅಮೆರಿಕದ ಪಾಲು ₹37 ಕೋಟಿ. ರಜನಿಕಾಂತ್ ಅವರ 'ಕೂಲಿ' ಚಿತ್ರವು 2 ಕೋಟಿ ಡಾಲರ್ (₹178 ಕೋಟಿ) ಗಳಿಸಿತ್ತು. ಈ ಪೈಕಿ ಶೇ 35ಕ್ಕಿಂತಲೂ ಹೆಚ್ಚಿನ ಪಾಲು ಅಮೆರಿಕದಿಂದಲೇ ಬಂದಿತ್ತು. ಈ ವರ್ಷದ ಬಾಲಿವುಡ್‌ನ ಅತಿ ಯಶಸ್ವಿ ಚಿತ್ರವಾದ 'ಛಾವಾ' ವಿದೇಶಗಳಿಂದ 1 ಕೋಟಿ ಡಾಲರ್ (₹88.84 ಕೋಟಿ) ಗಳಿಕೆ ಮಾಡಿತ್ತು. ಅದರಲ್ಲಿ 64 ಲಕ್ಷ ಡಾಲರ್ (₹57 ಕೋಟಿ) ಅಮೆರಿಕ–ಕೆನಡಾದಿಂದಲೇ ಬಂದಿತ್ತು. ಭಾರತದ ಸ್ಟಾರ್ ನಟರ ಚಿತ್ರಗಳು, ದೊಡ್ಡ ಬಂಡವಾಳ, ಉತ್ತಮ ಕಥೆಯನ್ನು ಆಧರಿಸಿದ ಚಿತ್ರಗಳು ಕೂಡ ಹಾಕಿದ ಬಂಡವಾಳ ವಾಪಸ್ ಪಡೆಯಲು ಮತ್ತು ಲಾಭ ಕಾಣಲು ಅಮೆರಿಕದ ಮಾರುಕಟ್ಟೆಯನ್ನು ಅವಲಂಬಿಸಿವೆ.

ಭಾರತವೂ ಸೇರಿದಂತೆ ಅಮೆರಿಕದ ಹೊರಗೆ ನಿರ್ಮಾಣವಾಗಿರುವ ಚಿತ್ರಗಳನ್ನು ಅಲ್ಲಿ ಬಿಡುಗಡೆ ಮಾಡಬೇಕು ಎಂದರೆ, ಚಿತ್ರ ನಿರ್ಮಾಪಕರು, ಪ್ರದರ್ಶಕರು ಶೇ 100ರಷ್ಟು ಸುಂಕ ತೆರಬೇಕಾಗುತ್ತದೆ. ಇದರಿಂದ ಟಿಕೆಟ್ ಬೆಲೆ ದುಪ್ಪಟ್ಟಾಗುತ್ತದೆ. ಪರಿಣಾಮವಾಗಿ, ಪ್ರೇಕ್ಷಕರು ಸಿನಿಮಾದಿಂದ ದೂರ ಉಳಿಯಬಹುದು ಎನ್ನುವ ಆತಂಕ ಎದುರಾಗಿದೆ.

ಆಧಾರ: ಪಿಟಿಐ, ರಾಯಿಟರ್ಸ್, ಮಾಧ್ಯಮ ವರದಿಗಳು

ಅಮೆರಿಕದ ಮಾರುಕಟ್ಟೆ ಏಕೆ ಮುಖ್ಯ?

ಭಾರತದ ಚಿತ್ರಗಳಿಗೆ ವಿದೇಶಗಳ ಪೈಕಿ ಅಮೆರಿಕ, ಕೆನಡಾ, ಉತ್ತರ ಅಮೆರಿಕ ದೊಡ್ಡ ಮಾರುಕಟ್ಟೆಯಾಗಿದ್ದು, ಜಾಗತಿಕ ಗಳಿಕೆಯಲ್ಲಿ ಹೆಚ್ಚಿನ ಪಾಲು ತಂದುಕೊಡುತ್ತಿವೆ. 2000 ಇಸವಿಯವರೆಗೂ ಭಾರತದ ಚಿತ್ರಗಳು ಅಮೆರಿಕ, ಇಂಗ್ಲೆಂಡ್ ಮತ್ತು ಗಲ್ಫ್ ರಾಷ್ಟ್ರಗಳನ್ನೇ ಹೆಚ್ಚಾಗಿ ಅವಲಂಬಿಸಿತ್ತು. ನಂತರ ಹಲವು ದೇಶಗಳಲ್ಲಿ ಮಾರುಕಟ್ಟೆ ಸೃಷ್ಟಿಯಾದರೂ ಭಾರತದ ಚಿತ್ರಗಳಿಗೆ ಇಂದಿಗೂ ಅಮೆರಿಕ ದೊಡ್ಡ ಮಾರುಕಟ್ಟೆಯಾಗಿಯೇ ಉಳಿದಿದೆ. ಒಂದು ಅಂದಾಜಿನಂತೆ, ಭಾರತೀಯ ಚಿತ್ರಗಳು ವಿದೇಶಗಳಿಂದ ಗಳಿಸುತ್ತಿರುವ ಮೊತ್ತದಲ್ಲಿ ಅಮೆರಿಕದಿಂದಲೇ ಶೇ 40ರಷ್ಟು ಸಂಗ್ರಹವಾಗುತ್ತಿದೆ. ಅಮೆರಿಕದಲ್ಲಿರುವ ಭಾರತೀಯರು ಹಿಂದಿ, ತೆಲುಗು, ತಮಿಳು, ಮಲಯಾಳ, ಪಂಜಾಬಿ ಹಾಗೂ ಬಂಗಾಳಿ ಸಿನಿಮಾಗಳನ್ನು ನೋಡಲು ಪ್ರತಿವರ್ಷ 10 ಕೋಟಿ ಡಾಲರ್‌ವರೆಗೆ (₹888 ಕೋಟಿ) ವೆಚ್ಚ ಮಾಡುತ್ತಿದ್ದಾರೆ ಎಂದು ಭಾರತದ ನಿರ್ಮಾಪಕರ ಕೂಟವು ಅಂದಾಜಿಸಿದೆ.

ಟಿಕೆಟ್ ದರ ದುಪ್ಪಟ್ಟು

ಟ್ರಂಪ್ ಆಡಳಿತದ ನಿರ್ಧಾರದಿಂದ ಅಮೆರಿಕದಲ್ಲಿ ಭಾರತೀಯರ ಚಲನಚಿತ್ರಗಳ ಟಿಕೆಟ್ ದರ ದುಪ್ಪಟ್ಟು ಆಗಲಿದೆ ಎಂದು ಸಿನಿಮಾ ಕ್ಷೇತ್ರದಲ್ಲಿ ತೊಡಗಿರುವವರು ಅಂದಾಜಿಸಿದ್ದಾರೆ.

ಅಮೆರಿಕದಲ್ಲಿ ಬಿಡುಗಡೆಯಾಗುವ ತೆಲುಗು, ಹಿಂದಿ ಭಾಷೆಯ ದೊಡ್ಡ ಬಜೆಟ್‌ನ ಸಿನಿಮಾಗಳ ಪ್ರದರ್ಶನದ ಟಿಕೆಟ್ ದರ ಸಾಮಾನ್ಯವಾಗಿ 15ರಿಂದ 20 ಡಾಲರ್‌ವರೆಗೆ ಇರುತ್ತದೆ. ಶೇ 100ರಷ್ಟು ಸುಂಕ ವಿಧಿಸಿದರೆ ಅದು 30ರಿಂದ 40 ಡಾಲರ್‌ವರೆಗೆ ಏರಿಕೆಯಾಗಬಹುದು ಎಂದು ಹೇಳಲಾಗುತ್ತಿದೆ. ಇಷ್ಟು ದರ ನೀಡಿ ಸಿನಿಮಾ ನೋಡಲು ಜನರು ಚಿತ್ರಮಂದಿರಗಳಿಗೆ ಬಾರದೇ ಇರಬಹುದು. ಹೀಗಾದಾಗ, ಚಿತ್ರಗಳ ಹಂಚಿಕೆದಾರರು, ನಿರ್ಮಾಪಕರು ಹೆಚ್ಚಿನ ನಷ್ಟ ಅನುಭವಿಸಲಿದ್ದಾರೆ ಎಂಬ ಕಳವಳವೂ ವ್ಯಕ್ತವಾಗಿದೆ.

ಒಟಿಟಿ ವೇದಿಕೆಯಲ್ಲಿ ಪ್ರಸಾರವಾಗುವ ಚಿತ್ರಗಳಿಗೂ ಶೇ 100ರಷ್ಟು ಸುಂಕ ಅನ್ವಯವಾಗಲಿದೆ ಎಂದು ಹೇಳಲಾಗುತ್ತಿದೆ.

ಟಾಲಿವುಡ್‌ಗೆ ಹೊಡೆತ?

ಅಮೆರಿಕದಲ್ಲಿರುವ ಭಾರತೀಯರಲ್ಲಿ ತೆಲುಗರ ಸಂಖ್ಯೆ ಗಣನೀಯವಾಗಿದೆ (ಸುಮಾರು 12 ಲಕ್ಷ). ತೆಲುಗು ಚಿತ್ರಗಳಿಗೆ ಅಮೆರಿಕ ದೊಡ್ಡ ಮಾರುಕಟ್ಟೆಯಾಗಿದೆ. ಹಿಂದಿ ಚಿತ್ರಗಳಿಗೆ ಸಮನಾಗಿ, ಹೊಸ ತೆಲುಗು ಚಿತ್ರಗಳು ಅಮೆರಿಕದಲ್ಲಿ 300–400 ಪ್ರದರ್ಶನಗಳನ್ನು ಕಾಣುತ್ತವೆ. ಕೆಲವು ಚಿತ್ರಗಳು ಭಾರತಕ್ಕಿಂತಲೂ ಅಮೆರಿಕದಲ್ಲಿಯೇ ಹೆಚ್ಚು ಗಳಿಕೆ ಮಾಡಿದ ಉದಾಹರಣೆಗಳಿವೆ.

ಎಫ್‌ಐಸಿಸಿಐ–ಫ್ರೇಮ್ಸ್ ಮತ್ತು ಕೆಪಿಎಂಜಿಯ 'ಇಂಡಿಯನ್ ಮೀಡಿಯಾ ಮತ್ತು ಎಂಟರ್‌ಟೈನ್‌ಮೆಂಟ್ ಇಂಡಸ್ಟ್ರಿ' ವರದಿಯ ಪ್ರಕಾರ, ತೆಲುಗು ಚಿತ್ರಗಳ ವಿದೇಶಿ ಗಳಿಕೆಯ ಪೈಕಿ ಶೇ 85ರಷ್ಟು ಅಮೆರಿಕದಿಂದಲೇ ಬರುತ್ತಿದ್ದು, ಚಿತ್ರದ ಒಟ್ಟು ಗಳಿಕೆಯಲ್ಲಿ ಅದರ ಪಾಲು ಶೇ 5–10ರಷ್ಟು ಇರುತ್ತದೆ.

ತೆಲುಗಿನ 'ಕಲ್ಕಿ 2898 ಎಡಿ', 'ಆರ್‌ಆರ್‌ಆರ್', 'ಪುಷ್ಪ 2', 'ಆ್ಯನಿಮಲ್' ಚಿತ್ರಗಳು ಅಮೆರಿಕದಲ್ಲಿ ಅತ್ಯುತ್ತಮವಾಗಿ ಪ್ರದರ್ಶನ ಕಂಡು, 15–19 ಮಿಲಿಯನ್ ಡಾಲರ್‌ವರೆಗೆ ಗಳಿಸಿದ್ದವು. 'ಬಾಹುಬಲಿ 2' ಅಮೆರಿಕದಲ್ಲಿ ಅತಿ ಹೆಚ್ಚು ಗಳಿಕೆ ಮಾಡಿದ ಭಾರತೀಯ ಚಿತ್ರ ಎನ್ನುವ ದಾಖಲೆಯನ್ನೇ ನಿರ್ಮಿಸಿದೆ.

ದಸರಾದಿಂದ ಆರಂಭವಾಗಿ ದೀಪಾವಳಿ, ಸಂಕ್ರಾಂತಿ, ಯುಗಾದಿ ಹಬ್ಬಗಳ ಸಮಯದಲ್ಲಿ ತೆಲುಗು ಚಿತ್ರಗಳನ್ನು ಬಿಡುಗಡೆ ಮಾಡುವ ಪರಿಪಾಠ ಇದೆ. ಈ ಬಾರಿಯೂ ಹಬ್ಬದ ಋತುವಿನಲ್ಲಿ ಚಿತ್ರಗಳನ್ನು ಬಿಡುಗಡೆ ಮಾಡಲು ನಿರ್ಮಾಪಕರು ಸಿದ್ಧತೆ ನಡೆಸುತ್ತಿದ್ದಾರೆ. ಮಹೇಶ್ ಬಾಬು ಅವರಿಗಾಗಿ ರಾಜಮೌಳಿ ನಿರ್ದೇಶಿಸುತ್ತಿರುವ ಚಿತ್ರವೂ ಸೇರಿದಂತೆ ಹಲವು ದೊಡ್ಡ ಬಜೆಟ್‌ನ, ಸ್ಟಾರ್ ಚಿತ್ರಗಳ ನಿರ್ಮಾಪಕರು ಅಮೆರಿಕದ ಮಾರುಕಟ್ಟೆಯನ್ನೇ ಮುಖ್ಯವಾಗಿ ನೆಚ್ಚಿಕೊಂಡಿದ್ದಾರೆ. ಆದರೆ, ಈಗ ಟ್ರಂಪ್ ಅವರು ಸುಂಕ ಹೇರುವ ಘೋಷಣೆ ಮಾಡಿರುವುದು ತೆಲುಗು ಚಿತ್ರರಂಗದಲ್ಲಿ ಆತಂಕ ಮೂಡಿಸಿದೆ.

ಹಾಲಿವುಡ್‌ಗೂ ಪೆಟ್ಟು?

ಅಮೆರಿಕದಲ್ಲಿ ತಯಾರಾಗುವ ಹಾಲಿವುಡ್ ಸಿನಿಮಾಗಳು, ಜಾಗತಿಕ ಮಟ್ಟದಲ್ಲಿ ಮಾರುಕಟ್ಟೆಯನ್ನು ಹೊಂದಿವೆ. ಅಮೆರಿಕದ ಸುಂಕಕ್ಕೆ ಪ್ರತಿಯಾಗಿ ಭಾರತ, ಚೀನಾ ಸೇರಿದಂತೆ ವಿವಿಧ ರಾಷ್ಟ್ರಗಳು ಹೆಚ್ಚು ಸುಂಕ ವಿಧಿಸಿದರೆ ಹಾಲಿವುಡ್ ನಿರ್ಮಾಪಕರು, ವಿತರಕರಿಗೂ ಹೊರೆಯಾಗಲಿದೆ. ಟಿಕೆಟ್ ದರ ಹೆಚ್ಚಾಗಿ, ಸಿನಿಮಾ ಪ್ರಿಯರು ಚಿತ್ರಮಂದಿರಗಳತ್ತ ಸುಳಿಯದಿದ್ದರೆ ಸಿನಿಮಾ ಗಳಿಕೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆ.

ಹಾಲಿವುಡ್ ಚಿತ್ರಗಳ ನಿರ್ಮಾಣದಲ್ಲಿ ವಿಎಫ್‌ಎಕ್ಸ್ ಸೇರಿದಂತೆ ಇನ್ನಿತರ ತಂತ್ರಜ್ಞಾನ ಆಧಾರಿತ ಕೆಲಸಗಳು ಬೇರೆ ಬೇರೆ ದೇಶಗಳಲ್ಲಿ ನಡೆಯುತ್ತವೆ. ಚಿತ್ರೀಕರಣಕ್ಕಾಗಿ ನಿರ್ಮಾಪಕರು ಕೆನಡಾ, ಆಸ್ಟ್ರೇಲಿಯಾ, ಬ್ರಿಟನ್‌ನಂತಹ ದೇಶಗಳನ್ನು ಅವಲಂಬಿಸಿದ್ದಾರೆ. ಅಲ್ಲಿ ದೊಡ್ಡ ಬಜೆಟ್ ಸಿನಿಮಾಗಳಿಗೆ ತೆರಿಗೆ ವಿನಾಯಿತಿಗಳಿವೆ. ಇದಲ್ಲದೇ, ಅಮೆರಿಕದ ಚಿತ್ರ ನಿರ್ಮಾಣದಲ್ಲಿ ಏಷ್ಯಾ, ಯುರೋಪ್ ಸೇರಿದಂತೆ ವಿವಿಧ ಭಾಗಗಳ ನಿರ್ಮಾಪಕರು, ವಿತರಕರು ಪಾಲುದಾರಿಕೆಯನ್ನೂ ಹೊಂದಿರುತ್ತಾರೆ. ಇವು ವಿದೇಶಿ ಚಿತ್ರಗಳೋ, ಸ್ವದೇಶಿ ಚಿತ್ರಗಳೋ ಎಂದು ನಿರ್ಧರಿಸುವುದೇ ಕಷ್ಟವಾಗಬಹುದು.

ಜತೆಗೆ, ಅಮೆರಿಕದ ನಿರ್ಧಾರಕ್ಕೆ ಪ್ರತಿಯಾಗಿ ಇತರ ದೇಶಗಳು ತೆರಿಗೆ/ಸುಂಕ ಹೆಚ್ಚಿಸಿದರೆ ಚಿತ್ರ ನಿರ್ಮಾಣದ ಮೇಲೆ ಪರಿಣಾಮ ಬೀರಬಹುದು ಎಂದು ಹೇಳಲಾಗುತ್ತಿದೆ.

ಕನ್ನಡ ಚಿತ್ರಗಳಿಗೂ ಮಾರುಕಟ್ಟೆ

ಹಿಂದಿ, ತೆಲುಗು, ತಮಿಳು, ಮಲಯಾಳ ಮಾತ್ರವಲ್ಲ ಕನ್ನಡದ ಚಿತ್ರಗಳಿಗೂ ಅಮೆರಿಕದಲ್ಲಿ ಮಾರುಕಟ್ಟೆ ಇದೆ. ಕ್ಯಾಲಿಫೋರ್ನಿಯಾ, ಟೆಕ್ಸಾಸ್, ನ್ಯೂಜೆರ್ಸಿ, ನ್ಯೂಯಾರ್ಕ್‌ನಂತಹ ನಗರಗಳಲ್ಲಿ ಚಿತ್ರಮಂದಿರಗಳಿಗೆ ತೆರಳಿಯೇ ಕನ್ನಡ ಚಿತ್ರ ವೀಕ್ಷಿಸುವವರು ಅಲ್ಲಿ ದೊಡ್ಡ ಸಂಖ್ಯೆಯಲ್ಲಿದ್ದಾರೆ. ಕನ್ನಡಿಗರು ಮಾತ್ರವಲ್ಲ, ವಿವಿಧ ರಾಜ್ಯಗಳ ಸಿನಿಮಾ ಪ್ರೇಮಿಗಳೂ ಕನ್ನಡ ಚಿತ್ರಗಳನ್ನು ನೋಡುತ್ತಾರೆ. ಹಿಂದೆ ಅಮೆರಿಕದಲ್ಲಿ ತೆರೆಕಾಣುತ್ತಿದ್ದ ಕನ್ನಡ ಚಿತ್ರಗಳ ಸಂಖ್ಯೆ ಕಡಿಮೆ ಇತ್ತು. ಆದರೆ, ಇತ್ತೀಚೆಗೆ ದೊಡ್ಡ ಬಜೆಟ್‌ನ ಚಿತ್ರಗಳು ಅಲ್ಲಿನ ಹೆಚ್ಚು ಚಿತ್ರಮಂದಿರಗಳಲ್ಲಿ ತೆರೆಕಾಣುತ್ತಿವೆ.

'ಕೆಜಿಎಫ್', 'ಕಾಂತಾರ', 'ಚಾರ್ಲಿ 777', 'ವಿಕ್ರಾಂತ್ ರೋಣ', 'ರಂಗಿತರಂಗ' ಮುಂತಾದ ಚಿತ್ರಗಳನ್ನು ಅಲ್ಲಿನ ಪ್ರೇಕ್ಷಕರು ಇಷ್ಟಪಟ್ಟಿದ್ದರು. 'ಕೆಜಿಎಫ್ ಚಾಪ್ಟರ್–2', 'ಕಾಂತಾರ' ಚಿತ್ರಗಳು ಅಮೆರಿಕದ ಬಾಕ್ಸ್‌ಆಫೀಸ್‌ನಲ್ಲಿ ಉತ್ತಮ ಗಳಿಕೆಯನ್ನೂ ಕಂಡಿದ್ದವು. 'ಕಾಂತಾರ ಅಧ್ಯಾಯ–1' ಚಿತ್ರ ಕೂಡ ಅಮೆರಿಕದಲ್ಲಿ ದೊಡ್ಡ ಮಟ್ಟದಲ್ಲಿ ಬಿಡುಗಡೆಯಾಗಲು ಸಜ್ಜುಗೊಂಡಿದೆ. 100ಕ್ಕೂ ಹೆಚ್ಚು ನಗರಗಳ ಚಿತ್ರಮಂದಿರಗಳಲ್ಲಿ ಕನ್ನಡ, ತೆಲುಗು, ತಮಿಳು ಸೇರಿ ವಿವಿಧ ಭಾಷೆಗಳಲ್ಲಿ ಈ ಚಿತ್ರ ತೆರೆ ಕಾಣಲಿದೆ.

ನದಿ ದಾಟುವುದು

ನುಡಿ ಬೆಳಗು

ವಾಸುದೇವ ನಾಡಿಗ್

ಆ ವ್ಯಕ್ತಿಗೆ ಸದಾ ಗೋಳೇ. ಅಪ್ಪ ಬೇಗ ತೀರಿಹೋದರು. ಆದ್ದರಿಂದ ತಾಯಿ ಮತ್ತು ಪುಟ್ಟ ತಮ್ಮ, ಅಕ್ಕನ ನೋಡುವ ಹೊಣೆ. ಸಾಲದ ಆದಾಯ, ತೀರದ ಸಾಲ. ಅಮ್ಮನ ಅನಾರೋಗ್ಯ. ಒಡಹುಟ್ಟಿದವರ ಓದು ಬರಹದ ಖರ್ಚು. ಮುಗಿಯದ ಸಮಸ್ಯೆಗಳು. ಇಷ್ಟೇ ಅಲ್ಲದೇ ಅಮ್ಮನ ಒತ್ತಡಕ್ಕೆ ಕಟ್ಟುಬಿದ್ದು ಮದುವೆಯೂ ಆಗಿ ಮತ್ತಷ್ಟು ಗೋಳುಗಳ ಸುರಿದುಕೊಂಡವನ ಹಾಗೆ ವರ್ತಿಸಲು ಶುರು ಮಾಡಿದ. ಜೀವನವೇ ಸಾಕಾದ ಹಾಗೆ ಪತರಗುಟ್ಟಿ ಹೋದ. ಬೆಳಗಾಗುತ್ತಲೇ ಒಂದಿಲ್ಲೊಂದು ಸಮಸ್ಯೆ ರಗಳೆ. ಯಾರೋ ಹೇಳಿದರು, 'ಊರ ದೇವಾಲಯದಲ್ಲಿ ಸಂತನೊಬ್ಬ ಕೂತಿದ್ದಾರೆ. ಒಂದು ಸಲ ಕಂಡು ಮಾತನಾಡಿಸು' ಎಂದು. ದಡ ಬಡ ಮನೆಯನ್ನೇ ಬಿಟ್ಟು ಹೋದವನಂತೆ ದೇವಾಲಯದ ಪ್ರಾಂಗಣದಲ್ಲಿ ಇದ್ದ ಸಂತನ ಎದುರು ತಲೆ ಮೇಲೆ ಕೈ ಹೊತ್ತು ಕೂತ. ಎಲ್ಲ ಕೇಳಿಸಿಕೊಂಡ ಸಂತ. ನಾಳೆ ನಸುಕಿನಲ್ಲೇ ಬರಲು ಹೇಳಿ ಕಳಿಸಿದ.

ಯಥಾವತ್ ಅದೇ ಬೆಳಗ್ಗೆ ಓಡಿ ಹೋಗಿ ಮತ್ತೆ ಸಂತನೆದುರು ಕೂತ. 'ಸರಿ. ಈ ದಿನ ನಿನ್ನ ಈ ಅಪರಿಹಾರ್ಯದ ಸಮಸ್ಯೆಗೆ ಪರಿಹಾರ ಕೊಡುವೆ ಬಾ' ಎಂದು ಹೇಳುತ್ತಾ ಆ ಸಂತ ಈ ವ್ಯಕ್ತಿಗೆ ನಾಲ್ಕಾರು ಗ್ರಾಮಗಳನ್ನು ಅಲ್ಲಿನ ಜನರನ್ನು ತೋರಿಸುತ್ತಾ ನಡೆದ. ಎಲ್ಲಿ ನೋಡಿದರಲ್ಲಿ ಅದೇ ಜನ. ಅದೇ ಧಾವಂತ. ಅದೇ ಹಪಾಹಪಿಯ ಹೊಟ್ಟೆಪಾಡಿನ ಮೆರವಣಿಗೆ. ಮತ್ತೆ ಮತ್ತೊಂದು ಊರಿಗೆ ಪ್ರಯಾಣ. ಆದರೆ ಊರನ್ನು ದಾಟಬೇಕಾದರೆ ನಡುವೆ ಹರಿಯುವ ನದಿಯನ್ನು ದಾಟಬೇಕಿತ್ತು. ಏನೊಂದೂ ಸಾಧನವಿರಲಿಲ್ಲ. ಸಂತ ದಡದಲ್ಲೇ ನಿಂತು ಬಿಟ್ಟ. ಈ ವ್ಯಕ್ತಿಗೆ ಆಯಾಸ. 'ಗುರುಗಳೇ ಪರಿಹಾರ ಯಾವಾಗ ಹೇಳ್ತೀರಿ? ನಿಂತೇ ಬಿಟ್ಟಿರುವಿರಿ ಈ ದಡದಲ್ಲಿ' ಅಂತ ಕೇಳಿದ. ಅದಕ್ಕೆ ಆ ಸಂತ 'ಸ್ವಲ್ಪ ಹೊತ್ತು ಕಾಯೋಣ. ಚಲಿಸುವ ನದಿ ನಿಲ್ಲಲಿ ಆಮೇಲೆ ದಾಟೋಣ' ಎಂದರು. ಈ ವ್ಯಕ್ತಿಗೆ ಭಯಂಕರ ಸಿಟ್ಟು. 'ನದಿ ಹೇಗೆ ಹರಿಯೋದನ್ನು ನಿಲ್ಲಿಸುತ್ತದೆ? ಯಾವಾಗ ದಾಟಿ ಆಚೆ ಹೋಗೋದು' ಎಂದು ರೇಗಿದ. ಸಂತ ತಣ್ಣಗೆ ನುಡಿದ. 'ಸಮಸ್ಯೆಗಳು ಕೂಡಾ ಹರಿಯುವ ನದಿಯ ಹಾಗೆ. ನಿಲ್ಲಲಾರವು. ನಾವು ದಾಟಬೇಕಷ್ಟೆ. ಹೇಗಾದರೂ ಎದುರಿಸಬೇಕು. ಕಾಯುತ್ತಾ ಕೂಡಬಾರದು. ಹೊರಗೆ ಬರಬೇಕು. ಸಮಸ್ಯೆ ಇರದ ಬಾಳೇ ಇಲ್ಲ. ಪರಿಹಾರ ಇದೆ. ಅದನ್ನು ಹುಡುಕಬೇಕೇ ಹೊರತು ಕೊರಗಬಾರದು'.

ಜೀವ ಜೀವನದ ನಡುವೆ ಇಂತಹದ್ದೊಂದು ನದಿ ಹರಿಯುತ್ತಲೇ ಇರುತ್ತದೆ. ಮುಗಿಯಲಾರದು. ಹರಿವು ಕಮ್ಮಿ ಆಗಬಹುದು. ತೀವ್ರತೆ ಹೆಚ್ಚು ಕಮ್ಮಿ ಆಗಬಹುದು. ಇಲ್ಲವೇ ಇಲ್ಲ ಎಂಬುದೇ ಸುಳ್ಳು. ಎದೆಗುಂದಿದರೆ ಪ್ರಯಾಣವೇ ದುಸ್ತರ. ನಾವೆಯೋ ತೆಪ್ಪವೋ ಕೊನೆಗೊಂದು ಕಟ್ಟಿಗೆಯೊ, ಆಸರೆ ಇದ್ದೇ ಇರುತ್ತದೆ ತಾನೆ? ಈ ಬಗೆಯ ನದಿ ಇರದ ಬಾಳು ಬಾಳೇ? ❖

ಗುಂಡಣ್ಣ



ರಾಷ್ಟ್ರೀಯ

ಲೇಹ್ ಗುಂಡಿನ ದಾಳಿ ನ್ಯಾಯಾಂಗ ತನಿಖೆಗೆ ಆಗ್ರಹ

ನವದೆಹಲಿ (ಪಿಟಿಐ): ರಾಜ್ಯದ ಸ್ಥಾನಮಾನಕ್ಕಾಗಿ ಹೋರಾಡುತ್ತಿರುವ ಲಡಾಖ್ ಜನರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ದ್ರೋಹ ಎಸಗುತ್ತಿದ್ದಾರೆ ಎಂದು ಆರೋಪಿಸಿರುವ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು, ಪೊಲೀಸರ ಗುಂಡಿನ ದಾಳಿಯಲ್ಲಿ ನಾಲ್ವರು ಪ್ರತಿಭಟನಕಾರರು ಮೃತಪಟ್ಟಿರುವ ಬಗ್ಗೆ ನ್ಯಾಯಾಂಗ ತನಿಖೆ ನಡೆಸುವಂತೆ ಆಗ್ರಹಿಸಿದ್ದಾರೆ.

'ತಮ್ಮ ಹಕ್ಕುಗಳಿಗಾಗಿ ಹೋರಾಟ ನಡೆಸುತ್ತಿರುವ ಜನರನ್ನು ಹಿಂಸಿಸುವುದನ್ನು ಮತ್ತು ಬೆದರಿಸುವುದನ್ನು ಮೊದಲು ನಿಲ್ಲಿಸಿ. ಅದರ ಬದಲಿಗೆ ಮಾತುಕತೆ ನಡೆಸಿ ಸಮಸ್ಯೆ ಬಗೆಹರಿಸಿ' ಎಂದು ಅವರು ಪ್ರಧಾನಿಯನ್ನು ಆಗ್ರಹಿಸಿದ್ದಾರೆ.

ಲೇಹ್: ಏಳು ಗಂಟೆ ಕರ್ಫ್ಯೂ ಸಡಿಲಿಕೆ

ಲೇಹ್: ಹಿಂಸಾಚಾರ ಪೀಡಿತ ಲಡಾಖ್‌ನ ಲೇಹ್ ಪಟ್ಟಣದಲ್ಲಿ ಮಂಗಳವಾರ ಬೆಳಿಗ್ಗೆ 10 ಗಂಟೆಯಿಂದ ಏಳು ಗಂಟೆಗಳ ಕಾಲ ಕರ್ಫ್ಯೂ ಸಡಿಸಲಾಗಿತ್ತು. ವಾರಪೂರ್ತಿ ನಿರ್ಬಂಧಗಳಲ್ಲಿ ಸಿಲುಕಿದ್ದ ಜನರಿಗೆ, ಮಾರುಕಟ್ಟೆಗಳಿಗೆ ತೆರಳಲು, ಅಗತ್ಯ ಸಾಮಗ್ರಿಗಳನ್ನು ಖರೀದಿಸಲು ಕರ್ಫ್ಯೂ ಸಡಿಲಿಕೆ ನೆರವಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಲಡಾಖ್‌ನಲ್ಲಿ ನಡೆದ ಈ ಹತ್ಯೆಗಳ ಬಗ್ಗೆ ನಿಷ್ಪಕ್ಷಪಾತ ನ್ಯಾಯಾಂಗ ತನಿಖೆ ನಡೆಸಬೇಕು ಮತ್ತು ಅಪರಾಧಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಕಾರ್ಗಿಲ್ ಯುದ್ಧದಲ್ಲಿ ಭಾಗಿಯಾಗಿದ್ದ ಯೋಧ, ಮಾಜಿ ಸೈನಿಕ ತ್ಸೆವಾಂಗ್ ಥಾರ್ಚಿನ್ ಅವರೂ ಭದ್ರತಾ ಪಡೆಗಳ ಗುಂಡಿನ ದಾಳಿಯಲ್ಲಿ ಮೃತಪಟ್ಟಿದ್ದರು. ದಕ್ಷಿಣ ಅಮೆರಿಕ ಪ್ರವಾಸದಲ್ಲಿರುವ ರಾಹುಲ್ ಗಾಂಧಿ ಅವರು, ಮಾಜಿ ಸೈನಿಕ ತ್ಸೆವಾಂಗ್ ಥಾರ್ಚಿನ್ ಅವರ ತಂದೆಯ ವಿಡಿಯೊವನ್ನು 'ಎಕ್ಸ್'ನಲ್ಲಿ ಹಂಚಿಕೊಂಡು ಬೇಸರ ವ್ಯಕ್ತಪಡಿಸಿದ್ದಾರೆ.

'ತಂದೆ ಮತ್ತು ಮಗ ಇಬ್ಬರೂ ಸೈನ್ಯದಲ್ಲಿ ಕೆಲಸ ಮಾಡಿದವರು. ದೇಶಭಕ್ತಿ ಅವರ ರಕ್ತದಲ್ಲಿಯೇ ಇದೆ. ಆದರೆ ಬಿಜೆಪಿ ಸರ್ಕಾರ ದೇಶದ ಧೈರ್ಯಶಾಲಿ ಪುತ್ರನನ್ನು ಗುಂಡಿಕ್ಕಿ ಕೊಂದಿದೆ' ಎಂದು ಅವರು ಹೇಳಿದ್ದಾರೆ.

'ಥಾರ್ಚಿನ್ ಅವರ ತಂದೆಯ ನೋವು ತುಂಬಿದ ಕಣ್ಣುಗಳು ಕೆಲ ಪ್ರಶ್ನೆಗಳನ್ನು ಕೇಳುತ್ತಿವೆ. ಅದರಲ್ಲಿ ಪ್ರಮುಖವಾದದ್ದು, ದೇಶಕ್ಕಾಗಿ ಸೇವೆ ಸಲ್ಲಿಸಿದ್ದಕ್ಕೆ ದೊರೆತ ಪ್ರತಿಫಲವೇ ಎಂಬುದಾಗಿದೆ' ಎಂದಿದ್ದಾರೆ.

'ಲಡಾಖ್ ದುಃಖ, ದೇಶದ ದುಃಖ'– ಖರ್ಗೆ: ಈ ಕುರಿತು 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, 'ಲಡಾಖ್‌ನ ದುಃಖ, ಇಡೀ ದೇಶದ ದುಃಖವಾಗಿದೆ' ಎಂದಿದ್ದಾರೆ.

'ನಮ್ಮ 20 ವೀರ ಯೋಧರು ಲಡಾಖ್‌ನ ಗಲ್ವಾನ್ ಬಳಿಯ ಎಲ್‌ಎಸಿಯಲ್ಲಿ ದೇಶಕ್ಕಾಗಿ ಪ್ರಾಣ ಅರ್ಪಿಸಿದ್ದರು. ಆಗ ಮೋದಿ ಚೀನಾಕ್ಕೆ ಕ್ಲೀನ್ ಚೀಟ್ ನೀಡಿದ್ದರು. ಆಗ ಅವರು ನಮ್ಮ ಈ ವೀರ ಯೋಧರ ಶೌರ್ಯವನ್ನು ನೆನಪಿಸಿಕೊಳ್ಳಬೇಕಿತ್ತು. ಈಗ ಅವರಿಗೆ ಯಾವ ಅವಕಾಶವಿದೆ? ಚೀನಾಗೆ ಕ್ಲೀನ್ ಚೀಟ್ ನೀಡಿದವರು, ಹುತಾತ್ಮರಾದ ನಮ್ಮ ತ್ಸೆವಾಂಗ್ ಥಾರ್ಚಿನ್‌ನಂತಹ ವೀರ ಯೋಧರಿಗೆ ಯಾವ ಗೌರವ ಸಲ್ಲಿಸುತ್ತಾರೆ' ಎಂದು ಪ್ರಶ್ನಿಸಿದ್ದಾರೆ. 'ಇದು ಬಿಜೆಪಿಯ ಟೊಳ್ಳು ರಾಷ್ಟ್ರೀಯತೆಯಲ್ಲವೇ' ಎಂದು ಖರ್ಗೆ ಟೀಕಿಸಿದ್ದಾರೆ.

'ಸುಳ್ಳು ಸಂಕಥನ ಸೃಷ್ಟಿ'

ಸೊನಮ್ ಹಾಗೂ ಅವರ ಸಂಸ್ಥೆಯ ವಿರುದ್ಧ ಸುಳ್ಳು ಸಂಕಥನವನ್ನು ಹೆಣೆಯಲಾಗುತ್ತಿದೆ. ಅವರನ್ನು ದೇಶ ವಿರೋಧಿ ಎಂದು ಬಿಂಬಿಸಲಾಗುತ್ತಿದೆ. ಅವರಿಗೆ ಪಾಕಿಸ್ತಾನದೊಂದಿಗೆ ಸಂಪರ್ಕವಿದೆ ಎನ್ನುವುದೂ ಸೇರಿ ಎಲ್ಲ ಆರೋಪಗಳ ಕುರಿತು ಬಹಿರಂಗವಾಗಿಯೇ ಚರ್ಚಿಸೋಣ ಬನ್ನಿ. ಸೊನಮ್ ಮೇಲೆ ಹೊರಿಸಿರುವ ಎಲ್ಲ ಆರೋಪಗಳಿಗೆ ಸ್ಪಷ್ಟನೆ ರೀತಿಯಲ್ಲಿ ಸಿಬಿಐ, ಆದಾಯ ತೆರಿಗೆ ಅಧಿಕಾರಿಗಳಿಗೆ ಎಲ್ಲ ದಾಖಲೆಗಳನ್ನೂ ನೀಡಿದ್ದೇವೆ. ಆದರೂ ಅವರ ತೇಜೋವಧೆ ಮಾಡಲು, ನಮ್ಮ ಜನರ ಹೋರಾಟವನ್ನು ಬಲಹೀನಗೊಳಿಸಲು ಈ ರೀತಿ ಮಾಡಲಾಗುತ್ತಿದೆ

ಗೀತಾಂಜಲಿ ಅಂಗಮೊ, ಸೊನಮ್ ಅವರ ಪತ್ನಿ

ಬಂಧಿತರ ಬಿಡುಗಡೆಯಾಗದೆ ಮಾತುಕತೆಯಿಲ್ಲ: ಕೆಡಿಎ

ನವದೆಹಲಿ (ಪಿಟಿಐ): ಪರಿಸರ ಹೋರಾಟಗಾರ ಸೊನಮ್ ವಾಂಗ್ಚುಕ್ ಮತ್ತು ಇತರ ಬಂಧಿತರನ್ನು ಬಿಡುಗಡೆ ಮಾಡದ ಹೊರತು ಕೇಂದ್ರ ಸರ್ಕಾರದ ಜತೆಗೆ ಯಾವುದೇ ಮಾತುಕತೆಯಲ್ಲಿ ಭಾಗವಹಿಸುವುದಿಲ್ಲ ಎಂದು ಕಾರ್ಗಿಲ್ ಪ್ರಜಾಸತ್ತಾತ್ಮಕ ಒಕ್ಕೂಟ (ಕೆಡಿಎ) ಸ್ಪಷ್ಟಪಡಿಸಿದೆ.

ಅಲ್ಲದೆ ಸೆ 24ರಂದು ಹೋರಾಟಗಾರರ ಮೇಲೆ ಭದ್ರತಾ ಪಡೆಗಳು ನಡೆಸಿದ ಗುಂಡಿನ ದಾಳಿ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕು ಎಂದು ಕೆಡಿಎ ಸಹ ಅಧ್ಯಕ್ಷ ಅಸ್ಗರ್ ಅಲಿ ಕರ್ಬಾಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

ಪದಬಂಧ 6181

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ಆಗ ತಾನೇ ತೆಗೆದ ಬೆಣ್ಣೆ (5)
4.ವಾಲ್ಮೀಕಿ ರಚಿಸಿರುವ ಮಹಾಕಾವ್ಯ (4)
7.ಯಾವುದೇ ಕಳಂಕ ಇಲ್ಲದ್ದು (4)
8.ವನದ ನಡುವೆಯೇ ದುರ್ದಸೆ (4)
10.ನೇಯ್ಗೆಯ ಯಂತ್ರ (2)
11.ಕಂದರದಲ್ಲಿರುವ ಮಗು! (2)
12.ದೇವಾಲಯದ ಸಭಾಮಂಟಪ (4)
14.ಕರದಲ್ಲಿರುವ ಶರೀರ! (4)
17.ಮಾರ್ಚ್ 22 ರಂದು ದೇಶದಾದ್ಯಂತ ಈ ದಿನಾಚರಣೆಯನ್ನು ಆಚರಿಸಲಾಗುತ್ತದೆ (4)
18.ಕುದುರೆಯ ಮುಖ (5)

ಮೇಲಿಂದ ಕೆಳಕ್ಕೆ

1.ಪುರ ಜನರು ನೀಡಿದ ಸಾಕ್ಷಿ! (3)
2.ಹಗರಣದಲ್ಲಿ ಸಿಕ್ಕಿರುವ ದುಡ್ಡು (2)
3.ನೋಡುಗ ಇಲ್ಲಿದ್ದಾನೆ (3)
5.ಮಗಳ ಗಂಡನಿಲ್ಲಿ ತಿರುಗಿದ್ದಾನಲ್ಲಾ? (3)
6.ಹೂವಿನಲ್ಲಿರುವ ಸಿಹಿ ರಸ (4)
7.ಹೆಚ್ಚು ಎಂದು ಹೀಗೆ ಹೇಳಿ (2)
9.ತಿರುಗಿ ನಿಂತು ಬೋಳಿಸುವಿಕೆ (3)
10.ಹೆಣ್ಣು ದುಂಬಿಯಿದು (4)
12.ನಗರದಲ್ಲಿರುವ ಮನುಷ್ಯ (2)
13.ಗಲಾಟೆಗೊಂದು ಪರ್ಯಾಯ ಪದ (3)
15.ವರ್ತುಲಾಕಾರವಾಗಿರುವುದು ಅಥವಾ ಪ್ರದೇಶ (3)
16.ಸೀತೆಯ ತಂದೆ (3)
17.ಜವಾನನ ಹತ್ತಿರವಿರುವ ಮಂದಿ ! (2)



6180ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಗತಾನುಗತಿಕ 4.ನವಿಲು
7.ರಕ 9.ಉದಯರವಿ
12.ಭಾವಾನುವಾದ
14.ಸವಿ 17.ಪ್ರಗತಿ
18.ಪರಮಪುರುಷ

ಮೇಲಿಂದ ಕೆಳಕ್ಕೆ:
2.ನುಡಿ 3.ತಿಮಿರ
5.ವಿನೋದ 6.ಅವಿನಾಭಾವ
8.ಕಲಾವಿದ 9.ಉಪವಾಸ
10.ಯಮ 11. ಹೇನು
13.ವಾಲಗ 15.ವಿಧುರ
16 ಸಂಪು

ಸುಡೊಕು 6565

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

9		5	8			4	1	
2	8							
		4			2	8		6
3		6			8	5		9
	7						8	
8		1				3		7
4			6		1		9	
	3				5	7		8
6		8	2	3			5	

6564 ಸುಡೊಕು

3	9	8	2	7	5	4	6	1
2	7	6	4	3	1	8	9	5
1	4	5	6	8	9	7	3	2
4	6	3	9	1	7	5	2	8
9	5	2	3	4	8	1	7	6
8	1	7	5	2	6	3	4	9
5	3	4	8	6	2	9	1	7
7	2	9	1	5	4	6	8	3
6	8	1	7	9	3	2	5	4

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

01 ಅಕ್ಟೋಬರ್ 2025 ಬುಧವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಶುಕ್ಲ ನವಮಿ ಗಂ. 19-02 **ನಕ್ಷತ್ರ:** ಪೂರ್ವಾಷಾಢ ಗಂ. 8-06, **ಯೋಗ:** ಅತಿಗಂಡ ಗಂ. 24-34 **ಕರಣ:** ಬಾಲವ ಗಂ. 6-40 ಕನ್ಯಾ ಮಾಸದ 14 ನೇ ದಿನ. **ಮಳೆ ನಕ್ಷತ್ರ:** ಹಸ್ತಾ 2 ನೇ ಪಾದ. **ರಾಹುಕಾಲ:** ಮಧ್ಯಾಹ್ನ 12-00 01-30 **ಸೂರ್ಯೋದಯ:** 06-23 **ಸೂರ್ಯಾಸ್ತ:** 06-17, **ಮುಸ್ಲಿಂ ದಿನಾಂಕ:** 08 ರಬಿಯುಸ್ಸಾನಿ, **ದಿನ ವಿಶೇಷ:** ಮಹಾ ನವಮಿ, ಆಯುಧ ಪೂಜಾ, **ಅದೃಷ್ಟ ಸಂಖ್ಯೆ:** 5, 9

ಮೇಷ: ವೃತ್ತಿಜೀವನದಲ್ಲಿ ಉತ್ತಮ ಸುಧಾರಣೆ ಕಂಡುಬರಲಿದೆ. ಷೇರು ವ್ಯವಹಾರದಲ್ಲಿ ಹಣ ಹೂಡಿಕೆ ಮಾಡುವಂತಾಗಲಿದೆ. ಅದರಿಂದ ಲಾಭ ಪಡೆಯುವಿರಿ. ವಿನಾಯಕನ ದರ್ಶನದಿಂದ ಅನುಕೂಲವಿರುವುದು.

ವೃಷಭ: ಸ್ನೇಹಿತರ ಹಾಗೂ ಕುಟುಂಬದವರ ಸಲಹೆ ಮೇರೆಗೆ ವ್ಯಕ್ತಿತ್ವ ಬದಲಾವಣೆ ಮಾಡಿಕೊಳ್ಳುವಿರಿ. ತಂದೆಯ ಆರೋಗ್ಯ ಉತ್ತಮವಾಗಲಿದೆ. ಸಹೋದರನ ವಿದ್ಯಾಭ್ಯಾಸಕ್ಕೆ ನೆರವಾಗುವಿರಿ. ಆದಾಯದಲ್ಲಿ ಕೊರತೆ ಇಲ್ಲ.

ಮಿಥುನ: ಹಿರಿಯರ ಮಾರ್ಗದರ್ಶನದಂತೆ ನಡೆದು ಕೆಲಸಗಳನ್ನು ಮಾಡುವುದರಿಂದ ಅಡೆತಡೆಗಳು ಇರುವುದಿಲ್ಲ. ಬದಲಾಗಿ ಚಿಂತೆ ಮತ್ತು ಭಯ ಇವೆರಡನ್ನೂ ದೂರ ಮಾಡಿಕೊಂಡಂತೆ ಆಗುವುದು.

ಕರ್ಕಾಟಕ: ಹೂಡಿಕೆ ವಿಚಾರದಲ್ಲಿ ಯೋಚಿಸಿ ನಿರ್ಧಾರ ಕೈಗೊಳ್ಳಿ. ಕಾರ್ಯ ಕ್ಷೇತ್ರದಲ್ಲಿ ಹೊಂದಾಣಿಕೆ ಮಾಡಿಕೊಳ್ಳಿ. ಸ್ವಂತವಾಗಿ ವ್ಯವಹಾರ ಮಾಡುವವರು ಪ್ರಗತಿ ಸಾಧಿಸುವರು.

ಸಿಂಹ: ಸಣ್ಣಪುಟ್ಟ ವಿಚಾರಗಳನ್ನೂ ಉಪೇಕ್ಷಿಸದೆ ಮನೆಯವರೊಂದಿಗೆ ಮಾತನಾಡುವಿರಿ. ದೈವಾನುಕೂಲದಿಂದ ನಡೆಯಬೇಕಾದ ಶುಭ ಕಾರ್ಯಗಳನ್ನು ನಿಶ್ಚಯ ಮಾಡಬಹುದು. ದೇವರ ದರ್ಶನ ಆತ್ಮವಿಶ್ವಾಸ ಹೆಚ್ಚಿಸಲಿದೆ.

ಕನ್ಯಾ: ಸ್ವಂತ ಉದ್ಯೋಗದವರು ಅಧಿಕ ಬಂಡವಾಳವನ್ನು ಹಾಕುವುದರಿಂದ ಕೈ ಸುಡುವಂತಾಗುವುದು. ಸಂಸ್ಥೆಗಳ ಜವಾಬ್ದಾರಿಯ ಅಧಿಕಾರ ವಹಿಸಬೇಕಾಗುವುದು. ಹೊಸ ಗೆಳೆತನ ಬೆಳೆಸಿಕೊಳ್ಳುವಿರಿ.

ತುಲಾ: ಸರ್ಕಾರಿ ಅಧಿಕಾರಿಗಳಿಗೆ ಕೆಲಸ ಹೆಚ್ಚಾದರೂ ಉನ್ನತ ಸ್ಥಾನ ದೊರೆಯಲಿದೆ. ಆರ್ಥಿಕ ಮುನ್ನಡೆ ಸಾಧ್ಯ. ವೈಯಕ್ತಿಕ ಕೆಲಸಗಳಿಗೆ ಯಾವುದೇ ರೀತಿಯ ಅಡಚಣೆ ಇರುವುದಿಲ್ಲ.

ವೃಶ್ಚಿಕ: ನಾಲ್ಕೈದು ದಿನಗಳ ಕಾಲ ಆಹಾರದಲ್ಲಿ ಪಥ್ಯವಿರಲಿ. ಆರೋಗ್ಯ ಸುಧಾರಿಸಲಿದೆ. ಒತ್ತಡ ತರುವ ಕೆಲಸಗಳಿಂದ ದೂರ ಉಳಿಯುವ ಯೋಚನೆಯು ಸರಿಯಾಗಿರುವುದು. ಪಿತ್ರಾರ್ಜಿತ ಆಸ್ತಿ ಕೈಸೇರಲಿದೆ.

ಧನು: ಕೆಲಸದಲ್ಲಿದ್ದ ಸಣ್ಣಪುಟ್ಟ ತೊಡಕು ನಿವಾರಿಸಿಕೊಳ್ಳುವುದನ್ನು ಸ್ವಂತವಾಗಿ ಅಭ್ಯಸಿಸಿ. ದೇವಸ್ಥಾನದಲ್ಲಿನ ವಿಶೇಷ ಕಾರ್ಯಕ್ರಮಗಳಿಗೆ ಸಹಾಯ ಅಪೇಕ್ಷಿಸುವವರ ವಿಚಾರದಲ್ಲಿ ಮುಂಜಾಗ್ರತೆ ಇರಲಿ. ಹಳದಿ ಬಣ್ಣ ಅಶುಭ ನೀಡುವುದು.

ಮಕರ: ಸಾರ್ವಜನಿಕ ಸ್ಥಳಗಳಲ್ಲಿ ಮನೆಯ ವಿಚಾರಗಳನ್ನು ಚರ್ಚಿಸುವಂಥ ಕೆಲಸ ಮಾಡದಿರಿ. ಆಕಸ್ಮಿಕವಾಗಿ ಹೊಸ ವ್ಯಕ್ತಿಯ ಪರಿಚಯವಾಗಲಿದೆ. ಗಣಕಯಂತ್ರದ ತಯಾರಕರಿಗೆ ಈ ದಿನ ಉತ್ತಮ ದಿನವಾಗಲಿದೆ.

ಕುಂಭ: ಉಪಯುಕ್ತ ಮಾಹಿತಿಗಳನ್ನು ಬಂಧು ಮಿತ್ರರೊಂದಿಗೆ ಹಂಚಿಕೊಳ್ಳುವುದರಿಂದ ಎಲ್ಲರ ಪ್ರಶಂಸೆಗೆ ಪಾತ್ರರಾಗುವಿರಿ. ಅಪರಾತ್ರಿಯ ವೇಳೆ ಸಂಚರಿಸುವಾಗ ನಿಶಾಚರಿಗಳಿಂದ ತೊಂದರೆಗೊಳಗಾಗುವ ಸಾಧ್ಯತೆಗಳಿವೆ.

ಮೀನ: ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ ಎನ್ನುವಂತೆ ಇಂದೊಬ್ಬರ ದಿನದ ಚಟುವಟಿಕೆಗಳನ್ನು ನೋಡಿ ನಿಮ್ಮ ಕಲ್ಪನೆಯ ವಿರುದ್ಧ ರೀತಿಯಲ್ಲಿರುವುದ ಕಂಡು ಆಶ್ಚರ್ಯ ಹೊಂದುವಿರಿ. ಇಂಧನ ವ್ಯಾಪಾರಸ್ಥರಿಗೆ ಬೇಡಿಕೆ ಹೆಚ್ಚಲಿದೆ.

ಆದೀಶ್ವರ್ ®
ಎಲೆಕ್ಟ್ರೋ ವರ್ಲ್ಡ್
gadget for every budget!
LG Life's Good
SIDE BY SIDE
REFRIGERATOR
650 Ltr.
UPTO ₹ 15,000/- CASH BACK ON YOUR CREDIT CARD EMI
EMI ₹3,999/-
Haier
SIDE BY SIDE
3 DOOR REFRIGERATOR
598 Ltr.
HOTTEST DEAL
UPTO ₹ 10,000/- CASH BACK ON YOUR CREDIT CARD EMI
SPECIAL PRICE ₹74,990/-
Godrej
SIDE BY SIDE
REFRIGERATOR
600 Ltr.
UPTO ₹ 6,000/- CASH BACK ON YOUR CREDIT CARD EMI
EMI ₹2,525/-
LG Life's Good
CBU
REFRIGERATOR
506 Ltr.
UPTO ₹ 7,000/- CASH BACK ON YOUR CREDIT CARD EMI
EMI ₹2,499/-
Whirlpool
INTELLIFRESH PRO
REFRIGERATOR
327 Ltr.
UPTO ₹ 2,000/- CASH BACK ON YOUR CREDIT CARD EMI
EMI ₹2,990/-
Haier
BMR
REFRIGERATOR
445 Ltr.
BIGGER Capacity
UPTO ₹ 10,000/- CASH BACK ON YOUR CREDIT CARD EMI
EMI ₹1,994/-
Godrej
FROST FREE
REFRIGERATOR
234 Ltr.
UPTO ₹ 2,000/- CASH BACK ON YOUR CREDIT CARD EMI
EMI ₹2,990/-
Haier
DIRECT COOL
REFRIGERATOR
190 Ltr.
SPECIAL PRICE ₹14,490/-
LG Life's Good
FRONT LOAD
WASHING MACHINE
12 / 7 Kg
UPTO ₹ 7,000/- CASH BACK ON YOUR CREDIT CARD EMI
EMI ₹2,999/-
Haier
FRONT LOAD
WASHING MACHINE
11 Kg (WI-FI)
UPTO ₹ 8,000/- CASH BACK ON YOUR CREDIT CARD EMI
EMI ₹1,994/-
Whirlpool CORPORATION
TOP LOAD
WASHING MACHINE
7.5 Kg
IN-BUILT HEATER STAINWASH
UPTO ₹ 2,000/- CASH BACK ON YOUR CREDIT CARD EMI
EMI ₹1,699/-
LG Life's Good IFB
DISH WASHER
UPTO ₹ 3,000/- CASH BACK ON YOUR CREDIT CARD EMI
EMI ₹3,290/-
BIGGEST DEALS ON KITCHEN APPLIANCES
Pigeon
MIXER GRINDER
750 WATTS
SPECIAL PRICE ₹2,490/-
Pigeon Preethi Butterfly FABER
LPG GAS STOVE
3 BURNER ₹3,490/-
4 BURNER ₹4,290/-
VL
VIJAYALAKSHMI WET GRINDER 2 Ltrs.
SPECIAL PRICE ₹3,490/-
Pigeon
CHIMNEY COMBO
55% DISCOUNT
NEBULA CHIMNEY 60 CM + AYUSH 4 BR
MRP ₹22,089/-
SPECIAL PRICE ₹9,990/-
EUREKA FORBES AO Smith HAVELLS
LG pureit
RO WATER PURIFIER
SPECIAL PRICE ₹12,990/- ONWARDS
Haier AO Smith
HAVELLS V-GUARD
WATER HEATER
FREE INSTALLATION
3 LITRES ₹3,290/-
15 LITRES ₹6,990/-
25 LITRES ₹7,790/-
BUY ANY SMART PHONE & GET
60 DAYS BREAK FREE Buy Back @50%
60 DAYS RISK FREE Buy Back @80%
60 DAYS SAFETY SHIELD
INSTANT CASHBACK Debit & Credit card
0 DOWN PAYMENT Paper Finance*
ASSURED GIFT On Every Phone
PRICE INCLUSIVE OF BANK OFFERS*
BAJAJ FINSERV
IDFC FIRST Bank
TVS CREDIT
HDB FINANCIAL SERVICES
Never Settle
SAMSUNG
ONEPLUS
mi
realme
vivo
oppo
T&C Apply*
ಬೆಂಗಳೂರು
ನೂತನ ಉಲ್ಲಾಳ್ ಮುಖ್ಯ ರಸ್ತೆ ಮಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೆಜ್ಮೆಂಟ್ ಅಂಡ್ ಸೈನ್ಸ್ Ph : 9686680760 / 9686680842
ನೂತನ ಬಾಗಲೂರು ಬಾಗಲೂರು ಮುಖ್ಯರಸ್ತೆ, ಬೃಂದಾವನ್ ಕೇಲೇಜ್ ಹತ್ತಿರ Ph : 080-35712968 /35712969 9731306702
ಬಿಡದಿ ಕೆಂಚನಗುಪ್ಪೆ ಗೇಟ್, HDFC ಬ್ಯಾಂಕ್ ಎದುರು, ಬೆಂಗಳೂರು–ಮೈಸೂರು ಹೆದ್ದಾರಿ 7702203254
ಕೋಣನಕುಂಟೆ ಸೌಧಾಮಣಿ ಚೌಲ್ಟ್ರಿ ಹತ್ತಿರ ಪೊಲೀಸ್ ಸ್ಟೇಷನ್ ಪಕ್ಕ Ph :9731306531
ಬೇಗೂರು ನಂ. 80, ಹೊಂಗಸಂದ್ರ, ಬೇಗೂರು ರಸ್ತೆ 080-41499467/9731306604
ಆರ್.ಟಿ. ನಗರ ಪೊಲೀಸ್ ಸ್ಟೇಷನ್ ಎದುರು 9731307264 080-23559977
ಹೊಸಕೋಟೆ ಸರ್ಕಾರಿ ಮಹಿಳಾ ಕಾಲೇಜು ಹತ್ತಿರ. 9731306767
ಹೆಣ್ಣೂರು ಮುಖ್ಯ ರಸ್ತೆ. ಡಿಮಾರ್ಟ್ ಎದುರು 080-48651500/48505043 9731306571
ಮಹದೇವಪುರ ವೈಟ್‌ಫೀಲ್ಡ್ ಮೈನ್ ರೋಡ್ ಬ್ರಾಂಡ್ ಫ್ಯಾಕ್ಟರಿ ಹತ್ತಿರ 080-48148975, 9148151731
ಉತ್ತರಹಳ್ಳಿ ಮುಖ್ಯ ರಸ್ತೆ, ಹೆಚ್.ಡಿ.ಎಫ್.ಸಿ. ಬ್ಯಾಂಕ್ ಹತ್ತಿರ. 9731306547 49587474, 49537575
ವೈಟ್ ಫೀಲ್ಡ್ ಉಡುಪಿ ಡೆಲಿಕೆಸಿ ಹೋಟೇಲ್ ಸಮೀಪ ರಾಮಗೊಂಡನಹಳ್ಳಿ. 080-40984677 9513499851
ಯಲಹಂಕ ಎಸ್.ಬಿ.ಐ. ಬ್ಯಾಂಕ್ ಸಮೀಪ, ಯಲಹಂಕ ನ್ಯೂ ಟೌನ್ 9731306702
ಹೆಬ್ಬಗೋಡಿ ಅತ್ತಿಬೆಲೆ ಹೋಬಳಿ, ಚರ್ಚ್ ಸಮೀಪ ಬಯಾಕಾನ್ ಎದುರು. 9731307257 080-27849941
ರಾಜಾಜಿನಗರ ಪ್ರೀಮಿಯಮ್ ಸ್ಟೋರ್ ಕೇಕ್ ಪ್ಯಾಲೆಸ್ ಹತ್ತಿರ 41610910, 9731306537
ತನಿಸಂದ್ರ ಕಿಂಗ್ ಸ್ಪೇಸ್ ಮಿಡೋಸ್ ಅಪಾರ್ಟ್‌ಮೆಂಟ್ಸ್, ರೈಲ್ವೆ ಟ್ರಾಕ್ ಅಂಡರ್ ಪಾಸ್ ಸಮೀಪ. 9731306763/32521747
ವಿಜಯನಗರ ಕಾರ್ಡ್ ರಸ್ತೆ, ಎಮ್.ಸಿ. ಲೇಔಟ್, ಮೆಟ್ರೋ ಸ್ಟೇಷನ್ ಹತ್ತಿರ 9731306631
ಪೀಣ್ಯ ಟಿ–ದಾಸರಹಳ್ಳಿ ಸಂತೋಷ್ ಎನ್‌ಕ್ಲೇವ್, ಓಲ್ಡ್ ರಿಲೈನ್ಸ್ ಬಿಲ್ಡಿಂಗ್. 9731306572 28393199/4199
ಮತ್ತಿಕೆರೆ ಬಾಂಬೆ ಡೈಯಿಂಗ್ ರಸ್ತೆ. 080-40974968 Ph :9731306641
ಹೆಚ್.ಎಸ್.ಆರ್. ಲೇಔಟ್ 1ನೇ ಸೆಕ್ಟರ್, ಐ.ಸಿ.ಐ.ಸಿ.ಐ. ಬ್ಯಾಂಕ್ ಎದುರು. Ph :9731306550
ಬನಶಂಕರಿ ಬಿಗ್ ಬಜಾರ್ ಎದುರು Ph :9731306606 080-26691262/63
ಜಯನಗರ 40ನೇ ಅಡ್ಡ ರಸ್ತೆ, 9ನೇ ಮುಖ್ಯ ರಸ್ತೆ 26541050/51 9731306617
ಚಂದ್ರ ಲೇಔಟ್ ವಾಟರ್ ಟ್ಯಾಂಕ್ ಹತ್ತಿರ 9731306558, 080 41503359
ನಾಗರಭಾವಿ ಬಿ.ಡಿ.ಎ. ಕಾಂಪ್ಲೆಕ್ಸ್ ಎದುರು. 6ನೇ ಬಡಾವಣೆ, 2ನೇ ಹಂತ, 9731306616
ಮಾರತಹಳ್ಳಿ ಪಾರ್ಕ್ ಪ್ಲಾಜಾ ಎದುರು 080-42200050 9731306703
ಕೆಂಗೇರಿ, 80 ಅಡಿ ರಸ್ತೆ, ಶಿರ್ಕೆ ಅಪಾರ್ಟ್‌ಮೆಂಟ್ಸ್ ಹತ್ತಿರ 9731306634
ಚನ್ನಸಂದ್ರ ಉತ್ತರಹಳ್ಳಿ ಮುಖ್ಯ ರಸ್ತೆ, ಆರ್.ಎನ್.ಎಸ್.ಐ.ಟಿ. ಸಮೀಪ 28613065/9731306766
ಸುಂಕದಕಟ್ಟೆ ಜನಪ್ರಿಯ ಕಮರ್ಷಿಯಲ್ ಕಾಂಪ್ಲೆಕ್ಸ್, ಮಾಗಡಿ ರಸ್ತೆ, 9686680764 23288940/942
ರಾಜಾಜಿನಗರ ಡಯಾಕಾನ್ ಹಾಸ್ಪಿಟಲ್ ಎದುರು. Ph :9731306570 080-23134692
ವಿದ್ಯಾರಣ್ಯಪುರ ಬಿಡಬ್ಲ್ಯೂಎಸ್‌ಎಸ್‌ಬಿ ಎದುರು. 41721897/1861 9731306614
ಹೆಗ್ಗನಹಳ್ಳಿ ಹೆಗ್ಗನಹಳ್ಳಿ ಮುಖ್ಯ ರಸ್ತೆ, ಪೀಣ್ಯ 2ನೇ ಹಂತ ವಿಶ್ವನೀಡಂ ಅಂಚೆ, 9591997257 080-28366565/66
ಹೆಚ್.ಆರ್.ಬಿ.ಆರ್. ಲೇಔಟ್ ಸೂರ್ಯ ಪ್ಲಾಜಾ, ಜಾಯಲುಕ್ಕಾಸ್ ಎದುರು ಕಮ್ಮನಹಳ್ಳಿ ಮುಖ್ಯ ರಸ್ತೆ 41687449, 9731306596 25450871
ರಾಮಮೂರ್ತಿನಗರ ಮೋರ್ ಎದುರು 41638612/13 8861007307
ಪುಟ್ಟೇನಹಳ್ಳಿ ಬ್ರಿಗೇಡ್ ಮಿಲೇನಿಯಮ್ ಎದುರು. 9591997265 080-40954615/16
ಹುಳಿಮಾವು ಶಿವ ಸಾಗರ ಹೋಟೇಲ್ ಸಮೀಪ. 080-26483425 9731306625
LG SHOPPE ಮಾರತಹಳ್ಳಿ 42197907/08 8861002259
LG SHOPPE ರಾಜಾಜಿನಗರ Ph : 9731306671
LG SHOPPE ರಾಜರಾಜೇಶ್ವರಿನಗರ 9591997261
Regd. Off: M/s ADISHWAR INDIA LIMITED, #85, 59th Cross, 4th Block, Rajaji Nagar, Bangalore - 560010 Tel: 080-40733999, CIN: U51909KA1997PLC021681
• 0% Interest • Free Delivery • Exchange Offers • Spot Finance • Major Credit Cards Accepted • Home Delivery only within City Limits • 0% Interest, Offers, are subject to evaluation • Offers valid till stocks last • Products available without the offers also • Spot finance is available from Bajaj Finance • Terms &

ಆದೀಶ್ವರ್ ®
ಎಲೆಕ್ಟ್ರೋ ವರ್ಲ್ಡ್
gadget for every budget!
GET UPTO ₹ 15,000/- UPI MONEY BACK ON BAJAJ FINSERV PURCHASE
BANK TRANSFER
PAY
GET INSTANT CASH BACK UPTO ₹ 25,000/- ON CREDIT & DEBIT CARD EMI
EMI CARD EASY FINANCE
BAJAJ FINSERV
IDFC FIRST Bank
1 EMI FREE ON LG SONY Haier UPTO ₹25,000/-
ದಸರಾ ಹಬ್ಬದ ಮಾರಾಟ
SONY BRAVIA 2 | 4K ULTRA HD
75
EMI | ₹4,999/-
UPTO ₹ 7,500/- INSTANT CASH BACK ON YOUR CREDIT CARD EMI LOW DOWNPAYMENT LOW EMI
LG Life's Good QNED AI TV
75
EMI | ₹3,999/-
UPTO ₹ 10,000/- INSTANT CASH BACK ON YOUR CREDIT CARD EMI LOW DOWNPAYMENT LOW EMI
FESTIVAL HOTTEST DEALS ON
BIGGER SCREENS
SONY LG Haier BPL Panasonic Hisense
QLED 100 inch
FESTIVAL PRICE ₹ 2,99,990/-
QLED 75 inch
FESTIVAL PRICE ₹ 79,990/-
Haier 4K ULTRA HD
75
EMI | ₹2,994/-
UPTO ₹ 8,000/- INSTANT CASH BACK ON YOUR CREDIT CARD EMI LOW DOWNPAYMENT LOW EMI
Panasonic UHD 4K ULTRA HD
55
EMI | ₹3,499/-
UPTO ₹ 5,000/- INSTANT CASH BACK ON YOUR CREDIT CARD EMI LOW DOWNPAYMENT LOW EMI
QLED 65 inch
FESTIVAL PRICE ₹ 57,990/-
QLED 55 inch
FESTIVAL PRICE ₹ 38,990/-
SONY BRAVIA 3 | 4K ULTRA HD
65
EMI | ₹4,999/-
UPTO ₹ 5,000/- INSTANT CASH BACK ON YOUR CREDIT CARD EMI LOW DOWNPAYMENT LOW EMI
LG Life's Good UHD 4K ULTRA HD
55
EMI | ₹2,999/-
UPTO ₹ 5,000/- INSTANT CASH BACK ON YOUR CREDIT CARD EMI LOW DOWNPAYMENT LOW EMI
ಚನ್ನಪಟ್ಟಣ ಅಪರ್ಣ ಜ್ಯೂವೆಲರ್ಸ್ ಬಿಲ್ಡಿಂಗ್, ಕೆನರಾ ಬ್ಯಾಂಕ್ ಪಕ್ಕ, ಬಿ.ಎಂ. ರಸ್ತೆ PH : 9036593446 / 9036593447
ಶಿರಸಿ ಸಿ.ಪಿ. ಬಜಾರ್ ಮುಖ್ಯ ರಸ್ತೆ, ದೇವೀಕೆರೆ PH : 9591997260, 9731306569
ಕೋಲಾರ ಶಾರದಾ ಟಾಕೀಸ್ ರಸ್ತೆ ದೊಡ್ಡಪೇಟೆ, ಕಠಾರಿಪಾಳ್ಯ 9731306635/9731306574 08152-467397
ಬೆಳಗಾವಿ ಕೊಲ್ಹಾಪುರ ವೃತ್ತದ ಹತ್ತಿರ, ನೆಹರು ನಗರ, ಪಿ.ಬಿ ರಸ್ತೆ, 0831 4215241 / 42, 9731306717 / 9731306713
ಬಳ್ಳಾರಿ ವಾಸವಿ ಶಾಲೆ ಎದುರು, Ph : 08392-242330 / 337, 9731306742 / 9731331684
ಚಿತ್ರದುರ್ಗ ಶ್ರೀನಿವಾಸ ಮ್ಯಾನ್ಷನ್, ಹೊಳಕೆರೆ ರಸ್ತೆ, 08194-224224, 9686446883
ದಾವಣಗೆರೆ ಅಶೋಕ ರಸ್ತೆ, 08192-233626/27, 9731306633 / 6712
ತಿಪಟೂರು ರೈಲ್ವೇ ಸ್ಟೇಷನ್ ರಸ್ತೆ, Ph : 08134-250104/304, 9686680758 / 9731306552
ತುಮಕೂರು ವಿಶ್ವವಿದ್ಯಾಲಯ ಎದುರು, Ph : 0816-4021031, 9731306549 / 9591997270
ಯಾದಗಿರಿ ಮುದ್ ನಾಳ್ ಲೇಔಟ್ ಮುಖ್ಯ ರಸ್ತೆ, ಸಿಂಡಿಕೇಟ್ ಬ್ಯಾಂಕ್ ಎದುರು Ph : 08173/251779/759 8861002260
ಗೋಣಿಕೊಪ್ಪ ನಾರ್ಥ್ ಪಾಯಿಂಟ್, ಮಹಾಲಕ್ಷ್ಮಿ ದೇವಸ್ಥಾನದ ಎದುರು 7702770314/7702770353
ಕೊಪ್ಪಳ ಕೆಹೆಚ್ ಬಿ ಕಾಲೋನಿ ಐಡಿಬಿಐ ಬ್ಯಾಂಕ್ ಎದುರು, ಹೊಸಪೇಟೆ ರಸ್ತೆ 08539 221931/32 9731306645
ಬೀದರ್ ಅಕ್ಷಯ ಕಾಂಪ್ಲೆಕ್ಸ್ ಹೊಸ ಬಸ್ ನಿಲ್ದಾಣ ಹತ್ತಿರ 08482 226800/01 9513499863
ಕಲಬುರ್ಗಿ ತಿಮ್ಮಾಪುರಿ ಸರ್ಕಲ್ ಹತ್ತಿರ ಕನ್ನಡ ಭವನ ಎದುರು, ಎಸ್.ವಿ.ಪಿ.ಸರ್ಕಲ್ Ph 08472 227556 9108023816,
ಕೆ.ಆರ್. ನಗರ ಶ್ರೀ ವೆಂಕಟೇಶ್ವರ ಚಿತ್ರಮಂದಿರದ ಎದುರು ಹುಣಸೂರು ಸರ್ಕಲ್, ಮೈಸೂರು ರಸ್ತೆ 08223295855/66 9731306715
ಚನ್ನರಾಯಪಟ್ಟಣ ಬಿ.ಎಂ. ರಸ್ತೆ, ಪುರಸಭೆ ಎದುರು ಹಳೇ ಬಸ್ ನಿಲ್ದಾಣ 08176253312 / 295256, 9513499855
ವಿಜಯಪುರ ಲಿಂಗದ್ ಗುಡಿ ರಸ್ತೆ, ಪಾರೇಖ್ ಸಿಗ್ನೇಚರ್ ಮಾಲ್ ಪಕ್ಕ 9353907691 / 9606865996
ಸಿಂಧನೂರ್ ನಟರಾಜ ಕಾಲೋನಿ, ಕೆಎಸ್ಆರ್‌ಟಿಸಿ ಬಸ್ ಸ್ಟ್ಯಾಂಡ್ ಹತ್ತಿರ 08535-222254, 9731306673 / 9731306672
ಕುಶಾಲನಗರ ಬಿಎಂ ರಸ್ತೆ, ಸಿಟಿ ಸೆಂಟರ್ ಎದುರು 9591997262/9591997263
ಮಂಡ್ಯ 100 ಅಡಿ ರಸ್ತೆ, ವಿಜಯ ಬ್ಯಾಂಕ್ ಎದುರು 08232406100/08232406200 9513599861 / 7349609274
ಚಿಕ್ಕಮಗಳೂರು ಐ.ಜಿ. ರಸ್ತೆ, Ph : 08262 - 239944 / 45, 9963998358, 9963998365
ಶಹಾಪೂರ ಬೀದರ್-ಬೆಂಗಳೂರು ರಸ್ತೆ ಬುದ್ಧನಗರ್ ಪಾರ್ಕ್ ಮುಂಭಾಗ, 9513499858 08479-240565,244565
ತೊಕ್ಕೊಟ್ಟು ಐಬಿ ಕಮರ್ಷಿಯಲ್ ಪ್ಲಾಜಾ, ಯೂನಿಟಿ ಹಾಲ್ ಎದುರು, ಕಲ್ಲಾಪು, ಪೆರಮನ್ನೂರು ವಿಲೇಜ್ 0824-2956565 9731306621
ಮೈಸೂರು 5 ಸ್ಟೋರ್ಸ್
ಕುವೆಂಪುನಗರ ಅಕ್ಷಯ ಭಂಡಾರ Ph : 0821-2343705/6, 9731306587
ಹಿನ್‌ಕಲ್ ಹುಣಸೂರು ಮುಖ್ಯ ರಸ್ತೆ, ಫ್ಲೈ ಓವರ್ ಕೆಳಗೆ Ph. 0821-4852733 / 4851773, 8861007297
ಉದಯಗಿರಿ ಮಹದೇವಪುರ ಮುಖ್ಯ ರಸ್ತೆ, BSNL ಕಛೇರಿ ಸಿಗ್ನಲ್ ಹತ್ತಿರ Ph : 0821-2457860/50, 8861007304/9731306653
ಜೆ.ಪಿ ನಗರ ನಾಚನಹಳ್ಳಿ, ಕಿಲ್ಲೆ ಮೊಹಲ್ಲಾ ಮೋರ್ ಸೂಪರ್ ಮಾರ್ಕೆಟ್ ಹತ್ತಿರ, 8861007309 / 886107306
ಡಾ. ರಾಜ್‌ಕುಮಾರ್ ರಸ್ತೆ ಟೀಚರ್ಸ್ ಲೇಔಟ್, (ಕಾವೇರಿ ಸರ್ಕಲ್) 8861002262/8861002263
Free Gifts depends on Brands & Selective Models • Products shown here are only indicative • Exchange Rates Conditions apply • Finance at the sole discretion of the financiers • Offers not applicable on Sony & Samsung.
HELPLINE 080 - 408 33 999
Shop Online @ www.adishwarestore.com

ಗಾಜಾ: ಸಂಘರ್ಷ ಅಂತ್ಯಕ್ಕೆ 20 ಅಂಶ

ಒಂದನೇ ಪುಟದಿಂದ...

ಈಗ ಮುಂದಿಟ್ಟಿರುವ ಶಾಂತಿ ಒಪ್ಪಂದಕ್ಕೆ 3–4 ದಿನಗಳಲ್ಲಿ ಹಮಾಸ್ ಒಪ್ಪಿಗೆ ಸೂಚಿಸದಿದ್ದರೆ, ಹಮಾಸ್ ಬಂಡುಕೋರ ಸಂಘಟನೆಯನ್ನು ಮಣಿಸಲು ಇಸ್ರೇಲ್‌ಗೆ ಅಮೆರಿಕವು ಸಂಪೂರ್ಣ ಬೆಂಬಲ ನೀಡಲಿದೆ’ ಎಂದು ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ.

ವಿಸ್ತೃತ ಯೋಜನೆಯನ್ನು ಸುದ್ದಿಗೋಷ್ಠಿಯಲ್ಲಿ ಬಿಡುಗಡೆಗೊಳಿಸಿ ಮಾತನಾಡಿದ ಟ್ರಂಪ್, ‘ಶಾಂತಿ ಸ್ಥಾಪನೆ ಕುರಿತ ಯೋಜನೆ ಇನ್ನೂ ಅಂತಿಮಗೊಂಡಿಲ್ಲ. ಇದಕ್ಕೆ ಹಮಾಸ್ ಒಪ್ಪಿಗೆ ಸಿಗಬೇಕು’ ಎಂದು ತಿಳಿಸಿದರು.

‘ಪ್ಯಾಲೆಸ್ಟೀನಿಯನ್ನರು ತಮ್ಮ ಹಣೆಬರಹ ನಿರ್ಧರಿಸಿಕೊಳ್ಳಲು ಇದನ್ನು ಒಪ್ಪಬೇಕು’ ಎಂದರು.

‘ಒಂದೊಮ್ಮೆ ಹಮಾಸ್ ಪ್ರಸ್ತಾವ ತಿರಸ್ಕರಿಸಿದರೆ ಅಥವಾ ಒಪ್ಪಿಗೆ ಸೂಚಿಸಿದರೆ, ಇಸ್ರೇಲ್ ತನ್ನ ಕೆಲಸವನ್ನು ಪೂರ್ಣಗೊಳಿಸಲಿದೆ. ಅದು ಸುಲಭದ ಮಾರ್ಗವೇ ಇರಬಹುದು ಅಥವಾ ಕಷ್ಟದ ಮಾರ್ಗವೇ ಇರಬಹುದು. ಅದನ್ನು ನಾವು ಮುಗಿಸುತ್ತೇವೆ’ ಎಂದು ಇಸ್ರೇಲ್ ಪ್ರಧಾನಿ ನೆತನ್ಯಾಹು ಸ್ಪಷ್ಟಪಡಿಸಿದರು.

ಮುಂದೇನು?: ಕತಾರ್‌ನ ಪ್ರಧಾನಿ ಹಾಗೂ ಈಜಿಪ್ಟ್‌ನ ಗುಪ್ತಚರ ವಿಭಾಗದ ಮುಖ್ಯಸ್ಥರು, ಟ್ರಂಪ್ ಇಟ್ಟಿರುವ ಪ್ರಸ್ತಾವವನ್ನು ಹಮಾಸ್ ಸಂಧಾನಕಾರರಿಗೆ ತಿಳಿಸಲಿದ್ದಾರೆ. ಗಾಜಾದ ಆಡಳಿತ ವ್ಯವಸ್ಥೆಯಿಂದ ಹಿಂದೆ ಸರಿಯುವ ಪ್ರಸ್ತಾವಕ್ಕೆ ಹಮಾಸ್ ಈ ಹಿಂದೆಯೇ ಒಪ್ಪಿಗೆ ಸೂಚಿಸಿತ್ತು. ಆದರೆ, ನಿಶ್ಶಸ್ತ್ರೀಕರಣಗೊಳಿಸಬೇಕು ಎಂಬ ನೆತನ್ಯಾಹು ಬೇಡಿಕೆಗೆ ಒಪ್ಪಿಗೆ ಸೂಚಿಸಿಲ್ಲ.

‘ಚರ್ಚಿಸಿ ನಿರ್ಧಾರ’: ‘ಡೊನಾಲ್ಡ್ ಟ್ರಂಪ್ ಅವರ ಗಾಜಾ ಶಾಂತಿ ಯೋಜನೆಗೆ ಪ್ರತಿಕ್ರಿಯಿಸುವ ಮೊದಲು, ಚರ್ಚಿಸಲಾಗುವುದು’ ಎಂದು ಹಮಾಸ್ ಹೇಳಿದೆ.

ಭಾರತಕ್ಕೂ ಅವಕಾಶ’

ನವದೆಹಲಿ (ಪಿಟಿಐ): ‘ಗಾಜಾದಲ್ಲಿ ಶಾಂತಿಸ್ಥಾಪನೆ ಬಳಿಕ ಪುನರ್ ನಿರ್ಮಾಣದಲ್ಲಿ ಭಾರತಕ್ಕೆ ಅನುವು ಮಾಡಿಕೊಡಲಾಗುವುದು. ಮಧ್ಯಪ್ರಾಚ್ಯದಲ್ಲಿ ಶಾಂತಿ ಮರುಸ್ಥಾಪಿಸುವಲ್ಲಿ ನವದೆಹಲಿ ಪಾತ್ರ ವಹಿಸಿದೆ’ ಎಂದು ಭಾರತದಲ್ಲಿನ ಇಸ್ರೇಲ್ ರಾಯಭಾರಿ ರುವೇನ್ ಅಜರ್ ತಿಳಿಸಿದ್ದಾರೆ.

ಗಾಜಾದಲ್ಲಿ ಶಾಂತಿಸ್ಥಾಪನೆ ಸಂಬಂಧ ಪ್ರಧಾನಿ ನರೇಂದ್ರ ಮೋದಿ ಅಭಿಪ್ರಾಯವನ್ನು ರುವೆನ್ ಸ್ವಾಗತಿಸಿದ್ದಾರೆ. ಆ ಪ್ರಾಂತ್ಯದ ಮರು ನಿರ್ಮಾಣದಲ್ಲಿ ಭಾರತ ಮಹತ್ವದ ಪಾತ್ರ ವಹಿಸಲಿದೆ ಎಂದಿದ್ದಾರೆ.